ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ನವೆಂಬರ್ 21, 2012 ಪುಟ 20 ರೂ. 14/-



ಗಿರೀಶ್ ಕಾರ್ನಾಡ್

ಹೇಳಿದ್ದು ಸರಿ








ವಾರ್ ಆಫ್ ರೋಸಸ್

ಭೂಗಳ್ಳರ ನೆರವಿಗೆ ಪೋಸ್ಟ್‌ಮನ್ ಮಂತ್ರಿ




ಪೊನ್ನಳ್ಳಿ ಕೆ ಹಾಥ್ ಯಡ್ಡಿ ಕೆ ಸಾಥ್

ಅಸ್ನೋಟಿಕರ್‌ನ ಗೋವಾ ಗಲಾಟೆ

ಸುಪಾರಿ ಎನ್‌ಕೌಂಟರ್ ರೀತಿಯಲ್ಲಿ ಕೋತಿರಾಮ

ಅಂಚಿನಿಂದ



ಸೆಕೆಂಡ್ ಹ್ಯಾಂಡ್ ಬೈಕು, ಬಂಗಾರದ ಚೀಟಿಯ ಮಧ್ಯೆ ಕಾಣದಾಗಿರುವ ಕ್ರೈಸಿಸು

ಹಗರಿಬೊಮ್ಮನಹಳ್ಳಿ ತಾಲೂಕಿನ ಹಳ್ಳಿಯೊಂದರ ಶಿವಶಂಕರ ಬೆಂಗಳೂರಿಗೆ ಬಂದಾಗ ಆತನಿಗೆ ಮೂರೇ ದಿನಗಳಲ್ಲಿ ಕೆಲಸ ಸಿಕ್ಕಿತ್ತು. ಜೊತೆಗೆ ತಾನು ನಿರೀಕ್ಷಿಸಿದ್ದಕ್ಕಿಂತಲೂ ನೂರು ರೂ. ಹೆಚ್ಚು ಸಂಬಳ. ದೇಶದಲ್ಲಿ ನಿರುದ್ಯೋಗ ಹೆಚ್ಚಿದೆ ಎನ್ನುವುದಾಗಲೀ, ಬೆಂಗಳೂರಿನಂತಹ ಸಿಟಿಗಳಿಗಿಂತ ಹಳ್ಳಿಗಳೇ ಮೇಲು ಎನ್ನುವುದಾಗಲೀ ಆತ ನಂಬರಲಿಲ್ಲ. ಆತನ ಊರಿನಲ್ಲಿ ಕೃಷಿ ಕೂಲಿ ಹೆಚ್ಚಿಂದರೂ ವರ್ಷದಲ್ಲಿ 120 ದಿನಗಳು ಮಾತ್ರ ಸಿಗುತ್ತಿತ್ತು. ಜೊತೆಗೆ ಆತ ಮಾಡುತ್ತಿದ್ದ ಪೈಂಟಿಂಗ್ ಕೆಲಸಕ್ಕೆ ಹಗರಿಬೊಮ್ಮನಹಳ್ಳಿಗಿಂತಲೂ ಬೆಂಗಳೂರಿನಲ್ಲಿ ಹೆಚ್ಚು ಬೇಡಿಕೆ ಇತ್ತು. ಬೆಂಗಳೂರಿನಲ್ಲಿ ಮೇಸ್ತ್ರಿ ಯಾವ ಶನಿವಾರದಂದೂ ಬಟವಾಡೆ ತಪ್ಪಿಸುತ್ತಿರಲಿಲ್ಲ.

ಶಿವಶಂಕರ್ ತನ್ನ ಹೆಂಡತಿ ಪದ್ಮಳಿಗೆ 'ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಸಿಗುತ್ತೆ ಬಂದುಬಿಡು' ಎಂದಾಗ, ಆಕೆ ಮುಂದಿನ ವಾರದಲ್ಲೇ ಬಂದುಬಿಟ್ಟಿದ್ದಳು. ಅವರ ಇಬ್ಬರು ಮಕ್ಕಳು ಹಳ್ಳಿಯಲ್ಲಿದ್ದ ಅಜ್ಜಿ, ತಾತನಿಗೆ ಹೊಂದಿಕೊಂಡಿದ್ದರಿಂದ ಬೆಂಗಳೂರಿನಲ್ಲಿ ಶಾಲೆಗೆ ಸೇರಿಸುವ ತಾಪತ್ರಯವೂ ಇರಲಿಲ್ಲ. ಗಂಡ-ಹೆಂಡತಿ ಇಬ್ಬರೂ ದುಡಿಯಲಾರಂಭಿಸಿದ ವರ್ಷದೊಳಗೆ ಶಿವಶಂಕರ ಊರಿನ ಸಾಲವನ್ನು ತೀರಿಸಿಬಿಟ್ಟಿದ್ದ. ಪದ್ಮಳ ಹೆರಿಗೆ ಸಂದರ್ಭದಲ್ಲಿ ಸಮಸ್ಯೆ ಆಗಿದ್ದಾಗ ಮಾಡಿದ್ದ 30 ಸಾವಿರ ಸಾಲ ಅದು. ಬೆಂಗಳೂರಿನ ಮನೆ ಅಡ್ವಾನ್ಸ್‌ಗೆ ಮಾಡಿದ್ದ ಸಾಲದ ಕಂತು ತೀರಲು ಇನ್ನೂ ಎಂಟು ತಿಂಗಳು ಬಾಕಿಯಿತ್ತು. ಅದೇನೂ ಕಷ್ಟವಿಲ್ಲ ಎಂಬುದು ಶಿವಶಂಕರ ಮತ್ತು ಪದ್ಮ ಇಬ್ಬರದ್ದೂ ಖಚಿತ ನಂಬಿಕೆಯಾಗಿತ್ತು.

ಏಕೆಂದರೆ ಮನೆ ಖರ್ಚು ಹೆಚ್ಚೇನೂ ಇರಲಿಲ್ಲ. ಊರಿನ ರೇಷನ್ ಅಂಗಡಿಯಲ್ಲಿ ಸಿಗುವ ಅಕ್ಕಿಯಲ್ಲಿ ಅಪ್ಪ, ಅಮ್ಮ ಇವರಿಗೆಂದೇ 12 ಕೆ.ಜಿ ಎತ್ತಿಡುತ್ತಿದ್ದರು. ಜೊತೆಗೆ ತೊಗರಿಕಾಳು, ಹುಣಸೇಹಣ್ಣನ್ನೂ ಸಹ ಅವರು ಎಂದೂ ಕೊಂಡಿದ್ದಿಲ್ಲ. ಶಿವಶಂಕರ ಸಾಕಷ್ಟು ಚಾಲಾಕಿ ವ್ಯಕ್ತಿ. ಆಡುವ ಮಾತು ಹಾಗೂ ವರಸೆಗಳು ಹಳ್ಳಿ ಮನುಷ್ಯ ಎಂದು ತೋರುತ್ತಿದ್ದವಾದರೂ, ಪೈಂಟಿಂಗ್‌ನ ಕಸುಬುದಾರಿಕೆ ಹಾಗೂ ಮಾತುಗಾರಿಕೆಗಳು ಕೆಲಸದ ಜಾಗದಲ್ಲಿ ಆತನಿಗೊಂದು ಸ್ಥಾನ ಕಲ್ಪಿಸಿಕೊಟ್ಟಿದ್ದವು. ಸ್ವಂತದ್ದೇ ಕೆಲಸ ಹಿಡಿಯಬೇಕು, ಅವರಿವರ ಕೆಳಗೆ ಕೆಲಸ ಮಾಡುವುದರಿಂದ ಹೆಚ್ಚಿನ ಸಂಪಾದನೆ ಸಾಧ್ಯವಿಲ್ಲ ಎನ್ನುವುದು ಆತನ ಎಣಿಕೆಯಾಗಿತ್ತು.

ಈ ಸಂದರ್ಭದಲ್ಲಿ ಶಿವಶಂಕರ ಗಾರೆ ಕೆಲಸದವರೊಬ್ಬರ ಮೂಲಕ ಪರಿಚಯವಾದ ಕಟ್ಟಡ ಕಾರ್ಮಿಕ ಸಂಘಕ್ಕೂ ಸದಸ್ಯನಾದ. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಸಿಗುವ ಕೆಲವು ಬೆನಿಫಿಟ್ಟುಗಳನ್ನು ಪಡೆದುಕೊಳ್ಳಬೇಕು ಎಂದಷ್ಟೇ ಆತ ಅದರ ಸದಸ್ಯನಾಗಿದ್ದ. ಸಂಘದ ಮೀಟಿಂಗ್‌ಗೆ ಬಂದ ಸಂಘಟನೆಯ ಮುಖಂಡರೊಬ್ಬರು ಮಾಡಿದ್ದ ಭಾಷಣದಲ್ಲಿ 'ಬೆಂಗಳೂರು ಕಾರ್ಮಿಕರ ಬೆವರು, ರಕ್ತವನ್ನು ಹೀರುತ್ತದೆ; ಬಂಡವಾಳಶಾಹಿಗಳು ಮಾತ್ರ ಸುಖಸಂತೋಷದಲ್ಲಿ ಬದುಕಲು ಸಾಧ್ಯವಿರುವ ಊರು ಇದು' ಎಂದಿದ್ದರು. ಆದರೆ ಈ ಮಾತುಗಳು ಸ್ವತಃ ಶಿವಶಂಕರನ ಬದುಕಿನಲ್ಲೇ ಸುಳ್ಳಾಗಿತ್ತು.



ಗಂಡ-ಹೆಂಡತಿ ಇಬ್ಬರೂ ಸೇರಿ ತಿಂಗಳಿಗೆ 14 ಸಾವಿರ ರೂ. ಸಂಪಾದಿಸುತ್ತಿದ್ದರು. ಬಾಡಿಗೆಯೂ ಸೇರಿ ಎಲ್ಲಾ ಖರ್ಚುಗಳು ಆರು ಸಾವಿರದೊಳಗೆ ಮುಗಿಯುತ್ತಿದ್ದವು. ಉಳಿದಿದ್ದರಲ್ಲಿ ಸಾಲ ತೀರಿಸಲೆಂದು ಎತ್ತಿಕೊಂಡಿದ್ದ ಚೀಟಿಗೆ ಐದು ಸಾವಿರ ತೆಗೆದರೂ ಮೂರು ಸಾವಿರ ಉಳಿಯುತ್ತಿತ್ತು. ಬೆಂಗಳೂರಿನಲ್ಲಿ ಸಿಗುತ್ತಿರುವ ಅವಕಾಶಗಳು ಇದೇರೀತಿ ಮುಂದುವರೆದರೆ ತಾನು ಸ್ವಂತ ಮನೆಯಲ್ಲದಿದ್ದರೂ 10 ಲಕ್ಷಕ್ಕೆ ಒಂದು ಮನೆಯನ್ನು ಭೋಗ್ಯಕ್ಕೆ ಹಾಕಿಸಿಕೊಂಡು ನೆಮ್ಮದಿಯಿಂದ ಇರಬಹುದು ಅಂತ ಆತನ ಅನಿಸಿಕೆ.



ತಾನೇ ಮೇಸ್ತ್ರಿಯಾಗಬೇಕೆಂದರೆ ಒಂದು ಬೈಕ್ ಇಟ್ಟುಕೊಳ್ಳುವುದು ಅನಿವಾರ್ಯವಾಗಿತ್ತು. ಒಂದೇ ಕಡೆ ಕೆಲಸ ಮಾಡಿಸುತ್ತಾ ಇದ್ದರೆ ಉಳಿದ ಕೆಲಸಗಾರರಿಗೆ ನಿರಂತರವಾಗಿ ಕೆಲಸ ಕೊಡುವುದು ಸಾಧ್ಯವಿಲ್ಲ ಮತ್ತು ಅದು ಮೇಸ್ತ್ರಿಯಾಗಿ ಬೆಳೆಯಬೇಕಾದವನ ಲಕ್ಷಣವಲ್ಲ. ಹಾಗಾಗಿ ಇನ್ನೊಂದು ಕಡೆ ಚೀಟಿ ಹಾಕಿ ಹೊಸದೊಂದು ಬೈಕ್ ತೆಗೆದುಕೊಳ್ಳಲು ಯೋಚಿಸಿ, ಪದ್ಮಳ ಹತ್ತಿರ ಪ್ರಸ್ತಾಪಿಸಿದ. ಪ್ರತೀ ತಿಂಗಳು ಉಳಿಯುವ ಮೂರು ಸಾವಿರ ಪೂರ್ತಿ ಬೈಕ್‌ನ ಹಣಕ್ಕೆ ಚೀಟಿ ಹಾಕಿಬಿಟ್ಟರೆ, ತಾನು ಇಷ್ಟು ವರ್ಷದವರೆಗೆ ಕನಸಿಕೊಂಡು ಬಂದಿರುವ ಒಡವೆ ಚೀಟಿಗೆ ಹಣ ಉಳಿಯುವುದಿಲ್ಲ ಎಂಬುದು ಪದ್ಮಳ ಚಿಂತೆಯಾಗಿತ್ತು. ಆಕೆ ನೇರವಾಗಿ ಅದನ್ನು ಗಂಡನ ಹತ್ತಿರ ಹೇಳುವಷ್ಟು ಒಳ್ಳೆಯ ಸಂಬಂಧ ಅವರಿಬ್ಬರ ಮಧ್ಯೆ ಇತ್ತು. ಶಿವಶಂಕರ ಸಹ ಆಕೆಯ ಆಸೆಯನ್ನು ಅರ್ಥ ಮಾಡಿಕೊಳ್ಳದಷ್ಟು ಸ್ವಕೇಂದ್ರಿತ ವ್ಯಕ್ತಿಯಲ್ಲ. ಗಾರ್ಮೆಂಟ್ ಫ್ಯಾಕ್ಟರಿಗೆ 7.30ಕ್ಕೆ ಮನೆ ಬಿಡುವ ಮೊದಲು, ಇಬ್ಬರಿಗೂ ತಿಂಡಿ ಹಾಗೂ ಊಟದ ಡಬ್ಬಿಯೆರಡಕ್ಕೂ ಅಡಿಗೆ ಮಾಡಿಡುವ, ಸಂಜೆ ತಾನು ಬರುವ ಹೊತ್ತಿಗೆ ಕಾಲು ಲೀಟರ್ ಹಾಲಿನ ಪ್ಯಾಕೆಟ್ ತಂದು ಒಳ್ಳೆ ಟೀ ಮಾಡಿಕೊಡುವ, ಶಿವಶಂಕರನ ಅಪ್ಪ ಅಮ್ಮನ ಜೊತೆ ಬಹಳ ಒಳ್ಳೆಯ ಸಂಬಂಧ ಇಟ್ಟುಕೊಳ್ಳದಿದ್ದರೂ ಎಂದಿಗೂ ಜಗಳವಾಡದಿರುವ, ಎಂದೂ ಅಂತಹ ದೊಡ್ಡ ಆಸೆಗಳನ್ನೇನೂ ಮುಂದಿಟ್ಟಿರದ ಹೆಂಡತಿಯ ಬಂಗಾರದ ಚೀಟಿಯನ್ನು ಆತ ಹೇಗೆ ಬೇಡವೆಂದಾನು?

ಕೊನೆಗೆ ಎರಡು ಸಾವಿರ ರೂ. ಶಿವಶಂಕರನ ಬೈಕ್‌ನ ಹಣದ ಚೀಟಿಗೆ, ಒಂದು ಸಾವಿರ ರೂ. ಬಂಗಾರದ ಚೀಟಿಗೆ ಎಂದು ತೀರ್ಮಾನವಾಯಿತು. ಆ ಚೀಟಿ ಹಣದಲ್ಲಿ ಸೆಕೆಂಡ್ ಹ್ಯಾಂಡ್ ಸುಜುಕಿ ಸಮುರಾಯ್ ಗಾಡಿ ಬಂದು ನಿಂತಿತು. ಈಗ ಶಿವಶಂಕರ ಮೇಸ್ತ್ರಿ. ಹೆಂಡತಿಯನ್ನೂ ಫ್ಯಾಕ್ಟರಿ ಹತ್ತಿರ ಬಿಟ್ಟು ನಂತರ ಕೆಲಸದ ಹುಡುಗನನ್ನೂ ಹತ್ತಿಸಿಕೊಂಡು ಏಕಕಾಲದಲ್ಲಿ ಎರಡು ಕಡೆ ಪೈಂಟಿಂಗ್ ಕೆಲಸ ನಿಭಾಯಿಸುವ ಹೊಸ ವರಸೆ ಶುರುವಾಯಿತು. ಅದು ಪೆಟ್ರೋಲ್ ಬೆಲೆ ಲೀಟರ್‌ಗೆ 45 ರೂ. ಇದ್ದ ವರ್ಷ. ಪದ್ಮ ಹಾಕಿದ್ದ ಚಿನ್ನದ ಸರದ ಚೀಟಿ ಮುಗಿಯಲು ಮೂರು ವರ್ಷಗಳು ಆಗುತ್ತಿತ್ತು.

ಪೆಟ್ರೋಲ್ ರೇಟ್ 50 ರೂ. ಆಯಿತು. ದಿನಕ್ಕೆ ಎರಡು ಲೀಟರ್ ಹಾಕಿಸದಿದ್ದರೆ ಸಮುರಾಯ್ ನಿಂತುಬಿಡುತ್ತಿತ್ತು. ಜೊತೆಗೆ ಸೆಕೆಂಡ್ ಹ್ಯಾಂಡ್ ಗಾಡಿ ಆಗಾಗ ರಿಪೇರಿ. ಎರಡು ಕಡೆ ಕೆಲಸ ಮಾಡಿಸುತ್ತಿದ್ದರೂ, ಶಿವಶಂಕರ ಕೆಲಸಗಾರರ ಜೀವ ಹಿಂಡುತ್ತಿರಲಿಲ್ಲ. ಹಾಗಾಗಿ ಹಿಂದಿಗಿಂತ ನಾಲ್ಕು ಸಾವಿರ ಹೆಚ್ಚು ಸಂಪಾದನೆ ಮಾತ್ರ ಸಾಧ್ಯವಾಗಿತ್ತು. ಅದೆಲ್ಲ ಬೈಕ್‌ಅನ್ನು ಸಾಕಲು ಸಂಪೂರ್ಣ ಖರ್ಚಾಗುತ್ತಿತ್ತು. (50 ರೂ 2 ಲೀ= 100, 30 ದಿನ= 3,000 1,000 ರಿಪೇರಿ)

ಪೆಟ್ರೋಲ್ ರೇಟ್ ಈಗ 75 ರೂ. ಅಂದರೆ ತಿಂಗಳಿಗೆ ಈ ಹಿಂದಿಗಿಂತ 1,500 ರೂ. ಹೆಚ್ಚು ಖರ್ಚು. ಬೈಕ್ ಮೈಂಟೇನ್ ಮಾಡುವುದು ಸ್ವಲ್ಪ ಕಷ್ಟವಾಗತೊಡಗಿತು. ಆದರೆ ಬೆಂಗಳೂರಿನಲ್ಲಿ ಒಮ್ಮೆ ಬೈಕ್ ಹತ್ತಿದವರು ಇಳಿಯುವುದು ಕಷ್ಟ. ಭಾನುವಾರವೂ ಬೈಕ್‌ನಲ್ಲೇ ಹೋಗಬೇಕು. ಜೊತೆಗೆ ಮೇಸ್ತ್ರಿ ಕೆಲಸವಾದ್ದರಿಂದ ಬೈಕ್ ಅನಿವಾರ್ಯ. ಪ್ರತೀ ತಿಂಗಳ ಜೋತಾ ಬಜೆಟ್‌ಗೆ ಇನ್ನೂ ನಾಲ್ಕು ಕಾರಣಗಳು ಸೇರಿಕೊಂಡಿದ್ದವು. ಊರಿನ ರೇಷನ್ ಕಾರ್ಡುಗಳಲ್ಲಿ ಒಂದು ಕ್ಯಾನ್ಸಲ್ ಆಗಿತ್ತು. ಏಕೆಂದರೆ ಇವರಿಬ್ಬರ ಹೆಸರಿನಲ್ಲಿದ್ದ ಕಾರ್ಡು ತಾತ್ಕಾಲಿಕ ಕಾರ್ಡು ಆಗಿದ್ದು ಅದನ್ನು ಕಳೆದ ಲೋಕಸಭಾ ಚುನಾವಣೆ ಹೊತ್ತಿಗೆ ಯಡಿಯೂರಪ್ಪನ ಸರ್ಕಾರ ನೆಮ್ಮದಿ ಕೇಂದ್ರದಿಂದ ವಿತರಿಸಿದ್ದದ್ದು. ಬಿಪಿಎಲ್ ಕಾರ್ಡುಗಳನ್ನು ಕಡಿ ಮಾಡಲೇಬೇಕೆನ್ನುವ ಆದೇಶದ ಭಾಗವಾಗಿ ಇವರ ಕಾರ್ಡು ರದ್ದಾಗಿತ್ತು. ಇವರ ಇಬ್ಬರು ಮಕ್ಕಳನ್ನು ಇಟ್ಟುಕೊಂಡು ಸಾಕುತ್ತಿದ್ದ ಶಿವಶಂಕರನ ಅಪ್ಪ ಅಮ್ಮ ಅಕ್ಕಿ ಕಳಿಸುವುದ ನಿಲ್ಲಿಸಿದರು.

ಪದ್ಮಳ ಸಂಬಳ 1,500 ರೂ ಹೆಚ್ಚಾಗಿತ್ತು. ಆದ ಪ್ರತೀನಿತ್ಯ ತರಕಾರಿಗೆ 20 ರೂ., ಹಾಲಿಗೆ 10 ರೂ ಮತ್ತು ಬೆಳಗ್ಗೆ ಫ್ಯಾಕ್ಟರಿಗೆ ಹೋಗುವುದ ತಡವಾಗುತ್ತಿದ್ದುದರಿಂದ ಆಟೋ ಖರ್ಚು 20 ರೂ ಹಿಂದಿಗಿಂತ ಹೆಚ್ಚುವರಿಯಾಗಿದ್ದು ಅಷ್ಟಕ್ಕೆ 1,50 ಸರಿಹೋಗುತ್ತಿತ್ತು. ಬೆನ್ನುನೋವು, ಹೊಟ್ಟೆನೋವು ಹಾಗು ಬಿಳಿಬಟ್ಟೆ ಈಗ ಆಕೆಯ ನಿರಂತರ ಸಂಗಾತಿಗಳಾಗಿದ್ದ. ಡಾಕ್ಟರು ಪೌಷ್ಟಿಕ ಆಹಾರ ತಿನ್ನಬೇಕು, ಹೆಚ್ಚು ದೈಹಿ ಶ್ರಮ ಮಾಡಬಾರದು ಎಂದು ಶಿವಶಂಕರನ ಎದುರ ಹೇಳಿದ್ದರು. ಆದರೂ ಬೆಳಗ್ಗೆ ಬೈಕ್‌ನಲ್ಲಿ ಫ್ಯಾಕ್ಟರಿ ಬಿಡುವುದು ಆತನಿಂದಾಗುತ್ತಿರಲಿಲ್ಲ.

ಊರಲ್ಲಿ ಮಗನಿಗೆ ಟೈಫಾಯ್ಡ್ ಆಗಿದ್ದುದರಿಂ ಖರ್ಚಿಗೆ 1,500 ರೂ. ಕಳಿಸಲು ಅಪ್ಪ ಫೋ ಮಾಡಿದಾಗ ಶಿವಶಂಕರನಿಗೆ ಸಿಟ್ಟು ಬಂದಿತು. ಏಕೆಂದ ಊರಿಗೆ ದುಡ್ಡು ಕಳಿಸಿದ ಮೇಲೆ ಈ ಸಾರಿ ಚೀ ಕಟ್ಟಲು ಹಣವಿಲ್ಲದಾಯಿತು. ಈ ಸಾರಿ ಬಂಗಾರದ ಚೀ ಕಟ್ಟದೇ ಬೈಕ್‌ನ ಸಾಲದ ಚೀಟಿಗೆ ಕೊಡು ಎಂ ಪದ್ಮಳನ್ನು ಕೇಳಬೇಕೆಂದುಕೊಂಡವನು ರಾತ್ರಿ ಕೇಳದ ಮಲಗಿಬಿಟ್ಟ. ಬೆಳಗ್ಗೆ ಆಕೆ ಕೇಳುವ ಮುಂಚೆಯೇ ತಾ ಫ್ಯಾಕ್ಟರಿಗೆ ಬೈಕ್‌ನಲ್ಲಿ ಬಿಡೋಣ ಎಂದು ಸ್ಟಾರ್ಟ್ ಮಾಡ ಹೋದರೆ ಗಾಡಿ ಸ್ಟಾರ್ಟ್ ಆಗಲಿಲ್ಲ. ಮುಂದಿನ ಸಾ ರಿಪೇರಿಗೆ ತಂದರೆ ಕನಿಷ್ಠ 1,500 ರೂ. ಖರ್ಚು ಗ್ಯಾರಂ ಎಂದು ಗ್ಯಾರೇಜಿನವನು ಹೇಳಿದ್ದ.

'ಪದ್ಮ, ಈ ಗಾಡಿ ರಿಪೇರಿ ಮಾಡಿಸಬೇಕು ಒಂದೂವ ಸಾವಿರ ಕೊಡೇ' ಎಂದ ಶಿವಶಂಕರ.

'ನನ್ ಹತ್ರ ಎಲ್ಲಿದೆ? ಇವತ್ತು ಬಂಗಾರದ ಚೀ ಕಟ್ಟಬೇಕು' ಎಂದಳು ಪದ್ಮ.

'ಅದೇ ಈ ಸಾರಿ ಕಟ್ಟಬೇಡ, ನಾನೂ ಬೈಕ್ ಸಾಲದ ಚೀಟಿ ಇನ್ನೂ ಕಟ್ಟಿಲ್ಲ.'

'ಅದಕ್ಕೆ ನಾನೇನು ಮಾಡಲಿ? ಆ ಲಡಾ ಬೈಕ್‌ನಿಂದಾನೇ ಎಲ್ಲಾ ಸಮಸ್ಯೆ.'

'ನೀನು ಬಂಗಾರ ತಗಂಡು ಶೋಕಿ ಮಾಡ್ತಂಗ ನಾನು ಗಾಡಿ ಇಟ್ಕಂಡಿರಾದು. ಆದು ನನ್ ಕೆಲಸ ಬೇಕು ಅಂತ ಇಟ್ಕಂಡಿದೀನಿ.'

'ಓಹೋ, ಈ ಗಾಡಿ ಬರಾಕ್ ಮುಂಚಿ ಸಂಪಾದ್ನೇ ಇರಲಿಲ್ಲ ಪಾಪ. ಹಂಗಾರೆ ಬಾನ್ವಾರ್ರೂ ಬಿಡ್ತಂಗೆ ಯಾ ತಿರಗ್ತೀಯಾ ಅದ್ರ ಮೇಲೆ?'

'ಬೇಡಾ, ಬೇಡಾ ನೋಡೂ, ನೀನು ನಿಮ್ಮಪ್ಪನ ಮನೇ ಹೋದಾಗ ದೌಲತ್ತು ತೋರ್ಸಕ್ಕೆ ಅಂತ ಮಾಡಿಸ್ಕಳ್ತಿರಾ ಆ ಒಡವೇನಾ ನಂಗೇನ್ ಗೊತ್ತಿಲ್ವಾ?'

'ಏನ್ ಗೊತ್ತಿರೋದು, ನಮ್ಮಪ್ಪನ್ ಮನೇಲೇನ ಒಡವೇ ನೋಡಿ ಗೌರ್ವ ಕೊಡೋರಲ್ಲ. ನಿಮ್ಮ ಮನೆ ಮಾಡಿದ್ರಲ್ಲಾ, ಬೆಂಗಳೂರಿಗ್ ಬಂದ್ ಒಂದ್ ವರ್ಷ ರೇಷನ್ ಅಕ್ಕೀನೂ ಕೊಡ್ತಂಗೆ, ಅಂಗಲ್ಲಾ ನಮ್ ಮನೇ'

'ಸರಿ ಅಂಗಾರೆ ನಿಮ್ಮಪ್ಪ ಅಮ್ಮನಿಗೇ ಹೇಳು ರೇಷ ಅಕ್ಕಿ ಕಳಿಸಾಕೆ' ಎಂದ ಶಿವಶಂಕರ.

'ಥೂ ಏನೂಂತ ಮಾತಾಡ್ತೀಯಾ ನೀನು...' ಎಂದ ಪದ್ಮ.

ಅವತ್ತು ಪದ್ಮಳಿಗೆ ಹೊಡೆದು ಬಿಡಬೇಕು ಎನ್ನುವ

→ 1

2015ರ ಹೊತ್ತಿಗೆ ಏನಾಗಲಿದೆ?

ಮುಂದಿನ ತಿಂಗಳಲ್ಲಿ ಒಂದು ದಿನ ಪ್ರಳಯ ನಡೆಯಲಿದೆ ಎಂದು ನಮ್ಮ ಕಳಪೆ ಚಾನೆಲ್‌ಗಳು ಒಂದೇ ಸಮ ಹೊಯ್ದುಕೊಳ್ಳುತ್ತಿವೆ. ಆರ್ಥಿಕ ವಿಶ್ಲೇಷಕರು 2013ರ ಹೊತ್ತಿಗೆ ಇನ್ನೊಂದು ಪ್ರಳಯದ ಕುರಿತು ಹೇಳುತ್ತಿದ್ದಾರೆ.

ಅದು ಜಾಗತಿಕ ಆರ್ಥಿಕ ವ್ಯವಸ್ಥೆಯ ಕುಸಿತದ ಕುರಿತು. ಜಾಗತಿಕ ಆರ್ಥಿಕ ವ್ಯವಸ್ಥೆ ಎಂದರೆ ಭಾರೀ ದೊ ಕಾರ್ಪೋರೇಟ್ ಕಂಪೆನಿಗಳ ಆರ್ಥಿಕತೆ. ಅದು ಕುಸಿದ ಹಾಗೆಲ್ಲಾ ಸರ್ಕಾರಗಳು ಜನಸಾಮಾನ್ಯರ ಮೇಲೆ ಹೊರೆಯನ ರವಾನಿಸಿ ಕಂಪೆನಿಗಳನ್ನು ಉಳಿಸಲು 'ಸುಧಾರಣೆ'ಗಳನ್ನು ತರುತ್ತವೆ. ಕಳೆದ ಸಾರಿಯ ಬಿಕ್ಕಟ್ಟು ಭಾರತವನ್ನು ದೊ ಪ್ರಮಾಣಕ್ಕೆ ಬಾಧಿಸಿರಲಿಲ್ಲ. ಆದರೆ ಈಗಾಗಲೇ ಅದರ ಬಿಸಿ ಭಾರತದಲ್ಲೂ ಏರುತ್ತಿದೆ.


ಇದೇ ಸೆಪ್ಟೆಂಬರ್ 5ರಂದು ವಿಶ್ವಬ್ಯಾಂಕ್‌ನ ಪ್ರಧಾನ ಆರ್ಥಿಕ ತಜ್ಞನಾಗಿ ಮತ್ತು ಹಿರಿಯ ಉಪಾಧ್ಯಕ್ಷನಾ ನೇಮಕಗೊಂಡ ಕೌಶಿಕ್ ಬಸು ಜುಲೈ 2012ರವರೆಗೂ ಭಾರತ ಸರ್ಕಾರದ ಆರ್ಥಿಕ ಸಲಹೆಗಾರನಾಗಿದ್ದ. ಕೇವ ಎರಡು ತಿಂಗಳ ಕೆಳಗೆ ಅಮೆರಿಕಕ್ಕೆ ಹೋಗಿ ಅಲ್ಲಿನ ದೊಡ್ಡ ಕಂಪೆನಿಗಳ ದೊಡ್ಡ ಅಧಿಕಾರಿಗಳ ಹತ್ತಿರ 'ಸ್ವ ತಡೆದುಕೊಳ್ಳಿ, 2014ರ ಲೋಕಸಭಾ ಚುನಾವಣೆಗಳ ನಂತರ ನಮ್ಮ ಸರ್ಕಾರಗಳು ನಿಮಗೆ ಬೇಕಾದ ಆರ್ಥಿ ಸುಧಾರಣೆಗಳಲ್ಲಿ ಎಲ್ಲವನ್ನೂ ಮಾಡುತ್ತವೆ. ಈಗ ಎಲ್ಲವನ್ನೂ ಮಾಡಲು ಆಗುವುದಿಲ್ಲ' ಎಂದು ಹೇಳಿಬಂದದ ದೊಡ್ಡ ಸುದ್ದಿಯಾಗಿತ್ತು. 2013ರ ಒಳಗೆ ಹಲವು ವಿಧಾನಸಭಾ ಚುನಾವಣೆಗಳಿವೆ. 2014ರಲ್ಲಿ ಲೋಕಸಭ ಚುನಾವಣೆಯಿದೆ. ಅದು ಮುಗಿದ ನಂತರ ಭಾರತದ ಜನಸಾಮಾನ್ಯರಿಗೆ ಮತ್ತಷ್ಟು ಸಬ್ಸಿಡಿ ಕಡಿತ, ದರ ಹೆಚ್ಚ ಮತ್ತಷ್ಟು ಖಾಸಗೀಕರಣಗಳು ಕಾದಿವೆ.

ಇದು ಒಂದು ಕುಟುಂಬದ ಸಮಸ್ಯೆಯಲ್ಲ

ಈ ಸಮಸ್ಯೆ ಕೇವಲ ಶಿವಶಂಕರ ಮತ್ತು ಪದ್ಮರ ಕುಟುಂಬದ್ದಲ್ಲ. ಅವರು ವಾಸಿಸುತ್ತಿರುವ ಪೀಣ್ಯ 2ನೇ ಹಂತದ ಸುತ್ತಮುತ್ತಲ 8 ಕಿ.ಮೀ ಫಾಸಲೆಯಲ್ಲಿ ವಾಸಿಸುತ್ತಿರುವ ಕನಿಷ್ಠ ಮೂರು ಲಕ್ಷ ಕುಟುಂಬಗಳು ಹೆಚ್ಚುಕಡಿಮೆ ಇದೇ ರೀತಿಯಲ್ಲಿವೆ. ಬೆಂಗಳೂರಿನ ವೈಟ್‌ಫೀಲ್ಡ್, ಹೊಸೂರು ರಸ್ತೆ, ಮಹದೇವಪುರ, ಬಾಣಸವಾಡಿ, ನಾಯಂಡಹಳ್ಳಿ, ಮಾಗಡಿ ರಸ್ತೆ, ಅತ್ತಿಬೆಲೆ, ಅಟ್ಟೂರು ಲೇಔಟ್ ಹೀಗೆ ಎಲ್ಲಿ ಹೋದರೂ ನಿಮಗೆ ಶಿವಶಂಕರ ಮತ್ತು ಪದ್ಮರು ಕಾಣಸಿಗುತ್ತಾರೆ. ಬಹುಶಃ ಇದು ಒಂದು ಬೆಂಗಳೂರಿನ ಸಮಸ್ಯೆ ಮಾತ್ರವೂ ಅಲ್ಲ. ಬಿಕ್ಕಟ್ಟು ಜಗತ್ತಿನ ಆರ್ಥಿಕತೆಯನ್ನು ಆಳುತ್ತಿರುವ ಭಾರೀ ದೊಡ್ಡ ದೈನಾಸಾರ್‌ಗಳದ್ದಾದ್ದರಿಂದ, ಅದರ ಬೆಲೆಯನ್ನು ತೆರಬೇಕಾದವರು ಜಗತ್ತಿನ ಎಲ್ಲಾ ಸಣ್ಣ ಪುಟ್ಟ ಜೀವಿಗಳಾಗಿದ್ದಾರೆ.

ನಿರ್ದಯಿ ಮಿತ್ತಲ್ V/s ದಯಾಮಣಿ ಬರ್ಲಾ!

ಬಿಜೆಪಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ಸರ್ಕಾರ ಮೊನ್ನೆ ಜಗತ್ತಿನ ನಂಬರ್ 1 ಸ್ಟೀಲ್ ಕಂಪನಿಯಾದ ಆರ್ಸೆಲಾರ್ ಮಿತ್ತಲ್‌ಗೆ ಬಳ್ಳಾರಿಯ ಕುಡತಿನಿ ಪ್ರದೇಶದಲ್ಲಿ 600 ಎಕರೆಗಳನ್ನು ಹಸ್ತಾಂತರ ಮಾಡಿದೆ. ಇದರರ್ಥ ಜಗತ್ತಿನ ದೈತ್ಯ ಸ್ಟೀಲ್ ಕಂಪನಿಯೊಂದು ನಮ್ಮ ರಾಜ್ಯಕ್ಕೆ ಎಂಟ್ರಿ ಕೊಟ್ಟು ಇಲ್ಲಿನ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡುವತ್ತ ಮೊದಲ ಹೆಜ್ಜೆ ಇಟ್ಟಂತಾಗಿದೆ. ಮಿತ್ತಲ್ ಬದಲೆಯೇ ಪೋಸ್ಕೊ ತರಹದ ಇನ್ನೂ ಹೆಚ್ಚು ಸ್ಟೀಲ್ ಕಂಪನಿಗಳು ಎಂಟ್ರಿ ಕೊಟ್ಟರೆ ಅಚ್ಚರಿ ಇಲ್ಲ. ಈ ಕಂಪನಿಗಳು ಭ್ರಷ್ಟ ಸರ್ಕಾರದ ನೆರವಿನೊಂದಿಗೆ ರೈತರಿಗೆ ಚೂರುಪಾರು ಪರಿಹಾರಧನವನ್ನು ನೀಡಿ ಅವರ ಜೀವನಾಧಾರವಾದ ಭೂಮಿಯನ್ನು ಕಸಿದುಕೊಳ್ಳುತ್ತವೆ. ಮಾತ್ರವಲ್ಲ ಆ ಭೂಮಿಯಿಂದಲೇ ಜನರನ್ನು ಒದ್ದೋಡಿಸಿ, ಅದಿರನ್ನು ಬಾಚಿಕೊಂಡು, ಪರಿಸರವನ್ನು ನಾಶ ಮಾಡುತ್ತವೆ. ಆ ಪ್ರಕ್ರಿಯೆಯಲ್ಲಿ ಸ್ಥಳೀಯರು ಬಡವರಾಗುತ್ತಾ ಹೋದಂತೆ ಆ ಕಂಪನಿಗಳು ತಮ್ಮ ಲಾಭವನ್ನು ದುಪ್ಪಟ್ಟು ಹೆಚ್ಚು ಮಾಡಿಕೊಳ್ಳುತ್ತಾ ಹೋಗುತ್ತವೆ. ಇದು ವಿಶ್ವದಾದ್ಯಂತ ಮತ್ತೆಮತ್ತೆ ಜರುಗಿರುವ ಸತ್ಯ.



ಭ್ರಷ್ಟ ಸರ್ಕಾರಗಳ ಮತ್ತು ಲೂಟಿಕೋರ ಕಂಪನಿಗಳ ಇಂತಹ ಜಂಟಿ ವಂಚನೆಯನ್ನು ತಡೆಯುವುದು ಹೇಗೆ? ಅವರ ಜನದ್ರೋಹಿ ನೀತಿಗಳನ್ನು ಬಯಲಿಗೆಳೆಯುವುದು ಹೇಗೆ? ನಮ್ಮ ಜನರನ್ನೇ ನಮ್ಮ ನಾಡಿನಲ್ಲೇ ನಿರ್ಗತಿಕರನ್ನಾಗಿಸಿ ಬಂಡವಾಳಶಾಹಿಗಳಿಗೆ ಮಣೆ ಹಾಕುವ ಪ್ರವೃತ್ತಿಯನ್ನು ಕೊನೆಗಾಣಿಸುವುದು ಸಾಧ್ಯವೇ? ವಾಸ್ತವವಾಗಿ ನಿಜವಾದ ಪ್ರಜಾಪ್ರಭುತ್ವದಲ್ಲಿ ಇಂತಹ ಪ್ರಶ್ನೆಗಳೇ ಅಪ್ರಸ್ತುತವಾಗಬೇಕು. ಆದರೆ ನಮ್ಮ ದೇಶದಲ್ಲಿ ಕಪಟ ಪ್ರಜಾಪ್ರಭುತ್ವ ಇರುವುದರಿಂದ ಇಂತಹ ಪ್ರಶ್ನೆಗಳು ಮುಖ್ಯವಾಗುತ್ತವೆ.

ಭಾರತೀಯರು ಇವತ್ತು ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆಂದರೆ ಅವರ ಹಿತಾಸಕ್ತಿಗಳ ವಿರುದ್ಧವೇ ಸರ್ಕಾರಗಳು ನೀತಿನಿಯಮಗಳನ್ನು ಜಾರಿಗೆ ತರುತ್ತಿದ್ದರೂ ಅದನ್ನು ವಿರೋಧಿಸುವ, ಜನದ್ರೋಹಿ ಸರ್ಕಾರಗಳನ್ನು ಅಧಿಕಾರದಿಂದ ಕಿತ್ತೆಸೆಯುವ ಮಾರ್ಗಗಳನ್ನೇ ಕಳೆದುಕೊಳ್ಳುತ್ತಿದ್ದಾರೆ. ಚುನಾವಣೆಗಳು ಇವೆಯಲ್ಲ ಎನ್ನುವವರು ಇತ್ತೀಚೆಗೆ ಓರ್ವ ಜನಪರ ವ್ಯಕ್ತಿ ಯಾವುದೇ ಹಣಬಲ, ಜಾತಿಬಲ ಮತ್ತು ತೋಳ್ಬಲ ಇಲ್ಲದೆ ಚುನಾವಣೆಯಲ್ಲಿ ಗೆದ್ದಿದ್ದಾರೆಯೇ ಎಂದು ನೋಡಿದರೆ ಉತ್ತರ ಸಿಗುತ್ತದೆ ಮತ್ತು ನಮ್ಮ ಇಡೀ ವ್ಯವಸ್ಥೆ ಪ್ರಜಾಪ್ರಭುತ್ವದ ಸೋಗಿನಲ್ಲಿ ಹೇಗೆ ಜನರ ವಿರುದ್ಧವೇ ನಿಂತಿದೆ ಎಂಬುದು ಅರ್ಥವಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದಲ್ಲಿ ಜನಪರವಾಗಿ ನಿಂತಿದ್ದಕ್ಕೆ ಸರ್ಕಾರದ ಕೆಂಗಣ್ಣಿಗೆ ಗುರಿಯಾದವರಿಗೆ ಲೆಕ್ಕವಿಲ್ಲ. ಅಕ್ರಮವಾಗಿ ಜೈಲುಪಾಲಾಗಿದ್ದ ಮಾನವತಾವಾದಿ ವೈದ್ಯ ಬಿನಾಯಕ್ ಸೇನ್ ಅವರಿಂದ ಹಿಡಿದು ನರಹಂತಕ ನರೇಂದ್ರ ಮೋದಿಗೆ ನ್ಯಾಯಾಲಯ ಶಿಕ್ಷೆ ವಿಧಿಸಬೇಕೆಂದು ಹೋರಾಡುತ್ತಿರುವುದಕ್ಕೆ ಖೊಟ್ಟಿ ಕೇಸುಗಳನ್ನು ಎದುರಿಸುತ್ತಿರುವ ತೀಸ್ತಾ ಸೆಟಲ್ವಾದ್‌ತನಕ ನೂರಾರು ಜನರಿದ್ದಾರೆ. ಮಣಿಪುರದ ಇರೋಮ್ ಶರ್ಮಿಳಾ ಅಂತೂ ಉಪವಾಸ ಕೂತು ಹೋದವಾರಕ್ಕೆ 13 ವರ್ಷಗಳೇ ಆದವು. ಅಂತಹವರ ಪಟ್ಟಿಗೆ ಈಗ ಮತ್ತೊಂದು ಹೆಸರು ಸೇರ್ಪಡೆ ಆಗಿದೆ. ಅದು ದಯಾಮಣಿ ಬರ್ಲಾ ಎಂಬ ಆದಿವಾಸಿ ಮಹಿಳೆಯದ್ದು. ಆದಿವಾಸಿಗಳ ಪರ ದನಿ ಎತ್ತಿದ್ದಕ್ಕೆ ಮೊನ್ನೆ ದಯಾಮಣಿ ಅವರನ್ನು ಜೈಲಿಗೆ ಕಳುಹಿಸಲಾಯಿತು.

ಈ ದಯಾಮಣಿ ಜಾರ್ಖಂಡ ರಾಜ್ಯದ ಬಡ ಆದಿವಾಸಿ ಕುಟುಂಬದಲ್ಲಿ ಜನಿಸಿದವರು. ವ್ಯವಹಾರದ ಚಾಣಾಕ್ಷತೆ ಇರದಿದ್ದ ದಯಾಮಣಿಯ ತಂದೆ ತಮ್ಮ ಹೆಸರಿನಲ್ಲಿದ್ದ ಒಂದಿಷ್ಟು ಭೂಮಿಯನ್ನು ಸಾಲಗಾರರಿಗೆ ಕೊಟ್ಟು ಕಳೆದುಕೊಂಡರು. ಆಗ ಜೀವನೋಪಾಯಕ್ಕೆ ಆಕೆಯ ತಂದೆ ಹತ್ತಿರದ ಒಂದು ನಗರದಲ್ಲಿ ಕೆಲಸಕ್ಕೆ ಸೇರಿದರೆ ತಾಯಿ ಮತ್ತೊಂದು ನಗರದಲ್ಲಿ ಮುಸುರೆ ತೊಳೆಯುವ ಕಾಯಕ ಹಿಡಿದರು. ಓದಬೇಕೆಂದು, ಶಿಕ್ಷಣ ಪಡೆಯಬೇಕೆಂದು ಹಂಬಲಿಸುತ್ತಿದ್ದ ದಯಾಮಣಿ ಸ್ವತಃ ಇತರರ ಹೊಲಗಳಲ್ಲಿ ಕೂಲಿ ಮಾಡುತ್ತಾ ಹಳ್ಳಿಯಲ್ಲೇ ಏಳನೆ ತರಗತಿವರೆಗೆ ಓದಿದರು. ಆನಂತರ ಅವರೂ ಈಗ ಜಾರ್ಖಂಡದ ರಾಜಧಾನಿ ಆಗಿರುವ ರಾಂಚಿ ನಗರಕ್ಕೆ ಬಂದು ಯಾರದ್ದೋ ಮನೆಯಲ್ಲಿ ಕೆಲಸ ಮಾಡುತ್ತಾ, ಹಳಸಿದ್ದನ್ನು ಉಣ್ಣುತ್ತಾ, ದನದ ದೊಡ್ಡಿಯಲ್ಲಿ ನಿದ್ರಿಸುತ್ತಾ ಹೈಸ್ಕೂಲ್ ಮುಗಿಸಿದರು. ಅಷ್ಟಕ್ಕೆ ದಯಾಮಣಿ ಸುಮ್ಮನಾಗಲಿಲ್ಲ. ಇನ್ನೂ ಹೆಚ್ಚು ಓದಬೇಕು, ಪದವೀಧರೆ ಆಗಬೇಕು ಎಂದು ಆಶಿಸಿದ್ದ ಆಕೆ ಟೈಪಿಂಗ್ ಮಾಡುವ ಮೂಲಕ ಒಂದಿಷ್ಟು ಹಣ ಗಳಿಸಿ ಪದವಿಯನ್ನೂ ಪಡೆದರು.

ಅದೇ ಹೊತ್ತಿಗೆ ಕೋಯಿಲ್-ಕಾರೋ ಜಲವಿದ್ಯುತ್ ಯೋಜನೆ ವಿರುದ್ಧ ಪ್ರತಿಭಟನೆಗಳು ಕಾವು ಪಡೆಯಲಾರಂಭಿಸಿದವು. ಆ ಯೋಜನೆಯಿಂದಾಗಿ ನೈಸರ್ಗಿಕ ಸಂಪತ್ತು ಮತ್ತು ಕಾಡುಗಳನ್ನು ಹೊಂದಿದ್ದ 66,000 ಎಕರೆಗಳು ಮುಳುಗಡೆ ಆಗುತ್ತಿದ್ದವಲ್ಲದೆ ಆ ಕಾಡುಗಳಲ್ಲಿ ವಾಸಿಸುತ್ತಿದ್ದ 1,35000 ಆದಿವಾಸಿಗಳು ನಿರಾಶ್ರಿತರಾಗುತ್ತಿದ್ದರು. ಯೋಜನೆ ವಿರುದ್ಧದ ಪ್ರತಿಭಟನೆಗಳಲ್ಲಿ ಸಕ್ರಿಯರಾದ ದಯಾಮಣಿಗೆ ತನ್ನ ಆದಿವಾಸಿ ಸಮುದಾಯವನ್ನು ರಕ್ಷಿಸಬೇಕಿದ್ದರೆ ಅವರು ವಾಸಿಸುತ್ತಿದ್ದ ಜಂಗಲ್, ಜಮೀನು ಮತ್ತು ಜಲದ ರಕ್ಷಣೆಯೂ ಮುಖ್ಯ ಎಂದು ಅರಿವಾಯಿತು. ಅದೇ ಹೊತ್ತಿಗೆ ಆದಿವಾಸಿಗಳ ಹೋರಾಟ ಮತ್ತು ಸಂಕಷ್ಟಗಳನ್ನು ಕುರಿತು ಮುಖ್ಯವಾಹಿನಿಯ ಮಾಧ್ಯಮಗಳು ವರದಿ ಮಾಡುತ್ತಿಲ್ಲ ಎಂಬುದೂ ದಯಾಮಣಿ ಅವರ ಗಮನಕ್ಕೆ ಬಂತು. ಆದಿವಾಸಿಗಳ ರಕ್ಷಣೆ ಮತ್ತು ದನಿ ಎರಡನ್ನೂ ಬಿಂಬಿಸಲು ಅವರು ಬ್ಯಾಂಕಿನಿಂದ 25,000 ರೂಪಾಯಿಗಳ ಸಾಲ ಪಡೆದ 'ಜನಹಕ್ಕು' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಆ ಪತ್ರಿಕೆ ಬಹಳ ದಿನ ಉಳಿಯದಿದ್ದರೂ ದಯಾಮಣಿಯವರ ಕಾಳಜಿ ಮತ್ತು ನೇರ-ದಿಟ್ಟ ಹಾಗು ಮನಮುಟ್ಟುವಂತೆ ಬರೆಯುವ ಶೈಲಿ ಎಲ್ಲರ ಗಮನ ಸೆಳೆಯಿತು. ಆಗ 'ಪ್ರಭಾತ್ ಖಬರ್' ಎಂಬ ಪ್ರಮುಖ ಹಿಂದಿ ದಿನಪತ್ರಿಕೆ ಅವರಿಗೆ ಒಂದು ಅಂಕಣವನ್ನು ಬರೆಯಲು ಅವಕಾಶ ಮಾಡಿಕೊಟ್ಟಿತು. ಜೊತೆಗೆ 'ಆದಿವಾಸಿ ಮೂಲವಾಸಿ ಅಸ್ತಿತ್ವ ರಕ್ಷಣಾ ವೇದಿಕೆ' ಎಂಬ ಸಂಘಟನೆಯನ್ನೂ ದಯಾಮಣಿ ಸ್ಥಾಪಿಸಿ ತನ್ನ ಸಾರ್ವಜನಿಕ ಬದುಕನ್ನೂ ಮುಂದುವರೆಸಿದರು. ದಯಾಮಣಿ ಎಂತಹ ಮಹಿಳೆ ಎಂದರೆ ತಾನು ಸದಾ ಜನರೊಂದಿಗೆ ಇರಬೇಕು, ಅವರೊಂದಿಗೆ ಬೆರೆಯಬೇಕು ಎಂದು ಆಶಿಸಿ ಆ ನಿಟ್ಟಿನಲ್ಲಿ ಒಂದು ಚಹಾ ಅಂಗಡಿ ತೆರೆದರು. ಇವತ್ತು ಆ ಅಂಗಡಿ ಅವರ ಜೀವನೋಪಾಯಕ್ಕೆ ಒಂದು ಮಾರ್ಗವಾಗಿದೆಯಲ್ಲದೆ ಜನ ಅಲ್ಲಿ ಸೇರಿ ತಮ್ಮ ಕಷ್ಟನಷ್ಟಗಳನ್ನು ತೋಡಿಕೊಳ್ಳುವುದರಿಂದ ದಯಾಮಣಿಗೆ ತನ್ನ ಸಮುದಾಯದವರ ಬದುಕಿನ ಆಗುಹೋಗುಗಳೂ ಕೂಡಲೆ ಅರ್ಥವಾಗುವಂತಾಗಿದೆ.

ಕೋಯಿಲ್-ಕಾರೋ ಜಲವಿದ್ಯುತ್ ಯೋಜನೆ ವಿರುದ್ಧ ಆದಿವಾಸಿಗಳ ಆಕ್ರೋಶ ಮುಗಿಲು ಮುಟ್ಟಿದ್ದರಿಂದ ಸರ್ಕಾರ ಕೊನೆಗೆ ಆ ಯೋಜನೆಯ ಕೈಬಿಟ್ಟಿತು. ಆದರೆ ಅಲ್ಲಿಗೇ ಆದಿವಾಸಿಗಳ ಸಮಸ್ಯೆಗಳು ಮುಗಿಯಲಿಲ್ಲ. ಯಾಕೆಂದರೆ ಕೆಲವರ್ಷಗಳ ನಂತರ ಅದೇ ಪ್ರದೇಶದಲ್ಲಿ ಲಕ್ಷ್ಮಿ ಮಿತ್ತಲ್ ಎಂಬ ರಾಕ್ಷಸ ಕಾಣಿಸಿಕೊಂಡ. ತನ್ನ ಆರ್ಸೆಲ್ಲಾರ್ ಮಿತ್ತಲ್ ಕಂಪನಿಯು ಅಲ್ಲೊಂದು ಸ್ಟೀಲ್ ಘಟಕವನ್ನು ಸ್ಥಾಪಿಸಲು ಇಚ್ಛಿಪಟ್ಟಿದೆ ಎಂದೂ, ಅದಕ್ಕೆಂದು 12,000 ಎಕರೆ ಪ್ರದೇಶ ಬೇಕೆಂದೂ ಮಿತ್ತಲ್ ಜಾರ್ಖಂಡ್ ಸರ್ಕಾರಕ್ಕೆ ಮನವಿ ಸಲ್ಲಿಸಿದ. ಮಿತ್ತಲ್ ತನ್ನನ್ನು ಕೇಳಿದ್ದೇ ಪುಣ್ಯ ಎಂದು ಭಾವಿಸಿದ ಸರ್ಕಾರ ಅಷ್ಟು ಭೂಮಿಯನ್ನು ಕೊಡಲು ಮುಂದಾಯಿತು. ಮಾತ್ರವಲ್ಲ ಆ ಪ್ರದೇಶದಲ್ಲಿ ಇದ್ದ 45 ಹಳ್ಳಿಗಳನ್ನು ನೆಲಸಮ ಮಾಡಿ ಅಲ್ಲಿ ವಾಸಿಸುತ್ತಿದ್ದ 70,000 ಆದಿವಾಸಿಗಳನ್ನು ಒಕ್ಕಲೆಬ್ಬಿಸಲು ಸಿದ್ಧತೆ ನಡೆಸಿತು. ಆಗ ಆದಿವಾಸಿಗಳ ಪರ ಸಿಡಿದೆದ್ದು ನಿಂತವರೇ ದಯಾಮಣಿ. "ನೀವು ಪರಿಹಾರಧನವಾಗಿ ಕೊಡುವ ಪುಡಿಗಾಸಿಗಿಂತ ನಾವು ಈ ಭೂಮಿಯ ಮೇಲೆ ಕಟ್ಟಿಕೊಂಡು ಬಂದಿರುವ ಜೀವನಕ್ರಮವೇ ನಮಗೆ ಮುಖ್ಯ. ನಾವು ನಮ್ಮ ಭೂಮಿಯ ಒಂದು ಇಂಚನ್ನೂ ಬಿಟ್ಟುಕೊಡುವುದಿಲ್ಲ" ಎಂದು ಆಂದೋಲನವನ್ನು ಪ್ರಾರಂಭಿಸಿದರು. ದಯಾಮಣಿಯ ಹೋರಾಟಕ್ಕೆ ಎಂತಹ ಬೆಂಬಲ ವ್ಯಕ್ತವಾಯಿತೆಂದರೆ ಇವತ್ತಿಗೂ ಆ ಪ್ರದೇಶದಲ್ಲಿ ಮಿತ್ತಲ್ ಕಂಪೆನಿಯ ಕೈಗೆ ಒಂದೇ ಒಂದು ಎಕರೆ ಭೂಮಿ ಸಿಕ್ಕಿಲ್ಲ.

ಇತ್ತೀಚೆಗೆ ದಯಾಮಣಿ ಅವರು ಮತ್ತೊಂದು ಹೋರಾಟಕ್ಕೆ ಚಾಲನೆ ನೀಡಿದರು. ಜಾರ್ಖಂಡದ ರಾಜಧಾನಿ ರಾಂಚಿಯಿಂದ ಕೆಲವೇ ಕಿಲೋಮೀಟರ್ ದೂರದಲ್ಲಿರುವ ನಗರಿ ಎಂಬ ಹಳ್ಳಿಯ ಫಲವತ್ತಾದ 227 ಎಕರೆ ಭೂಮಿಯನ್ನು ರಾಜ್ಯ ಸರ್ಕಾರ ಐಐಟಿ ಮತ್ತು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಮಂಜೂರು ಮಾಡಿತು. ಇದರಿಂದಾಗಿ ತಲತಲಾಂತರದಿಂದ ನಗರಿ ಹಳ್ಳಿಯಲ್ಲಿ ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ 500 ಆದಿವಾಸಿ ಕುಟುಂಬಗಳು ಬೀದಿಪಾಲಾದವು. ಆಗ ದಯಾಮಣಿ ಅವರನ್ನೆಲ್ಲ ಕಟ್ಟಿಕೊಂಡು ಶಾಂತಿಯುತ ಪ್ರತಿಭಟನೆಗಳನ್ನು ನಡೆಸಿದರು. ಪೊಲೀಸರು ಬಂದು ರೈತರು ಬೆಳೆದಿದ್ದ ಬೆಳೆಯನ್ನೆಲ್ಲ ನಾಶಮಾಡಿದಾಗಲೂ ಜನ ತಮ್ಮ ತಾಳ್ಮೆಯನ್ನು ಕಳೆದುಕೊಳ್ಳಲಿಲ್ಲ. ರಾಜ್ಯದಲ್ಲಿರುವ ನಾಲ್ಕು ರಿಸರ್ವ್ ಪೊಲೀಸ್ ತುಕಡಿಗಳಲ್ಲಿ ಮೂರನ್ನು ನಗರಿ ಹಳ್ಳಿಯ ಜನರ ವಿರುದ್ಧ ನಿಲ್ಲಿಸಿದಾಗಲೂ ಜನ ಕೋಪಗೊಳ್ಳಲಿಲ್ಲ. ಅಮಾಯಕ ಹಳ್ಳಿ ಜನರ ವಿರುದ್ಧ ಖೊಟ್ಟಿ ಕೇಸುಗಳನ್ನು ದಾಖಲಿಸಿದರೂ ರೊಚ್ಚಿಗೇಳಲಿಲ್ಲ. ಅಷ್ಟೇ ಅಲ್ಲ "ನಮ್ಮ ರಾಜ್ಯದಲ್ಲಿ ಬಹುಸಂಖ್ಯಾತರಾಗಿರುವ ಆದಿವಾಸಿಗಳಿಗೆ ಇಲ್ಲಿಯತನಕ ಮೂಲಭೂತ ಸೌಕರ್ಯಗಳನ್ನಾಗಲಿ, ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನಾಗಲಿ ಕಲ್ಪಿಸಿಲ್ಲ. ಆದರೂ ಇಂತಹ ಆದಿವಾಸಿಗಳ ಭೂಮಿಯನ್ನೇ ಕಸಿದುಕೊಂಡು ಐಐಟಿ ಮತ್ತು ಕಾನೂನು ವಿಶ್ವವಿದ್ಯಾಲಯದಂತಹ ಐಷಾರಾಮಿ ಸಂಸ್ಥೆಗಳನ್ನು ಕಟ್ಟುವ ಔಚಿತ್ಯವಾದರೂ ಏನು" ಎಂಬ ಪ್ರಶ್ನೆಯನ್ನು ಕೇಳುವುದನ್ನೂ ನಿಲ್ಲಿಸಲಿಲ್ಲ. ಇದೆಲ್ಲದರಿಂದಾಗಿ ಸಹಜವಾಗಿಯೇ ರಾಜ್ಯ ಸರ್ಕಾರಕ್ಕೆ ಇರುಸುಮುರುಸಾಯಿತು.

ಯಾವುದೇ ರಾಜಕೀಯ ಪಕ್ಷ ಅಥವಾ ರಾಜಕಾರಣಿಯೊಂದಿಗೆ ರಾಜಿ ಮಾಡಿಕೊಳ್ಳದೆ, ದಣಿವು ಮತ್ತು ಸ್ವಾರ್ಥವಿಲ್ಲದೆ ತನ್ನ ಜನರ ಪರವಾಗಿ ಹೋರಾಡುವ ದಯಾಮಣಿ ಇವತ್ತು ಎಷ್ಟು

ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಜನಪ್ರಿಯ ಮತ್ತು ಜನಬೆಂಬಲ ಪಡೆದಿರುವ ವ್ಯಕ್ತಿ ಎಂದರೆ ಆಕೆ ರಾಜ್ಯ ಸರ್ಕಾರಕ್ಕೆ ಮತ್ತು ಕಾರ್ಪೊರೇಟ್ ಕಂಪನಿಗಳಿಗೆ ದೊಡ್ಡ ತಲೆನೋವಾಗಿದ್ದಾರೆ. ಆದ್ದರಿಂದಲೇ ಆಕೆಯನ್ನು ಹೇಗಾದರು ಮಾಡಿ ಮಟ್ಟಹಾಕಬೇಕೆಂದು ಸರ್ಕಾರ ಕಾಯುತ್ತಿತ್ತು.

ಅದಕ್ಕೆ ನೆಪವಾಗಿ ಸಿಕ್ಕಿದ್ದು ಯಾವುದು ಗೊತ್ತೇ? ಆರು ವರ್ಷಗಳ ಹಿಂದೆ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅವ್ಯವಹಾರ ನಡೆಯುತ್ತಿದ್ದು ಸೂಕ್ತ ಜನರಿಗೆ ಮಾತ್ರ 'ಜಾಬ್ ಕಾರ್ಡ್'ಗಳನ್ನು ಕೊಡಬೇಕೆಂದು ಆಗ್ರಹಿಸಿ ದಯಾಮಣಿ ಅವರು ಒಂದು ಪ್ರತಿಭಟನೆಯನ್ನು ನಡೆಸಿದ್ದರು. ಆಗ ಸರ್ಕಾರಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡ ಬಂದರು ಎಂಬ ಸುಳ್ಳು ಕೇಸನ್ನು ಅವರ ವಿರುದ್ಧ ದಾಖಲಿಸಲಾಗಿತ್ತು. ಈಗ ಆ ಕೇಸನ್ನೇ ಹೊರತೆಗೆದು ದಯಾಮಣಿ ಅವರನ್ನು ಅಲ್ಲಿನ ಸರ್ಕಾರ ಬಂಧಿಸಿದೆ. ಇದರ ಹಿಂದಿರುವ ತರ್ಕ ಏನೆಂದರೆ ಆದಿವಾಸಿಗಳ ಭೂಮಿಯನ್ನು ಕಿತ್ತುಕೊಂಡು ಬೇರೆಯವರಿಗೆ ನೀಡುವುದನ್ನು ವಿರೋಧಿಸಿದ್ದಕ್ಕೆ ದಯಾಮಣಿಯನ್ನು ಬಂಧಿಸಿದ್ದರೆ ಜಾರ್ಖಂಡದ ಆದಿವಾಸಿಗಳು ದಂಗೇಳುತ್ತಿದ್ದರು. ಆದ್ದರಿಂದ 'ಜಾಬ್ ಕಾರ್ಡ್'ಗಳನ್ನೆ ನೆಪ ಮಾಡಿಕೊಳ್ಳಲಾಗಿದೆ...

ಜಾರ್ಖಂಡದಲ್ಲಿ ಮಿತ್ತಲ್ ತರಹದ ಧೂರ್ತರನ್ನು ತಡೆದಿದ್ದ ದಯಾಮಣಿಗೆ ಜಾಮೀನು ಸಿಕ್ಕರೂ ಅವರನ್ನು ಜೈಲಿನಲ್ಲೇ ಇಡಲಾಗಿದೆ. ಆಕೆಯ ಬಿಡುಗಡೆಗೆ ಒತ್ತಾಯಿಸಿ ದೇಶದ ವಿವಿಧ ಭಾಗಗಳ ಹೋರಾಟಗಾರರು ದನಿ ಎತ್ತಿದ್ದಾರೆ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಿವುಡು ಮತ್ತು ಕುರುಡುತನವನ್ನು ಪ್ರದರ್ಶಿಸುತ್ತಿವೆ.

ಇದೇ ಹೊತ್ತಿನಲ್ಲಿ ಮಿತ್ತಲ್ ಕಂಪನಿಗೆ ಕರ್ನಾಟಕದಲ್ಲಿ ಜನದ್ರೋಹಿ ಬಿಜೆಪಿ ಸರ್ಕಾರ ಭೂಮಿ ಕೊಟ್ಟು ರತ್ನಗಂಬಳಿ ಹಾಸಿದೆ. ಮೊದಲೇ ಹೇಳಿದಂತೆ ಇದು ಮುಂದಿನ ದಿನಗಳಲ್ಲಿ ಆಗುವ ಭಾರಿ ಪ್ರಮಾಣದ ಲೂಟಿಯತ್ತ ಒಂದು ಪುಟ್ಟ ಹೆಜ್ಜೆಯಷ್ಟೇ.


ಆದನ್ನು ತಡೆಯಲು ನಮ್ಮ ರಾಜ್ಯದಲ್ಲೂ ದಯಾಮಣಿ ಬರ್ಲಾ ತರಹದ ದಿಟ್ಟ ಹೋರಾಟಗಾರರು ರೂಪಗೊಳ್ಳಲಿ ಎಂಬ ಆಶಯ ನನ್ನದು... ■

ಅಧಿಕ ಪ್ರಸಂಗಿ ಅಸ್ನೋಟಿಕರ್‌ನ ಗೋವಾ ಗಲಾಟೆ!!


ಅರ್ಧ ಕತ್ತರಿಸಿಟ್ಟ ಮರದ ದಿಮ್ಮಿಯ ಬೆಣೆ ತೆಗೆದು ತನ್ನ ಬಾಲವನ್ನೇ ಸಿಕ್ಕಿಹಾಕಿಸಿಕೊಂಡು ಚಡಪಡಿಸಿದ ಮಂಗನಂತಾಗಿದೆ "ಸಿಜರಿನ್ ಸಚಿವ" ಆನಂದ್ ಅಸ್ನೋಟಿಕರ್‌ನ ಪಾಡು-ಹಾಡು! ನಾಲ್ಕೂವರೆ ವರ್ಷದ ಶಾಸಕ-ಮಂತ್ರಿಗಿರಿಯ ವೈಫಲ್ಯ-ಅಯೋಗ್ಯತೆ ಮರೆಮಾಚಿ ಜನರ ಮರುಳು ಮಾಡಲು ತರಹೇವಾರಿ ಮಸಲತ್ತು ಮಾಡುತ್ತಿರುವ ಈ ಅಧಿಕಪ್ರಸಂಗಿ ಪೋರ ಈಗ ಕಾರವಾರವನ್ನೇ ಗೋವಾಕ್ಕೆ ಸೇರಿಸಬೇಕೆಂದು ಗೊಗ್ಗಿ ಎಸೆದು ಗಂಡಾಂತರದಲ್ಲಿ ಸಿಲುಕಿದ್ದಾನೆ. ಹೀನ ಸುಳಿಯ ಅಸ್ನೋಟಿಕರ್‌ನ ಮನೆಮುರುಕು ಬುದ್ಧಿ, ನಾಡು ದ್ರೋಹ, ರಗಳೆ ರಾಜಕಾರಣದಿಂದ ರೋಸತ್ತು ಹೋಗಿರುವ ಜನರೀಗ ಕಂಡ-ಕಂಡಲ್ಲಿ ಆತನಿಗೆ "ಛೀ... ಥೂ" ಎಂದು ಉಗಿಯುತ್ತಿದ್ದಾರೆ! ಈ ವಿವಾದದಿಂದ ಬಚಾವಾಗಲು ಆವಸರದಲ್ಲಿ ಅಸ್ನೋಟಿಕರ್ ಸರಣಿ ಅಪರಾಧ ಮಾಡುತ್ತಿದ್ದಾನೆ; ಸುದ್ದಿಗೆ ಗುದ್ದು ಕೊಟ್ಟು-ಕೊಟ್ಟು ಸುಸ್ತಾಗಿ ಹೋಗಿದ್ದಾನೆ.

ಹೇತ್ಲಾಂಡಿ ಮಂತ್ರಿ

ಕನಿಷ್ಠ ಗ್ರಾಮ ಪಂಚಾಯ್ತಿ ಸದಸ್ಯತ್ವಕ್ಕೂ ಅರ್ಹನಲ್ಲದ ಈ ಅಸ್ನೋಟಿಕರ್ ಪ್ರಜಾಪ್ರಭುತ್ವದ ದೌರ್ಬಲ್ಯದಿಂದ ಕ್ಯಾಬಿನೆಟ್ ಮಂತ್ರಿಯಂಥ ಗುರುತರ ಜವಾಬ್ದಾರಿಯ ಸ್ಥಾನಕ್ಕೇರಿ ಕುಳಿತಿದ್ದು ಕಾರವಾರದ ಮಟ್ಟಿಗಂತೂ ದೊಡ್ಡ ದುರಂತ! ಆಪರೇಷನ್ ಮಾಡಿಸಿಕೊಂಡು ಬಿಜೆಪಿ ಸೇರಿದ ಗಳಿಗೆಯಿಂದ ಶುರುವಾದ ಈ ಭಂಡನ ಬ್ಲುನ್ಡರ್ಸ್ ಭಾನ್ಗಡಿಗಳು ದಿನಕ್ಕೊಂದರಂತೆ ನಡೆಯುತ್ತಲೇ ಇದೆ. ಜನಪ್ರತಿನಿಧಿಯೊಬ್ಬನಿಗಿರಬೇಕಾದ ಸಣ್ಣ ಮಾನ-ಮರ್ಯಾದೆ, ಹೊಣೆಗಾರಿಕೆಯ ಪ್ರಜ್ಞೆ, ನಾಗರಿಕ-ಶಿಷ್ಟಾಚಾರ ಒಂದೂ ಇಲ್ಲದ ಅಸ್ನೋಟಿಕರ್‌ಗೆ ಕ್ಷೇತ್ರದ ಬೇಕು-ಬೇಡ, ಕಷ್ಟ-ಸುಖ ಅದ್ಹೇಗೆ ಅರ್ಥವಾದೀತು. ಮಂತ್ರಿಗಿರಿ ಬಲದಿಂದ ತನ್ನ ಕಳ್ಳ ಉದ್ಯಮ ಸಾಮ್ರಾಜ್ಯ ವಿಸ್ತರಿಸಿಕೊಳ್ಳುತ್ತ ಮೋಜು-ಮಸ್ತಿ ಮಾಡುತ್ತ ಈತ ಕಾಲ ಕಳೆದುಬಿಟ್ಟ!



ಕಾರವಾರ-ಅಂಕೋಲಾದ ಕದಂಬ ನೌಕಾನೆಲೆ ನಿರಾಶ್ರಿತರ ಗೋಳು ಕಂಡೂ ಕಾಣದಂತಿರುವ ಅಸ್ನೋಟಿಕರ್ ಜಲ್ಲಿ ಕಲ್ಲು ಕ್ವಾರಿ, ಮರಳುಗಾರಿಕೆ ಮೇಲೆ ಹಿಡಿತ ಸಾಧಿಸಿ ಡಾನ್ ಆಗುವ ರೌಡಿಗಿರಿಯ ಭರದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಕಂಟಕನಾಗಿಹೋದ. ಜಿಲ್ಲಾ ಮಂತ್ರಿ ಕಾಗೇರಿ ತನ್ನ ಎದುರಾಳಿ ಅಸ್ನೋಟಿಕರ್‌ನ ಸೊಂಟ ಮುರಿಯಲೆಂದು ಕ್ವಾರಿ-ಮರಳುಗಾರಿಕೆ ನಿಲ್ಲಿಸಿದ. ಇದರಿಂದ ಅಂಕೋಲಾ-ಕಾರವಾರದ ಅಭಿವೃದ್ಧಿ ಕಾಮಗಾರಿಕೆಗೆ ದೊಡ್ಡ ಕಲ್ಲು ಬಿತ್ತು; ಸಾವಿರಾರು ಗಣಿ ಕಾರ್ಮಿಕರು ಬೀದಿ ಪಾಲಾದರು. ಸಿಆರ್‌ಝಡ್ ನಿಯಮ ಧಿಕ್ಕರಿಸಿ ಸಮುದ್ರ ದಡದಲ್ಲೇ ತಾರಾ ಹೋಟೆಲ್ ಕಟ್ಟಿಕೊಂಡ, ಬೇಲೇಕೇರಿಯ ಸಮುದ್ರವನ್ನೇ ನುಂಗಿ ಅದಿರು ರಫ್ತು ಮಾಡುವ ಬಂದರು ಕಟ್ಟಲು ಹವಣಿಸಿದ, ಮಾಲ್ಡೀವ್ಸ್‌ಗೆ ಮರಳು ಕಳಿಸಲು ಹೋಗಿ ಸಿಕ್ಕಿಬಿದ್ದ ಗೋವಾದ ಕಾಣಕೋಣದಲ್ಲಿ ರೆಸಾರ್ಟ್ ನಿರ್ಮಿಸಲು ಹೋಗಿ ಅಲ್ಲಿಯ ಆಡಳಿತದಿಂದ ಮೂತಿಗೆ ಇಕ್ಕಿಸಿಕೊಂಡ, ಯಡ್ಡಿ ವಿರುದ್ಧ ತಿರುಗಿಬಿದ್ದು ಶಾಸಕತ್ವ ಕಳಕೊಂಡು ಅಂತರ್‌ಪಿಶಾಚಿಯಂತೆ ಅಂಡಲೆದ, ಮತ್ತೆ ಬಿಜೆಪಿಗೆ ಶರಣಾಗಿ ಈಶ್ವರಪ್ಪನಿಗೆ ಕಾಣಿಕೆ ಕೊಟ್ಟು ಮಂತ್ರಿಮಂಡಲದಲ್ಲಿ ಪೇಮೆಂಟ್ ಸೀಟು ಪಡೆದ. ಕಾಂಗ್ರೆಸ್‌ಗೆ ಹೋಗ್ತೀನಿ ಅಂತ ಗುಲ್ಲೆಬ್ಬಿಸಿ ದೇಶಪಾಂಡೆಯ ಕಾಲಿಗೆ ಉದ್ದಂಡ ನಮಸ್ಕಾರ ಮಾಡಿದ, ಮಂತ್ರಿ ಕಾಗೇರಿ ಕೊಟ್ಟ ಚೆಡ್ಡಿ ಏಟಿಗೆ ತತ್ತರಿಸಿ "ಅಂಬೋ" ಅಂದಾ, ತನ್ನ ಸಿಎಂ ವಿರುದ್ಧವೇ ಸ್ಟೇಟ್‌ಮೆಂಟ್ ಒಗಾಯಿಸಿ ಹಾರಾಡಿದ... ಅಸ್ನೋಟಿಕರ್‌ನ ಅವಾಂತರ- ಎಡವಟ್ಟು ಒಂದಾ, ಎರಡಾ? ಅಂತಿಮವಾಗಿ ಕ್ಷೇತ್ರದ ಜನರಿಗೆ ನಿರಂತರ ಅನ್ಯಾಯ- ದ್ರೋಹ-ವಂಚನೆ ಮಾಡುತ್ತಲೇ ಹೋದ....



ಮೆಡಿಕಲ್ ಕಾಲೇಜ್ ಕಸರತ್ತು

"ನಾಮಕಾವಸ್ತೆ" ಮಂತ್ರಿಯಾಗಿರುವ ಅಸ್ನೋಟಿಕರ್‌ಗೆ ಬಿಜೆಪಿಯಲ್ಲಾಗಲಿ, ಸರ್ಕಾರದಲ್ಲಾಗಲಿ ಮೂರು ಬಿಲ್ಲಿ ಬೆಲೆಯಿಲ್ಲ, ಜಿಲ್ಲಾ ಮಂತ್ರಿ ಕಾಗೇರಿ ಎಂಬ ಗುಳ್ಳೆನರಿಯಂತೂ ಈ ವೈರಿಯ ಕಾಲು-ಬಾಲ ಕಟ್ ಮಾಡಿಟ್ಟಿದ್ದಾನೆ. ಇಂಜಿನಿಯರಿಂಗ್ ಕಾಲೇಜು ಕಟ್ಟಡ ಕಟ್ಟಿಸ್ತೇನೆ, ಮೆಡಿಕಲ್ ಕಾಲೇಜು ತರ್ತೇನೆ, ಆ ಕಾಮಗಾರಿಗೆ ಕೋಟಿ ತಂದಿದ್ದೇನೆ, ಈ ಯೋಜನೆ ನಾಳೆನೇ ಶುರು ಎಂದು ಬಂಡಲ್ ಬಿಡುತ್ತಲೇ ಬಂದಿರುವ ಅಸ್ನೋಟಿಕರ್‌ನನ್ನು ಜನರೀಗ ನಂಬುತ್ತಿಲ್ಲ. ಜಿಲ್ಲೆಗೆ ಅನಾಯಾಸವಾಗಿ ಮಂಜೂರಾಗಿದ್ದ ಮೆಡಿಕಲ್ ಕಾಲೇಜು ಈ ಎಡವಟ್ಟು ಅಸ್ನೋಟಿಕರ್-ಕಾಗೇರಿಯ ಕೋಳಿ ಕಾಳಗದಿಂದಾಗಿ ರದ್ದಾಗಿದೆ.

ಈ ಮೆಡಿಕಲ್ ಕಾಲೇಜು ಭಾನ್ಗಡಿ ಕಳೆದ ಎರಡು-ಮೂರು ತಿಂಗಳಿಂದ ತರತರದ ಆಯಾಮ ಪಡೆದು ಈಗ ಅಸ್ನೋಟಿಕರ್‌ನ ಕುತ್ತಿಗೆ ಕುತ್ತಾಗಿ ಪರಿಣಮಿಸಿದೆ! ನಿಯಮದಂತೆ ಮೆಡಿಕಲ್ ಕಾಲೇಜು ಸ್ಥಾಪನೆ ಆಗಬೇಕಾದ್ದು ಜಿಲ್ಲಾ ಕೇಂದ್ರವಾದ ಕಾರವಾರದಲ್ಲಿ. ಇದು ಗರ್ಭಗುಡಿ ಸಂಸ್ಕೃತಿಯ ಬಿಜೆಪಿಯಲ್ಲಿ ಪ್ರಭಾವಿಯಾಗಿರುವ ಜಿಲ್ಲಾ ಮಂತ್ರಿ ಕಾಗೇರಿಗೆ ಇಷ್ಟವಿರಲಿಲ್ಲ. ಕಾರವಾರದಲ್ಲಿ ಮೆಡಿಕಲ್ ಕಾಲೇಜು-ಆಸ್ಪತ್ರೆಯಾದರೆ ಅಸ್ನೋಟಿಕರ್‌ನ ಇಮೇಜು ಹೆಚ್ಚಾಗುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ತನ್ನ ಸ್ವ-ಜಾತಿ ಹೈಗರ ಶಿರಸಿ ಸಾಮ್ರಾಜ್ಯಕ್ಕೆ ಇದರಿಂದ ಲಾಭ ಕಮ್ಮಿ ಎಂಬ ದೂ(ದು)ರಾಲೋಚನೆ ಹಾಕಿದ ಕಾಗೇರಿ ಕಾರವಾರಕ್ಕೆ ಮೆಡಿಕಲ್ ಕಾಲೇಜು ಬರದಂತೆ ಕುತಂತ್ರ ಮಾಡಿದ. ಶಿರಸಿಗೆ ಮೆಡಿಕಲ್ ಕಾಲೇಜು ಒಯ್ಯುವ ಪ್ಲಾನ್ ಕಾಗೇರಿಯದು.



ಕಾಗೇರಿಯ ಕಂತ್ರಿ ಕರಾಮತ್ತಿನಿಂದ ಕರಾವಳಿ ಭಾಗದ ಜನರಷ್ಟೇ ಅಲ್ಲ, ಘಟ್ಟದ ಮೇಲಿನ ದಾಂಡೇಲಿ-ಹಳಿಯಾಳ-ಜೋಯಿಡಾ ಭಾಗದವರೂ ಕಾಗೇರಿ ವಿರುದ್ಧ ತಿರುಗಿಬಿದ್ದರು. ಕಾರವಾರದ ಮಂದಿಯಂತೂ ಅಸ್ನೋಟಿಕರ್‌ನನ್ನು ಹೇಡಿ, ಕರ್ಮಗೇಡಿ ಎಂದು ಮೂದಲಿಸ ತೊಡಗಿದರು. ಆತನ ಹಂಗಿಲ್ಲದೆ ಜನ ಒಂದಾಗಿ ಮೆಡಿಕಲ್ ಕಾಲೇಜು ಹೋರಾಟ ಸಮಿತಿ ಕಟ್ಟಿಕೊಂಡು ಬೀದಿಗಿಳಿದರು. ಆಗ ಅಸ್ನೋಟಿಕರ್ ತತ್ತರಿಸಿ ಹೋದ. ಇಲೆಕ್ಷನ್ ಎದುರಾಗಿರುವ ಈ ದಿನಗಳಲ್ಲಿ ತಾನು ಅಸಮರ್ಥನೆಂದು ಮೆಡಿಕಲ್ ಕಾಲೇಜ್ ಈಶ್ಯೂ ಬಿಂಬಿಸುತ್ತಿದೆಯೆಂದು ಚಿಂತೆಗೀಡಾದ. ಶಿರಸಿಗೆ ಮೆಡಿಕಲ್ ಕಾಲೇಜ್ ಸ್ಥಳಾಂತರಿಸಲು ಕಾಗೇರಿಗೆ ಅವಕಾಶ ಕೊಡುವುದಿಲ್ಲ; ಕಾರವಾರದಲ್ಲೇ ಮೆಡಿಕಲ್ ಕಾಲೇಜ್ ಸ್ಥಾಪಿಸಿಯೇ ಸಿದ್ಧ... ಎಂದೆಲ್ಲ ವೀರಾವೇಶದಿಂದ ಶೋ ಮಾಡತೊಡಗಿದ. ಪೆದ್ದು ಅಸ್ನೋಟಿಕರ್‌ನ ಮಾತು ಮಾತ್ರ ಕಾರವಾರಿಗರು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಜನಪರ ಹೋರಾಟಗಾರ ಮಾಧವ ನಾಯಕ್, ನಾಗರಾಜ್ ನಾಯಕನಂಥ ತರುಣರು, ಕೆ.ಆರ್. ದೇಸಾಯಿಯಂಥ ಹಿರಿಯರು ತಮ್ಮ ಪಾಡಿಗೆ ತಾವು ಮೆಡಿಕಲ್ ಕಾಲೇಜ್ ಬೇಡಿಕೆ ಮುಂದಿಟ್ಟು ಹೋರಾಟ ಜೋರು ಮಾಡಿದರು.

ಆಗ ಬದಲಾಯ್ತು ಆನಂದ್ ಅಸ್ನೋಟಿಕರ್‌ನ ಗಿಮಿಕ್ ವರಸೆ. ಮೆಡಿಕಲ್ ಶಿಕ್ಷಣ ಮಂತ್ರಿ ರಾಮದಾಸ್‌ಗೊಂದು ಮನವಿ ಕೊಡುತ್ತಿರುವ ಫೋಟೋ ಸ್ಥಳೀಯ ಪತ್ರಿಕೆಗಳಲ್ಲಿ ಹಾಕಿಸಿಕೊಂಡು ಕಾರವಾರದಲ್ಲೇ ಮೆಡಿಕಲ್ ಕಾಲೇಜು ಸ್ಥಾಪಿಸಲು ಸರ್ಕಾರದಲ್ಲಿ ತೀರ್ಮಾನ ಆಗಿದೆಯೆಂದು ಹಸಿ-ಹಸಿ ಸುಳ್ಳು ಬೊಗಳಿದ. ಅದಾಗಲೇ ಕಾಗೇರಿ ಕಾರವಾರದಲ್ಲಿ ಮೆಡಿಕಲ್ ಕಾಲೇಜು ಆಗದಂತೆ ಸರ್ಕಾರಿ ಮಟ್ಟದಲ್ಲೇ ಅಡ್ಡಗಾಲು ಯಶಸ್ವಿಯಾಗಿ ಹಾಕಿಯಾಗಿತ್ತು. ಇದು ಜನರಿಗೆ ಗೊತ್ತೂ ಆಗಿತ್ತು. ಆಗ ಅಸ್ನೋಟಿಕರ್ ಮತ್ತೊಂದು ಡ್ರಾಮಾ ಮಾಡಿದ. ಮೆಡಿಕಲ್ ಕಾಲೇಜು ಕಾರವಾರದಲ್ಲಿ ಆಗದಂತೆ ಕಾಗೇರಿ ಕಿತಾಪತಿ ಮಾಡಿರುವುದರಿಂದ ಗುಲ್ಬರ್ಗಾದ ಕ್ಯಾಬಿನೆಟ್ ಮೀಟಿಂಗ್ ಬಹಿಷ್ಕರಿಸಿದ್ದೇನೆಂದು ಕಾರವಾರಿಗರ ಯಾಮಾರಿಸಲು ಪ್ರಯತ್ನಿಸಿದ. ವಾಸ್ತವವಾಗಿ ಅಂದು ಕ್ಯಾಬಿನೆಟ್ ಮೀಟಿಂಗ್‌ಗೆ ಅಸ್ನೋಟಿಕರ್ ಚಕ್ಕರ್ ಹಾಕಲು ಆತನ ಖಾಸಗಿ ಖಯಾಲಿ ಕಾರ್ಯಕ್ರಮ ಕಾರಣವಾಗಿತ್ತು.

ಕಾರವಾರದಲ್ಲಿ ಮೆಡಿಕಲ್ ಕಾಲೇಜ್ ಚಳವಳಿ ಬಿರುಸುಗೊಂಡರೆ, ಅತ್ತ ಕಾಗೇರಿ ಶಿರಸಿಗೆ ಆ ಕಾಲೇಜು ಒಯ್ಯುವ ಹಿಕಮತ್ತು ರಹಸ್ಯವಾಗಿ ನಡೆದೇ ಇತ್ತು. ನಡುವೆ ಸಿಕ್ಕಿಬಿದ್ದ ಅಸ್ನೋಟಿಕರ್ ಈ ಪ್ರಕರಣ ತನಗೆ ಇಲೆಕ್ಷನ್‌ನಲ್ಲಿ ಕೈಕೊಡುತ್ತದೆಂದು ಡ್ಯಾಮೇಜು ಕಂಟ್ರೋಲ್‌ಗೆ ಲಾಗ ಹಾಕಹತ್ತಿದ್ದಾನೆ. ಮೆಡಿಕಲ್ ಕಾಲೇಜು ಕೊಡದಿದ್ರೆ ಸಿಎಂ ಶೆಟ್ಟರ್ ಸಾಹೇಬರ ಮನೆ ಮುಂದೆ ಧರಣಿ ಮಾಡ್ತೇನೆಂದು ಹುಸಿ ಬಂಡಾಯದ ಭಂಡ ಮಾತಾಡತೊಡಗಿದ! ಸಂಸದೀಯ ವ್ಯವಸ್ಥೆಯಲ್ಲಿ ಮಂತ್ರಿಯೊಬ್ಬ ತನ್ನ ನಾಯಕ (ಸಿಎಂ) ಬಗ್ಗೆ ಅವಿಶ್ವಾಸ ವ್ಯಕ್ತಪಡಿಸಿ ಕ್ಯಾಬಿನೆಟ್‌ನಲ್ಲಿ ಇರುವುದು ಅನೈತಿಕ. ಹಾಗೆಯೇ ಸಿಎಂ ಇಂಥ ಉದ್ಧಟ ಮಂತ್ರಿಯನ್ನು ತನ್ನ ಮಂಡಲದಲ್ಲಿ ಇಟ್ಟುಕೊಳ್ಳುವುದೂ ಅಸಮಂಜಸ. ನಾಚಿಕೆಗೇಡು. ಆದರೆ ಶೆಟ್ಟರ್ ಮತ್ತು ಅಸ್ನೋಟಿಕರ್ ಏನೂ ಆಗದಂತೆ ನಿರ್ಲಜ್ಜವಾಗಿ ಅಧಿಕಾರ ಅನುಭವಿಸುತ್ತಿದ್ದಾರೆ. ಇದು ಬಿಜೆಪಿಗಳ ಮಾಮೂಲಿ ಅನೈತಿಕ ರಾಜಕಾರಣ, ಬಿಡಿ.

ಗೋವಾ ಮೋಹ!!

ಸುಳ್ಳುಗಾರ ಅಸ್ನೋಟಿಕರ್ ಅದೆಷ್ಟೇ ತಿಪ್ಪರಲಾಗ ಹಾಕಿದರೂ ಕಾರವಾರಿಗರು ಮಾತ್ರ ಆತನ ಮಾತು ನಂಬುವ ಸ್ಥಿತಿಯಲ್ಲಿ ಇರಲಿಲ್ಲ. ಹಾಗಾಗಿ ಮೆಡಿಕಲ್ ಕಾಲೇಜು ಬೇಡಿಕೆಯ ಕೂಗು ಅರ್ಥಾತ್ ಅಸ್ನೋಟಿಕರ್ ವಿರುದ್ಧದ ಧ್ವನಿ ದಿನಗಳೆದಂತೆ ಹೆಚ್ಚಾಗುತ್ತ ಹೋಯಿತು! ಆಗ ಅಸ್ನೋಟಿಕರ್ ಹೋರಾಟದಲ್ಲಿ ತೊಡಗಿದ್ದ ಸಂಘ-ಸಂಸ್ಥೆ-ಸಮಿತಿಗಳ ಸಭೆಯೊಂದನ್ನು ಕರೆಯಲೇಬೇಕಾದ ಅನಿವಾರ್ಯತೆಗೆ ಬಿದ್ದ. ಅಂಥದೊಂದು ಸಭೆಯನ್ನು ಆತ ಕಳೆದ ತಿಂಗಳ 21 ರಂದು ಕರೆದಾಗ ಅಲ್ಲಿ ಬಿಸಿಬಿಸಿ ಚರ್ಚೆಗಳು ನಡೆದವು; ಅಸ್ನೋಟಿಕರ್ ನಾಲಾಯಕ್ ಎಂಬಂತೆ

ಗಡಿನಾಡಿಗೆ ಗತಿಯಿಲ್ಲ!


ಉತ್ತರ ಕನ್ನಡದ ಕಾರವಾರ ಮತ್ತು ಜೋಯಿಡಾ ನತದೃಷ್ಟ ತಾಲ್ಲೂಕುಗಳು. ಇಲ್ಲಿಯ ಗೋಳು ಆಳುವ ಖೂಳರಿಗೆ ಕೇಳಿಸಿದ್ದೇ ಇಲ್ಲ. ಎರಡೂ ತಾಲ್ಲೂಕುಗಳು ಗೋವಾ ರಾಜ್ಯದ ಗಡಿಯಲ್ಲಿವೆ. ಕೊಂಕಣಿ-ಮರಾಠಿ ಭಾಷಿಕರೇ ಇಲ್ಲಿ ಹೆಚ್ಚು. ಗೋವಾ ಮತ್ತು ಮಹಾರಾಷ್ಟ್ರದ ಪ್ರಭಾವ ಈ ತಾಲ್ಲೂಕಲ್ಲಿದೆ. ಕಾರವಾರ ಜಿಲ್ಲಾ ಕೇಂದ್ರ ಬೇರೆ. ಆದರೆ ಇಲ್ಲಿ ಕನ್ನಡ ಅಭಿವೃದ್ಧಿಯಿರಲಿ, ಜನರಿಗೆ ಬದುಕಲು ಬೇಕಾದ ಮೂಲಭೂತ ಸೌಲಭ್ಯದ ಅಭಿವೃದ್ಧಿಯೇ ಈವರೆಗೆ ಆಗಿಲ್ಲ.

ಇಲ್ಲಿಂದ ಆರಿಸಿಹೋಗುವ ಎಂಪಿ-ಎಮ್ಮೆಲ್ಲೆ-ಮಂತ್ರಿಗಳಿಗಿದು ತಮ್ಮ ಪ್ರಾತಿನಿಧ್ಯಕ್ಕೆ ಬೇಕಾದ ಒಂದು ನಿರ್ಜೀವ ಭೂಭಾಗವಷ್ಟೇ. ಇಲ್ಲಿಂದ ಆರಿಸಿ ಹೋದವರು ಪ್ರಾಮಾಣಿಕವಾಗಿ ಅಭಿವೃದ್ಧಿ, ಕನ್ನಡನಾಡಿನ ಅಖಂಡತೆ ಬಗ್ಗೆ ಯೋಚಿಸಿದ್ದೇ ಇಲ್ಲ. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಗಡಿ ಅಭಿವೃದ್ಧಿ ಪ್ರಾಧಿಕಾರದ ಮುಖ್ಯಮಂತ್ರಿ ಚಂದ್ರು ಮತ್ತು ಚಂದ್ರಕಾಂತ ಬೆಲ್ಲದ್ ಥರದ ಪುಢಾರಿಗಳು ಕನ್ನಡ ಅಭಿವೃದ್ಧಿ-ಗಡಿ ಭದ್ರತೆ ಎಂದೆಲ್ಲಾ ಹೇಳಿಕೊಂಡು ಸುಂದರ ಕಾರವಾರ-ಜೋಯಿಡಾಕ್ಕೆ ಒಂದು ಜಾಲಿ ಪಿಕ್‌ನಿಕ್ ಮಾಡಿಕೊಂಡು ಹೋಗುತ್ತಿದ್ದಾರೆಯೇ ವಿನಃ ಕನ್ನಡಿಗರ ಸಮಸ್ಯೆ ಪರಿಹರಿಸಲು ಪ್ರಯತ್ನಿಸಿದ್ದಿಲ್ಲ.

ದುರಂತ ನೋಡಿ, ಗೋವಾ ಗಡಿಯಲ್ಲಿರುವ ಕಾರವಾರ ಮತ್ತು ಜೋಯಿಡಾದ ಹಳ್ಳಿಗಳ ಕನ್ನಡಶಾಲೆಗಳಲ್ಲಿ ಶಿಕ್ಷಕರೇ ಕಮ್ಮಿ. ಉತ್ತರ ಕನ್ನಡದವರೇ ಪ್ರಾಥಮಿಕ ಶಿಕ್ಷಣ ಮಂತ್ರಿ. ಆದರೂ ಕನ್ನಡಕ್ಕಿಲ್ಲಿ ದುರ್ಗತಿ. ಗಡಿಭಾಗದ ನೂರಾರು ವಿದ್ಯಾರ್ಥಿಗಳು ಗೋವಾದ ಶಾಲೆಗಳಿಗೆ ಹೋಗಿಬರುತ್ತಿದ್ದಾರೆ. ಇದಕ್ಕೆ ಕಾರಣ ಗೋವಾದಲ್ಲಿ ಶಿಕ್ಷಣ ಪಡೆದರೆ ತಮಗಲ್ಲಿ ನೌಕರಿ ಸಿಗುತ್ತದೆಂಬ ಭರವಸೆ. ಕನ್ನಡದಲ್ಲಿ ಕಲಿತರೆ ಉದ್ಯೋಗಾವಕಾಶ ಕಾರವಾರ-ಜೋಯಿಡಾದಲ್ಲಿ ಇಲ್ಲ, ಕನ್ನಡ ಕಲಿತರೆ ಪ್ರಯೋಜನವೂ ಇಲ್ಲ.

ಹಾಗೆಯೇ ಕಾರವಾರ-ಜೋಯಿಡಾದಿಂದ ಪ್ರತಿನಿತ್ಯ ಸಾವಿರಾರು ಯುವಕರು ಗೋವಾಕ್ಕೆ ಉದ್ಯೋಗಕ್ಕೆ ಹೋಗುತ್ತಾರೆ. ಅವರೆಲ್ಲಾ ಕನ್ನಡ ನಾಡಲ್ಲಿದ್ದರೂ ಭಾಷೆ-ಸಂಸ್ಕೃತಿ-ಹೊಟ್ಟೆಪಾಡಿನ ಉದ್ಯೋಗ-ಆರ್ಥಿಕ-ವ್ಯವಸ್ಥೆಗೆ ಗೋವಾವನ್ನು ಅವಲಂಬಿಸಿದ್ದಾರೆ. ಇಂಥ ಅಸಹಾಯಕ ಸ್ಥಿತಿಯನ್ನು ಗೋವಾದ ಕೊಂಕಣಿ ಮಂಚ್ ಗ್ಯಾಂಗಿನವರು ಮತ್ತು ಆನಂದ್ ಅಸ್ನೋಟಿಕರ್‌ನಂಥ ಅನಾಹುತಕಾರಿ ಪುಢಾರಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ಮೆರೆಯುತ್ತಿದ್ದಾರೆ. ಇದು ಕನ್ನಡ ನಾಡಿನ ಅಖಂಡತೆಗೆ ಮಾರಕವೇ ಸರಿ. ಇಂಥ ಅತಂತ್ರ ಸ್ಥಿತಿ ಆಳುವವರಿಗೆ-ಕನ್ನಡ ರಕ್ಷಕರೆಂದು ಹಾರಾಡೋರಿಗೆ ಅರ್ಥವೇಕಾಗುತ್ತಿಲ್ಲ?!

ವಿಭಜಕನ ಏಕೀಕರಣದ ಆಲಾಪ



ಕಾರವಾರವನ್ನು ಗೋವಾಕ್ಕೆ ಸೇರಿಸಬೇಕೆಂದು ತುಂಬ ಲೆಕ್ಕಾಚಾರ ಹಾಕಿಯೇ ಹೇಳಿದ ಬಿಜೆಪಿ ಮಂತ್ರಿ ಆನಂದ್ ಅಸ್ನೋಟಿಕರ್ ಈಗ ತಾನು ಹಾಗೆ ಹೇಳೇ ಇಲ್ಲವೆಂದು ನಾಟಕ ನಡೆಸಿದ್ದಾನೆ. ಅಸ್ನೋಟಿಕರ್‌ನ ನಡೆ-ನುಡಿ, ಇತಿಹಾಸ-ಭೂಗೋಳ, ವ್ಯಾಪಾರಿ-ವೈವಾಹಿಕ ಸಂಬಂಧ ನೋಡಿದರೆ ಆತ ಗೋವಾ ಪರ ಮಾತಾಡಿಲ್ಲವೆಂದು ಹೇಳೋದು ಯಾರಿಂದಲೂ ಸಾಧ್ಯವಿಲ್ಲ. ಕಾರವಾರ ಗೋವಾದಲ್ಲಿ ವಿಲೀನ ಮಾಡಿದರೆ ತಪ್ಪೇನೆಂದು ಬಹಿರಂಗವಾಗೇ ವಾದಿಸುವ ನಗರಸಭಾ ಸದಸ್ಯ ಮಹೇಶ್ ತಾಮ್ಸೆಯಂಥ ವಿಧ್ವಂಸಕರೇ ಅಸ್ನೋಟಿಕರ್‌ನ ಸುತ್ತ ಸದಾ ನೆರೆದಿರುತ್ತಾರೆ. ಅಸ್ನೋಟಿಕರ್ 21.10.2012 ರಂದು ಕಾರವಾರದಲ್ಲಿ ನಡೆದ ಸಭೆಯೊಂದರಲ್ಲಿ ಗೋವಾಕ್ಕೆ ಕಾರವಾರ ಸೇರಿಸಬೇಕೆಂದು ಆಲಾಪಿಸಿದ್ದು ಹೌದೆಂದು ಅಲ್ಲಿ ಸೇರಿದವರೆಲ್ಲರೂ ಹೇಳುತ್ತಾರೆ.


ಅಸ್ನೋಟಿಕರ್ ಅಪದ್ಧ ಬೊಗಳುವಾಗ ಮಾಧವ ನಾಯ್ಕ ಎಂಬ ಕನ್ನಡ ಹೋರಾಟಗಾರ ಧೈರ್ಯವಾಗಿ ವಿರೋಧಿಸಿದ್ದಾರೆ. ಗೂಂಡಾಗಿರಿ ಗುಣಧರ್ಮದ ಅಸ್ನೋಟಿಕರ್‌ನ ಗ್ಯಾಂಗ್ ಆತನ ಸುತ್ತಲಿದ್ದರೂ ಮಾಧವ ನಾಯ್ಕ ಇದ್ಯಾವುದಕ್ಕೂ ಕೇರ್ ಮಾಡದೆ ಕಾರವಾರದ ಕನ್ನಡ ನೆಲದ ಅಭಿಮಾನದಿಂದ ಮಾತಾಡಿದ್ದಾರೆ. ಆದರೆ ಆ ಸಭೆಯಲ್ಲಿದ್ದ ಕಾರವಾರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರಾಮಾ ನಾಯ್ಕ್ ಎಂಬ ಸ್ವಂತಿಕೆ ಇಲ್ಲದ ಬೋಗಸ್ ಭೂಪ ಅಸ್ನೋಟಿಕರ್ ಹಾಗೆ ಹೇಳೇ ಇಲ್ಲವೆಂದು ಹೇಳಿ ಮಂತ್ರಿಗಳಿಂದ ಶಹಬ್ಬಾಸ್‌ಗಿರಿ ಪಡೆಯಲು ಹವಣಿಸಿದ್ದಾನೆ. ಇಂಥ ಒಂದಿಷ್ಟು ಕನ್ನಡದ್ರೋಹಿಗಳು ಕಾರವಾರದಲ್ಲಿದ್ದಾರೆ. ಇವರಿಗೆಲ್ಲ ಮಂತ್ರಿ ಅಸ್ನೋಟಿಕರ್‌ನ ಮರ್ಜಿ-ಮುಲಾಜು, ಪಾಪ! ಕನ್ನಡ ಪತ್ರಿಕೆ ನಡೆಸುವವರೂ ಹಣಬಲದ, ತೋಳ್ಬಲದ ಅಸ್ನೋಟಿಕರ್‌ನ ವಿದ್ರೋಹ ಕಂಡೂ ಕಾಣದಂತಿರುವುದು ಅನೇಕ ಅನುಮಾನಕ್ಕೆಡೆಮಾಡಿದೆ.

ವಿವಾದ ದೊಡ್ಡದಾಗುತ್ತಿದ್ದಂತೆ ಅಸ್ನೋಟಿಕರ್ ಪ್ಲೇಟು ಬದಲಿಸಿದ್ದಾನೆ. ತನ್ನ ತಂದೆ-ತಾಯಿ ಕರ್ನಾಟಕ ಏಕೀಕರಣಕ್ಕೆ ಹೋರಾಡಿದವರು; ಅಂಥವರ ಮಗನಾದ ನಾನು ಕಾರವಾರ ಗೋವಾಕ್ಕೆ ಸೇರಿಸಿ ಎಂದು ಹೇಳೋದುಂಟಾ? ಎಂದು ಗಿಮಿಕ್ ಮಾಡುತ್ತಿದ್ದಾನೆ. ವಾಸ್ತವವೆಂದರೆ, ಕಾರವಾರದಲ್ಲಿ ಎಂದೂ ಏಕೀಕರಣ ಚಳವಳಿ ನಡೆದದ್ದೇ ಇಲ್ಲ. ಏಕೀಕರಣದ ಹೊತ್ತಲ್ಲಿ ಅಸ್ನೋಟಿಕರ್‌ನ ತಂದೆ ವಸಂತ್ ಅಸ್ನೋಟಿಕರ್ ಎಂಬ ಕಳ್ಳ ಹೆಂಡ-ಕಳ್ಳ ನಾಟಾ ದಂಧೆದಾರರ ಡಾನ್ ಆಗಿದ್ದ ತಾಯಿ ಶುಭಲತಾ ಅಸ್ನೋಟಿಕರ್ ಹುಟ್ಟಿರಲೇ ಇಲ್ಲ. 1990 ರ ದಶಕದಲ್ಲಿ ರಾಜಕೀಯಕ್ಕೆ ಬಂದಿದ್ದ ರೌಡಿ ವಸಂತ್ ಅಸ್ನೋಟಿಕರ್‌ನನ್ನು ಆ ಹೊತ್ತಲ್ಲಿ ಶಾಸಕನಾಗಿದ್ದ ಪ್ರಭಾಕರ್ ರಾಣೆಯ ಸೊಕ್ಕಿನ ರಾಜಕಾರಣದಿಂದ ಬೇಸತ್ತ ಜನ ಅನಿವಾರ್ಯವಾಗಿ ಶಾಸಕನಾಗಿ ಮಾಡಿದ್ದರು. ಆನಂತರ ಆತನನ್ನು ಭೂಗತ ದೊರೆ ದಿಲೀಪ್ ನಾಯ್ಕ್ ಕೊಲೆ ಮಾಡಿಸಿದ್ದ. ಆಗ ಕಾಂಗ್ರೆಸ್‌ನ ವಿಧವಾ ಕೋಟಾದಲ್ಲಿ ಎಮ್ಮೆಲ್ಲೆ ಆಗಿದ್ದಾಕೆ ಶುಭಲತಾ.

ಇಂಥ ತಾಯ್ತಂದೆಯರನ್ನು ಕರ್ನಾಟಕ ಏಕೀಕರಣದ ರೂವಾರಿಗಳೆಂದು ಹೇಳಿದ ಕಂತ್ರಿ ಮಂತ್ರಿ ಅಸ್ನೋಟಿಕರ್ ದೊಡ್ಡ ಜೋಕರ್‌ನಂತೆ ಕಾರವಾರಿಗರಿಗೆ ಕಾಣಿಸುತ್ತಿದ್ದಾನೆ. ಅಸ್ನೋಟಿಕರ್‌ನ ಹುಸಿ ಏಕೀಕರಣದ ಜೋಕ್‌ಗೆ ಜನ ಬಿದ್ದುಬಿದ್ದು ನಗುತ್ತಿದ್ದಾರೆ. ತಾನು ಕಾರವಾರ ಗೋವಾಕ್ಕೆ ಸೇರಿಸುವಂತೆ ಹೇಳಿದ್ದಕ್ಕೆ ಸಾಕ್ಷಿ-ಪುರಾವೆ ಕೊಟ್ಟರೆ ಮಂತ್ರಿಗಿರಿಗೆ ರಾಜೀನಾಮೆ ಕೊಡುವುದಾಗಿ ಅಸ್ನೋಟಿಕರ್ ಹೇಳುತ್ತಿದ್ದಾನೆ. ಅಸ್ನೋಟಿಕರ್ ಕನ್ನಡನಾಡಿಗೆ ದ್ರೋಹ ಬಗೆದ ಮಾತಿಗೆ ಹೋರಾಟಗಾರ ಮಾಧವ ನಾಯ್ಕರೇ ಜೀವಂತ ಸಾಕ್ಷ್ಯಾಧಾರ. ರಿಸ್ಕ್ ತೆಗೆದುಕೊಂಡು ಮಂತ್ರಿ ಅಸ್ನೋಟಿಕರ್‌ನ ದ್ರೋಹದ ಮಾತನ್ನು ಈ ಮಾಧವ ನಾಯ್ಕ್ ನಿರಂತರ ಖಂಡಿಸುತ್ತಲೇ ಇದ್ದಾರೆ. ಅಸ್ನೋಟಿಕರ್ ಒಂದರ ಹಿಂದೊಂದರಂತೆ ಸುಳ್ಳು ಬೊಗಳುತ್ತಲೇ ಇದ್ದಾನೆ. ಇದಕ್ಕಿಂತ ದೊಡ್ಡ ಸಾಕ್ಷಿ-ಆಧಾರ ಇನ್ನೇನು ಬೇಕು? ವಿಚಿತ್ರವೆಂದರೆ, ಕನ್ನಡ ನಾಡನ್ನು ಗುತ್ತಿಗೆ ಹಿಡಿದಂತೆ ಹಾರಾಡುವ ಬೆಂಗಳೂರು ಬೇಸ್ಡ್ ಕನ್ನಡ ಓರಾಟಗಾರರು ಅಸ್ನೋಟಿಕರ್‌ನ ಅಡ್ಡವಾಣಿ ಕೇಳಿಸಿಯೂ ಕೇಳದಂತಿದ್ದಾರೆ! ಕನ್ನಡ ಕಲಿಗಳ ಮೌನವೇಕೋ ಅನುಮಾನಾಸ್ಪದವಾಗಿದೆ!

ಜನ ಮಾತಾಡಿದರು. ಮೆಡಿಕಲ್ ಕಾಲೇಜಿಗಾಗಿ ದುಡಿಯುತ್ತಿದ್ದ ಪ್ರಾಮಾಣಿಕ ಹೋರಾಟಗಾರರ ಮಾತುಗಾರಿಕೆಗೆ ಅಸ್ನೋಟಿಕರ್ ಹೈರಾಣಾಗಿ ಹೋದ!

ತಲೆ ಕೆಟ್ಟುಹೋಗಿದ್ದ ಅಸ್ನೋಟಿಕರ್ ಭಾಷಣಕ್ಕೆ ತೊಡಗಿದ ಮೊದಲು ಮೂದಲಿಸಿದ್ದೇ ಸಹೋದ್ಯೋಗಿ ಸಚಿವ ಕಾಗೇರಿ ಷಣ್ಮುಣೆಯನ್ನು. "ಕಾಗೇರಿ ಯಿಂದಾಗಿಯೇ ಇಷ್ಟೆಲ್ಲ ಗೊಂದಲ-ಗಲಾಟೆ ಆಗುತ್ತಿದೆ; ಮೆಡಿಕಲ್ ಕಾಲೇಜು ಆತ ಕಾರವಾರಕ್ಕೆ ಬರದಂತೆ ಮಾಡಿದ್ದಾನೆ. ಆತನಿಗೆ ಇಲ್ಲಿಯ ಅಭಿವೃದ್ಧಿ ಬೇಕಾಗಿಲ್ಲ..." ಎಂದು ಅಬ್ಬರಿಸಿದ ಅಸ್ನೋಟಿಕರ್ ಮೆಡಿಕಲ್ ಕಾಲೇಜಿಗಾಗಿ ತಾನು ಮಾಡಿದ "ಸಹಾಸ" ವಿವರಿಸಿದ. "ಕಾರವಾರದ ಅಭಿವೃದ್ಧಿ ಮಾಡಲಾಗ ದಿದ್ದರೆ, ವಿಶೇಷ ಅನುದಾನ ಕೊಡಲಾಗದಿದ್ದರೆ ಕಾರವಾರವನ್ನು ಗೋವಾಕ್ಕಾದರೂ ಸೇರಿಸಿ ಎಂದು ನಾನು ಹಲವು ಬಾರಿ ಸಿಎಂಗಳಿಗೆ ಹೇಳಿದ್ದೇನೆ" ಎಂದೂ ಹಲುಬಿಬಿಟ್ಟ ಅಸ್ನೋಟಿಕರ್! ಮೂರು ಮುಖ್ಯಮಂತ್ರಿಗಳ ಮಂತ್ರಿಮಂಡಲದಲ್ಲಿದ್ದ ಈ ಮಂತ್ರಿಜೀ ಅದ್ಯಾವ ಸಿಎಂ ಬಳಿ ತನ್ನ "ಗೋವಾ ಮೋಹ" ಮಂಡಿಸಿದ್ದನೋ ಆತನಿಗೇ ಗೊತ್ತು. ಆದರೆ ಸಭೆಯಲ್ಲಿದ್ದ ಕನ್ನಡ ಮಣ್ಣಿನ ಮಕ್ಕಳು ಮಾತ್ರ ಅಸ್ನೋಟಿಕರ್‌ನ ಈ ಅಪಸ್ವರ ಖಂಡಿಸಿ ಸಮಾ ಚಾರಾಟೆಗೆ ತೆಗೆದುಕೊಂಡಿದ್ದಾರೆ.



ವಸಂತ್ ಅಸ್ನೋಟಿಕರ್



ಶುಭಾ ಅಸ್ನೋಟಿಕರ್

ಪ್ರಜ್ಞಾಪೂರ್ವಕ ಆಲಾಪ!

"ಕಾರವಾರ ಗೋವಾಕ್ಕೆ ಸೇರಿಸಿ" ಎಂದು ಅಸ್ನೋಟಿಕರ್ ಬಾಯಿತಪ್ಪಿ ಆಡಿದ ಮಾತಲ್ಲ; ಮೆಡಿಕಲ್ ಕಾಲೇಜು ಕೈತಪ್ಪಿದ ಹತಾಶೆಯಲ್ಲಿ ಕಾರವಾರದ ಮೇಲಿನ ಕಳಕಳಿಯಿಂದ ಬೊಬ್ಬೆ ಹಾಕಿದ್ದೂ ಅಲ್ಲ. ಗೋವಾದಲ್ಲಿ ಕಾರವಾರ ವಿಲೀನಗೊಳಿಸಬೇಕೆಂಬುದು ಅಸ್ನೋಟಿಕರ್‌ನ ಮನದಾಳದ ಇಚ್ಛೆ! ಹಿಂದೆಯೇ ಒಮ್ಮೆ ಅಸ್ನೋಟಿಕರ್ ಇಂಥ ಮನೆಮುರುಕು ಮಾತಾಡಿದ್ದ. ಆತನಿಗೆ ಹೆಣ್ಣು ಕೊಟ್ಟ ಮಾವ-ಗೋವಾದ ದಿವಂಗತ ರಾಜಕಾರಣಿ ಸಂಜಯ್ ಬಾಂದೇಕರ್ ಕೂಡ ಕಾರವಾರಕ್ಕೇ ಬಂದು ವಿಶಾಲ ಗೋಮಾಂತಕ ರಾಜ್ಯ (ಕಾರವಾರ ಒಳಗೊಂಡ ರಾಜ್ಯ)ದ ಬಗ್ಗೆ ಬಡಬಡಿಸಿದ್ದ ಅನಂತರ ಅಳಿಯನಿಗೆ ರಾಜಕೀಯವಾಗಿ ಹಾನಿಯಾಗಬಹುದೆಂದು ಕ್ಷಮೆ ಯಾಚಿಸಿದ್ದರು.

ಅಸ್ನೋಟಿಕರ್ ಮೆಡಿಕಲ್ ಕಾಲೇಜು ಹೋರಾಟ ಸಮಿತಿ ಒಡೆಯುವ ಸ್ಕೆಚ್ ಹಾಕಿಕೊಂಡು 21 ರ ಸಭೆಗೆ ಬಂದಿದ್ದ. ಅದಾಗದಿದ್ದಾಗ ತನ್ನ ಎರಡನೇ ಹಿಡನ್ ಅಜೆಂಡಾ ಹರಿಬಿಟ್ಟಿದ್ದಾನೆ. ಆತನ ವಿದ್ರೋಹದ ಮಾತಿನ ಹಿಂದೆ ಓಟ್‌ಬ್ಯಾಂಕ್ ರಾಜಕಾರಣ ಅಡಗಿತ್ತು. ಸರಣಿ ನಖರಾ, ವೈಫಲ್ಯದಿಂದ ಜನರ ತಾತ್ಸಾರಕ್ಕೆ ತುತ್ತಾಗಿರುವ ಅಸ್ನೋಟಿಕರ್ ಕೊಂಕಣಿ ಭಾಷಿಕರ ಮತ ಪಡೆಯುವ ಕರಾರುವಾಕ್ ಲೆಕ್ಕಾಚಾರ ಹಾಕಿಯೇ ನಾಡು ಒಡೆಯುವ ಮೀರ್ ಸಾದಿಕ್ ಹಿಕಮತ್ತು ಮಾಡಿದ್ದಾನೆ. ಕಾರವಾರದ ಕಾಳಿ ನದಿಯ ಉತ್ತರ ದಂಡೆಯಲ್ಲಿರುವ ಬಹುಸಂಖ್ಯಾತ ಕೊಂಕಣಿ ಭಾಷಿಕರು ಒಂಥರಾ ಅತಂತ್ರತೆಯಲ್ಲಿದ್ದಾರೆ. ಇವರಿಗೆಲ್ಲ ಗೋವಾದೊಂದಿಗೆ ವ್ಯವಹಾರಿಕ-ಶೈಕ್ಷಣಿಕ-ಔದ್ಯೋಗಿಕ ಮತ್ತು ಭಾಷಾ ಬಾಂಧವ್ಯವಿದೆ. ಇದನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಅಸ್ನೋಟಿಕರ್ ಇಲೆಕ್ಷನ್ ಪ್ರಾಕ್ಟೀಸ್ ಮಾಡಿದ್ದಾನಷ್ಟೇ. ಆತನಿಗೆ ಸ್ಥಳೀಯರಿಗೆ ಅನಿವಾರ್ಯ ಅಗತ್ಯವಾದ ಸುಸಜ್ಜಿತ ಆಸ್ಪತ್ರೆ-ವೈದ್ಯಕೀಯ ಕಾಲೇಜಿಗಿಂತ ಕಾರವಾರ ಗೋವಾಕ್ಕೆ ಸೇರಿಸುವ ಆವೇಶದ "ಆಟ"ದಿಂದ ಬರುವ ಮತಗಳೇ ಮುಖ್ಯ!

ಅಸ್ನೋಟಿಕರ್‌ನ ವೈವಾಹಿಕ ಮತ್ತು ವ್ಯಾಪಾರಿ ನೆಲೆಗಳಿರುವುದೂ ಗೋವಾದಲ್ಲೇ. ಆತನ ಹಲವು ಉದ್ಯಮ-ದಂಧೆಗಳು ಗೋವಾದಲ್ಲಿದೆ; ಜಮೀನು-ಆಸ್ತಿ ಅಲ್ಲೇ ಇದೆ. ಆತನ ಹೆಂಡತಿಯ ಅಪ್ಪ ಕಾರವಾರದ ಮಗ್ಗುಲಲ್ಲೇ ಇರುವ ಗೋವಾದ ಕಾಣಕೋಣದಲ್ಲಿ ಶಾಸಕನಾಗಿದ್ದರು; ಮಂತ್ರಿಯೂ ಆಗಿದ್ದರು. ಅಳಿಯನಿಗೆ ಬಳುವಳಿಯಾಗಿ ಇಲ್ಲ ಹಲವು ಆಸ್ತಿ ಬಿಟ್ಟುಹೋಗಿದ್ದಾರೆ. ಕಾಣಕೋಣದಲ್ಲಿ ರೆಸಾರ್ಟ್ ಕಟ್ಟಲು ಅಸ್ನೋಟಿಕರ್ ಈಗ ಶುರುಹಚ್ಚಿಕೊಂಡಿದ್ದಾನೆ. ಹೀಗಾಗಿ ಆತನಿಗೆ ಕಾರವಾರ ಅಥವಾ ಉತ್ತರ ಕನ್ನಡ, ಕರ್ನಾಟಕಕ್ಕಿಂತ ಗೋವಾ ಎಂದರೇನೇ ತುಡಿತ-ಮಿಡಿತ ಜಾಸ್ತಿ! ಒಮ್ಮೊಮ್ಮೆ ಕಾಣಕೋಣದಿಂದ ಶಾಸಕನಾಗಿ ಗೋವಾದ ಮಂತ್ರಿಯಾಗುವ ಹುಕ್ಕಿಯೂ ಅಸ್ನೋಟಿಕರ್ ತಲೆಯಲ್ಲಿ ಸುತ್ತಿ ಸುಳಿದಾಡುತ್ತದೆಂದು ಆತ ಒಳ-ಹೊರಗು ಬಲ್ಲವರು ಹೇಳುತ್ತಾರೆ.

ಹಂಗೇಳೇ ಇಲ್ಲಂತಾನೆ

ಅವಾಂತರಕಾರಿ ಅಸ್ನೋಟಿಕರ್‌ನ ಗೋವಾ ಮೋಹದ ಘಾತುಕ ನಡವಳಿಕೆ ಈಗ ದೊಡ್ಡ ಗಲಾಟೆ ಎಬ್ಬಿಸಿದೆ. ಕನ್ನಡ ಸಾಹಿತಿಗಳು, ಕನ್ನಡಾಭಿಮಾನಿಗಳು, ಸ್ಥಳೀಯ ಕನ್ನಡ ಸಂಘಟನೆಗಳನೇಕರು ಅಸ್ನೋಟಿಕರ್‌ನ ಅಡ್ನಾಡಿ ಮಾತಿಗೆ ಕೆರಳಿದ್ದಾರೆ. ಆತನನ್ನು ಮಂತ್ರಿಗಿರಿಯಿಂದ ಒದ್ದೋಡಿಸುವಂತೆ ಬೊಬ್ಬೆ ಹಾಕುತ್ತಿದ್ದಾರೆ. ಇದರಿಂದ ಕಂಗೆಟ್ಟ ಅಸ್ನೋಟಿಕರ್ ಈಗ ತಾನು ಹಾಗೆ ಹೇಳೇ ಇಲ್ಲವೆಂದು ಮತ್ತೆ ಸುಳ್ಳು ಬೊಗಳುತ್ತಿದ್ದಾನೆ. ತನ್ನ ಅಪ್ಪ-ಅಮ್ಮ ಕನ್ನಡ ಏಕೀಕರಣಕ್ಕೆ ಹೋರಾಡಿದವರಾಗಿರುವಾಗ ತಾನು ನಾಡು ಒಡೆವ ಹೇಳಿಕೆ ಕೊಡಲು ಸಾಧ್ಯವಾ? ಎಂದು ನಾಟಕ ಮಾಡುತ್ತಿದ್ದಾನೆ. ಬೆಂಗಳೂರಲ್ಲಿ ಕುಂತು ತಾನು ಹಾಗೆ ಹೇಳೇ ಇಲ್ಲವೆಂದು ಕ್ಷಮೆ ಯಾಚಿಸಿದ್ದಾನೆ. ಈ "ಕ್ಷಮೆ"ಯಲ್ಲೂ ಮತ್ತೊಂದು ಮಸಲತ್ತಿದೆ. ಕಾರವಾರದಲ್ಲಿ "ಗೋವಾಕೀ ಜೈ" ಎಂದೂ ಬೆಂಗಳೂರಲ್ಲಿ ಕನ್ನಡ ಕಟ್ಟಾಳು ತಾನೆಂದು ಪೋಸು ಕೊಡುವುದೂ ಓಟ್‌ಬ್ಯಾಂಕ್ ತಂತ್ರವಷ್ಟೇ. ಕಾರವಾರದಲ್ಲಿರುವ ಕೊಂಕಣಿ-ಮರಾಠಿ ಭಾಷಿಕರ ಒಲವು ಗಳಿಸಲು ಗೋವಾಕ್ಕೆ ಕಾರವಾರ ಸೇರಿಸಿ ಎಂದ್ಹೇಳುವ ದಗಲುಬಾಜಿ ಅಸ್ನೋಟಿಕರ್ ಅಂಕೋಲಾ ಭಾಗದಲ್ಲಿನ ಕನ್ನಡಿಗರ ಮತಕ್ಕಾಗಿ "ಕ್ಷಮೆ" ಕರಾಮತ್ತು ನಡೆಸಿದ್ದಾನೆ. ಕಾರವಾರ-ಅಂಕೋಲಾ ಎರಡೂ ತಾಲ್ಲೂಕಿನ ಮಂದಿ ಈತನ ಬೂಟಾಟಿಕೆಗೆ ಮರುಳಾಗದೆ ಈ ಬಾರಿಯ ಇಲೆಕ್ಷನ್‌ನಲ್ಲಿ ಬುದ್ಧಿ ಕಲಿಸುವ ಸಾಧ್ಯತೆಯೇ ಹೆಚ್ಚು. ಈ ಎಡಬಿಡಂಗಿ ಮಾಜಿಯಾದರೆ ಕ್ಷೇತ್ರದ ಎಲ್ಲಾ ಭಾಷಿಕರಿಗೂ ಒಳ್ಳೆಯದು.

ಅದಿರಲಿ, ಪಾಪದ ಪಿಂಡದಂತಿರುವ ಬಿಜೆಪಿ ಸರ್ಕಾರದಲ್ಲಿ ಎಂತೆಂಥ ದ್ರೋಹಿ-ದಗಾಕೋರ-ಅನೈತಿಕ ಸ್ಯಾಂಪಲ್‌ಗಳಿವೆ ನೋಡಿ. ಅತ್ತ ಬೆಳಗಾವಿಯಲ್ಲಿ ಮಂತ್ರಿ ಉಮೇಶ್ ಕತ್ತಿ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಮಾಡಬೇಕೆಂದು ಕೂಗಾಡಿದರೆ, ಇತ್ತ ಕಾರವಾರದಲ್ಲಿ ಅಸ್ನೋಟಿಕರ್ ಗೋವಾ ಪರ ಮಾತಾಡಿ ಪಾಪ ಮಾಡಿದ್ದಾನೆ. ಈ ದ್ರೋಹಿಗಳಿಂದ ಕನ್ನಡ ನಾಡಿಗೆ ಮುಕ್ತಿ ಎಂದು?


● ನಹುಷ


ಗಿರೀಶ್ ಹೇಳಿದ್ದು ಯಾಕೆ ಸರಿ

ಸಾಹಿತ್ಯ ಸಂವೇದನೆ ಏನು ಬೊಚ್ಚು ಬಾಯಿಗಾಗುವ ಉಪ್ಪಿಟ್ಟಾ!

'ಲಿಟರೇಚರ್ ಅಲೈವ್' ಎಂಬ ಸಂಸ್ಥೆಯು ಹೋದವಾರ ಮುಂಬೈಯಲ್ಲಿ ಒಂದು ಸಾಹಿತ್ಯ ಉತ್ಸವವನ್ನು ಏರ್ಪಡಿಸಿತ್ತು. ನಮ್ಮ ಗಿರೀಶ್ ಕಾರ್ನಾಡರನ್ನು 'ನನ್ನ ರಂಗಭೂಮಿ ಪಯಣ' ಎನ್ನುವ ವಿಷಯದ ಕುರಿತು ಮಾತನಾಡಲು ಆಯೋಜಕರು ಆಹ್ವಾನಿಸಿದ್ದರು. ಇದೇ ಉತ್ಸವದಲ್ಲಿ ನೋಬೆಲ್ ಸಾಹಿತ್ಯ ಪುರಸ್ಕಾರ ಪಡೆದಿರುವ ಖ್ಯಾತ ಇಂಗ್ಲಿಷ್ ಸಾಹಿತಿ ವಿ.ಎಸ್.ನೈಪಾಲರಿಗೆ 'ಜೀವಮಾನದ ಸಾಧನೆ ಪ್ರಶಸ್ತಿ'ಯನ್ನು ಸಂಸ್ಥೆ ಘೋಷಿಸಿತ್ತು. ಗಿರೀಶ್ ಆಹ್ವಾನ ಸ್ವೀಕರಿಸಿ ಹೋಗಿ ಮಾತನಾಡಿದರು. ಅವರು ತಮ್ಮ ಮಾತಿನಲ್ಲಿ ನೈಪಾಲರ ಬಗ್ಗೆ ಮಾಡಿದ ಟೀಕೆಗಳ ಬಗ್ಗೆ ಈಗ ಆಯೋಜಕರೇ ಆಕ್ಷೇಪ ಎತ್ತಿದ್ದಾರೆ. ಗಿರೀಶ್ ತಮಗೆ ನೀಡಲಾಗಿದ್ದ ವಿಷಯದ ಪರಿಮಿತಿಯಾಚೆ, ಔಚಿತ್ಯ ಮೀರಿ, ನೈಪಾಲರನ್ನು 'ಮುಸಲ್ಮಾನ ವಿರೋಧಿ' ಎಂದು ವಿವರಿಸಿದ್ದು ತಮಗೆ ಸಮ್ಮತವಲ್ಲ; ಗಿರೀಶರ ವಾದದಲ್ಲಿ ಹುರುಳಿಲ್ಲ ಮತ್ತೂ ಅದು ಸೌಜನ್ಯದ ಗಡಿಯನ್ನು ಮೀರಿದ ವರ್ತನೆಯಾಗಿದೆ ಎನ್ನೋದು ಆಯೋಜಕರ ವಾದ. ಇದೀಗ ಪ್ರಸಂಗ ವಿವಾದದ ಸ್ವರೂಪ ಪಡೆದುಕೊಂಡಿದೆ. ಗಿರೀಶ್ ಮಾಡಿದ ಟೀಕೆಯಾದರೂ ಏನು? ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಅವರ ಟೀಕೆಯ ಸಾರಾಂಶ ಹೀಗಿದೆ:

ಭಾರತದ ಇತಿಹಾಸ-ಪರಂಪರೆಗಳ ಬಗೆಗೆ ನೈಪಾಲರಿಗೆ ಇರುವ ಜ್ಞಾನ 'ಇಸ್ಲಾಂ ವಿರೋಧಿ ವಾಗ್ಮಯ'ದಿಂದ ಎರವಲು ಪಡೆದಿರುವಂತಹದು. ಭಾರತವನ್ನು ಕುರಿತ ಅವರ ಮೂರು ಕೃತಿಗಳು ('ದಿ ಏರಿಯಾ ಆಫ್ ಡಾರ್ಕ್‌ನೆಸ್', 'ವುಂಡೆಡ್ ಸಿವಿಲೈಜೇಶನ್' ಮತ್ತು 'ಇಂಡಿಯ-ಮಿಲಿಯಾನ್ ಮ್ಯುಟಿನಿಸ್ ನವ್') ಈ ಅಜ್ಞಾನವನ್ನೇ ಬಿತ್ತರಿಸುತ್ತವೆ (ಇದಕ್ಕೆ ಉದಾಹರಣೆಯಾಗಿ, ವಿಜಯನಗರ ಸಾಮ್ರಾಜ್ಯದ ಪತನದ ಕುರಿತ ನೈಪಾಲರ ವಾದವನ್ನು ಗಿರೀಶ್ ವಿವರಿಸಿದ್ದಾರೆ). ನೈಪಾಲರಿಗೆ ಭಾರತದ ಜನಜೀವನದಲ್ಲಿ ಮುಸಲ್ಮಾನ ಸಮುದಾಯ ಹಾಸುಹೊಕ್ಕಾಗಿರುವ ರೀತಿಗಳ ಬಗ್ಗೆ ಲವಲೇಶವೂ ತಿಳಿದಂತಿಲ್ಲ ಮತ್ತೂ ತಿಳಿದುಕೊಳ್ಳುವ ಮನಸ್ಸು ಇದ್ದಂತಿಲ್ಲ (ಇದಕ್ಕೆ ಗಿರೀಶ್ ಭಾರತದ ಸಂಗೀತದ ಉದಾಹರಣೆ ನೀಡಿ, ಅದರ ಜೀವಂತಿಕೆಗೆ ಮುಸಲ್ಮಾನ ಸಮುದಾಯದ ಕೊಡುಗೆಯನ್ನು ವಿವರಿಸಿ, ಇದನ್ನರಿಯದ ನೈಪಾಲರಿಗೆ 'ರಾಗ ಕಿವುಡು' ಇರಬೇಕು ಎಂದಿದ್ದಾರೆ). ಹೀಗಾಗಿ ನೈಪಾಲ್ ಬಾಬ್ರಿ ಮಸೀದಿ ಧ್ವಂಸವನ್ನು ಸಮರ್ಥಿಸಿ ಮಾತನಾಡುತ್ತಾರೆ. ತತ್ಪರಿಣಾಮವಾಗಿ 1992 ಡಿಸೆಂಬರ್-93 ಜನವರಿಯಲ್ಲಿ ನಡೆದ ಗಲಭೆಗಳಲ್ಲಿ 900 ಮುಸಲ್ಮಾನರು ಜೀವ ಕಳೆದುಕೊಂಡು, ಅಪಾರ ಪ್ರಮಾಣದ ನೋವು, ಸ್ವತ್ತುನಾಶಗಳಿಗೆ ತುತ್ತಾದ ನಂತರವೂ, ಭಾರತಕ್ಕೆ ಬಂದಿದ್ದ ನೈಪಾಲ್ ಬಿಜೆಪಿ ಪಕ್ಷದ ಕಚೇರಿಗೆ 'ಸೌಹಾರ್ದ ಭೇಟಿ' ನೀಡುತ್ತಾರೆ (ಗಿರೀಶ್ ತಮ್ಮ ಮಾತಿನಲ್ಲಿ ಗಲಭೆಗಳ ಇಸವಿ 1994 ಎಂದೂ, ಸತ್ತವರ ಸಂಖ್ಯೆ 1500 ಎಂದೂ ಹೇಳಿದ್ದಾಗಿ ವರದಿಯಾಗಿದೆ. ಹಾಗಾಗಿದ್ದಲ್ಲಿ ಗಿರೀಶ್ ವಾಸ್ತವಿಕ ವಿವರಗಳನ್ನು ತಪ್ಪಾಗಿ ನೀಡುವ ಪುಟ್ಟ ಪ್ರಮಾದವೆಸಗಿದ್ದಾರೆ). ಇದೆಲ್ಲ ನೈಪಾಲರ 'ಮುಸಲ್ಮಾನ ವಿರೋಧಿ' ನಿಲುವನ್ನು ಸೂಚಿಸುತ್ತದೆ.





ನೈಪಾಲ್ ಕುರಿತು ಗಿರೀಶ್ ಕಾರ್ನಾಡ್ ಹೇಳಿರುವ ಮಾತುಗಳು ಸರಿಯಾಗಿಯೇ ಇವೆ. ನೈಪಾಲರ ಕೃತಿಗಳು ಮುಕ್ತವಾಗಿ ಲಭ್ಯವಿವೆ-ಯಾರೂ ಸಹ ಅವುಗಳಲ್ಲಿ ವ್ಯಕ್ತವಾಗಿರುವ ನಿಲುವುಗಳೇನು ಎನ್ನೋದನ್ನ ಓದಿ ತಿಳಿಯಬಹುದು (ಮತ್ತೂ ನೈಪಾಲ್ ಸಹ ನಯವಾಗಿ ವಾದಿಸುವ ಆಸಾಮಿ ಏನೂ ಅಲ್ಲ!). ಬಾಬ್ರಿ ಮಸೀದಿ ಧ್ವಂಸ, ಬಿ.ಜೆ.ಪಿ. ಮತ್ತು (ಮುಖ್ಯವಾಗಿ) ಶಿವಸೇನೆಯ ಬಗ್ಗೆ ನೈಪಾಲರಿಗೆ ಇರುವ ಸಹಾನುಭೂತಿಗಳು ಕೂಡ ಸಾರ್ವಜನಿಕವಾದುವೇ. ಬಾಬ್ರಿ ಮಸೀದಿ ಧ್ವಂಸದಲ್ಲಿ ಭಾಗಿಯಾದವರಲ್ಲಿ ಅನೇಕ ಜನ ಜೀನ್ಸ್ ಪ್ಯಾಂಟ್, ಟೀಷರ್ಟ್ ಧರಿಸಿದ ಯುವಕರಿದ್ದರು ಎನ್ನುವುದೇ ಆ ಚಳವಳಿಯು ಭಾರತದಲ್ಲಿ ಪುಟಿದುಕ್ಕುತ್ತಿರುವ ತರುಣ ಚೈತನ್ಯದ ಆಕ್ರೋಶದ ಅಭಿವ್ಯಕ್ತಿಯಾಗಿದೆ ಎನ್ನುವುದನ್ನು ಸೂಚಿಸುತ್ತದೆ- ಎಂಬ ಅಭಿಪ್ರಾಯವನ್ನು ನೈಪಾಲ್ ತಮ್ಮ ಒಂದು ಸಂದರ್ಶನದಲ್ಲಿ ವ್ಯಕ್ತಪಡಿಸಿದ್ದರು. ಹಾಗಾಗಿ ನೈಪಾಲರ ನಿಲುವುಗಳು ಖುಲ್ಲಂ ಖುಲ್ಲ ಆಗಿಯೇ ನಮ್ಮ ಮುಂದಿವೆ. ಆದರೆ, ಮುಂಬೈ ಸಾಹಿತ್ಯೋತ್ಸವದ ಆಯೋಜಕರು ನೈಪಾಲರ ಪರವಾಗಿ ನೀಡಿರುವ ಸಮಜಾಯಿಷಿ ಮತ್ತು ಗಿರೀಶರ ಮಾತುಗಳ ಬಗ್ಗೆ ಎತ್ತಿರುವ ಆಕ್ಷೇಪಗಳು ಮಾತ್ರ ವಿಚಿತ್ರವಾಗಿವೆ.

ಫರೂಕ್ ದುಂಡಿ (ಇವರು ಎಡಪಂಥೀಯರೂ, ಲೇಖಕರೂ ಮತ್ತು ಬಿ.ಬಿ.ಸಿ.ಯ ಚಾನೆಲ್-4 ಗಾಗಿ ಅನೇಕ ಉತ್ತಮ ಕಾರ್ಯಕ್ರಮಗಳನ್ನು ತಯಾರು ಮಾಡಿದವರು) 'ನೈಪಾಲರ ಹೆಂಡತಿ ನಾದೀರ ಮುಸಲ್ಮಾನರು. ಅವರು ತಮ್ಮ ಇಬ್ಬರು ಮಕ್ಕಳನ್ನೂ ಮುಸಲ್ಮಾನರಾಗಿಯೇ ಬೆಳೆಸಿದ್ದಾರೆ. ಹೀಗಾಗಿ ನೈಪಾಲ್ ಮುಸ್ಲಿಮ್ ವಿರೋಧಿ ಎಂಬ ಗಿರೀಶರ ವಾದದಲ್ಲಿ ಹುರುಳಿಲ್ಲ' ಎನ್ನುತ್ತಾರೆ. ಹಾಗಾದಲ್ಲಿ ನಮ್ಮ ಕರುನಾಡಿನ ಬಿ.ಜೆ.ಪಿ. ಪುಂಗಿಗಳಾದ ಮಮ್ತಾಜ್ ಅಲಿ ಖಾನ್, ಅನ್ವರ್ ಮಾನಿಪ್ಪಾಡಿ ದೇವದೂತರೇ ಸರಿ! ಸಾಹಿತ್ಯೋತ್ಸವದ ನಿರ್ದೇಶಕರಾದ ಅನಿಲ್ ಧರ್ಕಾರ್ 'ನಾವು ಗಿರೀಶರನ್ನ ಕರೆಸಿದ್ದು ರಂಗಭೂಮಿಯಲ್ಲಿ ಅವರ ಅನುಭವಗಳ ಕುರಿತು ಮಾತನಾಡಲಿ ಅಂತ. ಅವರು ತಮ್ಮ ವಿಷಯ ವ್ಯಾಪ್ತಿಯನ್ನು ಮೀರಿ ಮಾತನಾಡಿದ್ದು ನಮ್ಮಲ್ಲಿ ದಿಗ್ಭ್ರಮೆ ಉಂಟುಮಾಡಿದೆ. ನೈಪಾಲ್ ಮುಸ್ಲಿಮ್ ವಿರೋಧಿಯಲ್ಲ, ಆಕ್ರಮಣಕಾರಿ ಮುಸ್ಲಿಮ್ ಅರಸರು ಭಾರತದಲ್ಲಿ ದೇವಾಲಯಗಳನ್ನು ನಾಶಮಾಡಿದ್ದಾರೆ ಅಂತ ನೈಪಾಲ್ ಬರೆದಿರೋದು ಚಾರಿತ್ರಿಕ ಸತ್ಯ. ಅದನ್ನು ಸುಳ್ಳು ಅನ್ನೋಕಾಗುತ್ತಾ? ಗಿರೀಶರ ಮಾತಿನಲ್ಲಿ ಆಯೋಜಕರು ಜಾತ್ಯತೀತರಲ್ಲ ಎಂಬ ಇಂಗಿತವಿದ್ದಂತಿದೆ. ನಾನು ತೀಸ್ತಾ ಸೆಟ್ಲ್ವಾಡ್ ಇರುವ ಸಿಟಿಜನ್ ಫಾರ್ ಜಸ್ಟಿಸ್ ಅಂಡ್ ಪೀಸ್ (CJP) ಸಂಸ್ಥೆಯ ಟ್ರಸ್ಟಿ. ನಾವು ಮೋದಿ ವಿರುದ್ಧ 2002ರಿಂದ ಕೇಸು ಹಾಕಿ ಹೋರಾಟ ಮಾಡುತ್ತಿದ್ದೇವೆ' ಎಂದಿದ್ದಾರೆ.

ಗಿರೀಶ್ ಆಯೋಜಕರ ಜಾತ್ಯತೀತ ಮನೋಭಾವವನ್ನು ಅನುಮಾನಿಸಿಯೂ ಇಲ್ಲ, CJP ಯ ಮಹತ್ವವನ್ನು ಅಲ್ಲಗಳೆದೂ ಇಲ್ಲ. ಗಿರೀಶ್ ಒಬ್ಬ ಸೂಕ್ಷ್ಮ ಸಂವೇದನೆಯ ಬರಹಗಾರ ಅನ್ನೋದನ ಧರ್ಕಾರ್ ಮರೆತಂತಿದೆ. ಮತ್ತೇ ಧರ್ಕಾರ್ ಆಕ್ರಮಣಕಾರಿ ಮುಸ್ಲಿಮ್ ಅರಸರು ಭಾರತದಲ್ಲಿ ದೇವಾಲಯಗಳನ್ನು ನಾಶಮಾಡಿದ್ದಾರೆ ಅನ್ನೋದು ಚಾರಿತ್ರಿಕ ಸತ್ಯ ಅಂತ ಸತ್ಯದ ತಲೆ ಮೇಲೆ ಹೊಡೆದ ಹಾಗೆ ಹೇಳುತ್ತಿದ್ದಾರೆ. ಹಿಂದೂ ಅರಸರೂ ದೇವಾಲಯಗಳನ್ನು ನಾಶಮಾಡಿದ್ದಾರೆ; ಮಧ್ಯಯುಗದ ದಕ್ಷಿಣ ಏಷಿಯಾದ ಚರಿತ್ರೆಯಲ್ಲಿ ದೇವಾಲಯಗಳ ಧ್ವಂಸ ಅಧಿಕಾರ ಸ್ಥಾಪನೆಯ ಪ್ರತೀಕವಾಗಿತ್ತೇ ವಿನಃ, ಧಾರ್ಮಿಕ ದ್ವೇಷದ ಉದ್ದೇಶ ಅದರಲ್ಲಿ ಇರಲಿಲ್ಲ ಎಂದು ಧ್ವಂಸಗೊಂಡ ದೇವಾಲಯಗಳು, ಧ್ವಂಸಗೊಳಿಸಿದ ಅರಸರು, ಧ್ವಂಸದ ಕಾಲಗಳ ಪಟ್ಟಿಯ ಸಮೇತ ಇತಿಹಾಸಕಾರರು ವಿವರಿಸಿದ್ದಾರೆ. ಆದರೆ ಸೀತರಾಮ್ ಗೋಯಲ್‌ರಂಥ ಹಿಂದೂತ್ವ ಅಜೆಂಡ ಉಳ್ಳವರು, ವಸಾಹತುಶಾಹಿಯ ಗುಣಗಾನ ಮಾಡಲು ಕೆಲವು ಬ್ರಿಟಿಷ್ ಇತಿಹಾಸಕಾರರು ಸೃಷ್ಟಿಸಿದ ಅರೆಸತ್ಯದ ಪೀಟಿಲನ್ನೇ ಬಾರಿಸುತ್ತ 'ಅಯ್ಯೋ ನೋಡಿ ಮುಸ್ಲಿಮ್ ಅರಸರು ಮಾತ್ರವೇ ದೇವಾಲಯ ನಾಶಮಾಡಿದ್ದಾರೆ' ಎಂದು ಹೊಡೆಯುವ ಬೊಬ್ಬೆಯ ವರಸೆಯನ್ನೇ ನೈಪಾಲ್ ಅನುಸರಿಸುತ್ತಾರೆ. ಗಿರೀಶ್ ವಿಜಯನಗರ ಸಾಮ್ರಾಜ್ಯದ ಪತನದ ಬಗ್ಗೆ ನೈಪಾಲ್ ಬರೆದಿರೋದ್ರಲ್ಲಿ ಇಂಥ ಕಣ್ಕಟ್ಟಿದೆ ಅಂತ ವಿವರಿಸಿದ್ದಾರೆ. ಧರ್ಕಾರ್ CJPಯ ಟ್ರಸ್ಟಿ ಅಂದಮಾತ್ರಕ್ಕೆ ಅವರು ಎತ್ತಿ ಹೇಳುವ 'ಹಿಂದೂತ್ವದ ವಿಕಾರ ಚರಿತ್ರೆಯ ನಿರೂಪಣೆ'ಯನ್ನು ಯಾರೂ ನಂಬ ಬೇಕಾಗಿಲ್ಲ. ತನ್ನ ದಡ್ಡತನ ಮುಚ್ಚಿಕೊಳ್ಳಲು CJPಯ ಹೆಸರು ಬಳಸಿಕೊಳ್ಳೋದು ಎಂಥ ಅಸಹ್ಯ ಅಂತ ಧರ್ಕಾರ್‌ಗೆ ತಿಳಿಯಬೇಕು.

ಕೊನೆಯದಾಗಿ, ಗಿರೀಶ್ ತಮಗೆ ನೀಡಿದ ವಿಷಯದ ವ್ಯಾಪ್ತಿ ಮೀರಿ ಮಾತಾಡಿ ಅಸಭ್ಯತೆ ತೋರಿದ್ದಾರೆ ಎಂಬ ತನ್ನ ಮಾತಿನಲ್ಲಿ ಫ್ಯಾಸಿಸ್ಟ್ ಸರ್ವಾಧಿಕಾರದ ಗಬ್ಬುವಾಸನೆ ಇದೆ ಎಂದು ಧರ್ಕಾರ್ ಅರ್ಥ ಮಾಡಿಕೊಂಡರೆ ಒಳ್ಳೆಯದು. ಸಾಹಿತಿ ಕಲಾವಿದರು ಕಲೆ ಸಾಹಿತ್ಯದ ತೌಡು ಕುಟ್ಟಿಕೊಂಡು ತಾನು ನಡೆಸುತ್ತಿರುವ ಹಿಂಸೆಯ ಬಗ್ಗೆ ಗಪ್‌ಚಿಪ್ ಆಗಿರಬೇಕು ಎಂದು ಎಲ್ಲಾ ಫ್ಯಾಸಿಸ್ಟ್ ಪ್ರೋತ ನಾಯಕರೂ ಬಯಸುತ್ತಾರೆ. ತನ್ನ ಕಾಲದಲ್ಲಿ ಹಾಡುಹಗಲೇ ನಡೆಯುತ್ತಿರುವ ಹಿಂಸಾವಿಕಾರದ ಬಗ್ಗೆ ಬಾಯ್ಮುಚ್ಚಿಕೊಂಡು ಸಾಹಿತ್ಯ-ಕಲೆಯನ್ನು ತರಕಾರಿಯಂತೆ ಕೊಚ್ಚುತ್ತ ಕೂರುವ ಕಲಾವಿದರು ಪ್ರಶ್ನಾರ್ಹರೇ ವಿನಃ, ಸಹಿಸಿಕೊಳ್ಳದೆ ನಿರ್ದಾಕ್ಷಿಣ್ಯವಾಗಿ ಮಾತನಾಡುವವರಲ್ಲ.

ಧರ್ಕಾರ್‌ಗೆ ಕೇವಲ ಹದಿನೈದು ವರ್ಷಗಳ ಕೆಳಗೆ ಮುಂಬೈ ಮತ್ತು ಮರಾಠಿ ಸಾಹಿತ್ಯದಲ್ಲಿ ನಡೆದ ಬೋಧಕ ವಿದ್ಯಮಾನ ಒಂದರ ಬಗ್ಗೆ ಅರಿವಿದ್ದಂತಿಲ್ಲ. 1996ರ ಕೊನೆಯಲ್ಲಿ, ಆಗ ಮಹಾರಾಷ್ಟ್ರದಲ್ಲಿ ಆಡಳಿತದಲ್ಲಿದ್ದ ಬಿ.ಜೆ.ಪಿ.-ಶಿವಸೇನೆ ಸರಕಾರವು ಮರಾಠಿ ಸಾಹಿತ್ಯದ ದಿಗ್ಗಜ ಪು.ಲ.ದೇಶಪಾಂಡೆಯವರಿಗೆ ಐದು ಲಕ್ಷ ರೂಪಾಯಿ 'ಮಹಾರಾಷ್ಟ್ರ ಭೂಷಣ' ಮೌಲ್ಯದ ಪ್ರಶಸ್ತಿಯೊಂದನ್ನು ಘೋಷಿಸಿತು. ಕಿಕ್ಕಿರಿದು ತುಂಬಿದ್ದ ಸಾರ್ವಜನಿಕ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಪಾರ್ಕಿನ್ಸನ್ಸ್ ಕಾಯಿಲೆಯಿಂದ ಬಳಲುತ್ತಿದ್ದ ಪು.ಲ.ದೇಶಪಾಂಡೆ ಮುಂಬೈ ಹಾಗು ಮಹಾರಾಷ್ಟ್ರದಲ್ಲಿ ನಡೆಯುತ್ತಿರುವ ರಾಜಕೀಯ ಪ್ರೇರಿತ ಹಿಂಸೆಯ ಬಗ್ಗೆ ಮೂರು ನಿಮಿಷ ಮಾತನಾಡಿದರು; ಅವರು ರಾಜಕೀಯ ಪಕ್ಷಗಳ ಹೆಸರು ಹೇಳಲಿಲ್ಲವಾದರೂ, "ನಾವು ಬಯಸಿದ್ದು 'ಲೋಕಶಾಹಿ' (ಪ್ರಜಾಪ್ರಭುತ್ವ); ಆದರೆ ಇವತ್ತು ನಮಗೆ ದಕ್ಕಿರೋದು 'ರೋಕಶಾಹಿ' (ಗುಂಡಾಪ್ರಭುತ್ವ)" ಎಂದು ಹೇಳಿದ್ದು ತಾಗಬೇಕಾದವರ ಮರ್ಮಸ್ಥಾನಕ್ಕೆ ತಾಗಿತ್ತು. ಬಾಳಾಠಾಕ್ರೆ 'ಆ ಪ್ರಶಸ್ತಿಗೆ ನಾನೇ ಅರ್ಹ ವ್ಯಕ್ತಿಯಾಗಿದ್ದೆ; ಹೋಗಲಿ ಅಂತ ಅವನ ಮುಖಕ್ಕೆ ಎಸೆದರೆ ಕೊಬ್ಬಿ ಮಾತಾಡ್ತಾನೆ' ಅನ್ನೋ ಹೊಲಸು ಮಾತನ್ನು ಪು.ಲ.ದೇಶಪಾಂಡೆ ಬಗ್ಗೆ ಆಡಿದ. ಮರಾಠಿ ಸಾಹಿತ್ಯ ವಲಯ ಇದನ್ನು ಅಗಾಧ ಅವಮಾನವೆಂದು ತೀರ್ಮಾನಿಸಿತು.

1997ರ ಜನವರಿಯಲ್ಲಿ ನಡೆಯಲಿದ್ದ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಶಿವಸೇನೆ ಮತ್ತು ಬಾಳಾಠಾಕ್ರೆಯ ಕೊಬ್ಬನ್ನು ಖಂಡಿಸುವ ನಿರ್ಣಯ ತೆಗೆದುಕೊಳ್ಳಬೇಕೆಂಬ ಒತ್ತಾಯ ಜೋರಾಗಿತ್ತು. ಮರಾಠಿ ಸಾಹಿತ್ಯ ಸಮ್ಮೇಳನಕ್ಕೆ ಬೇರೆ ಭಾಷೆಯ ಖ್ಯಾತ ಸಾಹಿತಿಗಳನ್ನು ಉದ್ಘಾಟನೆಗೆ ಕರೆಸುವ ಒಳ್ಳೆಯ ಪರಂಪರೆಯನ್ನು ಅಲ್ಲಿನ ಸಾಹಿತ್ಯವಲಯ ಇಂದಿಗೂ ಉಳಿಸಿಕೊಂಡಿದೆ. 1997ರ ಸಾಹಿತ್ಯ ಸಮ್ಮೇಳನದ ಉದ್ಘಾಟನೆಗೆ ಗಿರೀಶ್ ಕಾರ್ನಾಡರನ್ನು ಕರೆಸಲಾಯಿತು. ಅಲ್ಲಿ ಗಿರೀಶ್ 'ನಾಗರಿಕ ಮತ್ತು ಸೈನಿಕ' ಎಂಬ ಭಾಷಣ ಮಾಡಿದರು (ಇದರ ಕನ್ನಡ ಅನುವಾದ ನಿನಾಸಂನ ತ್ರೈಮಾಸಿಕ 'ಮಾತುಕತೆ'ಯಲ್ಲಿ ಪ್ರಕಟವಾಗಿದೆ). ಅದು ಪ್ರಜಾಪ್ರಭುತ್ವ ಮನೋಭಾವ ಹಾಗು ಫ್ಯಾಸಿಸ್ಟ್ ಸರ್ವಾಧಿಕಾರ ಪ್ರವೃತ್ತಿಗಳ ಕುರಿತ ನೇರ ನಿರೂಪಣೆಯಾಗಿತ್ತು. ಕಾರ್ನಾಡ್ ಮರಾಠಿಯಲ್ಲೇ ಮಾತನಾಡಿದರು. ಭಾಷಣದ ಉದ್ದಕ್ಕೂ ಬರುವ 'ಸೈನಿಕ' ಮತ್ತು 'ಸೈನಿಕ' (ಸೈನಿಕ ಪ್ರವೃತ್ತಿ)ಯನ್ನು ಎಲ್ಲರೂ ಶಿವಸೇನೆ ಮತ್ತು ಶಿವಸೈನಿಕರಿಗೆ ಅನ್ವಯಿಸಿಕೊಂಡರು. ಸಮ್ಮೇಳನದಲ್ಲಿ ಖಂಡನಾ ನಿರ್ಣಯ ಕೈಗೊಳ್ಳಲಿಲ್ಲವಾದರೂ, ಮುಂದೆ ಹಲವಾರು ತಿಂಗಳ ಕಾಲ ಈ ಭಾಷಣವು ಮಹಾರಾಷ್ಟ್ರದಲ್ಲೂ ಮತ್ತು ದೇಶದ ಇತರೆಡೆಗಳಲ್ಲೂ ಹೊಸ ಚರ್ಚೆಯೊಂದನ್ನು ಹುಟ್ಟು ಹಾಕಿತು.

ಸಾಹಿತ್ಯದ ಬೌದ್ಧಿಕತೆ, ಸಂವೇದನೆ ಎಂದರೆ ಬೊಚ್ಚು ಬಾಯಿಗೆ ಒದಗುವ ಮೆತ್ತನೆಯ ರುಚಿಕಟ್ಟು ಉಪ್ಪಿಟ್ಟಲ್ಲ ಮಿ.ಧರ್ಕಾರ್! ನೈಪಾಲ್, ಭೈರಪ್ಪ ಚಿ.ಮೂ.ಗಳು ಸಾಹಿತ್ಯ ಬಿಟ್ಟು ಹಿಂದೂತ್ವದ ಹೊಲಸು ವಿಚಾರಗಳನ್ನು ಕಕ್ಕಿದರೆ ಅದು ಕಲೆಯೋ! ಅದೇ ಗಿರೀಶ್ ಕಾರ್ನಾಡ್ ಹಿಂದೂತ್ವ ಬೈಚಾರಿಕತೆಯನ್ನು ತರಾಟೆಗೆ ತೆಗೆದುಕೊಂಡರೆ ಸಜ್ಜನಿಕೆ ಮೀರಿದ ಉದ್ಧಟತನವೋ. ಇಂಥ ಸಾಹಿತ್ಯಿಕ ಸಜ್ಜನಿಕೆಯ ಮಾನದಂಡಗಳನ್ನು ಮೊದಲು ಧಿಕ್ಕರಿಸಬೇಕು.

● ಕೆ. ಫಣಿರಾಜ್


‘ಸುಪಾರಿ ಎನ್‌ಕೌಂಟರ್’ ಭೀತಿಯಲ್ಲಿ ಕೋತಿರಾಮ

ರಾಜಧಾನಿಯ ಕಾಳ ಕೂಪದೊಳಗೊಂದು ವಿಕರಾಳ ತಲ್ಲಣ. ಮೈಸೂರಿನಿಂದ ಹಿಡಿದು ಬೆಂಗಳೂರು ಹಾಸಿ ತುಮಕೂರು ತನಕದ ಮುಲಾಮನ ಸಾಮ್ರಾಜ್ಯದಲ್ಲಿ ಅದೆಂಥದೋ ನೆತ್ತರ ದಾಹ. ಕಾಮಾಕ್ಷಿಪಾಳ್ಯದ ಅಧಿಪತಿ ಗೋಪಾಲಯ್ಯಗೆ ಅಸಾಧ್ಯ ಆತಂಕ, ಕಡಬಗೆರೆಯ ಪಾಯ್ಸನ್ ರಾಮನ ಪಾಳೇಪಟ್ಟಿನೊಳಗಡೆ ಸೂತಕ ತವಕ ಮತ್ತು ಮಂಡ್ಯದ ಗುಳ್ಳೇ ನರಿ ಅಶೋಕ್ ಪೈಗೆ ತೊಳ್ಳೇ ನಡುಕ-


ಹೀಗೆ ನಿಂತನೀರಾಗಿದ್ದ ಅರ್ಧ ಬೆಂಗಳೂರಿನ ಕರಾಳ ಕೂಪದೊಳಕ್ಕೊಂದು ಉಲ್ಕೆ ಅಪ್ಪಳಿಸಿದಂತೆ ಕಲ್ಲೋಲ ವೆಬ್ಬಿಸಿದವನು ಕೋತಿರಾಮ!

ಇನ್ನೊಂದು ವಾರ ಅಥವಾ ಹದಿನೈದು ದಿನಗಳೊಳಗೆ ರಾಮ ಜೈಲಿಂದ ಹೊರಬಿದ್ದನೆಂದರೆ ಉರುಳುವುದು ಯಾರ ತಲೆಯೆಂಬುದು ಒಂದು ಪ್ರಶ್ನೆಯಾದರೆ, ಸಿಸಿಬಿ ಪೊಲೀಸರಿಗೇ ಸುಪಾರಿ ಕೊಟ್ಟು ನಕಲಿ ಎನ್‌ಕೌಂಟರ್ ಮಾಡಿಸಿ ಪೆದ್ದ ಗುಂಡನನ್ನು ಮುಗಿಸಿದಂತೆ ಬಂದ ಒಂದೇ ತಿಂಗಳೊಳಗೆ ಕೋತಿರಾಮನನ್ನೂ ಪೊಲೀಸರು ‘ಸುಪಾರಿ ಎನ್‌ಕೌಂಟರ್’ ಮಾಡಿಸಿ ಮುಗಿಸುತ್ತಾರೆಂಬುದು ಮತ್ತೊಂದು ಕುತೂಹಲ. ಹಿಂದೆ ಪೆದ್ದಗುಂಡನನ್ನು ಸಿಸಿಬಿ ಪೊಲೀಸರು ‘ಸುಪಾರಿ ಎನ್‌ಕೌಂಟರ್’ ಮಾಡಿದ ಹಾಗೆ ಈ ಬಾರಿ ಕೋತಿರಾಮನನ್ನು ಬೆಂಗಳೂರು ಗ್ರಾಮಾಂತರ ಪೊಲೀಸರನ್ನೋ ಅಥವಾ ರಾಮನಗರದ ಪೊಲೀಸರನ್ನೋ ಛೂ ಬಿಟ್ಟು ಎನ್‌ಕೌಂಟರ್ ಮಾಡಿಸುತ್ತಾರೆ, ಅದಕ್ಕೆಂದೇ ತಾವರೆಕೆರೆ, ಮಾಗಡಿಯಂಥ ನೆಲಮಂಗಲದ ಆಸುಪಾಸಿನ ಪೊಲೀಸ್ ಠಾಣೆಗಳಿಗೆ ತಮಗೆ ಬೇಕಾದ, ತಮ್ಮದೇ ಆಜ್ಞಾಪಾಲಕ ಪೊಲೀಸ್ ಅಧಿಕಾರಿಗಳನ್ನು ಹಾಕಿಸಿಕೊಳ್ಳಲು ದೈತ್ಯ ಪಾತಕ ಕೂಟವೊಂದು ಕೆಲ ಶಾಸಕರ ಮೂಲಕ ಗೃಹಮಂತ್ರಿ ಅಶೋಕ್ ಛೇಂಬರಿನಲ್ಲಿ ಕೂತು ಕಾರ್ಯತಂತ್ರ ರೂಪಿಸುತ್ತಿದೆ ಮತ್ತು ಒಬ್ಬ ಕೋತಿರಾಮನನ್ನು ಮುಗಿಸಿಬಿಟ್ಟರೆ ಇಡೀ ವೃಷಭಾವತಿ ಕಣಿವೆಯ ಕಿರಾತಕ ಕಾಳಗಕ್ಕೊಂದು ಪೂರ್ಣ ವಿರಾಮ ಕಲ್ಪಿಸಿದಂತಾಗುತ್ತದೆ!

ಇದು ಸದ್ಯ ಬೆಂಗಳೂರು ಕರಾಳ ಕೂಪದಲ್ಲಿ ಹೊಗೆಯಾಡುತ್ತಿರುವ ಯಮ ಲೆಕ್ಕಾಚಾರ. ಕಳೆದ ಏಳು ವರ್ಷಗಳಿಂದ ಜೈಲಲ್ಲೇ ಕೂತು ಕಾಮಾಕ್ಷಿಪಾಳ್ಯದ ಮಚ್ಚನ ಅಪ್ಪೂ ಅವಶೇಷಗಳನ್ನು ನಿಭಾಯಿಸಿ ದವನು ಕೋತಿರಾಮ. ಒಂದಾನೊಂದು ಕಾಲಕ್ಕೆ ಇಡೀ ಕಾಮಾಕ್ಷಿಪಾಳ್ಯವನ್ನಷ್ಟೇ ಅಲ್ಲ, ಪಕ್ಕದ ವಿಜಯನಗರದ ತಮ್ಮಯ್ಯನ ಸಾಮ್ರಾಜ್ಯ, ಮಾರೇನಹಳ್ಳಿ ಜಗ್ಗನ ಹಿತಾಸಕ್ತಿ, ಕಡಬಗೆರೆಯ ಪಾಯ್ಸನ್ ರಾಮನ ಪಾಳೇಪಟ್ಟು, ಬೈಚಕುಪ್ಪೆಯ ಜಾನಿಯ ಅಪ್ಪೂ ವ್ಯವಹಾರ ಮತ್ತು ಪೀಣ್ಯ-ದಾಸರಹಳ್ಳಿಯ ಹುಡಿಪುಡಿ ಹಂತಕ ಪಡೆಗಳನ್ನೆಲ್ಲ ಒಟ್ಟೊಟ್ಟಿಗೆ ನಿಯಂತ್ರಿಸುತ್ತಲೇ ಮೆರೆದವನು



ಹಿಂದೆ ಹೀಗಿದ್ದ...




ಕೋತಿರಾಮನ ಹಾಲಿ ರೂಪ


ಕಾಮಾಕ್ಷಿಪಾಳ್ಯದ ಮಚ್ಚ, 2005 ರ ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವ ದ ದಿನದಂದೇ ಯಲಹಂಕದ ಜಡ್ಜಸ್ ಕಾಲೋನಿಯಲ್ಲಿ ಮಚ್ಚ ಎದುರಾಳಿಗಳ ಲಾಂಗಿಗೆ ಬಲಿಯಾದಾಗ ಆತ ಡ್ರೈವ್ ಮಾಡುತ್ತಿದ್ದ ಕಾರಿನ ಪಕ್ಕದ ಸೀಟಿನಲ್ಲಿದ್ದವನೇ ಕೋತಿರಾಮ!

ಮುಲಾಮ, ಕಾಮಾಕ್ಷಿಪಾಳ್ಯದ ಗೋಪಾಲಯ್ಯ, ಕಡಬಗೆರೆಯ ಪಾಯ್ಸನ್ ರಾಮ, ಜೇಡರಹಳ್ಳಿ ಕೃಷ್ಣಪ್ಪ, ಗೂಳಿ ಬಸವ, ಕಾಮಾಕ್ಷಿಪಾಳ್ಯದ ಧರಣಿ, ಮುಲಾಮನ ಪರಮಾಪ್ತರಾದ ರಾಮ-ಲಕ್ಷ್ಮಣ-ಹೀಗೆ ಅರ್ಧ ಬೆಂಗಳೂರಿನ ಕುಖ್ಯಾತರನ್ನೆಲ್ಲ ಮಚ್ಚನ ಕೊಲೆಯ ಆರೋಪಿಗಳನ್ನಾಗಿಸಿ ಯಲಹಂಕ ಪೊಲೀಸರು ಕೇಸು ಜಡಿದರು. ಆವತ್ತು ಮಚ್ಚ ಕೊಲೆಯಾದಾಗ ಆತನ ಪಕ್ಕದಲ್ಲೇ ಕೂತಿದ್ದ ಕೋತಿರಾಮ ತನ್ನ ಗುರುವನ್ನು ಬಚಾವು ಮಾಡಲು ಹೋಗಿ ಅದೆಷ್ಟು ಭಯಾನಕವಾಗಿ ಗಾಯಗೊಂಡಿದ್ದನೆಂದರೆ, ಆತನ ಎಡಗೈ ಪೂರ್ತಿ ತುಂಡಾಗಿ ಹೋಗಿತ್ತು, ತಲೆ ಸೀಳಿ ರಕ್ತ ಧಾರಾಕಾರವಾಗಿ ಸುರಿದಿತ್ತು, ಹೊಟ್ಟೆಗೆ ಬಿದ್ದ ಲಾಂಗ್ ಏಟಿಗೆ ಕರುಳೆಲ್ಲಾ ಹೊರಬಂದು ಅರ್ಧ ಬೆನ್ನೇ ಸೀಳಿಹೋಗಿತ್ತು, ಇಷ್ಟೆಲ್ಲಾ ಭಯಾನಕವಾಗಿ ಗಾಯಗೊಂಡೂ ಮಣಿಪಾಲ ಆಸ್ಪತ್ರೆ ಸೇರಿ ಬದುಕುಳಿದ ಕೋತಿರಾಮನನ್ನು ಅದ್ಯಾರು ಮಚ್ಚನ ಉತ್ತರಾಧಿಕಾರಿಯೆಂದು ಪಟ್ಟಕ್ಕೆ ತಂದರೋ ಗೊತ್ತಿಲ್ಲ.


ದುರಂತವೆಂದರೆ-ಮಚ್ಚನ ಮೊದಲ ತಿಥಿಗೆಂದು ಇನ್ನೂ ಆಸ್ಪತ್ರೆಯಲ್ಲಿ ಮಲಗಿದ್ದ ಕೈಕಾಲಿಗೆಲ್ಲ ಆಪರೇಷನ್ನಾಗಿ ಮುರಿದ ಮೂಳೆಗೆ ರಾಡು ಹಾಕಿಸಿಕೊಂಡಿದ್ದ, ನಡೆಯುವುದಕ್ಕೂ ಆಗದ, ಉಣ್ಣುವುದಕ್ಕೂ ಕೈಬಾರದ, ಗಾಲಿಕುರ್ಚಿಯಲ್ಲೇ ಮಚ್ಚನ ಸಮಾಧಿಗೆ ಹಾಲೆರೆಯಲೆಂದು ಬಂದಿದ್ದ ಕೋತಿರಾಮನನ್ನು ಕೊರಂಗು ಮಾಡಿದ ಯಡವಟ್ಟಿನಿಂದಾಗಿ ಮಂಡ್ಯ ಕೃಷ್ಣನ ಕೊಲೆ ಕೇಸಿಗೆ ಸಿಲುಕಿಸಲಾಯ್ತು. ಆವತ್ತು ಅಂದರೆ 2006 ರ ಜನವರಿ ತಿಂಗಳಲ್ಲಿ ಜೈಲು ಸೇರಿದ ಕೋತಿರಾಮ ಇವತ್ತಿಗೂ ಕಂಬಿ ಎಣಿಸುತ್ತಲೇ ಇದ್ದಾನೆ. ಇನ್ನೆರಡು ತಿಂಗಳು ಕಳೆದರೆ ರಾಮ ಜೈಲು ಸೇರಿ ಏಳು ವರ್ಷಗಳು ಕಳೆದಂತಾಗುತ್ತದೆ.



ಮುಲಾಮ



ಕೊರಂಗು



ಕೊಲೆಯಾದ ಮಚ್ಚ

ಆವತ್ತು ಮಚ್ಚನ ಕೊಲೆಯಾದಾಗ ನಿಜಕ್ಕೂ ನಡೆದದ್ದೇನು? ಮಚ್ಚನ ಹತ್ಯೆ ಯಲ್ಲಿ ಜೇಡರಹಳ್ಳಿ ಕೃಷ್ಣಪ್ಪನ ಪಾತ್ರವಿದ್ದದ್ದು ಎಷ್ಟು ನಿಜ? ಜೇಕೆ ಬಲಗೈ ಬಂಟ ನಾಯ್ಡು ಅಲಿಯಾಸ್ ಅಂಕಲ್ ಹೆಸರು ಈ ಕೇಸಿಗೆ ತಗುಲಿಕೊಂಡಿದ್ದೇಕೆ? ನಿಜಕ್ಕೂ ಕಾಮಾಕ್ಷಿಪಾಳ್ಯದ ಗೋಪಾಲಯ್ಯ ಈ ಹತ್ಯೆಯ ಸೂತ್ರಧಾರನೆ? ಮುಲಾಮ ಮತ್ತು ಆತನ ಬಂಟರಾದ ರಾಮ-ಲಕ್ಷ್ಮಣರ ಪಾತ್ರವೇನು? ಜೊತೆಗೇ ತಿಂದುಂಡು ಬೆಳೆದಿದ್ದ ಕಡಬಗೆರೆಯ ಪಾಯ್ಸನ್ ರಾಮನೂ ಮಚ್ಚನ ಹತ್ಯೆಗೆ ಕೈಜೋಡಿಸಿದ್ದು ಎಷ್ಟು ಸತ್ಯ ಮತ್ತು ಮಂಡ್ಯದ ಡಾನ್ ಜಡೇಜಾ ರವಿಯ ಕೊಲೆಯಲ್ಲಿ ಕೋತಿರಾಮನ ಪಾತ್ರವಿತ್ತೆಂಬ ಆರೋಪ ಹುಟ್ಟಿಕೊಂಡಿದ್ದಾದರೂ ಏಕೆ? ಇಂಥ ಅನೇಕ ಪ್ರಶ್ನೆಗಳಿಗೆ ಈತನಕ ಯಾರಲ್ಲೂ ನಿಖರ ಉತ್ತರವಿಲ್ಲ, ಖುದ್ದು ಕೋತಿರಾಮನೇ ಈ ಬಗ್ಗೆ ಎಲ್ಲೂ ಬಾಯಿ ಬಿಟ್ಟಿಲ್ಲ, ಇನ್ನೇನು ವಾರವೋ ತಿಂಗಳೊ ರಾಮ ಜೈಲಿಂದ ಹೊರಬಿದ್ದನೆಂದರೆ ಮತ್ತೆ ಯಾರಿಗಾದರೂ ಸಿಗುತ್ತಾನೋ, ಅದಕ್ಕೂ ಮುನ್ನವೇ ಸುಪಾರಿ ಎನ್‌ಕೌಂಟರ್‌ಗೆ ತಲೆಕೊಡುತ್ತಾನೋ ಗೊತ್ತಿಲ್ಲ, ಮೊನ್ನೆ ಮೈಸೂರು ಜೈಲಿನಲ್ಲಿ ಕೋತಿರಾಮನೇ ಈ ವರದಿಗಾರನ ಮುಂದೆ ಬಾಯಿಬಿಟ್ಟ, ಸದ್ಯ ಅರ್ಧ ಬೆಂಗಳೂರಿನ ಗ್ಯಾಂಗ್‌ವಾರ್, ಜಿದ್ದಾಜಿದ್ದಿ ಮತ್ತು ಸಾವುಬದುಕಿನ ಲೆಕ್ಕಾಚಾರವನ್ನು ತನ್ನದೇ ಶೈಲಿಯಿಂದ ಬಿಡಿಬಿಡಿಸಿ ವಿವರಿಸಿದ ಕೋತಿರಾಮನ ಮಾತಿನಲ್ಲೇ ಬೆಂಗಳೂರು ಪಾಪಕೂಪದ ಅನೇಕ ತಲೆಗಳ ಭವಿಷ್ಯದ ಪ್ರಶ್ನೆಯಿತ್ತು.....

‘.... ಏನ್ ಸಾರ್, ಇವನೇನಾ ಕೋತಿರಾಮ ಅಂತ ಅನುಮಾನದಿಂದ ನೋಡ್ತೀರಾ? ನಾನೇನೆ! ಹೆಚ್ಚೂಕಮ್ಮಿ ಆರೂ ಮುಕ್ಕಾಲು ವರ್ಷದಿಂದ ಜೈಲಲ್ಲೇ ಕೊಳೀತಾ ಬಿದ್ದಿನ್ನಿ ಅಂದಮೇಲೆ ಬದಲಾಗದೆ ಇರ್ತೀನಾ? ಮೊದಲಾದರೆ ಒಣಕೊಂಡು ಸಣ್ಣಗೆ ಇದ್ದೆ. ಸ್ವಾಮಿಯವರನ್ನ (ಮಚ್ಚ ಉರ್ಫ್ ಮಂಜನನ್ನು ಆತನ ಹುಡುಗರು ಸಂಬೋಧಿಸುವುದೇ ಸ್ವಾಮಿ ಎಂದು) ಬದುಕಿಸಬೇಕು ಅಂತ ಏನೆಲ್ಲಾ ಪ್ರಯತ್ನಪಟ್ಟರೂ ಆಗಲೇ ಇಲ್ಲ.....!’

ಕ್ಷಣ ಹೊತ್ತು ಏನೋ ದುಸ್ವಪ್ನವೊಂದನ್ನು ನೆನೆಸಿಕೊಂಡವನಂತೆ ವಿಷಾದದಿಂದ ಆಕಾಶ ನಿಟ್ಟಿಸಿದ ರಾಮ 2005 ರ ನವೆಂಬರ್ 1 ರ ಆ ದಿನವನ್ನು ಎಳೆಎಳೆಯಾಗಿ ಬಾಯಿಬಿಟ್ಟ. ‘ಆವತ್ತು ಬೆಳಗ್ಗೆ ಹತ್ತೂವರೆಯಿರಬೇಕು. ಯಲಹಂಕದ ಜಡ್ಜಸ್ ಕಾಲನಿಯಲ್ಲಿ ಸ್ವಾಮಿಯವ್ರು ಮನೆ ಮಾಡಿದ್ದು ಗೊತ್ತಿದ್ದದ್ದು ಕಡಬಗೆರೆ ರಾಮಣ್ಣನಿಗೆ ಮಾತ್ರ. ಅದುಬಿಟ್ಟರೆ ಇನ್‌ಸ್ಪೆಕ್ಟರ್ ಸುಬ್ಬಣ್ಣನವರಿಗೆ ಹೇಗೋ ಗೊತ್ತಾಗಿತ್ತು, ತಿಂಗಳ ಹಿಂದೆಯೇ ಮನೆ ಖಾಲಿ ಮಾಡುವಂತೆ ಮಾರೇನಹಳ್ಳಿ ಜಗ್ಗನಿಂದ ಕಳಕಳಿಯ ಸಲಹೆ ಬಂದಿದ್ದನ್ನು ಮಂಜ ಅವ್ರು ಅದೇಕೋ ನಿರ್ಲಕ್ಷ್ಯ ಮಾಡಿದ್ರು, ಆವತ್ತೇ ಮನೆ ಖಾಲಿ ಮಾಡಿದ್ರೆ ಬದುಕುತಿದ್ರೋ ಏನೋ-’

ಏಕೋ ಇದ್ದಕ್ಕಿದ್ದಂತೆ ಮಾತು ಕಟ್ಟಿದವನಂತೆ ತಡೆದ ರಾಮ ಇನ್ನೇನನ್ನೋ ನೆನೆಸಿಕೊಂಡವನಂತೆ ‘ಅದೆಲ್ಲಾ ಈಗ್ಯಾಕೆ ಸಾರ್. ಆಗಿದ್ದು ಆಗಿಹೋಯ್ತು, ಈಗ ಕೆದಕಿ ಏನು ಪ್ರಯೋಜನ ಹೇಳಿ. ಮಚ್ಚಾ ಅವ್ರು ಮತ್ತೆ ಬದುಕಿ ಬರ್ತಾರಾ? ಮತ್ತೆ ಬದುಕಿ ಬರೋಹಾಗಿದ್ರೆ ಹೇಳಿಬಿಡಿ. ಏನು ಬೇಕಾದ್ರೂ ಮಾಡ್ತೀನಿ. ಯಾರನ್ನು ಕೊಂದು ಯಾರ ಮೇಲೆ ಅಟ್ಯಾಕ್ ಮಾಡಿ, ಎಷ್ಟೇ ರಕ್ತ ಹರಿಸಿದ್ರೂ ಹೋದ ಪ್ರಾಣ ಬರುತ್ತಾ? ಬರೋ ಹಾಗಿದ್ರೆ ನನ್ನ ಪ್ರಾಣ ಕೊಡೊಕ್ಕೂ ರೆಡಿಯಾಗಿದ್ದೀನಿ. ಆವತ್ತು ನಮ್ಮ ಕಾರಲ್ಲಿ ಸ್ಕ್ರೂ, ಡ್ರೈವರ್ ಕೂಡ ಇರಲಿಲ್ಲ, ಮಂಜು ಅವ್ರಿಗೆ ಏಟು ಬೀಳಬಾರದು ಅಂತ ನಾನು ನುಗ್ಗಿ ಅಡ್ಡನಿಂತೆ. ಏನ್ ಮಾಡ್ತೀರಿ ಎದುರಿನಿಂದ ಮೆಟಡೋರ್ ಬಂದು ಗುದ್ದಿದ ಏಟಿಗೆ ನಮ್ಮ ಸಿಯಲೋ ಗಾಡಿ ಪಕ್ಕದ ಮೋರಿಗೆ ನುಗ್ಗಿದ್ದೇ ಅದರ ಮುಂದಿನ ಚಕ್ರವೊಂದು ಮೋರಿಯೊಳಕ್ಕೆ ಸಿಕ್ಕಿಬಿತ್ತು, ಏನೇ ಮಾಡಿದರೂ ಗಾಡೀನ ಎತ್ತೋಕೆ ಆಗಲೇ ಇಲ್ಲ.

ಯಾರೆಲ್ಲ ಮುನ್ನುಗ್ಗಿ ಅಟ್ಯಾಕ್ ಮಾಡ್ತಾ ಇದ್ರೋ ಅವರೆಲ್ಲ ಮಂಕಿ ಕ್ಯಾಪ್ ಹಾಕ್ಕೊಂಡಿದ್ರು. ಯಾರೋ ಹೇಳಿದ್ರು-ಧರಣೀನೇ ಮುಂದೆ ನಿಂತು ಲಾಂಗ್ ಬೀಸ್ದ ಅಂತ. ಬಾಡಿ ಬಿಲ್ಡರ್ ಯಶವಂತ ಅನ್ನೋನೂ ಇದ್ದ, ಬಸವ, ಹೇಮಂತ ಇತ್ಯಾದಿ ಯಾರ್‍ಯಾರೋ ಇದ್ರು ಅಂತ ಹುಡುಗರು ಹೇಳಿದ್ರು. ಬಂದು ಬಂದಿದ್ದೇ ಖಾರದ ಪುಡಿ ಎರಚಿಬಿಟ್ರು ನೋಡಿ. ಏನಾಗ್ತಿದೆ ಅನ್ನೋದೇ ಗೊತ್ತಾಗ್ಲಿಲ್ಲ, ಕಾರಿನಿಂದ ಹಾರಿದ್ದೇ ರಸ್ತೆಯಲ್ಲಿ ಬಿದ್ದಿದ್ದ ಇಟ್ಟಿಗೆಗಳನ್ನು ಎತ್ತಿಕೊಂಡು ಮಂಜು ಅವ್ರನ್ನ ಕತ್ತರಿಸುತ್ತಿದ್ದವರತ್ತ ತೂರುತ್ತಿದ್ದೆ. ಕಣ್ಣು ಬೇರೆ ಕಾಣಿಸ್ತಾ ಇರಲಿಲ್ಲ ನೋಡಿ. ನನಗೂ ಎಲ್ಲೆಂದರಲ್ಲಿ ಲಾಂಗ್ ಏಟುಗಳು ಬಿದ್ದು ರಕ್ತ ಸೋರುತ್ತಿತ್ತು, ನಾನೂ ಪ್ರಜ್ಞೆತಪ್ಪಿ ಬಿದ್ದುಬಿಟ್ಟೆ.


ಹಾಗಂತ ಮಂಜು ಒಬ್ಬರನ್ನೇ ಬಿಟ್ಟು ನಾವ್ಯಾರೂ ಓಡಿಹೋಗಲಿಲ್ಲ, ಕಣ್ಣಿಗೆ ಕಾರದ ಪುಡಿ ಬಿದ್ದಿದ್ದರಿಂದ ಫೈಟ್ ಮಾಡೋಕೆ ಆಗಲಿಲ್ಲ ಅನ್ನೋದನ್ನ ಬಿಟ್ರೆ ಕೊನೆತನಕ ನಾವೆಲ್ಲ ಅಷ್ಟೆಲ್ಲಾ ಪೆಟ್ಟು ತಿಂದೂ ಜೊತೆಗೇ ಇದ್ವಿ. ಏನ್ ಮಾಡ್ತೀರಿ.....? ಆ ಹೊತ್ತಿಗಾಗಲೇ ಕಾಲ ಮಿಂಚಿಹೋಗಿತ್ತು, ಸ್ವಾಮಿಯ ಬಲಗೈಯೇ ಕತ್ತರಿಸಿ ಬಿದ್ದಿತ್ತು, ಕತ್ತು ಸೀಳಿಹೋಗಿತ್ತು, ಉಳಿಬಾರ್‍ದು ಅಂತ ತಲೆಯನ್ನೇ ಸೀಳಿಹಾಕಿದ್ರು-

ಈ ಬಗ್ಗೆ ಡಿಟೇಲ್ ಆಗಿ ಇನ್ಯಾವತ್ತಾದ್ರೂ ಹೇಳ್ತೀನಿ. ಆದ್ರೆ ನನ್ನ ಈ ವಿಷಯದಲ್ಲಿ ಹೇಗೆಲ್ಲಾ ಸಿಕ್ಕಿಸಿಬಿಟ್ರು ಅನ್ನೋದು ಮಾತ್ರ ಯಾರಿಗೂ ಗೊತ್ತಿಲ್ಲ, ಆವತ್ತು ಮಂಜು ಅವ್ರು ಜೊತೆನೇ ನನ್ನ ಪ್ರಾಣಾನೂ ಹೋಗಿದ್ರೆ ಇಷ್ಟೆಲ್ಲ ತಾಪತ್ರಯಾನೇ ಇರುತ್ತಿರಲಿಲ್ಲ, ಎರಡು ತಿಂಗಳುಗಳ ಕಾಲ ಮಣಿಪಾಲ್ ಆಸ್ಪತ್ರೆಯಲ್ಲಿ ಮಲಗಿದ್ದೆ. ನನ್ನ ಕೈಯೇ ಸೀಳಿಹೋಗಿತ್ತು, ಅದಕ್ಕೆ ರಾಡು ಹಾಕಿದ್ದರಿಂದ ಕೈ ಎತ್ತುವುದು ಹಾಗಿರಲಿ, ನನ್ನ ಕೈಯಿಂದ ಬಾಚಣಿಗೆ ಎತ್ತುವುದಕ್ಕೂ

ಲಾಭ ಪಡೆದ ಯಾರಿಗೂ ಬೇಡದ ದುಷ್ಮನಿ ನನಗೇಕೆ?

ಕಂಬಿಯ ಮರೆಯಿಂದ ಕೋತಿರಾಮ ಹೇಳಿದ್ದು

ನಾನು ಗೋಪಾಲಯ್ಯನ್ನ ಕೊಲ್ತೀನಿ ಅಂತ ಯಾರಾದ್ರೂ ಹೇಳಿದ್ರೆ ಅದು ಬ್ಲ್ಯಾಕ್‌ಮೇಲ್ ಮಾಡಿ ಗೋಪಾಲಯ್ಯನಿಂದ ದುಡ್ಡು ವಸೂಲಿ ಮಾಡೋ ಕುತಂತ್ರವೇ ಹೊರತು ಮತ್ತೇನಿಲ್ಲ, ಒಂದಾನೊಂದು ಕಾಲಕ್ಕೆ ಗೋಪಾಲಯ್ಯ, ಮಚ್ಚಾ, ನಾನು ಎಲ್ಲಾ ಒಟ್ಟಿಗೇ ಇದ್ದವ್ರು. ನಡೀಬಾರದು ನಡೆದುಹೋಯ್ತು, ಅದನ್ನೆಲ್ಲ ಒಂದು ಕೆಟ್ಟ ಕನಸು ಅಂತ ನಾನೇ ಮರೆತು ಬಿಟ್ಟಿದ್ದೀನಿ. ದುಷ್ಮನಿ ಇದ್ದದ್ದು ಮಚ್ಚಾ ಅವ್ರು ಮತ್ತು ಗೋಪಾಲಯ್ಯನವರ ಮಧ್ಯೆಯೇ ಹೊರತು ಅವರು ನನಗೇನೂ ಅನ್ಯಾಯ ಮಾಡಿಲ್ಲ.



ಅಷ್ಟಕ್ಕೂ ಮಚ್ಚ ಅವರಿಂದ ಲಾಭ ಪಡೆದು ಉದ್ಧಾರವಾದ ಯಾರಿಗೂ ಬೇಡದ ಕೊಲೆಯ ಸೇಡಾಗಲಿ ಗ್ಯಾಂಗ್ ದುಷ್ಮನಿಯಾಗಲಿ ನನಗೇಕೆ ಬೇಕು? ಒಬ್ಬ ಪ್ರಾಮಾಣಿಕ ಸ್ನೇಹಿತನಾಗಿ ಮಚ್ಚ ಅವರ ಕೇಬಲನ್ನು ಮಾರಿಸಿ ಅದರ ದುಡ್ಡಿನಲ್ಲಿ 8 ಲಕ್ಷವನ್ನು ಅವರ ಪತ್ನಿಗೆ ಕೊಡಿಸಿದ್ದೇನೆ. ಸೋಲೂರು ತೋಟವನ್ನು ಅವರ ಪತ್ನಿಯ ಹೆಸರಿಗೆ ಬರುವಂತೆ ಹೆಣಗಿದ್ದೇನೆ. ನನ್ನ ಪ್ರಯತ್ನದ ಫಲವಾಗೇ ಅವರ ಪತ್ನಿ ಮತ್ತು ಅವರ ಸಂಬಂಧಿಕರಿಗೆಲ್ಲ ಆಸ್ತಿ ದಕ್ಕುವಂತಾಯ್ತು, ಮಿಕ್ಕಂತೆ ಜೊತೆಗಿದ್ದ ಹುಡುಗರು ಮತ್ತೆ ಹಾದಿತಪ್ಪಿ ರೌಡಿಗಳಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯೂ ನನ್ನ ಮೇಲಿದೆ.

ಇದನ್ನೆಲ್ಲ ಬಿಟ್ಟು ಗೋಪಾಲಯ್ಯ, ರಾಮಣ್ಣ, ಮುಲಾಮ-ಹೀಗೆ ಯಾರ್‍ಯಾರದೋ ಮೇಲೆ ಫೈಟಿಂಗ್ ಮಾಡಿಕೊಂಡಿರಲು ನನಗೆ ಆಸಕ್ತಿಯೂ ಇಲ್ಲ ಸರಿಯೂ ಅಲ್ಲ. ಏಕೆಂದರೆ ನಾವು ಹಿಡಿದ ಹಾದಿಯೇ ಸರಿಯಿರಲಿಲ್ಲ ಎಂಬ ಸತ್ಯ ಈಗ ನನಗೇ ಅರ್ಥವಾಗಿದೆ. ಕಾಲ ಸಾಕಷ್ಟು ಪಾಠ ಕಲಿಸಿದೆ. ಯಾರಿಗಾಗಿ ಮಚ್ಚ ರೌಡಿ ಎನ್ನಿಸಿಕೊಳ್ಳಬೇಕಾಯಿತೋ, ಗೋಪಾಲಯ್ಯನವರ ವಿರೋಧ ಕಟ್ಟಿಕೊಳ್ಳಬೇಕಾಯಿತೋ ಅವರೇ ಈಗ ಗೋಪಾಲಯ್ಯರ ಜೊತೆ ಚೆನ್ನಾಗಿದ್ದಾರೆ. ಯಾರಿಗಾಗಿ ಮಚ್ಚ ಕಡಬಗೆರೆ ರಾಮಣ್ಣನನ್ನು ದೂರ ಮಾಡಿಕೊಳ್ಳಬೇಕಾಯಿತೋ ಈಗ ಅವರೇ ಕಡಬಗೆರೆಯವರಿಗೆ ಆಪ್ತರಾಗಿದ್ದಾರೆ. ಯಾರಿಗಾಗಿ ಮಚ್ಚ ಮುಲಾಮನ ಮೇಲೆ ಜಿದ್ದಿಗೆ ನಿಂತಿದ್ದರೋ ಅವರೇ ಈಗ ರಾಜಿ ಮಾಡಿಕೊಂಡು ಚೆನ್ನಾಗಿದ್ದಾರೆ.

ಇಷ್ಟು ಇದ್ದಾಗ್ಯೂ ಸಂಬಂಧವೇ ಇಲ್ಲದ ನಾನು ಯಾರಿಗಾಗಿ ಏತಕ್ಕಾಗಿ ಬಡಿದಾಡಬೇಕು? ಅಷ್ಟಕ್ಕೂ ನನಗೂ ಮತ್ತು ಗೋಪಾಲಯ್ಯ, ರಾಮಣ್ಣರ ಮಧ್ಯೆ ಯಾವುದೇ ದುಷ್ಮನಿಯಿಲ್ಲ, ಅವರಿಂದ ನನಗೆ ಏನೇನೂ ಅನ್ಯಾಯವಾಗಿಲ್ಲ, ನಾನೂ ಅವರಿಗೆ ಯಾವುದೇ ಕೆಡುಕುಂಟುಮಾಡಿಲ್ಲ, ನನ್ನ ಪ್ರಾಣರಕ್ಷಣೆಗೋ, ಸುರಕ್ಷತೆಗೋ ಒಂದಷ್ಟು ಸ್ನೇಹಿತರನ್ನು ಜೊತೆಗಿಟ್ಟುಕೊಂಡಿದ್ದೇನೆಯೇ ಹೊರತು ರೌಡಿ ಎನ್ನಿಸಿಕೊಳ್ಳುವ ಹುಚ್ಚು ನನಗಿಲ್ಲ, ಇನ್ನೇನು ನನ್ನ ಮೇಲಿರುವ ಎಲ್ಲಾ ಕೇಸುಗಳೂ ಇತ್ಯರ್ಥವಾಗೋ ಹಂತದಲ್ಲಿದೆ. ನಾನು ನಿರಪರಾಧಿ ಅಂತ ಇವತ್ತಲ್ಲಾ ನಾಳೆ ನ್ಯಾಯಾಲಯ ಎತ್ತಿ ಹಿಡಿದೇ ತೀರುತ್ತದೆ.

ಹಾಗೊಮ್ಮೆ ನಾನೇನಾದರೂ ಜೈಲಿಂದ ಹೊರಬಿದ್ದನೆಂದರೆ ಮತ್ತೆಂದೂ ಬೆಂಗಳೂರಿಗೆ ಕಾಲಿಡುವುದಿಲ್ಲ, ಯಾರೆಲ್ಲ ನನ್ನಿಂದ ಅಪಾಯವಿದೆ ಎಂದು ಭಾವಿಸಿದ್ದಾರೋ. ನಾನೇ ಅಂಥವರನ್ನು ಕಂಡು ನನ್ನ ಪ್ರಾಮಾಣಿಕತೆಯನ್ನು ವಿವರಿಸುತ್ತೇನೆ. ದುಷ್ಮನಿ ನನಗೆ ಬೇಕಾಗಿಲ್ಲ, ನಾನೇ ಆತ್ಮಪರಿವರ್ತನೆ ಮಾಡಿಕೊಂಡಿದ್ದೇನೆ. ಹಾಗೊಮ್ಮೆ ಪೊಲೀಸ್ ಅಧಿಕಾರಿಗಳಿಗೇ ನನ್ನ ಬಗ್ಗೆ ಅನುಮಾನವಿದ್ದರೆ ಅವರು ಕರೆದಾಕ್ಷಣವೇ ಹೋಗಿ ನನ್ನಲ್ಲಿರುವ ಎಲ್ಲಾ ಮಾಹಿತಿಯನ್ನೂ ಬಿಚ್ಚಿಡುತ್ತೇನೆ. ಅದು ಬಿಟ್ಟು ಯಾರದೋ ಮರ್ಜಿಗೆ ಬಿದ್ದು ಅನ್ಯಾಯವಾಗಿ ನನ್ನನ್ನು ಮುಗಿಸಲು ಪೊಲೀಸರು ಪ್ರಯತ್ನಿಸಿದ್ದೇ ಆದರೆ ಅವರಿಗೂ ಸುಪಾರಿ ಕೊಲೆಗಡುಕರಿಗೂ ವ್ಯತ್ಯಾಸವಿರುವುದಿಲ್ಲ, ಈ ಬಗ್ಗೆ ಪೊಲೀಸ್ ಕಮೀಷನರ್ ಮಿರ್ಜಿ ಸಾಹೇಬರನ್ನೇ ಕಂಡು ವಸ್ತುಸ್ಥಿತಿಯನ್ನು ವಿವರಿಸಬೇಕೆಂದಿದ್ದೇನೆ. ಹಾಗೇ ಜಂಟಿ ಕಮೀಷನರ್ ಸುನೀಲ್ ಕುಮಾರ್ ಸಾಹೇಬರು, ದಯಾನಂದ್‌ರವರು, ಡಿಸಿಪಿ ಕೃಷ್ಣಂರಾಜು, ಸಿಸಿಬಿಯ ಎಸಿಪಿ ಚಲಪತಿಯವರನ್ನು, ಬೆಂಗಳೂರು ಗ್ರಾಮಾಂತರ ಅಡಿಷನಲ್ ಎಸ್ಪಿ ನಾಗರಾಜು ಎಲ್ಲರನ್ನೂ ಕಂಡು ನನ್ನನ್ನು ನನ್ನ ಪಾಡಿಗೆ ಬದುಕಲು ಬಿಡುವಂತೆ ಪ್ರಾರ್ಥಿಸುತ್ತೇನೆ.

ನನಗೆ ದುಷ್ಮನಿಯೂ ಬೇಕಿಲ್ಲ, ರೌಡಿ ಎನ್ನಿಸಿಕೊಳ್ಳುವುದೂ ಸರಿಯಲ್ಲ, ನನಗೀಗಾಗಲೇ ನಮ್ಮ ಮನೆಯವರು ಮದುವೆ ಬೇರೆ ಗೊತ್ತು ಮಾಡಿದ್ದಾರೆ. ಮತ್ತೆ ಬೆಂಗಳೂರಿಗೆ ಕಾಲಿಡುವ ಆಸಕ್ತಿಯೂ ಉಳಿದಿಲ್ಲ, ಒಬ್ಬ ನಿರಪರಾಧಿಗೆ ತನ್ನ ತಪ್ಪನ್ನು ಅರಿತುಕೊಂಡು ಪಶ್ಚಾತ್ತಾಪ ಮತ್ತು ಪ್ರಾಯಶ್ಚಿತ್ತ ಬದುಕುವ ಅವಕಾಶವನ್ನು ಪೊಲೀಸರಾಗಲಿ, ಸರ್ಕಾರವಾಗಲಿ ಕಲ್ಪಿಸಲಾರದಷ್ಟು ಕಟುಕರೇನಲ್ಲ.....!

ಇದು ಕೋತಿರಾಮನ ಎದೆಯಾಳದಿಂದ ಬಂದ ಮಾತುಗಳು. ಬಹುಶಃ ಸುಪಾರಿ ಎನ್‌ಕೌಂಟರ್‌ನ ವಾಸನೆ ಆತನಿಗೂ ಹತ್ತಿರಬಹುದೆ? ಅಥವಾ ಏಳು ವರ್ಷಗಳ ಸುದೀರ್ಘ ಜೈಲುವಾಸ ಆತನನ್ನು ತಿದ್ದಿ ಬದಲಾಯಿಸಿದೆಯೇ?

'ಹೊನ್ನಳ್ಳಿ ಕೆ ಹಾಥ್ ಯಡ್ಡಿ ಕೆ ಸಾಥ್'

ಇತ್ತೀಚೆಗೆ ಮಾಜಿ ಸಚಿವ ಮತ್ತು ಅಂಜುಮನ್ ಸಂಸ್ಥೆಯ ಅಧ್ಯಕ್ಷ ಜಬ್ಬಾರ್‌ಖಾನ್ ಹೊನ್ನಳ್ಳಿ ಬಗ್ಗೆ ಹುಬ್ಬಳ್ಳಿಯ ಮುಸ್ಲಿಂ ಸಮುದಾಯದಲ್ಲಿ ಒಂದು ಮಾತು ಚಾಲ್ತಿಗೆ ಬಂದಿತ್ತು. ಅದೇನೆಂದರೆ "ಹೊನ್ನಳ್ಳಿ ಕೆ ಹಾಥ್ ಯಡ್ಡಿ ಕೆ ಸಾಥ್!"

ಅಂದರೆ ಕಾಂಗ್ರೆಸ್‌ನ ಕೈ ಪಕ್ಷದೊಂದಿಗಿದ್ದ ಹೊನ್ನಳ್ಳಿ ಸದ್ಯದಲ್ಲೇ ಅದಕ್ಕೆ ಗುಡ್‌ಬೈ ಹೇಳಿ ಬಿಜೆಪಿಯ ಮಾಜಿ ಲಿಡ್ಡಿ ನಾಯಕ ಯಡಿಯೂರಪ್ಪನೊಂದಿಗೆ ಕೈ ಜೋಡಿಸುವ ಮುನ್ಸೂಚನೆ ಆ ಸಮುದಾಯಕ್ಕೆ ದೊರೆತಿತ್ತು.


ರಾಜಕೀಯ ಚದುರಂಗದಾಟದಲ್ಲಿ ತನ್ನ ಎದುರಾಳಿಯನ್ನು ದಿಕ್ಕುತಪ್ಪಿಸುವಲ್ಲಿ ಹೊನ್ನಳ್ಳಿ ಎತ್ತಿದ ಕೈ. "ನನಗೆ ವಯಸ್ಸಾಯಿತು. ಎಲ್ಲಾ ಅಧಿಕಾರ ಅನುಭವಿಸಿದ್ದೂ ಆಯಿತು" ಎಂದು ಹೇಳುತ್ತಾ ದವಾಖಾನೆ ಸೇರಿದ್ದ ಹೊನ್ನಳ್ಳಿ ಅಲ್ಲಿಂದಲೇ ಕೆಲವು ತಿಂಗಳುಗಳ ಹಿಂದೆ ನಡೆದ ಅಂಜುಮನ್ ಸಂಸ್ಥೆಯ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದುಬಂದಿದ್ದರು. ಆ ಮೂಲಕ ತನ್ನ ಆಜನ್ಮಶತ್ರು ಎಂದೇ ಹೊನ್ನಳ್ಳಿ ಪರಿಗಣಿಸಿರುವ, ತನ್ನದೇ ಕಾಂಗ್ರೆಸ್ ಪಕ್ಷದ ಮಾಜಿ ಸಚಿವ ಅಬ್ದುಲ್ ಹಕೀಮ್ ಹಿಂಡಸಗೇರಿಗೆ ಮರ್ಮಾಘಾತವನ್ನೇ ನೀಡಿದ್ದರು. ಇಂತಹ ತಂತ್ರಗಳ ಹೊನ್ನಳ್ಳಿ ಈಗ ಕುತಂತ್ರಗಳ ಸರದಾರ ಯಡ್ಡಿಯ ಜೊತೆಗೂಡಿದ್ದಾರೆ. ಈ ಇಬ್ಬರಲ್ಲೂ ಬಹಳಷ್ಟು ಸಾಮ್ಯತೆಗಳಿವೆ.

ಭ್ರಷ್ಟ ಯಡ್ಡಿಗೆ ಮುಖ್ಯಮಂತ್ರಿ ಪಟ್ಟ ತಪ್ಪಿದಂತೆ ಹೊನ್ನಳ್ಳಿಗೆ ಹುಬ್ಬಳ್ಳಿ- ಧಾರವಾಡ ನಗರದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷಗಿರಿ ತಪ್ಪಿಹೋಗಿತ್ತು. ತನ್ನ ಪರಮವೈರಿ ಹಿಂಡಸಗೇರಿಯೇ ತನ್ನ ನಗರ ಜಿಲ್ಲಾ ಅಧ್ಯಕ್ಷಗಿರಿ ಪಟ್ಟ ತೆಗೆದುಕೊಂಡದ್ದು ಹೊನ್ನಳ್ಳಿಗೆ ಸಹಿಸಲಾಗಲಿಲ್ಲ. ಅದಕ್ಕಾಗಿಯೇ ಅಂಜುಮನ್ ಸಂಸ್ಥೆಯ ಚುನಾವಣೆಯಲ್ಲಿ ಹಿಂಡಸಗೇರಿ ಹಾಗು ಅವನ ಗುಂಪನ್ನು ಧೂಳೀಪಟ ಮಾಡಿ ಸೇಡು ತೀರಿಸಿಕೊಂಡಿದ್ದರು ಹೊನ್ನಳ್ಳಿ.

ಹುಬ್ಬಳ್ಳಿ ಶಹರ ರಾಜಕೀಯದಲ್ಲಿ ಮುಸ್ಲಿಂ ಜನಾಂಗದ ಪಾತ್ರ ಮುಖ್ಯ ಮಾತ್ರವಲ್ಲ, ಚುನಾವಣೆಯ ಸಂದರ್ಭದಲ್ಲಿ ಇಲ್ಲಿರುವ 50,000 ಮುಸ್ಲಿಂ ಮತಗಳು ನಿರ್ಣಾಯಕ ಪಾತ್ರ ವಹಿಸುತ್ತದೆ. ಅದಕ್ಕಾಗಿಯೇ ಆ ಸಮುದಾಯವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲೆಂದು ಮುಸ್ಲಿಮ್ ನಾಯಕರಲ್ಲಿ ತೀವ್ರವಾದ ಪೈಪೋಟಿ ನಡೆಯುತ್ತದೆ. ಮುಸ್ಲಿಮ್ ಸಮುದಾಯದ ದೊಡ್ಡ ಸಂಸ್ಥೆಗಳಾದ 23 ಶಿಕ್ಷಣ ಕೇಂದ್ರಗಳನ್ನು ನಡೆಸುವ ಅಂಜುಮನ್ ಮತ್ತು ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನೋಡಿಕೊಳ್ಳುವ ಆಜಾದ್ ಬ್ಯಾಂಕ್ ಚುನಾವಣೆಗಳು ಈ ಕಾರಣಕ್ಕೇ ರಂಗೇರುತ್ತವೆ.

ಹುಬ್ಬಳ್ಳಿ ಶಹರದಲ್ಲಿ ಮುಸ್ಲಿಮ್ ಸಮುದಾಯದ ಪ್ರಮುಖ ನಾಯಕರೆಂದರೆ ಇದೇ ಹೊನ್ನಳ್ಳಿ ಮತ್ತು ಹಿಂಡಸಗೇರಿ. ಆದರೆ ಇವರಿಬ್ಬರದ್ದು ಹಾವುಮುಂಗುಸಿ ಸಂಬಂಧ. ಆದರೂ ಇವರಿಬ್ಬರೂ ಕಾಂಗ್ರೆಸ್ ಪಕ್ಷದಲ್ಲೇ ಇದ್ದರು. ಆದರೀಗ ಹೊನ್ನಳ್ಳಿಯನ್ನು ತನ್ನ ಹೊಸ ಪಕ್ಷದತ್ತ ಸೆಳೆಯುವಲ್ಲಿ ಯಶಸ್ವಿ ಆಗಿರುವ ಯಡ್ಡಿ ಆ ಮೂಲಕ ಇಲ್ಲಿರುವ ಮುಸ್ಲಿಮರ ಮತ ಬ್ಯಾಂಕನ್ನು ಒಡೆಯಲು ಕೈಯಿಟ್ಟಿದ್ದಾರೆ.

ಯಡ್ಡಿಯ ಈ ತಂತ್ರದ ಹಿಂದೆ ಇನ್ನೊಂದು ರಾಜಕೀಯ



ದ್ವೇಷದ ಲೆಕ್ಕಾಚಾರವೂ ಇದೆ. ಇಲ್ಲಿ ಮುಸಲ್ಮಾನರ ಅರ್ಧ ಲಕ್ಷದಷ್ಟು ಮತಗಳಿರುವುದರಿಂದ ಮುಂದಿನ ಚುನಾವಣೆಯಲ್ಲಿ ತನ್ನ ಹೊಸ ಪಕ್ಷದ ಅಭ್ಯರ್ಥಿಯಾಗಿ ಹೊನ್ನಳ್ಳಿಯನ್ನು ನಿಲ್ಲಿಸಿ ಬಿಜೆಪಿಯ ಜಗದೀಶ್ ಶೆಟ್ಟರ್ ಅವರನ್ನು ಸೋಲಿಸುವುದು ಯಡ್ಡಿಯ ಗುರಿ.

ಕಾಂಗ್ರೆಸ್ ವಿರುದ್ಧ ಹೊನ್ನಳ್ಳಿಯ ಕಿಡಿ


ಕಳೆದ ಒಂದು ವರ್ಷದಿಂದ ಕಾಂಗ್ರೆಸ್ ಪಕ್ಷ ತನಗೆ ಅನ್ಯಾಯ ಮಾಡಿದೆ ಎಂದು ಅವಕಾಶ ಸಿಕ್ಕಾಗಲೆಲ್ಲ ದೂರುತ್ತಿದ್ದ ಹೊನ್ನಳ್ಳಿ ತನ್ನನ್ನು ಕಾಂಗ್ರೆಸ್ ಪಕ್ಷವೇ ಹೊರದೂಡುವಂತೆ ಮಾಡಲು ಹಲವರು ಕಸರತ್ತುಗಳನ್ನು ಪ್ರಾರಂಭಿಸಿದ್ದರು. ಇದು ಒಂದು ರೀತಿಯಲ್ಲಿ ಯಡ್ಡಿ ಕೂಡ ಇತ್ತೀಚೆಗೆ ಮಾಡಿಕೊಂಡು ಬಂದಿರುವಂತಹ ಹುನ್ನಾರವೇ. ತಮ್ಮ ಮಾತೃ ಪಕ್ಷ ತಮ್ಮನ್ನು ಉಚ್ಚಾಟಿಸಿದರೆ 'ಅನ್ಯಾಯ ಅನ್ಯಾಯ' ಎಂದು ಬೊಬ್ಬಿಡುತ್ತಾ ಜನರ ಸಿಂಪಥಿಯನ್ನು ಗಳಿಸುವುದು.

ಆ ನಿಟ್ಟಿನಲ್ಲಿ ಹೊನ್ನಳ್ಳಿ ಅವಿಭಾಜಿತ ಧಾರವಾಡ ಜಿಲ್ಲೆ - ಅಂದರೆ ಸದ್ಯದ ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ - 'ನ್ಯಾ. ಸಾಚಾರ್ ವರದಿಯನ್ನು ಅನುಷ್ಠಾನಗೊಳಿಸಿ, ಮುಸ್ಲಿಮರನ್ನು ರಕ್ಷಿಸಿ' ಎಂಬ ಆಂದೋಲನವನ್ನು ನಡೆಸಿದ್ದರು. ತಾನು ಕಾಂಗ್ರೆಸ್ ಪಕ್ಷದಲ್ಲಿದ್ದರೂ, ಕೇಂದ್ರದಲ್ಲಿ ತನ್ನದೇ ಪಕ್ಷ ಅಧಿಕಾರದಲ್ಲಿದ್ದರೂ ಸಾಚಾರ್ ವರದಿಯನ್ನು ಅನುಷ್ಠಾನಗೊಳಿಸಿ ಎಂದು ಕೂಗಾಡುವುದರ ಹಿಂದೆ ಹೊನ್ನಳ್ಳಿಯ ಹಲವಾರು ತರ್ಕಗಳು ಅಡಗಿದ್ದವು. ಮೊದಲನೆಯದಾಗಿ ತಾನು ಮುಸಲ್ಮಾನರ ರಕ್ಷಕನಂತೆ ಪೋಸು ಕೊಡುವುದು, ಎರಡನೆಯದಾಗಿ ತನ್ನ ವೈರಿ ಹಿಂಡಸಗೇರಿಯನ್ನು ಮುಸಲ್ಮಾನರ ಹಿತಾಸಕ್ತಿಗಳ ದ್ರೋಹಿ ಎಂಬಂತೆ ಬಿಂಬಿಸುವುದು ಮತ್ತು ಮೂರನೆಯದಾಗಿ ಹಿಂಡಸಗೇರಿಗೆ ಕಾಂಗ್ರೆಸ್ ನಾಯಕ ಎಚ್.ಕೆ.ಪಾಟೀಲರ ಬೆಂಬಲವಿರುವುದರಿಂದ ಪಾಟೀಲರ ವಿರುದ್ಧವೂ ಸೆಡ್ಡು ಹೊಡೆಯುವುದಾಗಿತ್ತು. ಇದೆಲ್ಲದರ ಜೊತೆಗೆ ಕಾಂಗ್ರೆಸ್ ತನ್ನನ್ನು ಉಚ್ಚಾಟಿಸಿದರೆ ಜನರ ಅನುಕಂಪ ಗಳಿಸುವ ಹುನ್ನಾರವಂತೂ ಇದ್ದೇ ಇತ್ತು.

ಒಂದು ರಾಜಕೀಯ ಪಕ್ಷದ ಸದಸ್ಯತ್ವವನ್ನು ಹೊಂದಿದ್ದರೂ ಅದೇ ಪಕ್ಷದಲ್ಲಿದ್ದುಕೊಂಡು ಅದರ ನಾಯಕರನ್ನು ಹೀಯಾಳಿಸುವುದು, ಅವರ ವಿರುದ್ಧ ಕೂಗಾಡುವುದು ಯಡ್ಡಿ ಹಾಗೂ ಹೊನ್ನಳ್ಳಿ ತರಹದವರಿಗೆ ಮಾತ್ರ ಸಾಧ್ಯ ಬಿಡಿ! ಈಗ ಈ ಭಯಂಕರ ಜೋಡಿ ತಮ್ಮತಮ್ಮ ಅವಕಾಶವಾದಿ ರಾಜಕಾರಣಕ್ಕೆ ಪರಸ್ಪರ ಅಪ್ಪಿಕೊಳ್ಳುತ್ತಿದೆ!! ಇತ್ತ ಶೆಟ್ಟರ್ ಮತ್ತು ಅನಂತಕುಮಾರ್ ಗ್ಯಾಂಗಿಗೆ ಯಡ್ಡಿ ಟಾಂಗು ಕೊಡಲು ಹವಣಿಸುತ್ತಿದ್ದರೆ ಅತ್ತ ಹೊನ್ನಳ್ಳಿ ಹಿಂಡಸ ಗೇರಿ ಮತ್ತು ಪಾಟೀಲರಿಗೆ ಟಾಂಗ್ ಕೊಡಲು ನೋಡು ತ್ತಿದ್ದಾರೆ.

ಯಡಿಯೂರಪ್ಪ ಬಿಜೆಪಿಯಲ್ಲಿ ಬೆಳೆದಿದ್ದು ಸಂಘ ಪರಿವಾರದ ನೆರವಿನಿಂದ. ಹಾಗೆಯೇ ಹೊನ್ನಳ್ಳಿ ಮುಸ್ಲಿಮ್ ಸಮುದಾಯದ ನಾಯಕನಾಗಿ ರೂಪಗೊಂಡಿದ್ದು ಕಾಂಗ್ರೆಸ್ ಪಕ್ಷದ ನೆರವಿನೊಂದಿಗೆ. ಯಡ್ಡಿ ಮುಖ್ಯಮಂತ್ರಿ ಆಗಿದ್ದು, ಹೊನ್ನಳ್ಳಿಗೆ ಸಚಿವಗಿರಿ ಲಭಿಸಿದ್ದು ತಮ್ಮ ತಮ್ಮ ಪಕ್ಷಗಳ ಶಕ್ತಿಯಿಂದಲೇ ಹೊರತು ತಮ್ಮ ಜಾತಿ ಅಥವಾ ಸಮುದಾಯಗಳಿಂದಲ್ಲ. ಈ ಸತ್ಯವನ್ನು ಅವರಿಬ್ಬರು ಮಾತ್ರವಲ್ಲ ಜನರೂ ನೆನಪಿಟ್ಟುಕೊಂಡರೆ ಒಳ್ಳೆಯದು.

ಯಡ್ಡಿ ಮತ್ತು ಹೊನ್ನಳ್ಳಿಯ ಜೊತೆಗೂಡುವಿಕೆ ಯಿಂದ ಜಿಲ್ಲಾ ಬಿಜೆಪಿಯಲ್ಲಿ ಮಾತ್ರವಲ್ಲ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳೂ ತಲ್ಲಣಗೊಂಡಿರುವುದು ಸುಳ್ಳೇನಲ್ಲ. ಈಗ ಕಾಂಗ್ರೆಸ್ ಪಕ್ಷದಲ್ಲೇ ಹೊನ್ನಳ್ಳಿಯನ್ನು ಉಳಿಸಿಕೊಳ್ಳಲು ಹಲವರು ಹೆಣಗಾಡುತ್ತಿದ್ದಾರೆ. ಕೆಪಿಸಿಸಿ ಕಾರ್ಯದರ್ಶಿ ಮತ್ತು ಹುಬ್ಬಳ್ಳಿ-ಧಾರವಾಡ ಪೂರ್ವ ಕ್ಷೇತ್ರದ ಅಭ್ಯರ್ಥಿ ರೇಸ್‌ನಲ್ಲಿರುವ ಪ್ರಸಾದ ಅಬ್ಬಯ್ಯ, ರಾಜಶೇಖರ ಮೆಣಸಿನಕಾಯಿ, ಅನ್ವರ್ ಮುದ್ಗೋಳ, ಪಾಲಿಕೆಯ ವಿರೋಧ ಪಕ್ಷದ ನಾಯಕ ದಶರಥ ವಾಲಿಯಂತವರು ಇಂತಹ ಯತ್ನದಲ್ಲಿ ತೊಡಗಿದ್ದಾರೆ. ಆದರೆ



ಹಿಂಡಸಗೇರಿ


ಯಾವುದೇ ಕಾರಣಕ್ಕೂ ಹೊನ್ನಳ್ಳಿ ಕಾಂಗ್ರೆಸ್ ಪಕ್ಷಕ್ಕೆ ಹಿಂದಿರುಗಬಾರದೆಂದು ಅವರ ಹಿಂಬಾಲಕರಾದ ಶಂಕ್ರಣ್ಣ ಬಿಜವಾಡ, ಗಣೇಶ ಜಗರಗುಂಟ, ದೊರೆರಾಜ ಮಣಿಕುಂಟ್ಲ, ಈಸೂಫ್ ಬಳ್ಳಾರಿ, ಅಂಜುಮನ್ ಸಂಸ್ಥೆಯ ಅಶರಫ್ ಅಲಿ, ಮೊಹಮ್ಮದ್ ಕೊಳ್ಳೂರು, ಆರೀಫ್ ಮುಜಾವರ, ಪಹಾಜ ಮುಲ್ಲಾ, ಅಲ್ತಾಫ್ ಹಳ್ಳೂರ, ಕಮಾನಗಾರ್, ಈಕಬಾಲ್ ಮುಲ್ಲಾ ತರಹದವರು ಒತ್ತಾಯಿಸುತ್ತಿದ್ದಾರೆ. ವಿಚಿತ್ರವೆಂದರೆ ಇವರೆಲ್ಲ ಈ ಹಿಂದೆ ಮಾಜಿ ಸಚಿವ ಹಿಂಡಸಗೇರಿಯ ಜೊತೆ ಇದ್ದವರು. ಎರಡು ಬಾರಿ ಶಾಸಕ, ಒಂದು ಬಾರಿ ಪರಿಷತ್ ಸದಸ್ಯ ಮಾಜಿ ಸಚಿವ ಹಾಗೂ ಹಾಲಿ ಅಂಜುಮನ್ ಸಂಸ್ಥೆಯ ಅಧ್ಯಕ್ಷನಾಗಿರುವ ಹೊನ್ನಳ್ಳಿ "ಕಾಂಗ್ರೆಸ್ ಪಕ್ಷ ನನಗೆ ಸೂಕ್ತ ಸ್ಥಾನಮಾನ ನೀಡಲಿಲ್ಲ. ಬದಲಿಗೆ ಜಿಲ್ಲೆಯ ಹಾದಿಬೀದಿಯಲ್ಲಿ ಓಡಾಡುತ್ತಿದ್ದವರಿಗೆ ಸ್ಥಾನಗಳನ್ನು ಕೊಟ್ಟಿತು. ಇದೇ ಜಿಲ್ಲೆಯ ಎಂಟು ಜನರಿಗೆ ರಾಜ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿ ಹುದ್ದೆ ನೀಡಿದೆ" ಎಂದು ಎಲ್ಲರ ಮುಂದೆ ಹಲವಾರು ಬಾರಿ ಬಹಿರಂಗವಾಗಿಯೇ ಅವಲತ್ತುಕೊಂಡಿದ್ದು ಉಂಟು. ಈಗ ಆತ ಯಡ್ಡಿಗೆ ಸಾಥ್ ನೀಡಲು ಮುಂದಾಗಿದ್ದಾರೆ.

ಅದೇನೇ ಇರಲಿ. ಈ ಭಾಗದ ಕಾಂಗ್ರೆಸ್ ರಾಜಕೀಯದಲ್ಲಿ ಡಿ.ಕೆ.ಶಿವಕುಮಾರ್ ಕೈಯಾಡಿಸಿದ ದಿನದಿಂದಲೂ ಇಲ್ಲಿ ಡಿ.ಕೆ. ವರ್ಸಸ್ ಎಚ್ಕೆ ಎಂಬ ಜಿದ್ದಾಜಿದ್ದಿ ಶುರುವಾಗಿತ್ತು. ಅದಕ್ಕೀಗ ಹೊನ್ನಳ್ಳಿ ವರ್ಸಸ್ ಹಿಂಡಸಗೇರಿ ಎಂಬ ಮತ್ತೊಂದು ಆಯಾಮ ಸೇರಿಕೊಂಡಿದೆ. ಕಾಂಗ್ರೆಸ್ ಪಕ್ಷದಲ್ಲೇ ಇಂತಹ ಗುಂಪುಗಾರಿಕೆ ಇರುವುದರಿಂದ ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ ಕಾಂಗ್ರೆಸ್ ಮಕಾಡೆ ಮಲಗಿದೆ...

● ಹುಬ್ಬಳ್ಳಿಯಾಂವ

ಆಗುತ್ತಿರಲಿಲ್ಲ. ನನ್ನ ಪ್ಯಾಂಟಿನ ಜಿಪ್ಪು ಕೂಡ ಬೇರೆ ಯಾರೋ ಹಾಕಬೇಕಿತ್ತು. ತುತ್ತು ಅನ್ನ ಬಾಯಿಗಿಡುವುದಕ್ಕೂ, ನೀರು ಕುಡಿಯುವುದಕ್ಕೂ, ಕೂತರೆ ಏಳುವುದಕ್ಕೂ, ಎದ್ದರೆ ಕೂರುವುದಕ್ಕೂ ನಾನು ಬೇರೆ ಯಾರನ್ನೋ ಅವಲಂಬಿಸಬೇಕಿತ್ತು.

ಇಂಥಾ ಸ್ಥಿತಿಯಲ್ಲಿ ಮಂಜು ಅವ್ರ ಮೊದಲ ತಿಥಿ ಬಂತು ನೋಡಿ. ಮಾಗಡಿಯ ಸೋಲೂರು ಬಳಿ ಮೂರೆಕರೆಯ ತೋಟವೊಂದನ್ನು ಮಂಜು ಖರೀದಿಸಿದ್ರು. ಅಲ್ಲೇ ಅವರ ಅಂತ್ಯಕ್ರಿಯೆಯನ್ನೂ ಮಾಡಿದ್ದರು. ನಾನು ಸುಮ್ಮನಿರಲಾರದೇ ಅವರ ಮೊದಲ ತಿಥಿಗೆಂದು ಹಾಲು-ತುಪ್ಪ ಬಿಡೋದಕ್ಕೆ ಅಂತ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿಬಂದೆ. ಅದೇ ನಾನು ಮಾಡಿದ ದೊಡ್ಡ ತಪ್ಪಾಗಿತ್ತು. ತಿಥಿಗೆಂದು ಬಂದಿದ್ದ ಕೆಲ ಹುಡುಗರು ಏಕಾಏಕಿ ಅಗ್ರಹಾರದ ಮಂಡ್ಯ ಕೃಷ್ಣ ಅನ್ನೋ ಮುಲಾಮನ ಸ್ನೇಹಿತನ ಮನೆಗೆ ನುಗ್ಗಿದ್ರೇ ಆತನನ್ನು ಚುಚ್ಚಿ ಕೊಂದು ಬಿಟ್ರು.



ಗೋಪಾಲಯ್ಯ

ಆ ಘಟನೆಗೂ ನನಗೂ ಏನೇನೂ ಸಂಬಂಧವಿರಲಿಲ್ಲ. ನಾನು ಸಮಾಧಿಗೆ ನಮಸ್ಕಾರ ಮಾಡಿದ್ದೇ ಗಾಲಿ ಕುರ್ಚಿಯಲ್ಲೇ ಹೋಗಿ ಮಲಗಿಬಿಟ್ಟಿದ್ದೆ. ಈ ಹೊತ್ತಿಗಾಗಲೇ ಮಣಿಪಾಲ್ ಆಸ್ಪತ್ರೆಯಲ್ಲಿ ನನ್ನ ಚಿಕಿತ್ಸೆಯ ಬಿಲ್ಲಿನ ಮೊತ್ತವೇ ಏಳು ಲಕ್ಷವಾಗಿತ್ತು. ಆದರೆ ಮಂಡ್ಯ ಕೃಷ್ಣನ ಕೊಲೆ ಕೇಸಿನಲ್ಲಿ ಕೊರಂಗು, ಪೆದ್ದ ಗುಂಡ, ರಾಜ, ಕತ್ತಿಗುಪ್ಪೆ ಲಿಂಗ ಮುಂತಾದವರ ಜೊತೆ ನನ್ನ ಹೆಸರನ್ನೂ ಸೇರಿಸಿಬಿಟ್ಟದ್ರು.


ಆಸ್ಪತ್ರೆಯಿಂದ ನಾನು ಡಿಸ್‌ಚಾರ್ಜ್ ಆಗಿ ಇನ್ನೂ ಎರಡು ದಿನ ಕಳೆದಿರಲಿಲ್ಲ. ಕೈಯನ್ನು ಎತ್ತುವುದಕ್ಕೂ ಆಗದ ನಾನು ಹೇಗೆ ಮಂಡ್ಯ ಕೃಷ್ಣನನ್ನು ಕೊಲ್ಲಲು ಸಾಧ್ಯ?

ಅವತ್ತು ಮಂಡ್ಯ ಕೃಷ್ಣನ ಕೊಲೆ ಕೇಸಿನಲ್ಲಿ ಪೊಲೀಸರು ನನ್ನ ಹೆಸರನ್ನು ಸೇರಿಸದೆ ಹೋಗಿದ್ರೆ ಇವತ್ತು ನನ್ನ ಪಾಡಿಗೆ ನಾನಿದ್ದು ಬೆಂಗಳೂರಿನ ಸಾವಾಸಕ್ಕೇ ನಮಸ್ಕಾರ ಹಾಕಿಬಿಡುತ್ತಿದ್ದೆ. ಆದರೆ ಹಾಗಾಗಲಿಲ್ಲ. ಅನ್ಯಾಯವಾಗಿ ಮಂಡ್ಯ ಕೃಷ್ಣನ ಕೊಲೆ ಕೇಸಿಗೆ ನನ್ನನ್ನು ಸಿಲುಕಿಸಿದ್ದರಿಂದ ಭೀತಿಗೆ ಬಿದ್ದ ನಾನು ಬೇರೆ ಗತಿ ಕಾಣದೆ ಕೃಷ್ಣ (ಪಾತಕಿ ಕೊರಂಗುವನ್ನು ಆತನ ಅನುಯಾಯಿಗಳು ಕೃಷ್ಣ ಅಂತಲೇ ಕರೆಯುತ್ತಾರೆ) ಅವರನ್ನು ಅವಲಂಬಿಸಬೇಕಾಯ್ತು.

ಬೇರೆ ದಾರಿಯಾದ್ರೂ ಎಲ್ಲಿತ್ತು ಹೇಳಿ? ಎರಡು ತಿಂಗಳುಗಳ ಕಾಲ ಆಂಧ್ರದ ನೆಲ್ಲೂರು ಸಮೀಪದ ಹಳ್ಳಿಯಲ್ಲೇ ಇದ್ವಿ. ಅದೇನಾಯಿತೋ 2006 ರ ಜನವರಿಯಲ್ಲಿ ನಾವಿದ್ದ ತೋಟಕ್ಕೆ ಬೆಂಗಳೂರು ಪೊಲೀಸರು ನುಗ್ಗಿಬಿಟ್ರು. ಕೃಷ್ಣಾ (ಕೊರಂಗು) ಅವರ ಜೊತೆ ನಾನು, ಕತ್ತಿಗುಪ್ಪೆ ಲಿಂಗ, ಕೋಳಿ ರಾಜೇಶ, ಕುಲ್ಲಾ ಸೀನ, ಕಾಟು ರಾಮಚಂದ್ರ, ಪತ್ತಾರ್, ದೀಪು; ಎಲ್ಲರೂ ಸಿಕ್ಕಿಬಿದ್ವಿ. ಸಿಸಿಬಿ ಇನ್ಸ್‌ಪೆಕ್ಟರ್‌ಗಳಾದ ನಂಜುಂಡೇಗೌಡ, ರೇವಣ್ಣ, ಅಶೋಕನ್, ನಾಗಣ್ಣಗೌಡ ಎಲ್ಲರೂ ಇದ್ರು.

ಅಲ್ಲಿಂದ ಶುರುವಾಯ್ತು ನೋಡಿ ನನ್ನ ಅಸಲೀ ಕರ್ಮ....! ಮೊದಲು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿಗೆ ಹಾಕಿದ್ರು. ಅಲ್ಲಿಂದ ಒಂದೇ ವಾರಕ್ಕೆ ಎತ್ತಿದ್ರೇ ಚಿತ್ರದುರ್ಗಕ್ಕೆ ಕಮಾನೆತ್ತಿದರು. ಅಲ್ಲಿ ನಾನು, ಜಾತಿ, ಜಗ್ಗಾ, ಪೆದ್ದ ಗುಂಡ ಎಲ್ರೂ ಒಟ್ಟಿಗೇ ಇದ್ವಿ. ಬಹುಶಃ ಅದೇ ತಪ್ಪಾಯಿತೇನೊ. ಎಲ್ಲರೂ ಒಟ್ಟಿಗೆ ಇರೋದೇ ಅಪಾಯ ಅಂತ ನಮ್ಮ ವಿರೋಧಿಗಳು ಅಧಿಕಾರಿಗಳ ತಲೆ ಕೆಡಿಸಿರಬೇಕು. ನನ್ನನ್ನು ಮತ್ತೆ ಬೆಂಗಳೂರಿಗೆ ಹಾಕಿದ್ರು. ಅಲ್ಲಿ ಒಂದೇ ತಿಂಗಳು. ಅನಂತ್ರ ಗುಲ್ಬರ್ಗಾಕ್ಕೆ ಎತ್ತಂಗಡಿ ಮಾಡಿದ್ರು. ಅಲ್ಲಿ ವಿಪರೀತ ಗಲೀಜು. ನಾನೇ ನಿಂತು ತುಮಕೂರಿಗೆ ಹಾಕಿಸಿಕೊಂಡೆ. ಅಲ್ಲಿ ಒಂದು ವರ್ಷವಿದ್ದೆ. ಅಲ್ಲಿಗೆ ಎ.ಟಿ. ಬಾಬು ಅನ್ನೋ ಹೋರಾಟಗಾರರನ್ನು ಕೊಂದ ಎಂದು ಕಡಬಗೆರೆ ಗ್ಯಾಂಗಿನ ಶಿಷ್ಯ ಭವಾನಿ ಬಂದ ನೋಡಿ-

ಅದು ಬೆಳಗ್ಗೆ ಹೊತ್ತು, ನಾನು ಮಲಗಿದ್ದೆ. ನನ್ನ ಜೊತೆಗಿದ್ದ ಜಗ್ಗ, ಮಹೇಂದ್ರ ಮುಂತಾದವರನ್ನು ಭವಾನಿ ಗುರಾಯಿಸಿದನಂತೆ. ಅವರವರೇ ಹೊಡೆದಾಡಿಕೊಂಡ್ರು. ಆ ತಪ್ಪಿಗೆ ಜೈಲಿನ ಅಧಿಕಾರಿಗಳು ನನ್ನನ್ನು ರಾಮನಗರಕ್ಕೆ ಕಮಾನೆತ್ತಿಬಿಟ್ರು. ಅಲ್ಲೂ ಕೂಡ ಒಂದು ವಾರ ಮಾತ್ರ. ಆನಂತರ ಮಂಡ್ಯ ಜೈಲಲ್ಲಿ 1 ತಿಂಗಳಿದ್ದೆ. ಅಲ್ಲಿಂದ ಮೈಸೂರಿಗೆ ಹಾಕಿ ಈಗ 2 ವರ್ಷವಾಗ್ತಾ ಬಂತು. ಈ ಮಧ್ಯೆ 25 ಲಕ್ಷ ರೂಪಾಯಿ ಸುಪಾರಿ ತಗೊಂಡು ನಾನು ಜಡೇಜಾ ರವೀನ ಮರ್ಡರ್ ಮಾಡಿಸ್ದೆ ಅಂತ ಸುದ್ದಿ ಹಬ್ಬಿಸಿದರು. ಲಿಕ್ಕರ್ ರಂಗಸ್ವಾಮಿ ಮಗ ಮಹೇಶನನ್ನೂ ನಾನೇ ಸುಪಾರಿ ತಗೊಂಡು ಮರ್ಡರ್ ಮಾಡಿಸ್ದೆ ಅಂತ ಪುಕಾರೆಬ್ಬಿಸಿದರು. ಈ ಬಗ್ಗೆ ನಿಜಕ್ಕೂ ನಡೆದದ್ದೇನು ಮತ್ತು ನನ್ನ ಹೆಸರನ್ನು ಯಾಕೆ ತಂದರು ಅನ್ನೋ ಬಗ್ಗೆ ನಿಮಗೆ ಡಿಟೇಲ್ ಆಗಿ ಮತ್ತೊಮ್ಮೆ ಹೇಳ್ತೀನಿ. ಆದರೆ ಈಗಿರೋದು ಬೇರೇನೇ ಪ್ರಾಬ್ಲಮ್ಮು. ನಾನು ಎಲ್ಲಿಂದಲೋ 20 ಗನ್‌ಗಳನ್ನು ತರಿಸಿದ್ದೇನಂತೆ. ಆ ರೀತಿ ಬೇಕಾಬಿಟ್ಟಿ ಗನ್‌ಗಳನ್ನು ತರಿಸಿಕೊಂಡು ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ಕೊಲ್ತೀನಂತೆ. ಜೊತೆಗೆ ಕಡಬಗೆರೆ ಪಾಯ್ಸನ್ ರಾಮ, ಮುಲಾಮ, ಕಡಬಗೆರೆ ಸೀನ, ಗೂಳಿ ಬಸವ; ಹೀಗೆ ಯಾರ್‍ಯಾರನ್ನೋ ಕೊಲ್ಲಲಿಕ್ಕೆ ಅಂತಲೇ ಈ ಪಾಟಿ ಗನ್ನುಗಳನ್ನು ಬೆಂಗಳೂರಿಗೆ ತರಿಸಿಕೊಂಡಿದ್ದೇನಂತೆ.



ಕಮೀಷನರ್ ಮಿರ್ಜಿ

ಇದು ಇಲ್ಲಿಗೆ ಒಂದು ತಿಂಗಳಿನಿಂದೀಚೆಗೆ ಹಬ್ಬಿರುವ ಸುದ್ದಿ. ಇದು ತಲೆಬುಡವಿಲ್ಲದ ಪುಕಾರುಗಳನ್ನು ಅದ್ಯಾರು, ಯಾವ ಕಾರಣಕ್ಕೆ ಹಬ್ಬಿಸುತ್ತಿದ್ದಾರೋ ಗೊತ್ತಿಲ್ಲ. ಆದರೆ ಇದರ ಉದ್ದೇಶ ಮಾತ್ರ ಅಂಡರ್‌ವರ್ಲ್ಡ್ ಬಲ್ಲ ಯಾರಿಗಾದರೂ ಅರ್ಥವಾಗದೇ ಇಲ್ಲ. ಹೀಗೆ ಪುಕಾರೆಬ್ಬಿಸಿಯೇ ಈ ಹಿಂದೆ ಪೆದ್ದಗುಂಡನನ್ನು ಮುಗಿಸಿಬಿಟ್ರು. ಆದರೆ ನಾನು ಹಾಗಲ್ಲ. ಮಚ್ಚ ಬದುಕಿರುವವರೆಗೂ ದಿನ ನಾನು ಆತನಿಗೆ ಪರಮಾಪ್ತನಾಗಿದ್ದು ನಿಜ. ಸ್ವಾಮಿಯವರಿಗೆ ನಾನು ಅವತ್ತೇ ಹೇಳಿದ್ದೆ. ರಾಜಕೀಯಕ್ಕೆ ನಾವು ಎಂಟ್ರಿಯಾಗೋದು ಬೇಡ ಅಂದಿದ್ದೆ. ವಿನಾಕಾರಣ ಕಾಮಾಕ್ಷಿಪಾಳ್ಯದಲ್ಲಿ ಎಲೆಕ್ಷನ್ನಿಗೆ ನಿಲ್ತೀನಿ ಅಂತ ಹೋದ್ರು-

ಕಾಮಾಕ್ಷಿಪಾಳ್ಯದ ಕತೆ ಒಟ್ಟಿಗಿರಲಿ. ಕಡಬಗೆರೆಯಲ್ಲೂ ಇದೇ ಯಡವಟ್ಟು ಮಾಡಿಕೊಂಡ್ರು. ಹಾಗೆ ನೋಡಿದ್ರೆ ನಮ್ಮ ಕಷ್ಟಸುಖಕ್ಕೆ ಹಗಲುರಾತ್ರಿಯೆನ್ನದೆ ಬಂದು ನಿಂತು ನೆರವು ಕೊಡುತ್ತಿದ್ದದ್ದು ರಾಮಣ್ಣ. ನಡುರಾತ್ರಿಗೆ ಕರೆದ್ರೂ ಹುಡುಗ್ರನ್ನ ಹಾಕ್ಕೊಂಡು ಬಂದು ಬಿಡೋನು. ಆದರೆ ಅದ್ಯಾವನೋ ಚಟ್ನಿ ಲೋಕಿ ಅನ್ನೋನು ಎಂಟ್ರಿ ಕೊಟ್ಟ ನೋಡಿ. ಮಂಜು ಅವರನ್ನು ಅದ್ಯಾರು ದಿಕ್ಕುತಪ್ಪಿಸಿದ್ರೋ ಕಡಬಗೆರೆ ಪಂಚಾಯ್ತಿ ಎಲೆಕ್ಷನ್ ವಿಷಯದಲ್ಲಿ ವಿನಾಕಾರಣ ಲೋಕಿ ಪರ ನಿಂತರು. ಕಾರಣವೇ ಇಲ್ಲದೆ ಕಡಬಗೆರೆ ರಾಮಣ್ಣನನ್ನು ಗದರಿಸಿದ್ದೇ ದಬಾಯಿಸಿಬಿಟ್ರು. ಅದೇ ಮಚ್ಚಾ ಅವ್ರ ಹತ್ಯೆಗೆ ಕಾರಣವಾಯಿತು. ಆತನಕ ನಮ್ಮ ಪಕ್ಕಾ ಬೆಂಬಲಿಗನಾಗಿದ್ದ ರಾಮಣ್ಣ ಗೋಪಾಲಯ್ಯನ ಜೊತೆ ಹೋಗಿ ಕೈಜೋಡಿಸಿಬಿಟ್ಟ!

ಏನ್ ಮಾಡ್ತೀರಿ? ನನ್ನ ಮಾತು ಕೇಳಲಿಲ್ಲ. ರಾಜಕೀಯ ನಮಗೆ ಬೇಡ ಅಂತ ಎಷ್ಟೇ ಬಾಯಿ ಬಡಕೊಂಡ್ರೂ ಕೇಳ್ಲಿಲ್ಲ. ಇರ್ಲಿ ಬಿಡಿ. ಆಗಿದ್ದೆಲ್ಲಾ ಆಗಿಹೋಯ್ತು ಅದನ್ನೆಲ್ಲ ಒಂದು ಕೆಟ್ಟ ಕನಸು ಅಂತ ಮರೆತು ಬಿಟ್ಟಿದ್ದೀನಿ. ಒಂದು ಗನ್ನಿನ ಬೆಲೆ ಎಷ್ಟಾಗುತ್ತೆ ಅನ್ನೋದೂ ನನಗೆ ಗೊತ್ತಿಲ್ಲ. ಇನ್ನು 20 ಗನ್ನು ಎಲ್ಲಿಂದ ತರಿಸಲಿ. ಅಷ್ಟಕ್ಕೂ ಅಷ್ಟೆಲ್ಲಾ ಗನ್ನು ತರಿಸಿಕೊಂಡು ಯಾರನ್ನಾದ್ರೂ ಕೊಂದು ನನಗೆ ಆಗಬೇಕಿರುವುದಾದರೂ ಏನು? ಗೋಪಾಲಯ್ಯ, ಮುಲಾಮ, ಪಾಯ್ಸನ್ ರಾಮ ಇವರನ್ನೆಲ್ಲ ಕಟ್ಟಿಗೊಂಡು ನನಗೆ ಏನೂ ಆಗಬೇಕಾಗಿಲ್ಲ. ಜಿದ್ದು ಸಾಧಿಸೋಕೆ ನಾನೇನು ಪಾನೂ ಅಲ್ಲ-ಕಿಲಾಡಿಯೂ ಅಲ್ಲ. ಬಹುಶಃ ನಾನು ಕೊಲ್ತೀನಿ ಅಂತ ಅವರನ್ನೆಲ್ಲ ಬ್ಲಾಕ್‌ಮೇಲ್ ಮಾಡಿ ದುಡ್ಡು ಕೀಳೋದು ಕೆಲವರ ಉದ್ದೇಶವಾಗಿರಬೇಕು!

ಕಂಬಿಯ ಮರೆಯಿಂದಲೇ ಇಷ್ಟೆಲ್ಲವನ್ನು ಬಿಡಿಬಿಡಿಸಿ ಹೇಳಿದ ಕೋತಿರಾಮನ ಮಾತುಗಳಲ್ಲಿ ಬೆಂಗಳೂರಿನ ಪಾತಕ ಲೋಕದ ವಿಚಿತ್ರ ದರ್ಶನವೇ ಕಂಡಿತ್ತು...

● ರಾ.ಸೋಮನಾಥ್

ಹಿಂಬಾಲಕರು ನುಂಗಿದ್ದನ್ನು ಕಕ್ಕಿಸುತ್ತಿರುವ ಯಡ್ಡಿ!



ಯಡಿಯೂರಪ್ಪನವರ ಭೋಜನಕೂಟಕ್ಕೆ ಅವರ ಹಿಂಬಾಲಕರಲ್ಲಿ ಅನೇಕರು ಹಾಜರಾಗುವ ಮುಖಾಂತರ ತಾವು ಮಾನಸಿಕವಾಗಿ ಯಡ್ಡಿಯ ಬೆಂಬಲಕ್ಕೆ ನಿಂತಿರುವುದಾಗಿ ತೋರಿಸಿದ್ದಾರೆ. ಇದರರ್ಥ ಯಡ್ಡಿಯ ಭೋಜನಕೂಟಕ್ಕೆ ಆಗಮಿಸಿದ ಶಾಸಕ, ಮಂತ್ರಿಗಳೆಲ್ಲ ಅವರ ಹೊಸ ಪಕ್ಷ ಸೇರುತ್ತಾರೆಂದೇನೂ ಅಲ್ಲ. ಏಕೆಂದರೆ ಸದ್ಯದ ಪರಿಸ್ಥಿತಿಯಲ್ಲಿ ಯಡ್ಡಿಯ ಹಿಂಬಾಲಕರಲ್ಲಿ ಇನ್ನೂ ಅನೇಕ ಗೊಂದಲಗಳು ಹಾಗೆಯೇ ಉಳಿದಿವೆ. ಹೆಚ್ಚಿನ ಶಾಸಕರೆಲ್ಲ "ನಮ್ಮ ನಾಯಕ ಯಡಿಯೂರಪ್ಪನವರು ಬಿಜೆಪಿಯಲ್ಲೇ ಉಳಿದುಕೊಂಡರೆ ನಿಜಕ್ಕೂ ಎಲ್ಲರಿಗೂ ಒಳ್ಳೆಯದಾಗುತ್ತದೆ" ಎಂದು ಆಶಿಸುತ್ತಿದ್ದಾರೆ.

ಯಡ್ಡಿ ಪಾಳೆಯದಲ್ಲಿ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿಲ್ಲ ಎಂಬುದಕ್ಕೆ ಮೊನ್ನೆ ಯಡ್ಡಿಯ ಪರಮ ಹಿಂಬಾಲಕರಾದ ಸಚಿವ ವಿ.ಸೋಮಣ್ಣ ಮತ್ತು ಸಿ.ಜೆ.ಪುಟ್ಟಸ್ವಾಮಿ ನಡುವಿನ ಮಾತಿನ ಜಟಾಪಟಿಯೇ ಒಂದು ಅತ್ಯುತ್ತಮ ಉದಾಹರಣೆ. ಹಾಗೆ ನೋಡಿದರೆ ಇವರಿಬ್ಬರಿಗೂ ರಾಜಕೀಯವಾಗಿ ಪುನರ್ಜನ್ಮ ನೀಡಿದ್ದೇ ಯಡ್ಡಿ. ಆ ಕಾರಣಕ್ಕಾಗಿಯೇ ಸೋಮಣ್ಣ ಮತ್ತು ಪುಟ್ಟಸ್ವಾಮಿಯನ್ನು ಯಡ್ಡಿಯ ಬಲಗೈ ಮತ್ತು ಎಡಗೈ ಎಂದೇ ಅವರ ವಲಯದಲ್ಲಿ ಕರೆಯುತ್ತಿದ್ದದ್ದು. ಇಂತಹ ಎಡಗೈ ಮತ್ತು ಬಲಗೈ ಪರಸ್ಪರ ಕಚ್ಚಾಡಿಕೊಂಡಿವೆ.

"ಏನ್ ಸ್ವಾಮಿ! ಇತ್ತೀಚೆಗೆ ತಾವು ಸಾಹೇಬರ ಮನೆ ಕಡೆಗೆ ಬರ್‍ತಾ ಇಲ್ವಲ್ಲ?" ಎಂದು ಪುಟ್ಟಸ್ವಾಮಿ ಕ್ಯಾಬಿನೆಟ್ ಸಭೆಯಲ್ಲಿ ಸೋಮಣ್ಣನಿಗೆ ಟಾಂಗ್ ಕೊಟ್ಟದ್ದೇ ಅವರಿಬ್ಬರ ನಡುವಿನ ಗಲಾಟೆಗೆ ಕಾರಣವಾಯಿತು. ಪುಟ್ಟಸ್ವಾಮಿ ಹೀಗೆ ಮಾತನಾಡಿದ್ದೇ ತಡ, ಸೋಮಣ್ಣ ತಮ್ಮ ಎರಡೂ ಕೈಯೆತ್ತಿ ಪುಟ್ಟಸ್ವಾಮಿಗೆ ನಮಸ್ಕರಿಸಿ "ನೋಡಿ ಸ್ವಾಮಿ, ನಿಮ್ ಸಹವಾಸ ಸಾಕು. ನೀವು ಯಡಿಯೂರಪ್ಪನವರ ಬಳಿ ನನ್ನ ಬಗ್ಗೆ ಚಾಡಿ ಹೇಳುತ್ತಿರುವುದು ನನಗೆ ಗೊತ್ತು. ದಯವಿಟ್ಟು ನಿಮ್ಮ ಕೆಲಸ ನೀವು ಮಾಡಿ, ನನ್ನ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ" ಎಂದು ವ್ಯಂಗ್ಯವಾಗಿ ಉತ್ತರಿಸಿದರು. ಅಷ್ಟಕ್ಕೇ ಸುಮ್ಮನಾಗದ ಸೋಮಣ್ಣ "ನೀವು ಇದೇರೀತಿ ಮುಂದುವರೆದರೆ, **Be Careful**" ಎಂದು ಲೈಟಾಗಿ ಎಚ್ಚರಿಕೆಯನ್ನೂ ಪುಟ್ಟಸ್ವಾಮಿಗೆ ನೀಡಿದರು.

ಸೋಮಣ್ಣ ಈ ರೀತಿ ರಾಂಗ್ ಆಗಿದ್ದನ್ನು ಕಂಡು ಸುಸ್ತಾದ ಪುಟ್ಟಸ್ವಾಮಿ "ನಾನೇನು ನಿಮ್ಮ ವಿರುದ್ಧ ಯಡಿಯೂರಪ್ಪನವರಿಗೆ ಹೇಳಲಿಲ್ಲ, ನಿಮಗೆ ಯಾರೋ ತಪ್ಪು ಮಾಹಿತಿ ನೀಡಿದ್ದಾರೆ" ಎಂದು ತೇಪೆ ಹಚ್ಚಲು ನೋಡಿದರು. ಆದರೆ ಅಷ್ಟೊತ್ತಿಗೆಲ್ಲ ಯಡ್ಡಿ ಕ್ಯಾಂಪ್‌ನಲ್ಲಿ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿಲ್ಲ ಎಂಬ ಸತ್ಯ ಜಗಜ್ಜಾಹೀರಾಗಿ ಹೋಗಿತ್ತು.

ಇದಕ್ಕೆಲ್ಲ ಮೂಲಕಾರಣ ಸೋಮಣ್ಣ. ಈತ ಈಗ ಮಾನಸಿಕವಾಗಿ ತನ್ನ ರಾಜಕೀಯ ಗುರು ಯಡಿಯೂರಪ್ಪನಿಂದ ನಿಧಾನವಾಗಿ ಹಿಂದೆ ಸರಿಯುತ್ತಿದ್ದಾರೆ. "ಬಿಜೆಪಿಯಿಂದ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಖಂಡಿತವಾಗಿಯೂ ನಾನು ಬೆಂಗಳೂರಿನಲ್ಲಿ ಗೆಲ್ಲುವುದಿಲ್ಲ. ಹಾಗೆಯೇ ಒಂದು ವೇಳೆ ಯಡಿಯೂರಪ್ಪನವರ ಪಕ್ಷದಿಂದ ಸ್ಪರ್ಧಿಸಿದರೂ ನಾನು ಇಡಗಂಟು ಕಳೆದುಕೊಳ್ಳುವುದು ಗ್ಯಾರಂಟಿ" ಎಂದು ಸೋಮಣ್ಣ ಲೆಕ್ಕಾಚಾರ ಹಾಕುತ್ತಿದ್ದಾರೆ. ರಾಜಕೀಯವಾಗಿ ತಾನು ಚಾಲ್ತಿಯಲ್ಲಿರಬೇಕಾದರೆ ತನ್ನ ಮಾತೃಪಕ್ಷವಾದ ಜೆಡಿ (ಎಸ್) ಸೇರಬೇಕೋ ಅಥವಾ ಕಾಂಗ್ರೆಸ್ ಪಕ್ಷವನ್ನು ಸೇರಬೇಕೋ ಎಂಬ ಚಿಂತೆ-ಸೋಮಣ್ಣನ ತಲೆ ತಿನ್ನುತ್ತಿದೆ. ಈ ಚಿಂತೆಯಲ್ಲೇ ಕೆಲವು ವಾರಗಳ

ಯಾವ ದೋಣಿಯಲ್ಲಿ ಮುಂದಿನ ಪಯಣ?

ವಸತಿ ಸಚಿವ ಸೋಮಣ್ಣ ರಾಜಕೀಯವಾಗಿ ಮುಂದಿನ ಚುನಾವಣೆ ಸಂದರ್ಭದಲ್ಲಿ 'ಯಾವ ವಸತಿ'ಯಲ್ಲಿರುತ್ತಾರೆ ಎಂಬುದೇ ಈಗ ಕುತೂಹಲಕರವಾಗಿದೆ.

ಏಕೆಂದರೆ ಗೋವಿಂದರಾಜನಗರ ಕ್ಷೇತ್ರದ ಉಪ ಚುನಾವಣೆಯಲ್ಲಿ ಸೋಮಣ್ಣ ಸೋತನಂತರ ರಾಜಕೀಯವಾಗಿ ಅವರ ಭವಿಷ್ಯ ಮುಗಿದೇಹೋಯಿತು ಎಂದು ಅವರ ಎದುರಾಳಿಗಳು ಸಂತೋಷಪಡುತ್ತಿದ್ದರು. ಆಗ ಬಿಜೆಪಿ ಹೈಕಮಾಂಡ್ ಮತ್ತು ಆರೆಸ್ಸೆಸ್ ನಾಯಕರ ಆಶಯದ ವಿರುದ್ಧವಾಗಿ ಸೋಮಣ್ಣನನ್ನು ಪಕ್ಷಕ್ಕೆ ಕರೆದು ಅವರನ್ನು ಎಂಎಲ್‌ಸಿಯಾಗಿ ಯಡಿಯೂರಪ್ಪ ಮಾಡಿದರಲ್ಲದೆ, ಸಚಿವ ಸ್ಥಾನವನ್ನೂ ಕೊಡಿಸಿದರು.

ತನಗೆ ರಾಜಕೀಯವಾಗಿ ಪುನರ್ಜನ್ಮ ನೀಡಿದ ಗಾಡ್‌ಫಾದರ್ ಯಡ್ಡಿಗೇ ಈಗ ಸೋಮಣ್ಣ ಟಾಟಾ ಹೇಳಿ ಯಾವುದಾದರೂ ಒಂದು ಹಳೆ ಪಕ್ಷಕ್ಕೆ ಮರಳುವ ಬಗ್ಗೆ ಚಿಂತಿಸುತ್ತಿದ್ದಾರೆ. ಅದರರ್ಥ ಸೋಮಣ್ಣ ಬಿಜೆಪಿಗೂ ಟಾಟಾ ಹೇಳಲೇಬೇಕಾದ ಅನಿವಾರ್ಯ ಪರಿಸ್ಥಿತಿ ಉದ್ಭವವಾಗಿದೆ. ಏಕೆಂದರೆ ಯಡಿಯೂರಪ್ಪ ಇಲ್ಲದ ಬಿಜೆಪಿಯಲ್ಲಿ ಸೋಮಣ್ಣನಿಗೆ ಚಿಕ್ಕಾಸು ಬೆಲೆಯೂ ಸಿಗುವುದಿಲ್ಲ ಎಂಬುದು ಅವರಿಗೆ ಗೊತ್ತು. ಹೀಗಾಗಿ, ಸೋಮಣ್ಣ ತಾನು ಈ ಹಿಂದೆ ಇದ್ದ ಜಾತ್ಯತೀತ ಜನತಾದಳ ಅಥವಾ ಕಾಂಗ್ರೆಸ್ ಸೇರುವ ಸಾಧ್ಯತೆಯಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

ಬೆಂಗಳೂರಿನ ಕಾಂಗ್ರೆಸ್‌ನಲ್ಲಿ ಸೋಮಣ್ಣನಿಗೆ ಅನೇಕ ಮಾಜಿ ಮತ್ತು ಹಾಲಿ ಶಾಸಕ ವೈರಿಗಳಿದ್ದಾರೆ. ಉದಾಹರಣೆಗೆ ಅವರ ಸಾಂಪ್ರದಾಯಿಕ ಕಡುವೈರಿಯಾದ ವಿಜಯನಗರದ ಶಾಸಕ ಕೃಷ್ಣಪ್ಪ ಮತ್ತು ಅವರ ಪುತ್ರ ಗೋವಿಂದರಾಜನಗರ ಶಾಸಕ ಪ್ರಿಯಾಕೃಷ್ಣ. ಇವರಿಬ್ಬರ ಮನಸ್ಸನ್ನು ಸೋಮಣ್ಣ ಗೆಲ್ಲುವುದು ಕಷ್ಟ. ಒಂದು ವೇಳೆ 'ಮುಂದಿನ ಚುನಾವಣೆಯಲ್ಲಿ ನಾನು ಲೋಕಸಭಾ ಸ್ಥಾನಕ್ಕೆ ಸ್ಪರ್ಧಿಸುತ್ತೇನೆ. ವಿಜಯನಗರ ಮತ್ತು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಗಳ ಕಡೆಗೆ ನಾನು ತಲೆ ಹಾಕುವುದಿಲ್ಲ' ಎಂದು ಸೋಮಣ್ಣ ಅಪ್ಪ-ಮಗನನ್ನು ಒಲೈಸುವಲ್ಲಿ ಯಶಸ್ವಿಯಾಗಲೂಬಹುದು. ಆದರೆ ಕಾಂಗ್ರೆಸ್ ಶಾಸಕರಾದ ದಿನೇಶ್ ಗುಂಡೂರಾವ್, ರೋಷನ್ ಬೇಗ್, ರೇವಣ್ಣ ರಾಮಲಿಂಗಾ ರೆಡ್ಡಿ ಮೊದಲಾದವರು ಸೋಮಣ್ಣ ಕಾಂಗ್ರೆಸ್‌ಗೆ ಬರುವ ಬಗ್ಗೆ ತೀವ್ರವಾದ ಆಕ್ಷೇಪವನ್ನು ವ್ಯಕ್ತಪಡಿಸುವ ಸಾಧ್ಯತೆಯಿದೆ.

ಹಾಗೇನಾದರೂ ಅದಲ್ಲಿ ಸೋಮಣ್ಣ ತನ್ನ ಹಳೆಯ ರಾಜಕೀಯ ಗಾಡ್‌ಫಾದರ್ ದೇವೇಗೌಡರ ನಾಯಕತ್ವದ ಜನತಾದಳಕ್ಕೆ ವಾಪಸ್ಸು ಹೋಗುವ ಸಾಧ್ಯತೆಯನ್ನು ಕೂಡ ತಳ್ಳಿಹಾಕುವಂತಿಲ್ಲ. ಜನತಾದಳದಲ್ಲಿ ದೇವೇಗೌಡ ಮತ್ತು ಕುಮಾರಸ್ವಾಮಿ ಅವರಿಬ್ಬರು ಮನಸ್ಸು ಮಾಡಿದರೆ, ಸೋಮಣ್ಣನನ್ನು ವಿರೋಧಿಸುವವರು ಬೇರೆ ಯಾರೂ ಇರುವುದಿಲ್ಲ. ಹೀಗಾಗಿ ಸೋಮಣ್ಣ ಜನತಾದಳವನ್ನು ಸೇರುವ ಸಾಧ್ಯತೆಯೇ ಹೆಚ್ಚು ಎಂಬ ಮಾತುಗಳೂ ಕೇಳಿಬರುತ್ತಿದೆ.

ಸೋಮಣ್ಣ ವಿಧಾನಸಭೆಗೆ ಸ್ಪರ್ಧಿಸುವುದೇ ಆದಲ್ಲಿ ಅವರು ಗುಂಡ್ಲುಪೇಟೆ ಮತ್ತು ಚಾಮರಾಜನಗರದ ಕಡೆಯಿಂದ ಸ್ಪರ್ಧಿಸಬಹುದು ಎಂದು ಅವರ ಅಭಿಮಾನಿಗಳು ಹೇಳುತ್ತಿದ್ದಾರೆ. ಆಕಸ್ಮಾತ್ ವಿಧಾನಸಭೆಯೇ ಬೇಡ ಬದಲಿಗೆ ಲೋಕಸಭಾ ಕ್ಷೇತ್ರದ ಕಡೆಗೆ ಗಮನಹರಿಸಿದರೆ ಅವರ ಒಲವು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದತ್ತ ಇದೆ. ಹೀಗೆ ರಾಜ್ಯ ರಾಜಕೀಯದಲ್ಲಿ ಕಳೆದ ಎರಡು ದಶಕಗಳಿಂದ ಆಗಿಂದಾಗ್ಗೆ ಪಕ್ಷ ಬದಲಾಯಿಸುತ್ತ ಅವಕಾಶವಾದಿ ರಾಜಕಾರಣವನ್ನು ಮಾಡುತ್ತಾ ಬಂದಿರುವ ಸೋಮಣ್ಣ ಯಾವಾಗಲೂ ಅಧಿಕಾರದಲ್ಲೇ ಇರುತ್ತಾರೆ. ಈ ಕಾರಣಕ್ಕೆ ಸೋಮಣ್ಣ ಯಾವ ಪಕ್ಷಕ್ಕೆ ವಲಸೆ ಹೋಗುತ್ತಾರೆ ಎಂಬುದೇ ಎಲ್ಲರ ಮುಂದಿರುವ ಯಕ್ಷಪ್ರಶ್ನೆಯಾಗಿದೆ.

ಚೆಡ್ಡಿಗಳ ಅಸಲಿ ಮುಖ ಮತ್ತು ಪತ್ರಕರ್ತನ ಬಂಧನ

ಕೋಮುವಾದಿ ಸಂಘಪರಿವಾರದ ಅನಿಷ್ಟ ಪಿಂಡಗಳಾದ ಬಿಜೆಪಿ, ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣ ವೇದಿಕೆ, ಭಜರಂಗ ದಳ ಇತ್ಯಾದಿಗಳ ನಿಜಬಣ್ಣ ಹಲವಾರು ಬಾರಿ ಬಯಲಾಗಿದೆ. ಕಳೆದ ಜುಲೈ 28ರಂದು ಮಂಗಳೂರಿನ ಪಡೀಲ್‌ನಲ್ಲಿರುವ ಮಾರ್ನಿಂಗ್ ಮಿಸ್ಟ್ ಎಂಬ ಹೋಮ್ ಸ್ಟೇಯಲ್ಲಿ ನಡೆಯುತ್ತಿದ್ದ ಹುಟ್ಟುಹಬ್ಬದ ಸಂತೋಷ ಕೂಟದಲ್ಲಿ ಪಾಲ್ಗೊಂಡಿದ್ದ ಯುವಕಯುವತಿಯರ ಮೇಲೆ ಹಿಂದೂ ಜಾಗರಣ ವೇದಿಕೆಯ ರೌಡಿಗಳು ನಡೆಸಿದ ಆಕ್ರಮಕಾರಿ ದಾಳಿಯಂತೂ ಈ ಚೆಡ್ಡಿಗಳ ಅಸಲಿ ಸಿದ್ಧಾಂತ, ನೀತಿ- ನಿಲುವುಗಳನ್ನು ಜಗತ್ತಿನ ಮುಂದೆ ಇನ್ನಿಲ್ಲದಂತೆ ತೆರೆದಿಟ್ಟಿತ್ತು. ಅಂದು 'ಅನೈತಿಕ' ಸಂಘಪರಿವಾರಕ್ಕೆ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಂಗಳಾರತಿ ಎತ್ತಿಸಿದ್ದು ನವೀನ್ ಸೂರಿಂಜೆ ಎಂಬ ಯುವ ಪತ್ರಕರ್ತ.





ಆದರೆ ಬಿಜೆಪಿ ಎಂತಹ ಮಾನಗೆಟ್ಟ ಪಕ್ಷ ಎಂದರೆ ನಿನ್ನೆ - ಅಂದರೆ ನವೆಂಬರ್ 7, ಬುಧವಾರ ರಾತ್ರಿ- ಮಂಗಳೂರಿನ ಪೊಲೀಸರಿಂದ ಅದೇ ನವೀನ್ ಸೂರಿಂಜೆಯನ್ನು ಬಂಧಿಸಿ ಜೈಲಿಗೆ ಅಟ್ಟುವಂತೆ ಮಾಡಿದೆ. ಬಿಜೆಪಿ ಸರ್ಕಾರ ಮತ್ತು ಅದರ ಸೇವಕರಂತೆ ಕೆಲಸ ಮಾಡುತ್ತಿರುವ ಮಂಗಳೂರು ಪೊಲೀಸರು ಎಂತಹ ಕುತಂತ್ರವನ್ನು ಹೆಣೆದಿದ್ದಾರೆಂದರೆ ಮಾರ್ನಿಂಗ್ ಮಿಸ್ಟ್ ದಾಳಿಯಲ್ಲಿ ಭಾಗವಹಿಸಿದ್ದ 40ಕ್ಕೂ ಹೆಚ್ಚು 'ಹಿಂದೂ' ರೌಡಿಗಳ ವಿರುದ್ಧವಲ್ಲದೆ ನವೀನ್ ಸೂರಿಂಜೆ ವಿರುದ್ಧವೂ ಎಫ್‌ಐಆರ್ ದಾಖಲಿಸಿದ್ದರು. ಅಷ್ಟೇ ಅಲ್ಲ, ಸೂರಿಂಜೆ ಕೂಡ ಆ ರೌಡಿಗಳೊಂದಿಗೆ ಸೇರಿ ಅಕ್ರಮ ಗುಂಪುಗಾರಿಕೆ, ಗಲಭೆ, ಮಾರಣಾಂತಿಕ ಅಸ್ತ್ರಗಳೊಂದಿಗೆ ದಾಳಿ, ದೈಹಿಕ ಹಲ್ಲೆ, ಮಹಿಳೆಯ ಮಾನನಷ್ಟಕ್ಕೆ ಯತ್ನ ಎಂದೆಲ್ಲ ವಿವಿಧ ಕಲಂಗಳಡಿ ಆರೋಪಿಯನ್ನಾಗಿಸಿದ್ದರು.

ವಾಸ್ತವವಾಗಿ ಅವತ್ತು ದಾಳಿ ನಡೆಯಲಿದೆ ಎಂಬ ಮಾಹಿತಿ ಸಿಕ್ಕ ಕೂಡಲೇ ನವೀನ್ ಅವರು ಪೊಲೀಸ್ ಕಮೀಷನರ್ ಮತ್ತು ಸ್ಥಳೀಯ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರವೀಶ್ ನಾಯಕ್ ಎಂಬುವವರಿಗೆ ಈ ಕುರಿತು ತಿಳಿಸಲು ಪ್ರಯತ್ನಿಸಿದ್ದರು. ಆದರೆ ಕಮೀಷನರ್ ಊರಲ್ಲಿರಲಿಲ್ಲ ಮತ್ತು ನಾಯಕ್ ಎಂಬಾತ ನವೀನ್ ಅವರ ಫೋನ್ ಕರೆಗಳನ್ನು ಸ್ವೀಕರಿಸಲಿಲ್ಲ. ಅಷ್ಟೇ ಅಲ್ಲ, ಅವತ್ತು ನವೀನ್ ಅವರ ಕ್ಯಾಮೆರಾಮನ್‌ಗೆ ಮೈ ಹುಷಾರಿಲ್ಲದಿದ್ದ ಕಾರಣ ಅವತ್ತಿನ ದಾಳಿಯ ದೃಶ್ಯಗಳನ್ನೂ ನವೀನ್ ತಮ್ಮ ಕ್ಯಾಮೆರಾದಲ್ಲಿ ಸೆರೆ ಹಿಡಿಯಲಿಲ್ಲ. ದಾಳಿ ಆದನಂತರವೇ ಅವರು ಆದರ ದೃಶ್ಯಗಳನ್ನು ಬೇರೆಯವರಿಂದ ಪಡೆದು ತಾವು ಕೆಲಸ ಮಾಡುತ್ತಿರುವ 'ಕಸ್ತೂರಿ ಟಿವಿ' ಚಾನೆಲ್‌ನಲ್ಲಿ 'ತಾಲಿಬಾನ್ ಸಂಸ್ಕೃತಿ' ಎಂದು ವರದಿ ಮಾಡಿದ್ದು.

ಇದಕ್ಕೆಲ್ಲ ಸಾಕ್ಷಿಗಳಿವೆ. ಆದರೆ ಸಾಕ್ಷಿಗಳನ್ನು ಕಟ್ಟಿಕೊಂಡು ಮಂಗಳೂರಿನ ಪೊಲೀಸರಿಗೆ ಏನೂ ಆಗಬೇಕಿಲ್ಲ. ಆದ್ದರಿಂದಲೇ ದಾಳಿಕೋರರ ಸಮೇತ ಈ ಪ್ರಕರಣದಲ್ಲಿ ಪ್ರಮುಖ ಸಾಕ್ಷಿದಾರನಾಗಿರುವ ನವೀನ್ ಅವರನ್ನೂ ಆರೋಪಿಯನ್ನಾಗಿಸಿ ಇಡೀ ಪ್ರಕರಣವನ್ನು ತಿಪ್ಪೆಸಾರಿಸಲು ಯತ್ನಿಸುತ್ತಿದ್ದಾರೆ.

ನವೀನ್ ಸೂರಿಂಜೆ ಮೊದಲಿನಿಂದಲೂ ನಿಷ್ಠೂರವಾಗಿ ಕೋಮುವಾದವನ್ನು ವಿರೋಧಿಸುತ್ತಲೇ ಬಂದಿರುವವರು. ಅವರು ಪೊಲೀಸರು ಎಸಗಿರುವ ಹಲವಾರು ಅಕ್ರಮಗಳನ್ನು, ಮಾನವ ಹಕ್ಕು ಉಲ್ಲಂಘನೆಗಳನ್ನು, ಆದಿವಾಸಿಗಳಿಗೆ ನೀಡಿರುವ ಕಿರುಕುಳವನ್ನು ಕುರಿತು ವರದಿಗಳನ್ನು ಮಾಡಿದ್ದಾರೆ. ಆ ಮೂಲಕ ಬಿಜೆಪಿಯ ಸೋಗಲಾಡಿತನವನ್ನು ಬಟಾಬಯಲು ಮಾಡಿದ್ದಾರೆ. ಇಂತಹ ದಿಟ್ಟ ಪತ್ರಕರ್ತನ ಮಟ್ಟಹಾಕಲು ಮಂಗಳೂರಿನ ಆಡಳಿತ ವ್ಯವಸ್ಥೆ ಈಗ ಅವರನ್ನೇ ಆರೋಪಿಯನ್ನಾಗಿಸಿ ಬಂಧಿಸಿದೆ.

ನವೀನ್ ಸೂರಿಂಜೆಯನ್ನು ಬಂಧಿಸುವ ಮೂಲಕ ಬಿಜೆಪಿ ಸರ್ಕಾರ ಪತ್ರಿಕಾ ಸ್ವಾತಂತ್ರ್ಯವನ್ನು ದಮನ ಮಾಡಲು ತೋಳೇರಿಸಿ ನಿಂತಿರುವುದು ಸ್ಪಷ್ಟವಾಗಿದೆ. ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಿಂಚಿತ್ತಾದರೂ ನಂಬಿಕೆ ಇದ್ದರೆ ಅವರು ಕೂಡಲೇ ನವೀನ್ ಹೆಸರನ್ನು ಆರೋಪಿಗಳ ಪಟ್ಟಿಯಿಂದ ತೆಗೆಯಬೇಕು ಮತ್ತು ಆತನ ವಿರುದ್ಧದ ಕೇಸನ್ನು ಹಿಂಪಡೆಯಬೇಕು. ಅಷ್ಟೇ ಅಲ್ಲದೆ, ನವೀನ್ ಸೂರಿಂಜೆಯನ್ನು ಬಂಧಿಸುವ ಮೂಲಕ ಆತನಿಗೆ ಅವಮಾನ ಮಾಡಿರುವುದಕ್ಕೆ, ಆತನ ಕರ್ತವ್ಯಪ್ರಜ್ಞೆಯನ್ನು ಪ್ರಶ್ನಿಸಿರುವುದಕ್ಕೆ ನವೀನನ ಕ್ಷಮೆ ಕೇಳಬೇಕು.

ಆದರೆ ಲಜ್ಜೆಗೆಟ್ಟ ಸರ್ಕಾರದ ಮುಖ್ಯಸ್ಥರಾಗಿರುವ ಶೆಟ್ಟರ್ ಅವರಿಂದ ಇದು ಸಾಧ್ಯವೇ?

ಗಡ್ಕರಿಯ ವಿವೇಕ ಮತ್ತು ಬಿಜೆಪಿಯ ಆನಂದ


ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿಯ ದೇಹದಲ್ಲಿ ಮಾತ್ರವಲ್ಲದೆ ಆತನ ತಲೆಯಲ್ಲೂ ಕೊಬ್ಬು ಅತಿಯಾಗಿ ಶೇಖರಣೆಯಾಗಿರುವ ಸತ್ಯ ಇದೀಗ ಸ್ಪಷ್ಟವಾಗಿದೆ. ತಲೆಯಲ್ಲೂ ಕೊಬ್ಬು ಇರುವುದರಿಂದ ಆತನ ಐಕ್ಯೂ ಮಟ್ಟ ಕುಸಿದು ನೆಲ ಕಚ್ಚಿದೆ. ಪರಿಣಾಮವಾಗಿ ಆತ ವಿವೇಕಾನಂದರ ಐಕ್ಯೂ ಹಾಗೂ ದಾವೂದ್ ಇಬ್ರಾಹಿಂರ ಐಕ್ಯೂಗಳನ್ನು ತಾಳೆಹಾಕುವ ಉಸಾಬರಿಗೆ ಇಳಿದಿದ್ದಾನೆ. ನಿತಿನ್‌ಗಡ್ಕರಿಯ ಇಂಥಾ ನಡವಳಿಕೆ ಆತನ ಬುದ್ಧಿಮತ್ತೆ ಮತ್ತು ಚಿಂತನೆಗಳಿಗೆ ಹಿಡಿದ ಕನ್ನಡಿ.

ಕೈಯಲ್ಲಿ ಹಡಬಿಟ್ಟಿ ದುಡ್ಡು ಸೇರಿದಂತೆಲ್ಲಾ ಈತನ ತಿಮಿರು ಹೆಚ್ಚುತ್ತಲೇ ಇದೆ. ಹಾಗೆ ನೋಡಿದರೆ ಸಾವಿರಾರು ಕೋಟಿಗಳ ಹಗರಣಗಳಲ್ಲಿ ಈತ ಸಿಕ್ಕಿಬಿದ್ದರೂ, ಬೇನಾಮಿ ಕಂಪನಿಗಳ ಹೆಸರಿನಲ್ಲಿ ಲೂಟಿ ಹೊಡೆದು ಸಿಕ್ಕಿಬಿದ್ದರೂ ಬಿಜೆಪಿ, ಆರೆಸ್ಸೆಸ್ ಆದಿಯಾಗಿ ಇಡೀ ಸಂಘ ಪರಿವಾರ ಈತನ ಸಮರ್ಥನೆಗೆ ನಿಂತು ಈ ದಢೂತಿ ಆಸಾಮಿಯ ಪಿತ್ತ ನೆತ್ತಿಗೇರಲು ಅನುವು ಮಾಡಿಕೊಟ್ಟಿದೆ.

ಹೀಗೊಂದು ಸನ್ನಿವೇಶವನ್ನು ನಾವು ಊಹಿಸಿಕೊಳ್ಳೋಣ. ಒಬ್ಬ ದಲಿತನೋ, ಶೂದ್ರನೋ ಅಥವಾ ಒಂದು ವೇಳೆ ಕಾಂಗ್ರೆಸ್ಸಿಗರೋ ಸ್ವಾಮಿ ವಿವೇಕಾನಂದರ ಬುದ್ಧಿಮತ್ತೆ ಯನ್ನು ಭೂಗತ ಜಗತ್ತಿನ ಪಾತಕಿಯೊಬ್ಬನ ಬುದ್ಧಿಮತ್ತೆಗೆ ಹೋಲಿಕೆ ಮಾಡಿ ಹೀಗೆ ಲಘುವಾಗಿ ಮಾತಾಡಿರುತ್ತಿದ್ದರೆ ಪರಿಸ್ಥಿತಿ ಏನಾಗಿರುತ್ತಿತ್ತು? ಬಿಜೆಪಿ ಹಾಗೂ ಸಂಘಪರಿವಾರ ಅದನ್ನೊಂದು ರಾಷ್ಟ್ರೀಯ ಸಮಸ್ಯೆಯ ಮಟ್ಟಕ್ಕೆ ಏರಿಸಿ ದೇಶದ ತುಂಬಾ ಗದ್ದಲವೆಬ್ಬಿಸಿ ತಮ್ಮ ರಾಷ್ಟ್ರಭಕ್ತಿಯನ್ನು ಮೆರೆಯುತ್ತಿದ್ದರು.

ಇದು ಕೇವಲ ನಮ್ಮ ಊಹೆ ಮಾತ್ರವಲ್ಲ, ಇಲ್ಲಿಗೆ ಒಂದೆರಡು ತಿಂಗಳ ಹಿಂದಷ್ಟೆ ಪ್ರಜಾವಾಣಿ ಪತ್ರಿಕೆಯಲ್ಲಿ ವಿಚಾರಶೀಲ ಪತ್ರಕರ್ತರಾದ ದಿನೇಶ್ ಅಮಿನ್‌ಮಟ್ಟು ವಿವೇಕಾನಂದರ ಬಗ್ಗೆ ಬರೆದ ಲೇಖನದ ವಿಷಯದಲ್ಲಿ

ಹಿಂದೆ ಸೋಮಣ್ಣ ಒಮ್ಮೆ ಯಡ್ಡಿಯ ಬಳಿ "ಸಾರ್! ನೀವು ಪಕ್ಷ ಬಿಡಬೇಡಿ. ಇಲ್ಲೇ ಇದ್ದರೆ ಅವಕಾಶಗಳು ಜಾಸ್ತಿ" ಎಂಬ ಬುದ್ಧಿ ಮಾತು ಹೇಳಲು ಪ್ರಯತ್ನಿಸಿದ್ದರು. ಅದನ್ನು ಕೇಳಿ ಯಡ್ಡಿ ಸಂಪೂರ್ಣವಾಗಿ ರಾಂಗ್ ಆಗಿದ್ದರು. "ನನಗೆ ಏನು ಮಾಡಬೇಕೆಂದು ಗೊತ್ತು. ನೀನು ಇಲ್ಲಿಂದ ಹೋಗು" ಎಂದು ಯಡ್ಡಿ ಸೋಮಣ್ಣನ ವಿರುದ್ಧ ಆರ್ಭಟಿಸಿದ್ದರು. ಸೋಮಣ್ಣ ಹೋದನಂತರ ತನ್ನ ಹಿಂಬಾಲಕರ ಬಳಿ "ಈತನನ್ನು ಹೇಗೆ ಸೋಲಿಸ ಬೇಕೆಂದು ನನಗೆ ಗೊತ್ತು" ಎಂದೂ ಯಡ್ಡಿ ಹೇಳಿದರಂತೆ.



ಯಡಿಯೂರಪ್ಪನ ಜೊತೆ ದಿನಾ ವಾಕಿಂಗ್ ಮಾಡುವಾಗ ಪುಟ್ಟಸ್ವಾಮಿ ತನ್ನ ವಿರುದ್ಧ ಯಡ್ಡಿಯ ಕಿವಿ ಊದುತ್ತಾನೆ ಎಂಬುದು ಸೋಮಣ್ಣನ ಕೋಪಕ್ಕೆ ಕಾರಣ. ಹೇಳಿಕೇಳಿ, ಪುಟ್ಟಸ್ವಾಮಿಯನ್ನು ಎಲ್ಲರೂ 'ಯಡ್ಡಿಯ ಕ್ರೇಸಿವಾಲ್' ಎಂದೇ ಕರೆಯುವುದು. ಅದಕ್ಕೆ ಕಾರಣ ಯಡ್ಡಿಯ ವೈರಿಗಳ ವಿರುದ್ಧ ಈ ಪುಟ್ಟಸ್ವಾಮಿ ತನ್ನ ನಾಲಿಗೆಗೆ ಲಂಗುಲಗಾಮಿಲ್ಲದೆ ಚೀರಾಡುವುದು. ಇಂತಹ ಪುಟ್ಟಸ್ವಾಮಿಗೆ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವ ಧೈರ್ಯವಾಗಲಿ, ಸಾಮರ್ಥ್ಯವಾಗಲಿ ಇಲ್ಲ. ಆತನದ್ದೇನಿದ್ದರೂ ತನ್ನ 'ಭೋಪರಾಕ್' ಕಲೆಯನ್ನು ಉಪಯೋಗಿಸಿ ತನ್ನ ಸದ್ಯದ ನಾಯಕನನ್ನು ಮೆಚ್ಚಿಸಿ ಹಿಂದಿನ ಬಾಗಿಲಿನಿಂದ ಅಧಿಕಾರ ಮತ್ತು ಸ್ಥಾನಮಾನ ಪಡೆಯುವ ಚಾಲಾಕಿತನ. ಹೀಗೆ ಯಡ್ಡಿಯನ್ನು ತನ್ನ ಬುಟ್ಟಿಗೆ ಹಾಕಿಕೊಂಡ ಪುಟ್ಟಸ್ವಾಮಿಗೆ ಯಡ್ಡಿ ಎಂ.ಎಲ್.ಸಿಗಿರಿಯನ್ನು ಕೊಟ್ಟರು. ಅಷ್ಟೇ ಅಲ್ಲ, ಜಗದೀಶ್ ಶೆಟ್ಟರ್ ಅವರ ಸಂಪುಟದಲ್ಲಿ ಮಂತ್ರಿಗಿರಿಯನ್ನೂ ಕಲ್ಪಿಸಿದರು.

ಸೋಮಣ್ಣ ಮಾತ್ರವಲ್ಲದೆ ಈಗ ದೈಹಿಕವಾಗಿ ಬಿಜೆಪಿಯಲ್ಲಿರುವ ಆದರೆ ಮಾನಸಿಕವಾಗಿ ಗೊಂದಲದಲ್ಲಿರುವ ಯಡ್ಡಿಯ ಅನೇಕ ಹಿಂಬಾಲಕರ ಭವಿಷ್ಯ ಈಗ ಸಂದಿಗ್ಧ ಸ್ಥಿತಿಯಲ್ಲಿದೆ. ಇದಕ್ಕೆ ಮುಖ್ಯ ಕಾರಣ ಅಧಿಕಾರದಲ್ಲಿರುವ ಪಕ್ಷವನ್ನು ಬಿಟ್ಟು, ಅಧಿಕಾರವಿಲ್ಲದ ಪಕ್ಷವನ್ನು - ಅದರಲ್ಲೂ ಹೊಸ ಪಕ್ಷವನ್ನು - ಸೇರುವುದು ಒಂದು ರೀತಿಯಲ್ಲಿ ರಾಜಕೀಯವಾಗಿ ಆತ್ಮಹತ್ಯೆ ಮಾಡಿಕೊಂಡಂತೆ ಎಂಬುದು ಎಲ್ಲರಿಗೂ ಗೊತ್ತು.


ಇದರೊಂದಿಗೆ ಅವರೆಲ್ಲ ಇನ್ನೂ ಒಂದು ಮುಖ್ಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇತ್ತೀಚೆಗೆ ಯಡ್ಡಿ ತನ್ನ ಅನೇಕ ಹಿಂಬಾಲಕರಿಗೆ ಎರಡು-ಮೂರು ಜಿಲ್ಲೆಗಳ ಉಸ್ತುವಾರಿಯನ್ನು ವಹಿಸಿದ್ದಾರಂತೆ. ಆ ನಿಟ್ಟಿನಲ್ಲಿ ಅವರು ಇತ್ತೀಚೆಗೆ ಸೋಮಣ್ಣನಿಗೆ "ನೀನು ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳನ್ನು ನೋಡಿಕೊಳ್ಳಬೇಕು" ಎಂದರಂತೆ. ಅದನ್ನು ಕೇಳಿದ್ದೇ ತಡ, ಸೋಮಣ್ಣ ಸಂಪೂರ್ಣವಾಗಿ ಬೆವೆತುಬಿಟ್ಟರಂತೆ. ಯಾಕೆಂದರೆ ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳ 'ಉಸ್ತುವಾರಿ' ವಹಿಸಿಕೊಳ್ಳುವುದೆಂದರೆ ಬರುವ ಚುನಾವಣೆಯಲ್ಲಿ ಈ ಜಿಲ್ಲೆಗಳಿಂದ ಯಡ್ಡಿ ಪಕ್ಷದ ಪರವಾಗಿ ಸ್ಪರ್ಧಿಸುವ ಎಲ್ಲ ಅಭ್ಯರ್ಥಿಗಳ ಖರ್ಚುವೆಚ್ಚವನ್ನು ನೋಡಿಕೊಳ್ಳಬೇಕು. ಒಂದು ಅಂದಾಜಿನ ಪ್ರಕಾರ ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳ ಅಭ್ಯರ್ಥಿಗಳಿಗೆ ಕನಿಷ್ಟವೆಂದಾದರೂ 20ರಿಂದ 25 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ.

ಹೀಗೆ ಯಡ್ಡಿಯೂರಪ್ಪ ಮುರುಗೇಶ್ ನಿರಾಣಿ, ಬಸವರಾಜ್ ಬೊಮ್ಮಾಯಿ, ಉದಾಸಿ, ರೇಣುಕಾಚಾರ್ಯ ತರಹದ ತನ್ನ ಪ್ರಮುಖ ಹಿಂಬಾಲಕರಿಗೆ ಎರಡು-ಮೂರು ಜಿಲ್ಲೆಗಳ ಜವಾಬ್ದಾರಿಯನ್ನು ಹಂಚಿದ್ದಾರೆ. ಅಂದರೆ ಇವರೆಲ್ಲ ಯಡ್ಡಿಯ ಹೊಸ ಪಕ್ಷಕ್ಕೆ ಸೇರುವುದು ಮಾತ್ರವಲ್ಲ, ತಾವು ಇಲ್ಲಿಯತನಕ ಅಕ್ರಮವಾಗಿ ಸಂಪಾದಿಸಿರುವ ಕೋಟ್ಯಾಂತರ ರೂಪಾಯಿಗಳನ್ನು ಯಡ್ಡಿಯ ಪ್ರತಿಷ್ಠೆಗೆ ಖರ್ಚು ಮಾಡಬೇಕು. ಮಾತ್ರವಲ್ಲ, ಹಾಗೆ ತಮ್ಮ ಖಜಾನೆಗಳಲ್ಲಿ ಶೇಖರಗೊಂಡಿರುವ ಹಣವನ್ನೆಲ್ಲ ಮುಂದಿನ ಚುನಾವಣೆಯಲ್ಲಿ ವೆಚ್ಚ ಮಾಡಿದರೂ ಮತ್ತೆ ಅಧಿಕಾರವನ್ನು ಗಿಟ್ಟಿಸುವ ಖಾತರಿ ಇಲ್ಲ. ಅಂದರೆ ಕೈಯಲ್ಲಿ ಹಣವೂ ಇಲ್ಲ, ಅದನ್ನು ಮತ್ತೆ ಹಿಂದೆ ಪಡೆಯುವ ಅವಕಾಶವೂ ಇಲ್ಲದಂತಹ ಪರಿಸ್ಥಿತಿ ಎದುರಾಗಬಹುದು. ಈ ಭೀತಿಯಿಂದಾಗಿಯೇ ಯಡ್ಡಿಯ ಹೆಚ್ಚಿನ ಹಿಂಬಾಲಕರು ಬಿಜೆಪಿಯಲ್ಲೇ ಉಳಿಯಲು ಮನಸ್ಸು ಮಾಡುತ್ತಿದ್ದಾರಂತೆ.

ಆದರೆ ಯಡ್ಡಿ ಮಾತ್ರ ಬೇರೆ ಲೆಕ್ಕಾಚಾರದಲ್ಲಿದ್ದಾರೆ. "ಇವರೆಲ್ಲ ರಾಜಕೀಯವಾಗಿ ಲೆಕ್ಕಕ್ಕೇ ಇಲ್ಲದಿದ್ದಾಗ ಇವರಿಗೆ ರಾಜಕೀಯ ಪುನರ್ಜನ್ಮ ನೀಡಿ ಹಣ ಮಾಡಲು ಅವಕಾಶ ಕೊಟ್ಟದ್ದೇ ನಾನು. ಹೀಗಾಗಿ ಅವರು ಮಾಡಿಕೊಂಡಿರುವ ಹಣದಲ್ಲಿ ಸ್ವಲ್ಪ ಭಾಗವನ್ನು ಹೊಸ ಪಕ್ಷಕ್ಕಾಗಿ ಖರ್ಚು ಮಾಡಿದರೆ ತಪ್ಪೇನು?" ಎಂಬುದು ಅವರ ವಾದವಂತೆ.

ಯಡ್ಡಿ ವಲಯದಲ್ಲಿರುವ ಗೊಂದಲಗಳ ಅಭಿವ್ಯಕ್ತಿಯೇ ಮೊನ್ನೆ ಸೋಮಣ್ಣ ಮತ್ತು ಪುಟ್ಟಸ್ವಾಮಿ ನಡುವೆ ಆದ ಜಗಳ. ಸದ್ಯದಲ್ಲೇ ಅಂತಹ ಅನೇಕ ಜಗಳಗಳು ಖಂಡಿತವಾಗಿಯೂ ನಡೆಯುತ್ತವೆ ಎಂಬುದೇ ಹೆಚ್ಚಿನವರ ಅಂಬೋಣ.

● ಶೆಣೈ



ಇದೇ ಪರಿವಾರ ಮಾಡಿದ್ದೇನು? ಶಿವಮೊಗ್ಗದ ಪ್ರಜಾವಾಣಿ ಪತ್ರಿಕಾ ಕಚೇರಿಗೆ ನೇರವಾಗಿ ದಾಳಿಯಿಟ್ಟು ದಾಂಧಲೆ ಎಬ್ಬಿಸಿ ಫ್ಯಾಸಿಸ್ಟ್ ಮಾದರಿಯ ಎಚ್ಚರಿಕೆಗಳನ್ನು ಚೆಡ್ಡಿಗಳು ತಮ್ಮ ವಿರೋಧಿಗಳಿಗೆ ರವಾನಿಸಿದ್ದರು. ಇಷ್ಟಕ್ಕೂ ದಿನೇಶ್ ಬರೆದಿದ್ದ ವಿಚಾರ ವಿವೇಕಾನಂದರನ್ನು ಅವಹೇಳನ ಮಾಡುವಂತದ್ದಾಗಿರಲಿಲ್ಲ, ಅವರ ಆಹಾರ ಪದ್ಧತಿಯ ಬಗ್ಗೆ ಚಾರಿತ್ರಿಕ ದಾಖಲೆಗಳ ಆಧಾರದಲ್ಲಿ ವಿಶ್ಲೇಷಣೆ ಮಾಡಿದ್ದರು ಅಷ್ಟೆ.

ಬಿಜೆಪಿಯೊಳಗಿನ ಒಂದು ಆಂತರಿಕ ವಿದ್ಯಮಾನದ ಉದಾಹರಣೆಯನ್ನೇ ನೋಡೋಣ.

ಕೆಲವರ್ಷಗಳ ಹಿಂದೆ ಜಿನ್ನಾ ಒಬ್ಬ ಜಾತ್ಯತೀತ ವ್ಯಕ್ತಿಯೆಂಬ ಸತ್ಯವನ್ನು ಅದ್ಯಾವುದೋ ಕೆಟ್ಟ ಘಳಿಗೆಯಲ್ಲಿ ಬಾಯಿಬಿಟ್ಟ ತಪ್ಪಿಗೆ ಹಿರಿಯ ನಾಯಕ ಅಡ್ವಾಣಿಗೆ ಅಧ್ಯಕ್ಷ ಪಟ್ಟ ತಪ್ಪಿಸಲು ಸಂಘಪರಿವಾರ ಆಕಾಶ ಭೂಮಿಗಳನ್ನು ಒಂದು ಮಾಡಿದ್ದನ್ನು ನಾವು ನೆನಪಿಸಿಕೊಳ್ಳಬಹುದು. ವಾಸ್ತವದಲ್ಲಿ ಅಂದಿನ ವಿದ್ಯಮಾನಕ್ಕೆ ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನೊಳಗಿನ ಗುಂಪುಗಾರಿಕೆ ಕಾರಣವಾಗಿತ್ತು.

ಆದರೆ ಈಗ ಬಿಜೆಪಿಯ ಮಹಾ ಮೇಧಾವಿ ಅಧ್ಯಕ್ಷ ಗಡ್ಕರಿ ವಿವೇಕಾನಂದರಿಗೂ ಭೂಗತ ಪಾತಕಿಗೂ ಸಂಬಂಧ ಕಲ್ಪಿಸಿದ್ದಾನೆ. ಬಿಜೆಪಿ ಹಾಗೂ ಸಂಘ ಪರಿವಾರದ ಮಂದಿ ಮಾನಮರ್ಯಾದೆ ಬಿಟ್ಟು ಈ ಅವಿವೇಕಿಯ ಸಮರ್ಥನೆಗೆ ನಿಂತುಬಿಟ್ಟಿದ್ದಾರೆ.

ಆದರೆ ಈ ಸಂದರ್ಭದಲ್ಲೂ ಬಿಜೆಪಿಯೊಳಗಿನ ಆಂತರಿಕ ಕಚ್ಚಾಟವಷ್ಟೇ ಮುನ್ನೆಲೆಗೆ ಬರುತ್ತಿದೆ. ನರೇಂದ್ರ ಮೋದಿ ಪರ ಲಾಬಿ ನಡೆಸುತ್ತಿರುವ ಒಂದು ಗುಂಪು ಈ ಸಂದರ್ಭದಲ್ಲಿ ಗಡ್ಕರಿಯ ಬಗ್ಗೆ ವಿಮರ್ಶೆಯ ಮಾತುಗಳನ್ನಾಡುತ್ತಿದ್ದಾರೆ. ಅದು ಬಿಟ್ಟರೆ ಯಾವುದೇ ನೈತಿಕತೆ ಅಥವಾ ವಿಚಾರಬದ್ಧತೆಯ ಸುಳಿವು ಅದರಲ್ಲಿ ಕಂಡುಬರುತ್ತಿಲ್ಲ.

ಈ ಘಟನಾವಳಿಗಳನ್ನು ಸ್ವಲ್ಪ ಒರೆಗೆ ಹಚ್ಚಿ ನೋಡುವುದಾದರೆ ಸಂಘ ಪರಿವಾರಕ್ಕೆ ಯಾವುದೇ ನಿರ್ದಿಷ್ಟ ಬದ್ಧತೆ, ನೀತಿನಿಲುವುಗಳು ಇಲ್ಲದೆಂಬ ಸತ್ಯ ಗೋಚರವಾಗುತ್ತದೆ. ಅಧಿಕಾರ ಹಿಡಿಯುವ ಹುನ್ನಾರದಲ್ಲಿ ಸಂದರ್ಭಕ್ಕೆ ತಕ್ಕಂತೆ ತಮ್ಮ ವೇಷ ಬದಲಾಯಿಸುತ್ತಿರುವ ಇವರ ನಾಟಕ ಮತ್ತೊಮ್ಮೆ ಜಗಜ್ಜಾಹೀರಾಗಿದೆ. ■

ಉದಯವಾಣಿಯವರು ಚೆಡ್ಡಿಮಕ್ಕಳು ಸಾರ್


ಧೂತ್ತೇರಿ

▸ಯಾಹೂ

ಸಾದ ಜಗತ್ತಿನ ಜಗದ್ಗುರುವಾದ ಶಿವಾನಂದ ಶಿವಾಚಾರ್ಯರು ಸರ್ಕಾರ ಮಠಗಳಿಗೆ ದುಡ್ಡು ಕೊಡುವುದು ತಪ್ಪಲ್ಲ, ಹಾಗೆಯೇ ಮಠಗಳು ಸರ್ಕಾರಕ್ಕೆ ಕೈಚಾಚಿ ಪಡೆದುಕೊಳ್ಳುವುದೂ ತಪ್ಪಲ್ಲ ಎಂಬ ಯಾಚನೆಯ ಸಂದೇಶವನ್ನು ರವಾನಿಸಿದ್ದಾರಂತಲ್ಲಾ, ಇದಕ್ಕೆ ಮಾರ್ದನಿಯಾಗಿ ಪಂಚಮಸಾಲಿ ಶೀಲವಂತ ಸ್ವಾಮಿಯೊಬ್ಬರು "ಮಠಗಳು ಭಕ್ತಾದಿಗಳ ದೇಣಿಗೆ ಮುಖಾಂತರ ನಡೆಯಬೇಕೇ ಹೊರತು ಸರ್ಕಾರದ ಕಾಸಿಗೆ ಕೈಯೊಡ್ಡಿ ಗುಲಾಮತನ ಬೆಳೆಸಿಕೊಳ್ಳಬಾರದು" ಎಂಬ ಚಾಟಿ ಬೀಸಿದ್ದಾರಂತಲ್ಲಾ. ಆದರೆ ಸದರೀ ಸಾದ ಜನಾಂಗದ ಜಗದ್ಗುರುಗಳು ಇಂತಹ ವಿವೇಕದ ಮಾತುಗಳಿಂದ ದೂರಹೋಗಿ, ಯಡ್ಡಿಯ ಗಳಸ್ಯಕಂಠಸ್ಯ ಗೆಳೆಯರಾಗಿ ಹೋಗಿದ್ದಾರಂತಲ್ಲಾ, ಸರ್ಕಾರದಿಂದ ಕೋಟಿಗಟ್ಟಲೆ ಭಿಕ್ಷೆ ಪಡೆದ ಮಠಗಳು ಯಡೂರಪ್ಪ ಗೋಗರೆದು "ನನ್ನ ಪರವಾಗಿ ಮತ ಕೇಳಿ" ಎಂದು ಅಂಗಲಾಚಿದರೆ ಅದನ್ನು ನಿರಾಕರಿಸಲಾಗದ ಸ್ಥಿತಿಗೆ ಬಂದಿವೆಯಂತಲ್ಲಾ.

"ಭಿಕ್ಷಾಪಾತ್ರೆಗಳಂತಾಗಿರುವ ಮಠಗಳು ಇನ್ನೂ ಕೆಡುವ ಸಾಧ್ಯತೆಗಳಿಲ್ಲ. ಅವುಗಳೆಲ್ಲಾ ಕೆಟ್ಟು ಬಹಳ ದಿನಗಳಾಗಿವೆ. ಇನ್ನೇನಿದ್ದರೂ ಕೆಟ್ಟ ಜೀವನದ ಮುಂದುವರಿಕೆಯಷ್ಟೇ ಉಳಿದಿರುವುದು" ಎಂದು ನಿಡುಮಾಮಿಡಿ ಸ್ವಾಮಿ ಮತ್ತವರ ಶಿಷ್ಯರು ಆಡಿಕೊಂಡು ಗಡ್ಡ ಕೆರೆದುಕೊಂಡರಂತಲ್ಲಾ, ಥೂತ್ತೇರಿ!

******



ಕರ್ನಾಟಕಕ್ಕೆ ಕೃಷ್ಣರ ಆಗಮನದ ನಂತರ ಸಿದ್ದರಾಮಯ್ಯನ ಮನಸ್ಥಿತಿ ಹೇಗಿದೆಯೆಂದು ತಿಳಿಯಬೇಕೆನಿಸಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಟರ್‌ರ್... ಟರ್‌ರ್... ಟರ್‌ರ್...."

"ಹಲೋ?"

"ನಮಸ್ಕಾರ ಸಾರ್, ನಾನು ಯಾಹು."

"ಏನ್ರಿ ಯಾಹೂ."

"ಎಸ್ಸೆಂ ಕೃಷ್ಣ ಕರ್ನಾಟಕಕ್ಕೆ ಬಂದ್ರಲ್ಲ ಸಾರ್?"

"ಆ......"

"ಎಸ್ಸೆಂ ಕೃಷ್ಣ ಕರ್ನಾಟಕಕ್ಕೆ ಬಂದ್ರು....."

"ಮೊನ್ನೆನೆ ಬಂದ್ರಲ್ಲ."

"ನೀವು ವಿಮಾನ ನಿಲ್ದಾಣಕ್ಕೆ ಹೋಗಿರಲಿಲ್ಲವಂತೆ?"

"ಮದುವೆಗೋಗಿದ್ದೆ."

"ಊರಲ್ಲೇ ಇದ್ದು ಕೃಷ್ಣರ ಭೇಟಿಗೋಗಿಲ್ಲ ಅಂತ ಉದಯವಾಣಿಯವರು ಬರದವ್ರಲ್ಲಾ ಸಾರ್?"

"ಅಲ್ಲಾ ಕಂಡ್ರೀ, ಗೆಳೆಯನ ಮಗನ ಮದುವೆಗೆ ದಾವಣಗೆರೆಗೋಗಿ ರಾತ್ರಿ ಹತ್ತು ಗಂಟೆಗೆ ಬಂದೆ. ನಾನೆಲ್ಲಿದ್ದಿನಿ ಅಂತ ತಿಳಕಳಕ್ಕೆ ಫೋನು ಮಾಡಿ ಬರಿಯದಲ್ಲವ ಆ ಬಡ್ಡಿ ಹೈಕಳು."

"ಬಡ್ಡಿ ಹೈಕಳಲ್ಲ ಸಾರ್, ಚೆಡ್ಡಿ ಹೈಕಳವ್ರು."

"ಚೆಡ್ಡಿ ಹೈಕಳು ಅಂದ್ರೆ?"

"ಚೆಡ್ಡಿ ಹೈಕಳು ಅಂದ್ರೇ ಆರೆಸಿಸ್ಸಿನೋರ ಮಕ್ಕಳು. ಅವು ಪತ್ರಿಕೆಗಳಿಗೆ ಬಂದು ಸೇರಿಕಂಡು ತಮ್ಮ ಅಜೆಂಡಾಗಳನ್ನೇ ಕೆರಿತವೆ."

"ಅದ್ಕೆ ನಾನು ಓದಕ್ಕೆ ಹೋಗಲ್ಲ."

"ಒಳ್ಳೆ ಅಭ್ಯಾಸ ಸಾರ್."

"ಮತ್ತೆ ಇನ್ನೇನ್ರಿ? ನಾನು ದಾವಣಗೆರೆಲಿದ್ರೂ ಬೆಂಗಳೂರಲ್ಲೆ ಇದ್ದೆ ಅಂತ ಬರಿಯುವವರಿಗೆ ಏನೋ ದುರುದ್ದೇಶ ಇದೆ ಕಂಡ್ರಿ."

"ದುರುದ್ದೇಶ ಇರಲ್ಲ ಸಾರ್. ಪೂರ್ವಗ್ರಹಗಳ ಪರಿಣಾಮ."

"ಪತ್ರಕರ್ತರಿಗೆ ಪೂರ್ವಗ್ರಹ ಇರಬಾರದಲ್ಲವಾ. ನಾನು ದಾವಣಗೆರೆಲಿದ್ದಷ್ಟು ಸಾವ್ರದಾರು ಜನ ನೋಡ್ತವ್ರೆ. ಹಾಗೆ ಗೆಳೆಯ ಬೇಜಾರಾಯ್ತನೆ ಅಂತ ಹೋಗಿದ್ದೆ. ಕೃಷ್ಣ ಅವರನ್ನ ಮಾರನೆ ದಿನ ಭೇಟಿ ಮಾಡಬವುದು. ಮದುವೆಗೆ ಮಾರನೆ ದಿನ ಹೋಗಕಾದ್ದೇನ್ರಿ?"

"ಆಗಲ್ಲ ಸಾರ್."

"ಮತ್ತೆ ಬರಿಯೋ ಮುನ್ನ ಯೋಚನೆ ಮಾಡಬೇಕು. ದವುಟು ಬಂದ್ರೆ ಫೋನ್ ಮಾಡಬೇಕು."

"ನೀವು ಹೋಗದಿಲ್ಲ ಅನ್ನದೆ ಒಂದು ಸುದ್ದಿಯಾಗಿತ್ತು, ಅದ್ಕೆ ಕೇಳಿದೆ ಸಾರ್."

"ಕೃಷ್ಣ ಅವರು ಕಾಂಗ್ರೆಸ್ಸಿನ ಹಿರಿಯ ನಾಯಕರು. ಬಹಳ ದೊಡ್ಡ ದೊಡ್ಡ ಸ್ಥಾನದಲ್ಲಿದ್ದೋರು. ಸೆಂಟ್ರಲ್ ಕ್ಯಾಬಿನೆಟ್ನಲ್ಲಿ ಹಿರಿಯ ಸಚಿವರಾಗಿದ್ರು. ಈಗ ರಾಜೀನಾಮೆ ಕೊಟ್ಟು ಬಂದವ್ರೆ. ಅವರನ್ನ ಯಾವಾಗ್ಲಾದ್ರು ಬಿಡುವಾದಾಗ ಹೋಗಿ ನಾನಾಗ್ಲಿ ಪರಮೇಶ್ವರಾಗ್ಲಿ ಮಾತಾಡಸ್ತಿವಿ. ಅದ್ಕೆ ಒಂದು ಸುದ್ದಿ ಮಾಡಿಕೊಂಡು ಕುಂತಿದ್ದಿರಲ್ಲಾ ನಿಮಗೇನೇಳನಾ."

"ಅವ್ರುರು ಬಂದಿರದ್ರಿಂದ ಕಾಂಗ್ರೆಸ್ಸಿಗೆ ಅನುಕೂಲನ ಸಾರ್?"

"ಅನುಕೂಲನೆ. ಸೀ, ಮುಂದಿನ ಚುನಾವಣೆನಾ ಒಂದು ಟೀಂ ವರ್ಕಲ್ಲಿ ಎದುರುಸೋದ್ರಿಂದ ಅವ್ರಿಂದ ಪಾರ್ಟಿಗೆ ಹೆಲ್ಪಾಗುತ್ತೆ."

"ಕಾವೇರಿ ಇಶ್ಯೂನಲ್ಲಿ ನೀವು ರಾಜೀನಾಮೆ ಕೊಡಬೇಕಾಗಿತ್ತು, ಯಾಕಂದ್ರೆ ಎಮ್ಮೆಲ್ಸಿ ಚುನಾವಣೆಲಿ ನಿಮ್ಮ ಗೆಳೆಯ ಇಬ್ರಾಹಿಂಗೆ ಟಿಕೆಟ್ ಕೊಡಲಿಲ್ಲ ಅಂತ ರಾಜೀನಾಮೆ ಕೊಟ್ಟಿದ್ರಂತೆ."

"ಕಾವೇರಿ ಇಶ್ಯೂ ರಾಜೀನಾಮೆಯಿಂದ ಪರಿಯಾರ ಆಗಲ್ಲ ಕಂಡ್ರೀ. ಜೆಡಿಎಸ್ ಶಾಸಕರು, ಎಂಪಿ ರಾಜೀನಾಮೆ ಕೊಟ್ರು. ಏನಾಗಿದೆ? ಅದೇ ಒಂದು ಡ್ರಾಮಾ ಆಗಿದೆ. ಕಾವೇರಿ ಪ್ರಾಬ್ಲಂ ಸಾಲು ಆಗಿದೆಯೇನ್ರಿ?"

"ಇಲ್ಲ ಸಾರ್."

"ಮತ್ತೆ ನಾನು ರಾಜೀನಾಮೆ ಕೊಟ್ರೆ ಯಲ್ಲ ಸರಿಯೋಗದಾ?"

"ಅಲ್ಲಾ ಎಮ್ಮೆಲ್ಸಿ ಚುನಾವಣೆಲಿ ಕೊಟ್ರಲ್ಲ ಅದ್ಕೆ."

"ಎಮ್ಮೆಲ್ಸಿ ಚುನಾವಣೆಲಿ ನಮ್ಮನ್ನ ಕೇಳದೆ ಅಭ್ಯರ್ಥಿಗಳನ್ನ ಆಯ್ಕೆ ಮಾಡಿದ್ರು. ಅದು ವಿರೋಧ ಪಕ್ಷದ ಸ್ಥಾನಕ್ಕೆ ಮಾಡಿದ ಅವ್ಮಾನ ಅಂತ ಹೇಳಿ ರಾಜೀನಾಮೆ ಕೊಡಬೇಕಾಯ್ತು. ಸೋನಿಯಾ ಗಾಂಧಿ ಸಾರಿ ಅಂದಮೇಲೆ ರಾಜೀನಾಮೆ ವಾಪಸ್ ತಕ್ಕಂಡಿದ್ದು. ಕಾವೇರಿ ಇಶ್ಯೂನೆ ಬೇರೆ, ಎಮ್ಮೆಲ್ಸಿ ಚುನಾವಣೆ ಇಶ್ಯೂನೆ ಬೇರೆ. ಯಲ್ಲಾತ್ಕು ರಾಜೀನಾಮೆ ಕೊಡಿ ಅಂದ್ರೆ ಆದ್ದೇನ್ರಿ. ಆಯ್ತು ರಾಜೀನಾಮೆ ಕೊಡನ. ಕೊಟ್ಟೇಟಗೆ ನೀರು ನಿಂತೋದ್ದೇನ್ರಿ?"

"ಇಲ್ಲ ಸಾರ್."

"ಮತ್ತೆ? ಚೈಲ್ಡಿಶ್ಶಾಗಿ ಮಾತಾಡಿದ್ರೆ ಉತ್ತರ ಕೊಡಕಾದ್ದಾ? ಕೋರ್ಟುಗಳು, ಚಳವಳಿಗೆಲ್ಲಾ ಹೆದರಲ್ಲ. ನಾವು ಕಾನೂನು ಮುಖಾಂತರನೇ ಹೋರಾಡಬೇಕು."

"ಕೋರ್ಟಿನಾಚೆಗೆ ಕೆಲವು ಪ್ರಾಬ್ಲಂ ಸಾಲು ಆಯ್ತಾವಲ್ಲ ಸಾರ್."

"ಇಬ್ರು ಕುಂತಗಂಡಾಗ ಅಂಗಾಯ್ತವೆ. ಆ ತಮುಳನಾಡಿನವ್ರು ಜೊತೆ ನಮ್ಮೋರು ಕುಂತಗಂಡರೇ? ಮಾದೇಗೌಡ ಒಂದು ಕಡೆ ಆದ್ರೆ ದೇವೇಗೌಡ ಒಂದು ಕಡೆ. ಅವ್ರ ಮಗ ಇನ್ನೊಂದು ಕಡೆ. ಇಂಗಾದ್ರೆ ಕಾವೇರಿ ನೀರ ತಡಿಯಕ್ಕಾತ್ತೇನಯ್ಯಾ?"

"ಹೋಗ್ಲಿ ಬುಡಿಸಾರ್. ನಿಮ್ಮ ವರುಣಾ ನಾಲೆಲಿ ನೀರು ಹರದ್ರೆ ಸಾಕಲವೆ?"

"ಹಿಂಗೇಳಿದ್ರೆ ಅಂಗೇಳ್ತಿರಲ್ರೀ? ಅದ್ಕೆ ಬೇಜಾರಾಗದು."

"ನೀವು ಪಾರ್ಟಿ ಕಟ್ಟೋ ವಿಷಯದಲ್ಲಿ ಯಾರಿಗೂ ಫೋನ್ ಮಾಡದಿಲವಂತೆ."

"ಯಾಕ್ ಮಾಡಬೇಕೂ?"

"ಪಾರ್ಟಿ ಕಟ್ಟಿ ಪವರಿಗೆ ಬರಬೇಕಲ್ಲವಾ ಸಾರ್?"

"ಆ ದೇವೇಗೌಡ ದಾತ್ನಲ್ಲ ಫೋನು ಮಾಡ್ತನೆ. ಆ ಎಡೂರಪ್ಪನೂ ಅಂಗೆಯಾ. ಕಾಂಗೆಸ್ನಲ್ಲಿ ಅಂಗ್ಯಲ್ಲ ಫೋನ್ ಮಾಡಕ್ಕಾಗದಿಲ್ಲ ಕಂಡ್ರೀ."

"ಯಾಕ್ ಸಾರ್?"

"ಅನುಮಾನ ಬತ್ತದೆ ಕಂಡ್ರೀ. ಒಬ್ಬನಿಗೆ ಲೀಡರ್‌ಶಿಪ್ ಕೊಟ್ರೆ ಅಂಗೆ ಮಾಡಬವುದು. ಕಲೆಕ್ಟಿವ್ ಲೀಡರ್‌ಶಿಪ್ನಾಗ ಅಂಗೆ ಮಾಡಿದ್ರೆ ಅನುಮಾನ ಬತ್ತದೆ."

"ಯಾರಿಗೆ ಸಾರ್?"

"ಜೊತೆಲಿದ್ದೋರಿಗೆ"

"ನಿಮ್ಮ ಪಾರ್ಟಿ ಉದ್ಧಾರಾಗಲ್ಲ ಸಾರ್."

"ಥೂತ್ತೇರಿ!!" ■

ರಮ್ಯಾ-ರಕ್ಷಿತಾ, ಪೂಜಾ ಗಾಂಧಿ ಮತ್ತು ರಾಧಿಕಾ...

ಗಾಂಧಿನಗರದ ವಾರ್ ಆಫ್ ರೋಸಸ್





ಚುನಾವಣೆಗಿನ್ನು ಕೆಲವೇ ತಿಂಗಳು ಬಾಕಿಯಿರುವಂತೆ ಗಾಂಧಿನಗರದಲ್ಲೊಂದು ವಿಲಕ್ಷಣ ಹಣಾಹಣಿ ತಲೆ ಎತ್ತಿದೆ. ಅದು ವಾರ್ ಆಫ್ ರೋಸಸ್. ಅಂದರೆ 'ಗುಲಾಬಿ ಕಾಳಗ.' ನಟಿ ರಮ್ಯಾ ವಿರುದ್ಧ ರಕ್ಷಿತಾ ಜಗಳಕ್ಕಿಳಿದರೆ, ಇವರಿಬ್ಬರ ವಿರುದ್ಧ ಪೂಜಾ ಗಾಂಧಿ ಪೈಪೋಟಿಗೆ ನಿಂತರೆ, ಇವರೆಲ್ಲರನ್ನೂ ಎದುರಿಸಲು ತಾರಾ ಮತ್ತು ಶ್ರುತಿ ಸೇರಿಕೊಂಡು ರಾಮರಥವೇರಿದರೆ-ಕನ್ನಡ ಜನತೆಗೆ ಇನ್ನೆಂಥಾ ಮನರಂಜನೆ ಬೇಕು?

ಜೆಡಿಎಸ್ ಅಧಿಪತಿ ಕುಮಾರಣ್ಣನ ಪರವಾಗಿ ಚಿಂದುಳ್ಳಿ ಚೆಲುವೆ ರಾಧಿಕಾ ಕುಮಾರಸ್ವಾಮಿ ಮನೆಮನೆ ಸುತ್ತಿ ಓಟು ಕೇಳಿದರೆಂದರೆ ಅದಿನ್ನೆಂಥಾ ಭೋಪರಂದು?

ಎತ್ತಿಂದೆತ್ತ ಲೆಕ್ಕ ಹಾಕಿದರೂ ಈ ಬಾರಿಯ ಚುನಾವಣೆಯಲ್ಲಿ ಹೀರೋಗಳಿಗಿಂತಲೂ ಹೀರೋಯಿನ್‌ಗಳ ಹಾರಾಟದ್ದೇ ಮೇಲುಗೈಯಾಗಲಿದೆ.

ಬಿಜೆಪಿಯ ದೈತ್ಯ ಮತ್ತು ಉಪಮುಖ್ಯಮಂತ್ರಿ ಅಶೋಕ್‌ರನ್ನು ಮಣ್ಣು ಮುಕ್ಕಿಸಲು(!) ಮಣ್ಣಿನ ಮಗ ದೇವೇಗೌಡರು ಎಸ್. ನಾರಾಯಣನೆಂಬ ಪ್ರಖಾಂಡ ಬುದ್ಧಿಮತ್ತೆಯ ಆಸಾಮಿಯನ್ನು ಕಣಕ್ಕಿಳಿಸಲಿದ್ದಾರೆಂಬುದು ಒಂದು ಸುದ್ದಿ. ಸಮಸ್ತ ತಾರಾಮಂಡಲದ ಮುಂದಾಳು ಅಂಬಿಗಾಗಿ ಮಂಡ್ಯವನ್ನು ಬಿಟ್ಟುಕೊಡಲು ಕಾಂಗ್ರೆಸ್ ತುದಿಗಾಲಲ್ಲಿ ನಿಂತಿದೆಯೆಂಬುದು ಮತ್ತೊಂದು ಸುದ್ದಿ. ಬಾಗಲಕೋಟೆಯ ತೇರದಾಳದ ಬಿಜೆಪಿಯ ಸಿದ್ದು ಸವದಿಯ ವಿರುದ್ಧ ನಟಿ ಉಮಾಶ್ರೀ ಈ ಸಾರಿ ಮತ್ತೆ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿ ಮಾಡು ಇಲ್ಲವೇ ಮಡಿ ಕಾಳಗಕ್ಕೆ ಅಣಿಯಾಗುತ್ತಿದ್ದಾರೆಂಬುದು ಇನ್ನೊಂದು ಸುದ್ದಿ. ಬಿ.ಸಿ. ಪಾಟೀಲ್, ಸಾಯಿಕುಮಾರ್, ಜಗ್ಗೇಶ್, ಕೊಬ್ರಿ ಮಂಜು, ದೊಡ್ಡಣ್ಣ, ಮುನಿರತ್ನ, ಮದನ್ ಮಲ್ಲು, ಶ್ರೀನಾಥ್ ಹೀಗೆ ಅಳಿದುಳಿದ ಹೀರೋಗಳು, ವಿಲನ್‌ಗಳು, ನಟರೆಲ್ಲ ಯಾರೆಷ್ಟೇ ಪಾರ್ಟಿ, ಪಾಲಿಟಿಕ್ಸು, ಎಲೆಕ್ಷನ್ನು ಎಂದೆಲ್ಲ ಹಾರಾಡಿದರೂ ಈ ಬಾರಿಯ ಚುನಾವಣೆ ರಂಗೇರುವುದು ರಮ್ಯಾ, ರಕ್ಷಿತಾ ಮತ್ತು ಪೂಜಾಗಾಂಧಿ ಎಂಬ ಮೋರುನಟಿಯರ ಹಣಾಹಣಿಯಿಂದಲೇ. ಇದನ್ನೇ ಗಾಂಧಿನಗರದ ಪರಿಣಿತರು 'ವಾರ್ ಆಫ್ ರೋಸಸ್' ಎನ್ನುತ್ತಾರೆ.

ಸದ್ಯ ಇಡೀ ಗಾಂಧಿನಗರದುದ್ದಕ್ಕೂ ಹೊಗೆಯಾಡುತ್ತಿರುವ ಪ್ರಮುಖ ರೂಮರ್ ಒಂದರ ಪ್ರಕಾರ ಕೇಂದ್ರ ಮಂತ್ರಿತ್ವವನ್ನೇ ತೊರೆದು ಕರ್ನಾಟಕದತ್ತ 'ಕೃಪೆ' ತೋರಿದ ಎಸ್.ಎಂ. ಕೃಷ್ಣ ಈ ಸಾರಿ ತಮ್ಮ ತವರೂರು ಮದ್ದೂರಿನಿಂದ ತಮ್ಮ ಮಾನಸಪುತ್ರಿ ರಮ್ಯಾಳನ್ನೇ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಮಾಡುತ್ತಾರಂತೆ. ತಮ್ಮ ಎಸ್.ಎಂ. ಶಂಕರ್, ಆತನ ಮಗ ಗುರುಚರಣ್ ಎಲ್ಲರನ್ನೂ ಬದಿಗೊತ್ತಿ ತನ್ನ ಮಾನಸ ಪುತ್ರಿ ರಮ್ಯಾಳನ್ನು ಕೃಷ್ಣ ಏನಾದರೂ ಕಾಂಗ್ರೆಸ್ ಅಭ್ಯರ್ಥಿಯಾಗಿ ರೇಸಿಗೆ ಇಳಿಸಿದರೆಂದರೆ ಅವರ ವಿರುದ್ಧ ನೇರಾನೇರ ಹಣಾಹಣಿಗಿಳಿಯುವವಳು ಬಿಎಸ್‌ಆರ್ ಕಾಂಗ್ರೆಸ್ಸಿನ ಅಧಿನಾಯಕಿ ರಕ್ಷಿತಾ!

ರಮ್ಯಾ ವಿರುದ್ಧ ರಕ್ಷಿತಾ ಪತಿ ಪ್ರೇಮ್ ಏನಾದರೂ ಬಿಎಸ್‌ಆರ್ ಕಾಂಗ್ರೆಸ್ ಅಭ್ಯರ್ಥಿಯಾದನೆಂದರೆ ಆತನ ಪರ ನೇರಾನೇರ ರಕ್ಷಿತಾ ಅಖಾಡಕ್ಕಿಳಿಯುವುದು ಶತಸ್ಸಿದ್ಧ. ಹಾಗೊಮ್ಮೆ ತಾನು ನಿಲ್ಲಲು ಪ್ರೇಮ್ ಹಿಂಜರಿದು ತನ್ನ ಪತ್ನಿಯನ್ನೇ ರಮ್ಯಾ ವಿರುದ್ಧ ಕಣಕ್ಕಿಳಿಸಿದನೆಂದರೆ ರಕ್ಷಿತಾ-ಪ್ರೇಮ್ ಜೋಡಿಯಿಂದಾಗಿ ಮದ್ದೂರು ಹಣಾಹಣಿಗೇ ರಂಗೇರುವುದಂತೂ ಗ್ಯಾರಂಟಿ. ಮದ್ದೂರಿನ ತಾರಾಸಮರ ಇಷ್ಟಕ್ಕೇ ನಿಲ್ಲುವುದಿಲ್ಲ, ಕಾಂಗ್ರೆಸ್ಸಿನಿಂದ ರಮ್ಯಾ ನಿಂತು, ಬಿಎಸ್‌ಆರ್ ಕಾಂಗ್ರೆಸ್ಸಿನಿಂದ ರಕ್ಷಿತಾ ಅಥವಾ ಪ್ರೇಮ್ ಪೈಪೋಟಿಗಿಳಿದು, ಜೆಡಿಎಸ್‌ನಿಂದ ಹಾಲಿ ಶಾಸಕಿ ಕಲ್ಪನಾ ಸಿದ್ಧರಾಜು ಅಭ್ಯರ್ಥಿಯಾದರೆಂದರೆ ಅವರ ಪರ ಪ್ರಚಾರಕ್ಕೊಂದು ವಿಶೇಷ ಆಕರ್ಷಣೆಯಾಗುವುದು ಪೂಜಾ ಗಾಂಧಿ! ಇನ್ನು ಬಿಜೆಪಿಯಿಂದ ಡೀಸಿ ತಮ್ಮಣ್ಣನೋ, ಮಾದೇಗೌಡರ ಮಗನೋ-ಮತ್ತಾರೋ ನಿಂತರೂ ಅಲ್ಲಿಗೆ ನಟ ಶ್ರುತಿ ಮತ್ತು ತಾರಾ ಜೋಡಿ ಪ್ರಚಾರಕ್ಕಿಳಿಯಲೇಬೇಕು!

ಇದು ಕೇವಲ ಮದ್ದೂರಿನ ಹಕೀಕತ್ತಷ್ಟೇ ಅಲ್ಲ, ಅಂಬಿ, ಜಗ್ಗೇಶ್, ಸಾಯಿಕುಮಾರ್, ಮದನ್ ಮಲ್ಲು, ಕೊಬ್ರಿ ಮಂಜು ಇತ್ಯಾದಿಗಳೆಲ್ಲ ಏನೇ ಲಗಾಟ ಹೊಡೆದರೂ ಈ ಬಾರಿಯ ಚುನಾವಣಾ ಹಣಾಹಣಿಗೆ ರಂಗೇರಿಸುವುದು ರಮ್ಯಾ, ರಕ್ಷಿತಾ, ಪೂಜಾಗಾಂಧಿ ಪೈಪೋಟಿಯೇ. ಹಿಂದಾದರೆ ಶಂಕರ್‌ನಾಗ್, ಅನಂತ್‌ನಾಗ್ ಜನತಾದಳದ ಪ್ರಚಾರಕ್ಕೆ ಮೆರುಗು ತರುತ್ತಿದ್ದರು. ಅನಂತರ ಕಾಂಗ್ರೆಸ್ಸಿಗೆ ಅಂಬಿ ರಂಗು ತಂದರು. ಅದೇ ಸಾಲಿಗೆ ಜಗ್ಗೇಶ್ ಕೂಡ ಸೇರ್ಪಡೆಯಾದರು. ಶ್ರೀನಾಥ್, ಸಾಯಿಕುಮಾರ್, ದೊಡ್ಡಣ್ಣ, ಮಲ್ಲು ಇತ್ಯಾದಿಗಳೇನಿದ್ದರೂ ಈಗ ಸವಕಲು ನಾಣ್ಯಗಳೆ. ಈ ಬಾರಿಯ ಹಣಾಹಣಿಗೆ ವಿಶೇಷ ಕಳೆ ಅಂತಿದ್ದರೆ ಅದು ರಮ್ಯಾ ಮತ್ತು ಪೂಜಾಗಾಂಧಿಯ ಅರೆಕನ್ನಡ, ಅರೆ ಇಂಗ್ಲಿಷ್ ತೊದಲು ನುಡಿಗಳೆ-

ಹಾಗೊಮ್ಮೆ ಮದ್ದೂರಿನಿಂದ ರಮ್ಯಾ ನಿಲ್ಲದೆ ಹೋದರೆ ಆಕೆಯ ಗ್ಲಾಮರ್ ಮತ್ತು ತಾರಾ ವರ್ಚಸ್ಸನ್ನು ರಾಜ್ಯಾದ್ಯಂತ ಪ್ರಚಾರಕ್ಕೆ ಬಳಸಲು ಕಾಂಗ್ರೆಸ್ ಅಧಿಪತಿ ಕೃಷ್ಣ ಮತ್ತು ಡೀಕೆ ಪಟಾಲಮ್ಮು ಯತ್ನಿಸುತ್ತಿದೆ. ಇಂಥದೊಂದು ಲೆಕ್ಕಾಚಾರದಲ್ಲೇ ರಮ್ಯಾಳನ್ನು ಕಾಂಗ್ರೆಸ್ಸಿಗೆ ಕೈಹಿಡಿದು ತಂದದ್ದು ಸಾಕ್ಷಾತ್ ಕೃಷ್ಣರೆ. ಯಾವ ಕಾರಣಕ್ಕೆಂದು ತನ್ನನ್ನು ಕಾಂಗ್ರೆಸ್ಸಿಗೆ ಕರೆತಂದಿದ್ದಾರೆಂಬುದು ಖುದ್ದು ರಮ್ಯಾಗೇ ಗೊತ್ತಿರಲಿಲ್ಲ.






ತನಗರಿವಿಲ್ಲದಂತೆಯೇ ಪೆದ್ದುಪೆದ್ದಾಗಿ ವಾಜಪೇಯಿಯನ್ನು ಹೊಗಳುವುದು, ಚೆಡ್ಡಿ ಸಿದ್ಧಾಂತವನ್ನು ಸಮರ್ಥಿಸುವುದು ಮಾಡುತ್ತಿದ್ದ ರಮ್ಯಾ ಹುಡುಗಾಟಿಕೆ ಕೆಲವೊಮ್ಮೆ ಕಾಂಗ್ರೆಸ್ಸಿಗೇ ಇರಿಸುಮುರುಸಾಗುವಂತಿತ್ತು. ಅಲ್ಲಿಗೆ ಹೀರೋಯಿನ್‌ಗಳ ವರ್ಚಸ್ಸು ಮುಖ್ಯವೇ ಹೊರತು ಅವರ ವಿಚಾರ, ಮಾತು, ವರ್ತನೆ ಯಾವುದೂ ಮುಖ್ಯವಲ್ಲ ಎಂಬುದು ಸಾಬೀತಾಗಿತ್ತು.

ರಮ್ಯಾಳನ್ನು ಯುವ ಕಾಂಗ್ರೆಸ್ ಅಧ್ಯಕ್ಷತೆಗೆ ಏರಿಸುವ ಗುರಿ ಹೊತ್ತು ಕಾಂಗ್ರೆಸ್ಸಿಗೆ ಎಳೆದುತಂದಿದ್ದ ಕೃಷ್ಣ-ಡೀಕೆ ಕೂಟಕ್ಕೆ ಆಕೆ ವಾಜಪೇಯಿ ಪರ ನೀಡಿದ ಹೇಳಿಕೆಯಿಂದಾಗಿ ಇನ್ನಿಲ್ಲದ ಮುಜುಗರವಾಗಿತ್ತು. ಮಾಜಿ ಸಂಸದೆ ತೇಜಸ್ವಿನಿ, ಮೋಟಮ್ಮ, ರಾಣಿ ಸತೀಶ್, ಮಲ್ಲಾಜಮ್ಮ ಮುಂತಾದ ಮಹಿಳಾ ನಾಯಕಿಯರಿಗೆಲ್ಲ ಪರ್ಯಾಯವಾಗಿ ರಮ್ಯಾಳನ್ನು ರೂಪಿಸುವ ಗುರಿ ಹೊತ್ತೇ ಡೀಕೆ ಸಾಕಷ್ಟು ಸರ್ಕಸ್ಸು ಮಾಡಿದರಾದರೂ ಗ್ಲಾಮರ್ ಮಾತ್ರದಿಂದಲೇ ಕಾಂಗ್ರೆಸ್ಸಿನಲ್ಲಾಗಲಿ, ರಾಜಕೀಯದಲ್ಲಾಗಲಿ ಹೆಚ್ಚು ದೂರ ಸಾಗಲು ಸಾಧ್ಯವಿಲ್ಲ.

ಇದು ಕೃಷ್ಣ-ಡೀಕೆ ಕೂಟಕ್ಕೇನೋ ಮನದಟ್ಟಾಯಿತು. ಆದರೆ ಒಂದು ಕುರಿ ಹಳ್ಳಕ್ಕೆ ಬಿತ್ತೆಂದರೆ ಮಿಕ್ಕೆಲ್ಲ ಕುರಿಗಳೂ ಕಣ್ಣುಮುಚ್ಚಿ ಬೀಳುತ್ತವಲ್ಲ ಹಾಗಾಯಿತು ರಕ್ಷಿತಾ ಮತ್ತು ಪೂಜಾ ಗಾಂಧಿಯ ಪಾಡು. ಆ ಹೊತ್ತಿಗಾಗಲೇ 'ಜೋಗಯ್ಯ' ನಿರ್ಮಿಸಿ, ಅಷ್ಟಿಷ್ಟು ಕಾಸು ಕಂಡಿದ್ದ ಪ್ರೇಮ್ ಮತ್ತು ರಕ್ಷಿತಾರ ನಿರುದ್ಯೋಗವನ್ನು ಇನ್ನಿಲ್ಲದಂತೆ ಬಳಸಿಕೊಂಡಿದ್ದು ಗಣಿ ದೈತ್ಯ ಶ್ರೀರಾಮುಲು ಒಂದು ಮೂಲದ ಪ್ರಕಾರ ರಕ್ಷಿತಾಗೆ ಶ್ರೀರಾಮುಲು ಆಫರ್ ಮಾಡಿದ್ದು ಪ್ರತಿ ತಿಂಗಳಿಗೆ ಎರಡು ಲಕ್ಷದ ಸಂಭಾವನೆ!

ಬಿಎಸ್‌ಆರ್ ಕಾಂಗ್ರೆಸ್ ಪಕ್ಷದ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಪ್ರತಿ ದಿನವೂ ಶ್ರೀರಾಮುಲು ಮಾಡಿಟ್ಟ ಛೇಂಬರಿಗೆ ಭೇಟಿ ಕೊಡುವುದು, ಆತನ ಪಾದಯಾತ್ರೆ, ಪ್ರಚಾರ, ಸಭೆಗಳಿಗೆ ತಪ್ಪದೇ ಹಾಜರಾಗುವುದೇ ರಕ್ಷಿತಾಳ ಕೆಲಸ. ಅದಕ್ಕೆಂದು ತಿಂಗಳ ಸಂಬಳ ಜೊತೆಗೆ ಪತಿ ಪ್ರೇಮ್‌ನನ್ನು ಹೀರೋ ಮಾಡಲೆಂದೇ ಶ್ರೀರಾಮುಲು ನಿರ್ಮಾಪಕರಾಗಿ ಸಿನಿಮಾ ನಿರ್ಮಿಸುವ ಷರತ್ತಿನ ಮೇರೆಗೇ ರಕ್ಷಿತಾ ಬಿಎಸ್‌ಆರ್ ಕಾಂಗ್ರೆಸ್ಸಿಗೆ ಕಾಲಿಟ್ಟಿದ್ದಾರಂತೆ. ಇಲ್ಲದಿದ್ದರೆ ಯಾವ ಆದರ್ಶಕ್ಕೆಂದು, ಯಾವ ಸಾಧನೆ ಕಂಡು ಅಥವಾ ಯಾವ ಹೋರಾಟದ ಗುರಿ ಹೊತ್ತು ರಕ್ಷಿತಾ ಆಗಲಿ ಪ್ರೇಮ್ ಆಗಲಿ ಗಣಿ ದೈತ್ಯರ ಬಿಎಸ್‌ಆರ್ ಕಾಂಗ್ರೆಸ್ಸನ್ನು ಸೇರಲು ಸಾಧ್ಯ?

ದುಡ್ಡು ಮತ್ತು ಲಾಭದ ಉದ್ದೇಶವಲ್ಲದೆ ರಕ್ಷಿತಾ-ಪ್ರೇಮ್ ಜೋಡಿಯ ರಾಜಕೀಯ ಯಾತ್ರೆಗೆ ಬೇರೆ ಉದ್ದೇಶವೆಲ್ಲಿದೆ?

ಇದೊಂಥರ ಸಮೂಹ ಸನ್ನಿಯಿದ್ದಂತೆ. ಏಕಾಏಕಿ ರಮ್ಯಾ ರಾಜಕೀಯಕ್ಕೆ ಕಾಲಿಟ್ಟು, ಅದೇ ದಾರಿಯಲ್ಲಿ ರಕ್ಷಿತಾ ಕೂಡ ಎಲೆಕ್ಷನ್ ಉಸಾಬರಿಗಿಳಿದದ್ದರ ಅಡ್ಡ ಪರಿಣಾಮವೆಂಬಂತೆ ಪೂಜಾ ಗಾಂಧಿಯೂ ಅದೇ ಹಾದಿ ಹಿಡಿದಳು. ಕಾಂಗ್ರೆಸ್‌ಗೆ ರಮ್ಯಾ, ಬಿಜೆಪಿಗೆ ತಾರಾ ಮತ್ತು ಬಿಎಸ್‌ಆರ್ ಕಾಂಗ್ರೆಸ್ ಪಾರ್ಟಿಗೆ ರಕ್ಷಿತಾ ಧುಮುಕಿದ ಮೇಲೆ ಪೊಲಿಟಿಷಿಯನ್-ಹೀರೋಯಿನ್ ಹುದ್ದೆ ಖಾಲಿಯಿದ್ದದ್ದು ಜೆಡಿಎಸ್‌ನಲ್ಲಿ ಮಾತ್ರ. ಅದನ್ನು ಲೆಕ್ಕ ಹಾಕಿಯೇ ಪೂಜಾ ಗಾಂಧಿ ಏಕಾಏಕಿ ಜೆಡಿಎಸ್ ಸೇರ್ಪಡೆ ಘೋಷಿಸಿಕೊಂಡರು. ಜಾತಿಯಲ್ಲಿ ಒಕ್ಕಲಿಗಳಲ್ಲ, ನೆಟ್ಟಗೆ ಕನ್ನಡ ಗೊತ್ತಿಲ್ಲ, ಕರ್ನಾಟಕದ ಮೂಲವಾಗಲಿ, ದೇವೇಗೌಡರ ಯಾವುದೇ ನೆಂಟಸ್ತಿಕೆಯಾಗಲಿ ಇಲ್ಲದ ಪೂಜಾ ಗಾಂಧಿ ಏಕಾಏಕಿ ಜೆಡಿಎಸ್‌ಗೆ ಸೇರುತ್ತೇನೆಂದು 'ರೋಡ್ ಶೋ' ಕೊಟ್ಟಿದ್ದರ ಮೂಲ ಉದ್ದೇಶವೆಂದರೆ ಪ್ರಚಾರ ಮತ್ತು ಕ್ಷೀಣಿಸುತ್ತಿದ್ದ ತನ್ನ ಇಮೇಜ್ ಕಾಪಾಡಿಕೊಳ್ಳುವುದು!

ಇತ್ತ ಪೂಜಾ ಗಾಂಧಿ ಜೆಡಿಎಸ್ ಸೇರುವ ಹೊತ್ತಿಗೇ ದಂಡುಪಾಳ್ಯ ಬಿಡುಗಡೆಯಾಗಿದ್ದು, ಅದನ್ನೇ ಕಾದು ಬಿಜೆಪಿ ನಾಯಕ ಆಯನೂರು ಮಂಜುನಾಥ್ 'ದಂಡುಪಾಳ್ಯದ ರಾಣಿಯನ್ನು ಕಟ್ಟಿಕೊಂಡು ಕುಮಾರಸ್ವಾಮಿ ಜೆಡಿಎಸ್ ಕಟ್ಟಲು ಹೋಗಿದ್ದಾರೆ......' ಎಂದು ಲೇವಡಿ ಮಾಡಿದ್ದು ಪೂಜಾ ಗಾಂಧಿ ಪಾಲಿಗಷ್ಟೇ ಅಲ್ಲ ಕುಮಾರಸ್ವಾಮಿಗೂ ಮುಜುಗರವೆ!

ಸಿನಿಮಾದ ಪಾತ್ರವೊಂದನ್ನು ನಿಜಬದುಕಿಗೆ ಆರೋಪಿಸಿ ಹೀಯಾಳಿಸಿದ ಬಿಜೆಪಿ ಧೂರ್ತ ಆಯನೂರು ಮಂಜುನಾಥ್‌ಗೆ ದಂಡುಪಾಳ್ಯದ ಹಂತಕರನ್ನೂ ಮೀರಿಸಿ ಲೂಟಿಗೈದ ಗುರು ಯಡ್ಡಿ ಮತ್ತು ನಾಯಕಿ ಕರಂದ್ಲಾಜೆಯ ಪಾಪದ ಬಗ್ಗೆ ಕನಿಷ್ಠ ಪಶ್ಚಾತ್ತಾಪವಾಗಲಿ, ಪರಿವೆಯಾಗಲಿ ಇರಲೇ ಇಲ್ಲ. ಪೂಜಾ ಗಾಂಧಿ ಬಗ್ಗೆ ಆಯನೂರು ಕಕ್ಕಿದ್ದನ್ನೇ ಪ್ರಸಾದವೆಂಬಂತೆ ಗಂಟೆಗಟ್ಟಲೇ ಚರ್ಚೆ, ಪ್ರೋಗ್ರಾಂ ಮಾಡಿದ ಟೀವಿ ಚಾನಲ್‌ಗಳ ದಾರಿದ್ರ್ಯದಿಂದಾಗಿ ಪೂಜಾ ಗಾಂಧಿ ಮತ್ತಷ್ಟು ಕೊರಗುವಂತಾಯ್ತು. ಆದರೆ ಸಾರ್ವಜನಿಕರ ಸಿಂಪಥಿ ಆಕೆಯ ಪರವಾಗೇ ಇತ್ತು.

ಈಗ ಮುಂಬರುವ ಇಡೀ ಚುನಾವಣೆಯ ರಂಗೆಂಬುದು ಈ ಮೂವರು ನಟಿಯರ ಸುತ್ತಲೇ ಗಿರಕಿ ಹೊಡೆಯುತ್ತಿದೆ. ಇದಲ್ಲದೆ ಉಮಾಶ್ರೀ ಬೇರೆ ಮತ್ತೆ ಕಾಂಗ್ರೆಸ್ ಟಿಕೆಟ್‌ಗಾಗಿ ಹಠ ಹಿಡಿದಿದ್ದಾರಂತೆ. ಬಾಗಲಕೋಟೆಯ ತೇರದಾಳ ಕ್ಷೇತ್ರದಲ್ಲಿ ಗಣನೀಯವಾಗಿರುವ ದೇವಾಂಗದವರ ಮತಗಳನ್ನು ನೆಚ್ಚಿಕೊಂಡು ಬಿಜೆಪಿಯ ಸಿದ್ದು ಸವದಿಯೆದುರು ಶಕ್ತಿ ಪ್ರದರ್ಶನಕ್ಕೆ ಉಮಾಶ್ರೀ ಈ ಬಾರಿ ಕಾಂಗ್ರೆಸ್ ಟಿಕೆಟ್ ಸಿಗುವುದಕ್ಕೇ ಹರಸಾಹಸ ಪಡಬೇಕು. ಬಿಜೆಪಿಯಲ್ಲಿ ಸದ್ಯ ಹಿರಿಯ ನಟಿ ಶ್ರುತಿಯದ್ದು ನಿತ್ಯ ವನವಾಸ. ಯಾವಾಗ ಮಹೇಂದರ್‌ನನ್ನು ನೆಚ್ಚಿಕೊಂಡು ಶ್ರುತಿಯವರ ಅಧಿಕಾರ-ಅಂತಸ್ತಿಗೆ ಯಡ್ಡಿ ಭಂಗ ತಂದರೋ ಈಗ ಅದೇ ಮಹೇಂದರ್ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ. ವರ್ಚಸ್ಸಿನಲ್ಲಿ, ಪ್ರತಿಭೆಯಲ್ಲಿ ಶ್ರುತಿಗಿಂತಲೂ ಕಿರಿಯಳಾದ ತಾರಾ ಈಗ ಕೇಸರಿ ಪಾಳಯದ ಏಕಮೇವಾದ್ವಿತೀಯ ನಟಿ.

ಒಂದೆಡೆ ಸಿನಿಮಾ ಅಕಾಡೆಮಿಯ ಅಧ್ಯಕ್ಷತೆ, ಮತ್ತೊಂದೆಡೆ ಎಮ್ಮೆಲ್ಸಿಗಿರಿ ಎರಡನ್ನೂ ಒಟ್ಟೊಟ್ಟಿಗೆ ನಿಭಾಯಿಸುವ ತಾರಾಗೆ 'ಅಲ್ಲಮ್ಮಾ ಒಬ್ಬಳೇ ಎರಡೆರಡನ್ನು ಎಷ್ಟೂ ಅಂತ ಸಂಭಾಳಿಸೀಯ. ಕನಿಷ್ಠ ಸಿನಿಮಾ ಅಕಾಡೆಮಿಯನ್ನಾದ್ರೂ ಶ್ರುತಿಯವರಿಗೆ ಬಿಟ್ಟು ಕೊಡಬಾರ್ದಾ' ಎಂದು ಹಿರಿಯ ನಟಿಯೊಬ್ಬರು ಕೆಣಕಿದರಂತೆ. ಅದಕ್ಕೆ ಅಷ್ಟೆ ಹುಷಾರಾಗಿ ತಾರಾ 'ನೋಡಿ, ನಾನು ಬೇಡ, ಬೇಡಾ ಅಂದ್ರೂ ನನ್ನನ್ನೇ ಅಧ್ಯಕ್ಷೆ ಮಾಡಿದ್ದಾರೆ. ಗರ್ಭಿಣಿ ಬೇರೆ. ಎಷ್ಟೂ ಅಂತ ರಿಸ್ಕ್ ತಗೊಳ್ಳಿ.....?' ಎಂದು ಡೈಲಾಗ್ ಹೊಡೆಯುತ್ತಾರಂತೆ. ಇನ್ನೇನು ಚುನಾವಣೆ ಸಮೀಪಿಸುತ್ತಿದ್ದಂತೆ ಸಿನಿಮಾ ಅಕಾಡೆಮಿಗೆ ಶ್ರುತಿಯವರನ್ನು ಪ್ರತಿಷ್ಠಾಪಿಸುವ ಉದ್ದೇಶವೂ ಬಿಜೆಪಿ ನಾಯಕರಿಗಿದೆಯಂತೆ. ಇದರ ವಾಸನೆ ಹಿಡಿದೇ 'ಖ್ಯಾತ ಪತ್ರಕರ್ತ, ಚಿತ್ರ ನಿರ್ದೇಶಕ, ನೀರಾವರಿ ತಜ್ಞ' ಚಂದ್ರಚೂಡ್ ಉರ್ಫ್ ಚಕ್ರವರ್ತಿ ಈ ಬಾರಿ ಬಿಜೆಪಿ ಪರವಾಗಿ ಓಟು ಕೇಳೋದಕ್ಕೆ, ಮೇಡಂ ಮನೆಮನೆಗೂ ಬರ್ತಾರೆ ನಾನೇ ಅವರ ಪೀಯೇ...' ಎಂದು ಬಹಿರಂಗ ಪ್ರಚಾರಕ್ಕಿಳಿದಿದ್ದಾರೆ.

ಅಂತೂ ಈ ಬಾರಿಯ ಚುನಾವಣಾ ಹಣಾಹಣಿಯಲ್ಲಿ ಹೀರೋಗಳಿಗಿಂತಲೂ ಹೀರೋಯಿನ್ನುಗಳದ್ದೇ ಕಾರುಬಾರು-ಸ್ಟಾರ್ ವಾರು!

• ರಾ.ಸೋಮನಾಥ್

ಗಾಂಧಿನಗರಕ್ಕೋ ತುಮಕೂರಿಗೋ

ಐತಲಕಡಿ ಜುಮ್ಮಾ



ಬಿಜೆಪಿಯ ಬತ್ತಳಿಕೆಯಲ್ಲಿ ಅನರ್ಘ್ಯ ರತ್ನದಂತಿರುವ ಜಗ್ಗೇಶ್‌ಗೆ ಒಂದೋ ಹೊಟ್ಟೆ ತುಂಬಿರಬೇಕು ಅಥವಾ ಬಿಜೆಪಿ ಸಾಕೆನಿಸಿರಬೇಕು.


ಮತ್ತೆ ತುರುವೇಕೆರೆಯಲ್ಲಿ ನಿಲ್ಲೋಲ್ಲವಂತೆ. ಇನ್ನೆಲ್ಲಿಗೆ ನಿಲ್ತೀರಾ ಎಂದರೆ ಗೊತ್ತಿಲ್ಲವಂತೆ. ರಾಜಕೀಯವೇ ಅಸಹ್ಯವಾ ಎಂದರೆ ಎಲ್ಲಾದರೂ ಉಂಟಾ ಎನ್ನುತ್ತಾರೆ. ಮತ್ತೆ ಯಾಕೆ ಎಲೆಕ್ಷನ್ನಿಗೆ ನಿಲ್ಲುತ್ತಿಲ್ಲ ಎಂದರೆ, ನೋಡೋಣ ಮಾಡೋಣ ಎಂಬ ಉಢಾಪೆ.

ಜಗ್ಗೇಶ್ ಕುರಿತಂತೆ ಇದೆಲ್ಲವನ್ನೂ ಲೆಕ್ಕ ಹಾಕಿ ಹೇಳುವ ಅವರ ಕಟ್ಟಾ ಅನುಯಾಯಿಯೊಬ್ಬರ ಪ್ರಕಾರ ಮುಂಬರುವ ಚುನಾವಣೆಯಲ್ಲಿ ಬೆಂಗಳೂರಿನ ಗಾಂಧಿನಗರಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ದಿನೇಶ್ ಗುಂಡೂರಾವ್ ವಿರುದ್ಧ ಸ್ಪರ್ಧಿಸುವುದು ಅವರ ಉದ್ದೇಶವಂತೆ. ಹಾಗೊಮ್ಮೆ ಗಾಂಧಿನಗರಕ್ಕೆ ಟಿಕೆಟ್ ಸಿಗದಿದ್ದರೆ ತುಮಕೂರಿನಿಂದ ಲೋಕಸಭಾ ಅಭ್ಯರ್ಥಿಯಾಗಿ ಬಸವರಾಜ್ ವಿರುದ್ಧ ಸೆಣಸುತ್ತಾರಂತೆ. ಇತ್ತೀಚೆಗೆ ಅಪೇಕ್ಷಾ ಫೌಂಡೇಷನ್ ಎಂಬ ಚಾರಿಟೇಬಲ್ ಟ್ರಸ್ಟೊಂದನ್ನು ಜಗ್ಗೇಶ್ ಹುಟ್ಟು ಹಾಕಿರುವುದು ಕೂಡ ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟೇ ಅಂತೆ.

ಐತಲಕಡಿ ಜುಮ್ಮಾ!

ಭೂಗಳ್ಳರ ನೆರವಿಗೆ ಪೋಸ್ಟ್‌ಮ್ಯಾನ್ ಕಾನೂನು ಮಂತ್ರಿ





...ವಿ ಎರಡು ಮೂರು ತಿಂಗಳ ಹಿಂದೆಯಷ್ಟೆ ಜಿ-ಕೆಟಗರಿ ...ಣದಲ್ಲಿ ಸಿಕ್ಕಿಬಿದ್ದು ರಾಜೀನಾಮೆ ನಾಟಕವಾಡಿ ಹೋ... ...ನ್ನ ಮಂತ್ರಿ ಸುರೇಶ್‌ಕುಮಾರ್ ಮೇಲೆ ಬೆಂಗಳೂರು ...ಲಿಟನ್ ಟ್ರಾನ್ಸ್‌ಫೋರ್ಟ್(ಬಿಎಂಟಿಎಫ್)ನ ಅಧಿಕಾರಿಗಳು ...ಂಯಾದ ಕೇಸು ಜಡಿದಿದ್ದಾರೆ. ಸದಾ ಹರಿಶ್ಚಂದ್ರನ ...ಪೋಸು ಕೊಡುವ ಸುರೇಶ್‌ಕುಮಾರ್ ...ಕಾಹಿರವಾಗಿ ಡಿನೋಟಿಫೈ ಮಾಡಿಸುವ ...ಣದಲ್ಲಿ ಭಾಗಿಯಾಗಿ ಸಿಕ್ಕಿಬಿದ್ದಿದ್ದಾನೆ.

...ಕಾನೂನು ಮಂತ್ರಿ ಸುರೇಶ್‌ಕುಮಾರ್ ... 2010ರಂದು ಅಂದಿನ ...ಮಂತ್ರಿ, ... ಯಡಿ... ...ಪರಿಗೆ ತನ್ನ ಅಧಿಕೃತ ...ನಲ್ಲೇ ಬರೆದ ಪತ್ರದ ...ಬುಗಳು ಹೀಗಿವೆ:

... ಎಕರೆ 20 ಗುಂಟೆ ... ಹೊರತುಪಡಿಸಿ, ಬಾಕಿ ... 30 ಗುಂಟೆ ಜಮೀನಿನ ...ಬೇರೆ ಕಡೆ ಸೂಕ್ತ ಸ್ಥಳದಲ್ಲಿ ... ಜಮೀನು ಹಂಚಿಕೆ ...ಮಾಡಲು ವಿನಂತಿಸಿರುತ್ತಾರೆ.

...ಬಗ್ಗೆ ಸದರಿಯವರು (ಅಂದರೆ ...ನಾಥ್ ರವರು) ಕೋರಿರುವ ರೀತಿ ... 30 ಗುಂಟೆ ಜಮೀನಿನ ಬದಲಿಗೆ ...ಗೆ ಸೂಕ್ತ ಸ್ಥಳದಲ್ಲಿ ಜಮೀನು ...ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ...ಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ... ತಮ್ಮ ವಿಶ್ವಾಸಿ (ಸಹಿ- ಎಸ್.ಸುರೇಶ್ ...

...ಗೆ ಭೂಮಿ ಅಕ್ರಮದಲ್ಲಿ ನೇರವಾಗಿ ...ಗಿ ಸಿಕ್ಕಿಬಿದ್ದು ಕೇಸು ಎದುರಿಸುತ್ತಿರುವ ಈ ...ದಲ್ಲಿ ನಮ್ಮ ಐನಾತಿ ಕಾನೂನು ಮಂತ್ರಿ ಮಾಧ್ಯಮಗಳೆದುರು ...ನು ಸಮರ್ಥಿಸಿಕೊಂಡ ರೀತಿ ಹೇಗಿದೆ ನೋಡಿ.

...ಕೇವಲ ಒಬ್ಬ ಪೋಸ್ಟ್‌ಮ್ಯಾನ್ ಕೆಲಸ ಮಾಡಿದ್ದೇನೆ ಅಷ್ಟೆ. ... ಅಭಿಪ್ರಾಯವನ್ನು ಸರ್ಕಾರಕ್ಕೆ ರವಾನಿಸಿದ್ದೇನೆ. ಇಷ್ಟು ಬಿಟ್ಟು ಈ ...ದಲ್ಲಿ ನನಗೆ ಯಾವ ಪಾತ್ರವೂ ಇಲ್ಲ ... ..."

... ಜವಾಬ್ದಾರಿಯುತ ಕಾನೂನು ಮಂತ್ರಿಯಾಗಿ ಜಮೀನು ಮಂಜೂರಾತಿ ... ಸಾಧಕಬಾಧಕಗಳ ಬಗ್ಗೆ ಚರ್ಚಿಸಿ, ಅಭಿಪ್ರಾಯ ನೀಡಬೇಕಿದ್ದ ...ಮಾರ್ ಮಾಡಿರುವುದೇನು? ಸಿಎಂ ಯಡಿಯೂರಪ್ಪನವರಿಗೆ ಶಿಫಾರಸ್ಸು ...ಮೂ ತಮ್ಮ ಕಕ್ಷಿದಾರರ ಪರವಾಗಿ ವಕಾಲತ್ತು ವಹಿಸಿ ಈಗ ತಾನು ...ಮ್ಯಾನ್ ಅಷ್ಟೇ ಎಂದು ಎಲುಬಿಲ್ಲದ ನಾಲಗೆ ಹರಿಯಬಿಟ್ಟಿದ್ದಾರೆ.

... ಹಗರಣದ ಒಳಸುಳಿಗಳನ್ನು ಅರ್ಥಮಾಡಿಕೊಳ್ಳಲು ಇದರ ...ವನ್ನು ಕೆದಕಿ ನೋಡುವುದು ಒಳ್ಳೆಯದು.

...ಶ್‌ಕುಮಾರ್‌ನ ಸ್ವಜಾತಿ ಬಂಧು, ಸಂಘ ಪರಿವಾರದ ಧುರೀಣ, ...ಎಲ್‌ಸಿ ಕೆ.ನರಹರಿ ಎಂಬುವವರ ಕುಟುಂಬವರ್ಗಕ್ಕೆ ಬೆಂಗಳೂರಿನ ...ಸ್ತೆಯ ಲಗ್ಗೆರೆಯಲ್ಲಿನ ಸರ್ವೆ ನಂಬರ್ 9/2ರಲ್ಲಿ 4 ಎಕರೆ 20 ...ಜಮೀನನ್ನು ಡಿನೋಟಿಫೈ ಮಾಡಿಸಿಕೊಟ್ಟಿರುವುದೇ ಈ ಹಗರಣದ ...ದು. ಇದೇ ಸರ್ವೆ ನಂಬರ್ 9/2ರಲ್ಲಿ 16 ಎಕರೆ 10 ಗುಂಟೆ ...ನ್ನು 1982ರಲ್ಲಿ ಸರ್ಕಾರ ಸ್ವಾಧೀನಪಡಿಸಿಕೊಂಡಿತ್ತು, ನಂತರ ...ರ್ಡ್‌ಗೆ ಈ ಭೂಮಿಯನ್ನು ಹಸ್ತಾಂತರಿಸಿತ್ತು. ಆ ಜಾಗದಲ್ಲಿ ಸ್ಲಂ ... ಆರ್ಥಿಕವಾಗಿ ದುರ್ಬಲವಾಗಿರುವ ಜನರಿಗಾಗಿ ಇಡಬ್ಲ್ಯೂಎಸ್ ...ಕೀರ್ಣವನ್ನು ನಿರ್ಮಿಸಿದೆ.

... ಜಾಗದಲ್ಲಿ ಬಡಬಗ್ಗರ ವಸತಿ ಉದ್ದೇಶಕ್ಕೆಂದು ಮೀಸಲಾಗಿದ್ದ ...ರೆ ಎಕರೆ ಖಾಲಿ ಜಮೀನು ಭೂಸ್ವಾಧೀನವಾದ ಸುಮಾರು 30 ... ನಂತರ ಡಿನೋಟಿಫೈ ಮಾಡಿ ಕೆ.ನರಹರಿ ಕುಟುಂಬಕ್ಕೆ ವಾಪಸ್ ಕೊಟ್ಟಿರುವ ಸರ್ಕಾರ ಹೊಸ ಐತಿಹಾಸಿಕ ದಾಖಲೆ ನಿರ್ಮಿಸಿದೆ. ಈ ಹೀನಕೃತ್ಯದಲ್ಲಿ ಭಾಗಿಯಾದ ಪ್ರಮುಖರೆಂದರೆ ಕಾನೂನು ಮತ್ತು ನಗರಾಭಿವೃದ್ಧಿ ಸಚಿವ ಸುರೇಶಕುಮಾರ್, ಮಾಜಿ ವಸತಿ ಸಚಿವ ಕೃಷ್ಣಯ್ಯ ಶೆಟ್ಟಿ ಹಾಗೂ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಯಾಗಿದ್ದ ವಿ.ಪಿ.ಬಳಿಗಾರ್. ಈ ಮೂವರನ್ನು ಆರೋಪಿಗಳನ್ನಾಗಿಸಿರುವ ಕಾರ್ಯಪಡೆ ಕೇಸು ದಾಖಲಿಸಿ, ಈಗಾಗಲೇ ಶೋಕಾಸ್ ನೋಟಿಸ್ ಜಾರಿ ಮಾಡಿದೆ.

ಈ ಪಕ್ಕಾ ಗೋಲ್‌ಮಾಲ್ ವ್ಯವಹಾರಕ್ಕೆ ಸುರೇಶ್‌ಕುಮಾರ್ ಅಂಡ್ ಕಂಪನಿ ನ್ಯಾಯಾಲಯದ ಹೆಸರನ್ನು ದುರ್ಬಳಕೆ ಮಾಡಿಕೊಂಡು ಅಥವ ನ್ಯಾಯಾಂಗ ನಿಂದನೆಯ ಭೀತಿ ಹುಟ್ಟಿಸಿ ತಮ್ಮ ಕಾರ್ಯ ಸಾಧಿಸಿಕೊಳ್ಳುವ ಹೈಟೆಕ್ ತಂತ್ರ ಬಳಸಿದ್ದಾರೆ.

ಆರ್‌ಎಸ್‌ಎಸ್ ಧುರೀಣ ನರಹರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸರ್ಕಾರ ಕಾನೂನು ಪಾಲನೆಯ ನಾನಾ ನೆಪಗಳನ್ನು ಬಳಸಿಕೊಂಡು ಕೆ.ಗೋಪಿನಾಥ್(ಕೆ.ನರಹರಿಯ ಖಾಸಾ ತಮ್ಮ) ಅವರಿಗೆ 4 ಎಕರೆ 20 ಗುಂಟೆ ಜಮೀನನ್ನು ವಾಪಸ್ ನೀಡಿತು. ಉಳಿಕೆ ಜಮೀನಿಗೆ ಸಂಬಂಧಿಸಿ ಯಾವುದೇ ಪರಿಹಾರ ಕೇಳಬಾರದೆಂಬ ಷರತ್ತನ್ನು ವಿಧಿಸಿತ್ತು, ಯಾಕೆಂದರೆ ಈ ನಾಲ್ಕೂವರೆ ಎಕರೆ ಭೂಮಿಯ ಇಂದಿನ ಮಾರುಕಟ್ಟೆ ಬೆಲೆ ಸುಮಾರು 50 ಕೋಟಿಗಿಂತಲೂ ಹೆಚ್ಚಿದೆ ಎಂಬುದನ್ನು ನಾವು ಮರೆಯುವಂತಿಲ್ಲ. ಆದರೆ ನಂತರದ ದಿನಗಳಲ್ಲಿ ದುರಾಶಾಪೀಡಿತ ಗೋಪಿನಾಥ್ ಉಳಿದ 11 ಎಕರೆ 30 ಗುಂಟೆ ಜಮೀನಿಗೆ ಪರ್ಯಾಯ ಭೂಮಿಯನ್ನು ಮಂಜೂರು ಮಾಡಬೇಕೆಂದು ಸರ್ಕಾರಕ್ಕೆ ಅರ್ಜಿ ಗುಜರಾಯಿಸಿದ. ನಂತರ ಗೋಪಿನಾಥ್ ಈ ಮುಂಚೆಯೇ ಸ್ಕೆಚ್ ಹಾಕಿದ್ದಂತೆ ಯಾವುದೇ ಪರಿಹಾರ ಕೇಳಬಾರದು ಎಂಬ ಅಂಶವನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ. ಅದರಂತೆ ಕೋರ್ಟ್ ಆದೇಶವೊಂದನ್ನು ಹೊರಡಿಸಿ ಮೂರು ತಿಂಗಳ ಒಳಗಾಗಿ ಅರ್ಜಿದಾರರಿಗೆ ಭೂಮಿ ಒದಗಿಸುವ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳುವಂತೆ ಹೇಳಿತು.

ಈ ಕೋರ್ಟ್ ಆದೇಶವನ್ನು ಮುಂದಿಟ್ಟುಕೊಂಡು ಸುರೇಶ್‌ಕುಮಾರ್ ಮತ್ತು ಗೋಪಿನಾಥ್ ಕೂಟ ಆಡಬಾರದ ಆಟಗಳನ್ನೆಲ್ಲಾ ಆಡಿ ಕಾನೂನಿನ ಕಣ್ಣಿಗೆ ಮಣ್ಣೆರಚಿದ್ದಾರೆ. 23.08.2012ರಂದು ಸರ್ಕಾರ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬಳಿಯ ಜಾಲ ಹೋಬಳಿಯ ಹೊಸಹಳ್ಳಿ ಗ್ರಾಮದ ಸರ್ವೆ ನಂಬರ್ 21ರಲ್ಲಿ 11 ಎಕರೆ 30 ಗುಂಟೆ ಜಮೀನನ್ನು ಕೆ.ಗೋಪಿನಾಥ್ ಎಂಬುವವರಿಗೆ ಮಂಜೂರು ಮಾಡಿ ಆದೇಶ ಹೊರಡಿಸಿದೆ.

ಆದರೆ ಈ ನಿಯಮಬಾಹಿರ ಮಂಜೂರಾತಿಯ ಬಗ್ಗೆ ಉನ್ನತ ಅಧಿಕಾರಿಯೊಬ್ಬರು ಎತ್ತಿರುವ ಆಕ್ಷೇಪಣೆಗಳು ಈ ಹಗರಣಕ್ಕೆ ಕನ್ನಡಿ ಹಿಡಿದಂತಿವೆ.

ಕಂದಾಯ ಇಲಾಖೆಯ ಡೆಪ್ಯೂಟಿ ಸೆಕ್ರೆಟರಿ 09.03.2012ರಂದು ಈ ಕಡತವನ್ನು ಪರಿಶೀಲಿಸಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

" 18) ಈ ಕೆಳಗಿರುವ ಕಡತ ಸಂಖ್ಯೆ ಆರ್‌ಡಿ 736 ಎಲ್‌ಜಿಬಿ 2010ರಲ್ಲಿ ಅರ್ಜಿದಾರರಿಗೆ ಈಗಾಗಲೇ ನೀಡಿರುವ 4.20 ಎಕರೆ ಜಮೀನು ಮಂಜೂರು ಮಾಡಿರುವುದು ನಿಯಮಬಾಹಿರ ಮತ್ತು ನಗರಾಭಿವೃದ್ಧಿ ಇಲಾಖೆಯು ಇನ್ನೂ ಬೇರೆ ಜಮೀನು ಮಂಜೂರು ಮಾಡಿರುವುದು ಕಾನೂನು ಉಲ್ಲಂಘನೆ ಎಂದು ತೀರ್ಮಾನ ಕೈಗೊಂಡು, ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ. ಕಡತವನ್ನು ಸಹ ಮುಕ್ತಾಯಗೊಳಿಸಲಾಗಿದೆ.

20) ಆದರೆ ಕಾನೂನು ಇಲಾಖೆಯು ನಗರ ಭೂಪರಿಮಿತಿ ಕಾಯ್ದೆ 1976 ರಡಿಯಲ್ಲಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾದ ಜಮೀನಿಗೆ ಬದಲಿ ಜಮೀನು ಮಂಜೂರು ಮಾಡಲು ಅವಕಾಶವಿಲ್ಲವೆಂದು ಅಭಿಪ್ರಾಯ ನೀಡಿದೆ.

21) ಈ ಹಿನ್ನೆಲೆಯಲ್ಲಿ ಈಗಿನ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಬಗ್ಗೆ ವಿಷಯವನ್ನು ಮರುಪರಿಶೀಲಿಸಿ ಅಭಿಪ್ರಾಯ ನೀಡುವಂತೆ ಕಾನೂನು ಕೋಶದ ಮುಖ್ಯಸ್ಥರನ್ನು ಕೋರಬಹುದು" ಎಂಬ ಅಭಿಪ್ರಾಯದ ಮೇರೆಗೆ ಈ ಕಡತ ಮತ್ತೆ ಕಾನೂನು ಇಲಾಖೆಗೆ ರವಾನೆಯಾಯಿತು.

ಸುರೇಶ್‌ಕುಮಾರ್ ಹಿಡಿತದಲ್ಲಿರುವ ಕಾನೂನು ಇಲಾಖೆಯ ಅಭಿಪ್ರಾಯ ಏನಾಗಿರಬೇಕು ಎಂಬುದು ಮುಂಚಿತವಾಗಿಯೇ ಫಿಕ್ಸ್ ಆಗಿದ್ದರಿಂದ ಅದರಲ್ಲಿ ಯಾವ ಬದಲಾವಣೆಯೂ ಬರಲಿಲ್ಲ. "... ಈ ವಿಷಯ ಕುರಿತು ಈಗಾಗಲೇ ಕಾನೂನು ಕೋಶವು ತನ್ನ ಅಭಿಪ್ರಾಯ ತಿಳಿಸಿರುತ್ತದೆ.... ಮಾನ್ಯ ಅಡ್ವೋಕೇಟ್ ಜನರಲ್‌ರವರು ತಿಳಿಸಿರುವ ಅಭಿಪ್ರಾಯವು ಕಾನೂನು ಇಲಾಖೆಯ ಅಂತಿಮ ಅಭಿಪ್ರಾಯ ಎನಿಸುತ್ತದೆ..... ಆದುದರಿಂದ, ಈ ಹಿಂದೆ ಕಾನೂನು ಕೋಶವು ನೀಡಿರುವ ಅಭಿಪ್ರಾಯ ಸರಿಯಿದ್ದು ಪುನಃ ಅದೇ ಅಭಿಪ್ರಾಯವನ್ನು ಪುನರುಚ್ಚರಿಸಲಾಗಿದೆ."

ನಂತರ ಈ ಕಡತ ಅನುಮೋದನೆಗಾಗಿ ಆರ್ಥಿಕ ಇಲಾಖೆಯ ಮುಂದೆ ಬಂತು. ಆರ್ಥಿಕ ಇಲಾಖೆಯು ಸಹ ಸದರಿ ಪ್ರಕರಣದಲ್ಲಿ ಜಮೀನು ಮಂಜೂರು ಮಾಡಲು ಅವಕಾಶ ಇರುವುದಿಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಿದೆ. "ಸಚಿವ



ಸಂಪುಟಕ್ಕೆ ವಿಷಯವನ್ನು ಮಂಡಿಸಿದಾಗ ಮುಖ್ಯ ಕಾರ್ಯದರ್ಶಿಯವರು ವಿವರವಾಗಿ ಪರಿಶೀಲಿಸಿ ದಿನಾಂಕ: 3-9-2010ರಲ್ಲಿ ನಗರಾಭಿವೃದ್ಧಿ ಇಲಾಖೆ ಹೊರಡಿಸಿದ ಆದೇಶ ನಿಯಮಾನುಸಾರ ಇರುವುದಿಲ್ಲ ಎಂದು ಹಾಗೂ ನ್ಯಾಯಾಲಯದ ಆದೇಶಗಳನ್ನು ಉಲ್ಲೇಖಿಸಿ ಪರ್ಯಾಯ ಜಮೀನು ಮಂಜೂರು ಮಾಡಲು ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ... ... ಹಾಗೂ ಕಾನೂನು ವಿಷಯಕ್ಕೆ ಸಂಬಂಧವಿರುವುದರಿಂದ ಆಡಳಿತ ಇಲಾಖೆಯೇ ಮೇಲೆ ತಿಳಿಸಿದಂತೆ ಮರುಪರಿಶೀಲಿಸಿ ಕಾನೂನುರೀತ್ಯ ಕ್ರಮ ವಹಿಸಲು ತಿಳಿಸಿದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಅಪೀಲು/ಅರ್ಜಿ ಸಲ್ಲಿಸುವಂತೆ ಕಂದಾಯ ಇಲಾಖೆಗೆ ತಿಳಿಸಿದೆ."

ಇಷ್ಟೆಲ್ಲಾ ಸ್ಪಷ್ಟವಾದ ಅಭಿಪ್ರಾಯಗಳು ಬಂದರೂ ಕೂಡ ಸುರೇಶ್‌ಕುಮಾರನ ಕಾನೂನು ಇಲಾಖೆ ಜಪ್ಪೆನ್ನಲಿಲ್ಲ. ಯಾವುದೇ ಕಾರಣಕ್ಕೂ ತಾವು ಅಪೀಲು ಹೋಗುವುದಿಲ್ಲ ಎಂದು ಚಂಡಿ ಹಿಡಿದು ಕುಳಿತುಬಿಟ್ಟಿತು. ನರಹರಿ ಕುಟುಂಬಕ್ಕೆ ಅನುಕೂಲ ಮಾಡಿಕೊಡುವುದನ್ನು ಬಿಟ್ಟು ಇದರಲ್ಲಿ ಬೇರೆ ಯಾವ ಘನ ಉದ್ದೇಶ ಇರಲು ಸಾಧ್ಯ? ಸುರೇಶ್‌ಕುಮಾರ್ ಮತ್ತು ಸಂಗಡಿಗರ ಈ ಅಕ್ರಮ ವ್ಯವಹಾರದ ಬಗ್ಗೆ ಮಾಹಿತಿ ಹಕ್ಕು ಕಾಯಿದೆಯಾಡಿ ದಾಖಲಾತಿಗಳನ್ನು ಸಂಗ್ರಹಿಸಿರುವ ದಿನೇಶ್ ಕಲ್ಲಹಳ್ಳಿ ಎಂಬುವವರು ಈಗಾಗಲೇ ಕೇಸು ದಾಖಲಿಸಿದ್ದಾರೆ. ಮತ್ತೊಂದು ಕಡೆ ಮತ್ತೊಬ್ಬ ಮಾಹಿತಿಗಳನ್ನು ಕಾರ್ಯಕರ್ತ ಭಾಸ್ಕರನ್ ಎಂಬುವವರು ಇನ್ನು ಹೆಚ್ಚಿನ ಮಾಹಿತಿಯೊಂದಿಗೆ ಈ ಭ್ರಷ್ಟನ ವಿರುದ್ಧ ಸೆಡ್ಡು ಹೊಡೆದಿದ್ದಾರೆ.

ಸುರೇಶ್‌ಕುಮಾರ್ ನೀಡಿರುವ ಸಮರ್ಥನೆಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ಕೂಡಲೇ ಮಾಡಬೇಕಾದ ಕೆಲಸವೊಂದಿದೆ. ಅದೇನೆಂದರೆ ಒಂದು ಸಮೀಕ್ಷೆ ನಡೆಸಿ ನಮ್ಮ ರಾಜ್ಯದಲ್ಲಿರುವ ಒಬ್ಬ ಅತ್ಯುತ್ತಮ ಪೋಸ್ಟ್‌ಮ್ಯಾನ್‌ರನ್ನು ಗುರುತಿಸಿ, ಅವರನ್ನು ಕಾನೂನು ಸಚಿವನ ಸ್ಥಾನಕ್ಕೆ ನೇಮಿಸಬೇಕು ಹಾಗೂ ಎಸ್.ಸುರೇಶ್‌ಕುಮಾರ್ ಎಂಬ ಸ್ವಘೋಷಿತ ಪೋಸ್ಟ್‌ಮ್ಯಾನ್‌ನನ್ನು ಅವನ ಸ್ವಕ್ಷೇತ್ರ ರಾಜಾಜಿನಗರ ಪೋಸ್ಟ್ ಆಫೀಸ್‌ನಲ್ಲೇ ಪೋಸ್ಟ್ ಹಂಚುವ ಕೆಲಸಕ್ಕೆ ನೇಮಿಸಲು ಕೂಡಲೇ ಕ್ರಮಕೈಗೊಳ್ಳಬೇಕು. ಆತ ತನ್ನ ಹಳೇ ಸೈಕಲ್ ಏರಿ "ಪೋಸ್ಟ್... ಪೋಸ್ಟ್" ಅಂತಾ ಕೂಗುತ್ತಾ ಮನೆಮನೆ ಬಾಗಿಲು ಸುತ್ತಿದರೆ ಮಾಡಿದ ಪಾಪಕ್ಕೆ ಸ್ವಲ್ಪವಾದರೂ ಪ್ರಾಯಶ್ಚಿತ್ತವಾಗಬಹುದು.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

...ಗೋಪಿನಾಥ್ = ನರಹರಿ =?





...ಟ್ಟಾರೆ ಈ ಭೂಹಗರಣದಲ್ಲಿ ಆರ್‌ಎಸ್‌ಎಸ್ ನೇತಾರ ನರಹರಿ ತನ್ನ ಹೆಸರು ಮುಂದೆ ಬಾರದಂತೆ ... ಜಾಗರೂಕತೆ ವಹಿಸಿದ್ದಾರೆ. ಸಂಘ ಪರಿವಾರದಲ್ಲಿ ದಶಕಗಳಿಂದ ಪಳಗಿರುವ ಈ ಆಸಾಮಿಗೆ ...ನೂ ಹೊಸ ವಿಷಯವಲ್ಲ ಬಿಡಿ. ಆದರೆ ಇಲ್ಲೊಂದು ಎಡವಟ್ಟಾಗಿ ಬಿಟ್ಟಿದೆ.

...ಶೇಷ ಜಿಲ್ಲಾಧಿಕಾರಿ ಹೆಚ್.ರಾಮಾಂಜನೇಯ ಎಂಬ ಐನಾತಿ ಆಸಾಮಿ ಸರ್ಕಾರದ ಕಂದಾಯ ...ಯ ಪ್ರಧಾನ ಕಾರ್ಯದರ್ಶಿಗಳಿಗೆ 23.11.2010ರಂದು ಬರೆದಿರುವ ಪತ್ರದಲ್ಲಿ ಈ ಒಟ್ಟು ...ವಹಾರದ ಒಳಸುಳಿಗಳು ಬಟಾಬಯಲಾಗಿವೆ. ಸದರಿ ಪತ್ರದ ವಿಷಯ ಪ್ರಸ್ತಾವನೆಯಲ್ಲಿ "ಶ್ರೀ ...ನರಹರಿಯವರಿಗೆ ಬದಲಿ ಜಮೀನು ಮಂಜೂರು ಮಾಡುವ ಬಗ್ಗೆ" ಎಂಬ ಉಲ್ಲೇಖವಿದೆ. ಈ ಪತ್ರ ... ಮುಂದುವರೆದು "ಆನೇಕಲ್ ತಾಲೂಕು, ಸರ್ಜಾಪುರ ಹೋಬಳಿ, ಕೂಡ್ಲು ಗ್ರಾಮದ ಸರ್ವೆ ...ರ್ 148ರಲ್ಲಿ 7 ಎಕರೆ 10 ಗುಂಟೆ ಹಾಗೂ ಗೋಳಿಮಂಗಲ ಗ್ರಾಮದ ಸರ್ವೆ ನಂಬರ್ 67ರಲ್ಲಿ ... ಎಕರೆ ಜಮೀನನ್ನು ಅರ್ಜಿದಾರರಾದ ಶ್ರೀ ಕೆ.ನರಹರಿರವರಿಗೆ ಮಂಜೂರು ಮಾಡಬಹುದು" ...ಶಿಫಾರಸ್ಸು ಮಾಡಲಾಗಿದೆ. ಹಾಗಾದರೆ ಈ ಕರ್ಮಕಾಂಡದ ಅಸಲಿ ಫಲಾನುಭವಿ ಯಾರು? ...ಗೋಪಿನಾಥನೋ ಅಥವಾ ನರಹರಿಯೋ ಎಂಬ ಪ್ರಶ್ನೆ ಯಾರಿಗಾದರೂ ಮೂಡುವುದು ಸಹಜ. ಆ ...ವೇ ಇರಲಿ, ಎಂಎಲ್‌ಸಿಯಾಗಿ ಪ್ರತಿಷ್ಠಾಪಿತನಾಗಿರುವ ನರಹರಿ ಈ ವಿಷಯದಲ್ಲಿ ನೇರ ಕೈಚಳಕ ...ರುವುದಂತೂ ಸ್ಪಷ್ಟ. ಇಲ್ಲವಾದರೆ ವಿಶೇಷ ಜಿಲ್ಲಾಧಿಕಾರಿ ರಾಮಾಂಜನೇಯ ಬರೆದ ಪತ್ರದಲ್ಲಿ ...ರಿಯವರನ್ನು ಅರ್ಜಿದಾರ ಎಂದು ಸಂಬೋಧಿಸಲು ಜಿಲ್ಲಾಧಿಕಾರಿಗೆ ಹುಚ್ಚು ಹಿಡಿದಿದೆಯೇ?

...ಷಯ ಹೀಗೆ ಸೂರ್ಯನಷ್ಟೇ ಸ್ಪಷ್ಟವಾಗಿದ್ದರೂ ಈ ನರಹರಿ ಮತ್ತು ಸುರೇಶ್‌ಕುಮಾರ್‌ಗಳು ...ಗಳನ್ನು ಚಾಚೂತಪ್ಪದೆ ಪಾಲಿಸುತ್ತಿರುವ ಪರಮ ದೇಶಭಕ್ತರೆಂದು ಹಾದಿಬೀದಿಗಳಲ್ಲಿ ಗಂಟಲು ...ಮಾಡುತ್ತಿರುವುದನ್ನು ಕಂಡು ಇವರ ಅಭಿಮಾನಿಗಳೇ ದಂಗಾಗಿ ಹೋಗಿದ್ದಾರಂತೆ. ■

ಪಿಯುಸಿ ವಿದ್ಯಾರ್ಥಿಗಳಿಗೆ 2013ರಲ್ಲಿ NEET ಎಂಬ ನೇಣು ಕುಣಿ





ಒಟ್ಟಾರೆ ಗಮನಿಸಬೇಕಾ[illegible]
ಅಂಶಗಳು:

- ಅ. ಪಠ್ಯಕ್ರಮದಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಅ[illegible] ಕನಿಷ್ಠ ಶೇ. 30 ಭಾಗಗಳಿವೆ.
- [illegible] ಮಾದರಿ CET ಗಿಂತ [illegible]
- [illegible] (weight[illegible]) [illegible]
- [illegible] CBSE [illegible] XI [illegible] 50 [illegible]

ವಿಜ್ಞಾನದ ವಿಷಯಗಳನ್ನು ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಪಿಯುಸಿ ಒಂದು ಪ್ರಮುಖ ಘಟ್ಟವಾಗಿದೆ. ಪಿಯುಸಿ ನಂತರದ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ಇರುವ ಅತಿಯಾದ ಬೇಡಿಕೆಯಿಂದಲೂ, ಈ ಹಂತದ ವಿದ್ಯಾರ್ಥಿಗಳು ಬೇರೆಬೇರೆ ಪಠ್ಯಕ್ರಮಗಳನ್ನು (PUC, CBSE, ISC) ಅನುಸರಿಸುತ್ತಿರುವುದರಿಂದಲೂ, ಸೀಟುಗಳ ಹಂಚಿಕೆಯನ್ನು ಈ ಹಂತದಲ್ಲಿ ಕೇವಲ ಆಯಾ ಮಂಡಲಿಗಳು ನಡೆಸುವ ಅಂತಿಮ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮಾಡುವುದು ಅತಾರ್ಕಿಕವಾಗಿ ಕಂಡಿತು. ಇಷ್ಟೇ ಅಲ್ಲದೆ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ವೃತ್ತಿಪರ ಕೋರ್ಸುಗಳಿಗೆ 1984ಕ್ಕಿಂತ ಮೊದಲು ಕೇವಲ ದ್ವಿತೀಯ ಪಿಯುಸಿ ಅಂಕಗಳನ್ನೇ ಪರಿಗಣಿಸಲಾಗಿತ್ತು. ಇದರಿಂದ ಕೆಲವು ಅವ್ಯವಹಾರಗಳು ದಿನೇದಿನೇ ಹೆಚ್ಚಾಗಿ ಕೊನೆಗೆ ಅಂದಿನ ರಾಮಕೃಷ್ಣ ಹೆಗಡೆ ಸರ್ಕಾರ ದಿಟ್ಟ ನಿರ್ಧಾರವನ್ನು ತೆಗೆದುಕೊಂಡು ಹರೀಶ್ ಗೌಡ ಎಂಬ ದಿಟ್ಟ IAS ಅಧಿಕಾರಿಯ ನೇತೃತ್ವದಲ್ಲಿ CET ಎಂಬ ವ್ಯವಸ್ಥೆ ರೂಪುಗೊಂಡಿತು. ನಂತರ ಇದೇ ಅಧಿಕಾರಿ ಪಿಯುಸಿ ಇಲಾಖೆಯ ಮುಖ್ಯಸ್ಥರಾಗಿ ನೇಮಕಗೊಂಡು ಇನ್ನಷ್ಟು ವಿಶಿಷ್ಟ ಕಾರ್ಯಕ್ರಮಗಳ ಮುಖಾಂತರ ಇಡೀ ವ್ಯವಸ್ಥೆಯನ್ನು ಅತ್ಯಂತ ದಕ್ಷ ಮತ್ತು ಪಾರದರ್ಶಕವಾಗಿಸಿ ಪಿಯುಸಿ ಮತ್ತು ಸಿ.ಇ.ಟಿಯನ್ನು ರಾಷ್ಟ್ರದಲ್ಲೇ ಅನುಕರಣೀಯ ಮಾದರಿಯನ್ನಾಗಿಸಿದರು.

ಆರಂಭದಲ್ಲಿ ಒಟ್ಟಾರೆ ಲಭ್ಯವಿದ್ದ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಸೀಟುಗಳ ಪೈಕಿ ಶೇ. 85 ರಷ್ಟು ಸರ್ಕಾರಿ (ಮೆರಿಟ್ ಆಧಾರಿತ) ಕೋಟಾ ಆಗಿದ್ದದ್ದು ಉಲ್ಲೇಖನೀಯ. ನಂತರ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದ ಪ್ರಬಲ ಲಾಬಿಗಳು ತಮಗೆ ಅನುಕೂಲಕರವಾಗಿ ಬಂದ ಕೆಲವು ನ್ಯಾಯಾಲಯದ ತೀರ್ಪುಗಳಿಂದಲೂ, ತಮಗೆ ಸರ್ಕಾರದ ಮೇಲಿದ್ದ ಪ್ರಭಾವದಿಂದಲೂ ತಮ್ಮ ಕೋಟಾವನ್ನು ಶೇ. 15ರಿಂದ ಇಂಜಿನಿಯರಿಂಗ್ ವಿಭಾಗದಲ್ಲಿ ಶೇ.45ಕ್ಕೂ, ವೈದ್ಯಕೀಯ ವಿಭಾಗದಲ್ಲಿ ಶೇ. 60 ಕ್ಕೂ ಹೆಚ್ಚಿಸಿಕೊಳ್ಳುವಲ್ಲಿ ಯಶಸ್ವಿಯಾದದ್ದೆ ಅಲ್ಲದೇ ತಮ್ಮದೇ ಆದ COMED-K ಎಂಬ ಪ್ರವೇಶ ಪರೀಕ್ಷೆಯನ್ನು CET ಗೆ ಸಮಾನಾಂತರವಾಗಿ ನಡೆಸುವಲ್ಲಿ ಯಶಸ್ವಿಯಾದವು.

ಇದರೊಂದಿಗೆ ಕೇಂದ್ರ ಅಧೀನ ಕಾಲೇಜುಗಳ ಪ್ರವೇಶಕ್ಕೆಂದು ನಡೆಸಲಾಗುತ್ತಿರುವ AIEEE, AIPMT ಮುಂತಾದ ಪರೀಕ್ಷೆಗಳು ಮತ್ತು ನಮ್ಮ ರಾಷ್ಟ್ರದ ವಿವಿಧ ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆಗಳು ನಡೆಸುವ ಪ್ರವೇಶ ಪರೀಕ್ಷೆಗಳು ಅಲ್ಲದೆ ವಿವಿಧ ವ್ಯಾಖ್ಯಾನಗಳ ಮುಖಾಂತರ ಸ್ವಾಯತ್ತ ಸಂಸ್ಥೆ / ವಿಶ್ವವಿದ್ಯಾಲಯ ಎಂದು ಘೋಷಿಸಲ್ಪಟ್ಟ ಅನೇಕ ಸಂಸ್ಥೆಗಳು ನಡೆಸುವ ಪ್ರವೇಶ ಪರೀಕ್ಷೆಗಳೂ ಸೇರಿ ಪರೀಕ್ಷೆಗಳ ಒಂದು ದೊಡ್ಡ ಸರಮಾಲೆ ನಿರ್ಮಾಣವಾಯಿತು. ಇದರ ಫಲಿತಾಂಶ ಎಂದರೆ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಎಂಬ ಎರಡೂ ಆಯ್ಕೆಯನ್ನು ತೆರೆದಿಟ್ಟುಕೊಂಡ ವಿದ್ಯಾರ್ಥಿ ಸುಮಾರು 20 ಪ್ರವೇಶ ಪರೀಕ್ಷೆಗಳನ್ನು ಬರೆಯಬೇಕಾಯಿತು.

ಇದನ್ನು ಮನಗಂಡ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ತಾಕೀತುಮಾಡಿ ಇಡೀ ರಾಷ್ಟ್ರಕ್ಕೆ ಅನ್ವಯವಾಗುವಂಥ ಒಂದೇ ಪ್ರವೇಶ ಪರೀಕ್ಷೆಗೆ ಒತ್ತಾಯಿಸಿತು. ಇದನ್ನು ಸಾಧಿಸಲು ಅತ್ಯಂತ ಉತ್ಸಾಹದಿಂದ ಹೊರಟ ಕೇಂದ್ರದ ಮಾನವ ಸಂಪನ್ಮೂಲ ಮಂತ್ರಿಗಳಾದ ಕಪಿಲ್ ಸಿಬಲ್‌ರವರು ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ ಹೆಣಗಾಡುತ್ತಿದ್ದಾರೆ. ಈ ಏಕ ಪ್ರವೇಶಪರೀಕ್ಷೆಗೆ ತೀವ್ರ ಸವಾಲಾದದ್ದು ಪಠ್ಯಕ್ರಮ. ಪ್ರತಿಯೊಂದು ರಾಜ್ಯವೂ ತನ್ನದೇ ಆದ ಪಠ್ಯಕ್ರಮ ಹೊಂದಿದ್ದು ಅದು ಕೇಂದ್ರಿಯ ಪಠ್ಯಕ್ರಮಗಳಾದ CBSE ಮತ್ತು ISC ಪಠ್ಯಕ್ರಮಕ್ಕಿಂತ ವಿಪರೀತ ಭಿನ್ನವಾಗಿದ್ದರಿಂದ ಬೇರೆ ದಾರಿ ಕಾಣದೆ, ಕನಿಷ್ಟ ವಿಜ್ಞಾನದ ವಿಷಯದಲ್ಲಿ ಎಲ್ಲಾ ರಾಜ್ಯಗಳೂ ಒಂದೇ ಪಠ್ಯಕ್ರಮ ಅನುಸರಿಸುವುದು ಮಾತ್ರ ಪರಿಹಾರ ಎಂದು ಒಪ್ಪಲಾಯಿತು.

ಇದರ ಅಂಗವಾಗಿ ನಮ್ಮ ರಾಜ್ಯದಲ್ಲಿ 2012-2013ನೇ ಸಾಲಿಗೆ ಹೊಸ ಉನ್ನತೀಕರಿಸಿದ ಪಠ್ಯಕ್ರಮವನ್ನು ಭೌತಶಾಸ್ತ್ರ, ರಾಸಾಯನಶಾಸ್ತ್ರ, ಗಣಿತಶಾಸ್ತ್ರ ಮತ್ತು ಜೀವಶಾಸ್ತ್ರದ ವಿಷಯಗಳಲ್ಲಿ ಅಳವಡಿಸಲಾಯಿತು (ಈಗ ಪ್ರಥಮ ಪಿಯುಸಿ ವಿದ್ಯಾರ್ಥಿಗಳು ಕಲಿಯುತ್ತಿರುವ ಪಠ್ಯಕ್ರಮ). ಈ ಹೊಸ ಪಠ್ಯಕ್ರಮದ ವಿದ್ಯಾರ್ಥಿಗಳು 2013-14ನೇ ಸಾಲಿನಲ್ಲಿ ದ್ವಿತೀಯ ಪಿಯುಸಿ ಹಂತಕ್ಕೆ ಬರುವುದರಿಂದ 2014ರಲ್ಲಿ ಮತ್ತು ಅಲ್ಲಿಂದಾಚೆಗೆ ಪ್ರತಿ ವರ್ಷ ರಾಷ್ಟ್ರೀಯ ಏಕಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ ಎಂಬ ಸರಳ ಅರಿವು ಎಲ್ಲರಲ್ಲಿ ಮೂಡಿತು. ಈ ರಾಷ್ಟ್ರೀಯ ಏಕಪ್ರವೇಶ ಪರೀಕ್ಷೆ ನಿಜಕ್ಕೂ 'ಏಕ' ಅಲ್ಲ. ಏಕೆಂದರೆ ಇಂಜಿನಿಯರಿಂಗ್ ಆಸಕ್ತರು ISEET ಎಂಬ ಪರೀಕ್ಷೆಯನ್ನೂ ವೈದ್ಯಕೀಯ ಆಸಕ್ತರು NEET ಎಂಬ ಪರೀಕ್ಷೆಯನ್ನೂ ತೆಗೆದುಕೊಳ್ಳಬೇಕು! ನಮ್ಮ CET ಈ ಎರಡೂ ಜವಾಬ್ದಾರಿಗಳನ್ನು ಒಂದೇ ಪ್ರವೇಶ ಪರೀಕ್ಷೆಯ ಮುಖಾಂತರ ನಡೆಸುತ್ತಿದ್ದದ್ದು ಅತ್ಯಂತ ಗಮನಾರ್ಹ. ಇದರ ಬಗ್ಗೆ ಚರ್ಚೆ ನಿರಂತರವಾಗಿ ಮುಂದುವರೆದಿದೆ. ಸದ್ಯಕ್ಕೆ ಇದನ್ನು ಪಕ್ಕಕ್ಕಿಟ್ಟು 2013ರಲ್ಲಿ ನಡೆಯಲಿರುವ ಅನಿರೀಕ್ಷಿತ ದುರಂತದ ಬಗ್ಗೆ ತೀವ್ರ ಗಮನ ಹರಿಸಬೇಕಿದೆ.

ಕರ್ನಾಟಕ ಸರ್ಕಾರ ತೆಗೆದುಕೊಂಡಿರುವ ನಿರ್ಧಾರದಂತೆ ವೈದ್ಯಕೀಯ ಪ್ರವೇಶ, 2013ರ ಮೇ 5 ರಂದು ನಡೆಯಲಿರುವ ರಾಷ್ಟ್ರೀಯ ಪ್ರವೇಶ ಪರೀಕ್ಷೆ NEET ಮುಖಾಂತರ ನಡೆಯಲಿದೆ. ಇದು ಈಗ ದ್ವಿತೀಯ ಪಿಯುಸಿಯಲ್ಲಿರುವ ಮತ್ತು ಹಳೇ ಪಠ್ಯಕ್ರಮವನ್ನೇ ಅನುಸರಿಸುತ್ತಿರುವ ವಿದ್ಯಾರ್ಥಿಗಳಿಗೆ ಅತ್ಯಂತ ಆಘಾತಕಾರಿ ಮತ್ತು ಅನಿರೀಕ್ಷಿತ ಹೊಡೆತವಾಗಿದೆ. ಈ ನಿರ್ಧಾರ ಅತ್ಯಂತ ಮೂರ್ಖ ಮತ್ತು ಬೇಜವಾಬ್ದಾರಿತನದ್ದೆಂದು ಹೇಳದೆ ವಿಧಿಯಿಲ್ಲ. ಕೆಳಗಿರುವ ಕೋಷ್ಟಕವನ್ನು ಎಚ್ಚರಿಕೆಯಿಂದ ಗಮನಿಸಿದರೆ ಸಮಸ್ಯೆಯ ಭೀಕರತೆ ಅರ್ಥವಾಗುತ್ತದೆ.

ಇದು ನಮ್ಮ ಮೇಧಾವಿ ಪಿಯುಸಿ ವಿದ್ಯಾರ್ಥಿಗಳೂ ಕೂಡಾ ಹೊರಲಾರದ ಅನ್ಯಾಯದ ಪರಮಾವಧಿ. ಇಂತಹ ಪರೀಕ್ಷೆಯಿಂದ ಪಡೆದ ಅಂಕಗಳನ್ನು ಪರಿಗಣಿಸಿ ನಮ್ಮ ರಾಜ್ಯಕ್ಕೆ ಸಂಭಂದಿಸಿದಂತೆ ಬೇರೆ ರ್‍ಯಾಂಕ್ ಪಟ್ಟಿ ಮಾಡಿದಾಗಲೂ ನಮ್ಮ ಪಿಯುಸಿ ವಿದ್ಯಾರ್ಥಿಗಳಿಗೆ ನಮ್ಮ ರಾಜ್ಯದಲ್ಲೆ ವ್ಯಾಸಂಗ ಮಾಡುತ್ತಿರುವ CBSE ಮತ್ತು ISC ವಿದ್ಯಾರ್ಥಿಗಳಿಂದ ಅಸಮ ಬಲದ ಸ್ಪರ್ಧೆ ಎ[illegible] ವೈದ್ಯಕೀಯ ಸೀಟುಗಳಿಂದ ವಂಚಿತರಾಗುತ್ತಾರೆ. [illegible] ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಹೊಸಪಠ್ಯಕ್ರಮ ಆ[illegible] ಪ್ರವೇಶ ಪರೀಕ್ಷೆಯನ್ನು ನಡೆಸುವ ಬಗ್ಗೆ ಅನಿರೀಕ್ಷಿ[illegible] ಶೈಕ್ಷಣಿಕ ವರ್ಷದ ಕೊನೆಯಲ್ಲಿ ಸರ್ಕಾರ ನಿ[illegible] ತೆಗೆದುಕೊಂಡಿದ್ದರಿಂದ, ತಮ್ಮದಲ್ಲದ ತಪ್ಪಿಗೆ ಪಿ[illegible] ವಿದ್ಯಾರ್ಥಿಗಳು ಕಠಿಣ ಶಿಕ್ಷೆ ಅನುಭವಿಸಬೇಕಾ[illegible] ವೈದ್ಯಕೀಯ ಶಿಕ್ಷಣ ಇಲಾಖೆಯ ನೀತಿ ನಿರ್ಮಾ[illegible] ಯಾವ ತರ್ಕದ ಅಡಿಯಲ್ಲಿ ಇದನ್ನು ಸಮ[illegible] ಕೊಳ್ಳಬಹುದು?

ಇದನ್ನು ಸ್ಪಷ್ಟವಾಗಿ ತಿಳಿಸಿ ವಿದ್ಯಾರ್ಥಿಗಳ [illegible] ಪೋಷಕರ ಮನವೊಲಿಸುವ ಯಾವುದೇ ಪ್ರಯತ್ನ[illegible] ಸಕಾಲದಲ್ಲಿ ಮಾಡದೆ ಈಗ ತರಾತುರಿಯಲ್ಲಿ ತಪ್ಪು ನಿ[illegible] ತೆಗೆದುಕೊಂಡು ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಅನ[illegible] ಎಸಗುತ್ತಿರುವ ಸರ್ಕಾರಕ್ಕೆ ಈಗಲಾದರೂ ಜ್ಞಾನೋ[illegible] ವಾಗಬೇಕಿದೆ. ಪಂದ್ಯ ಪ್ರಾರಂಭವಾದ ನಂತರ ಪ[illegible] ನಿಯಮಗಳನ್ನು ಏಕಪಕ್ಷೀಯವಾಗಿ ಬದಲಾಯಿಸು[illegible] ಸ್ವಾಭಾವಿಕ ನ್ಯಾಯದ ಸ್ಪಷ್ಟ ಉಲ್ಲಂಘನೆ. 2013ರ [illegible] ತಿಂಗಳಲ್ಲಿ ನಡೆಯಲಿರುವ ಈ ದುರಂತವನ್ನು ತಪ್ಪಿ[illegible] ವಿದ್ಯಾರ್ಥಿ ಮುಖಂಡರು, ಸಂಘಸಂಸ್ಥೆಗಳು, ಪೋಷ[illegible] ಮತ್ತು ಅಧ್ಯಾಪಕರು ಕೈ ಜೋಡಿಸಿ ಚಳವ[illegible] ಮುಖಾಂತರ ಮತ್ತು ನ್ಯಾಯಾಲಯಗಳ ಮುಖಾ[illegible] ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ. ಸರ್ಕಾರದ [illegible] ನಿರ್ಧಾರದಿಂದ ಪಿಯುಸಿ ವಿದ್ಯಾರ್ಥಿಗಳಿಗಾಗಲಿರುವ ಘ[illegible] ಅನ್ಯಾಯವನ್ನು ಹೇಗಾದರೂ ತಪ್ಪಿಸಲೇಬೇಕಿದೆ.

– ಪ್ರೊ. ತುಮಕೂರು ಚಂದ್ರಕಾ[illegible]

ಹೋಲಿಕೆ ಮಾಡಬೇಕಾದ ವಿಷಯ	CET	NEET
ಪಠ್ಯಕ್ರಮ	ಪಿಯುಸಿ	ಸಿ.ಬಿ.ಎಸ್.ಇ
ಹೆಚ್ಚುವರಿ ಪಠ್ಯ	(ಪಿಯುಸಿ ಪಠ್ಯಕ್ರಮಕ್ಕೆ ಹೋಲಿಸಿದಂತೆ) ಹೆಚ್ಚುವರಿ ಯಾವುದೂ ಇಲ್ಲ	(ಪಿಯುಸಿ ಪಠ್ಯಕ್ರಮಕ್ಕೆ ಹೋಲಿಸಿದಂತೆ) ಭೌತಶಾಸ್ತ್ರ 30% ರಾಸಾಯನಶಾಸ್ತ್ರ 4[illegible] ಜೀವಶಾಸ್ತ್ರ 60%
ತಪ್ಪು ಉತ್ತರಕ್ಕೆ ಮೌಲ್ಯ	0	-1
ಮೆರಿಟ್ ನಿರ್ಧಾರಕ್ಕೆ ನೀಡುವ ವಿಷಯಾವಾರು ಮೌಲ್ಯ	ಭೌತಶಾಸ್ತ್ರ ರಾಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ಮೂರಕ್ಕೂ ಸಮಮೌಲ್ಯ	ಭೌತಶಾಸ್ತ್ರಕ್ಕೆ 25% ರಾಸಾಯನಶಾಸ್ತ್ರಕ್ಕೆ 2[illegible] ಜೀವಶಾಸ್ತ್ರಕ್ಕೆ 50%
ಪರೀಕ್ಷೆಯ ಅವಧಿ	70+70+70=210ನಿಮಿಷ (ಎರಡು ದಿನಗಳಿಗೆ ವಿಸ್ತರಿಸಿದೆ)	180 ನಿಮಿಷ (ಒಂದು ದಿನ)
ಒಟ್ಟು ಪ್ರಶ್ನೆಗಳು	ಭೌತಶಾಸ್ತ್ರ 60+ ರಾಸಾಯನಶಾಸ್ತ್ರ 60+ ಜೀವಶಾಸ್ತ್ರ 60 =180	ಭೌತಶಾಸ್ತ್ರ 45+ ರಾಸಾಯನಶಾಸ್ತ್ರ 45 ಜೀವಶಾಸ್ತ್ರ 60 =180

ಪ್ರಥಮ ಮತ್ತು ದ್ವಿತೀಯ ಪಿಯುಸಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳ ವಿಂಗಡಣೆ

ವಿಷಯ	I PUC	II PUC	ಒಟ್ಟು	ವಿಷಯ	XI	XII	ಒ[illegible]
ಭೌತಶಾಸ್ತ್ರ	15	45	60	ಭೌತಶಾಸ್ತ್ರ	22	23	4[illegible]
ರಾಸಾಯನಶಾಸ್ತ್ರ	15	45	60	ರಾಸಾಯನಶಾಸ್ತ್ರ	22	23	4[illegible]
ಜೀವಶಾಸ್ತ್ರ	15	45	60	ಜೀವಶಾಸ್ತ್ರ	45	45	9[illegible]

02 ...ಕಾಣದಾಗಿರುವ ಕ್ರೈಸಿಸು

ಸಿಟ್ಟು ಶಿವಶಂಕರನಿಗೆ ಬಂದಿತ್ತು. ಪದ್ಮಳಿಗಂತೂ ತನ್ನೆಲ್ಲಾ ದೈಹಿಕನೋವುಗಳಾಚೆಗೂ ದುಡಿದೂ, ದುಡಿದೂ ಸವೆದರೂ ಒಂದೇಒಂದು ಒಡವೆ ವಿಚಾರಕ್ಕೆ ಎಷ್ಟೆಲ್ಲಾ ಮಾತು ಕೇಳಬೇಕಾಯ್ತಲ್ಲಾ ಅಂತ ನೋವು ಆಯಿತು.

ಅವತ್ತು ಅವರಿಬ್ಬರೂ ಹೊಡೆದಾಡಿಕೊಳ್ಳಲಿಲ್ಲ, ಆದರೆ ಆದೇರೀತಿ ಮುಂದೆಯೂ ಇರುತ್ತೆ ಅಂತ ಖಾತ್ರಿ ಇಲ್ಲ, ಏಕೆಂದರೆ ಪೆಟ್ರೋಲ್ ಬೆಲೆ 100 ರೂ. ಮುಟ್ಟುವ ಕಡೆ ಓಡ್ತಿದೆ. ಪೆಟ್ರೋಲಿಯಂ ಖಾತೆ ಮಂತ್ರಿ ಅಂಬಾನಿ ಮಾತು ಕೇಳ್ಲಿಲ್ಲ ಅಂತ ಕಿತ್ತು ಹಾಕಿಬಿಟ್ಟಿದ್ದಾರೆ. ಗ್ಯಾಸ್ ಕಥೆಯೂ ಹಾಗೇ ಆಗುತ್ತೆ ಆಹಾರ ಭದ್ರತಾ ಕಾಯ್ದೆ ಅನ್ನೋದೊಂದು ಜಾರಿ ಆದ್ರೆ ಇವರಿಗೆ ಬಿಪಿಎಲ್ ರೇಷನ್ ಕಾರ್ಡ್ ಕನಸೇ ಸರಿ. ಇದಕ್ಕೆಲ್ಲಾ ಕಾರಣ– ಸಬ್ಸಿಡಿ ಕಿತ್ತಾಕ್ತಿದ್ದಾರೆ, ಪ್ರಣಬ್ ಮುಖರ್ಜಿ ಇದ್ದಾಗಲೇ ಒಟ್ಟು ಜಿಡಿಪಿಯ 2%ಗೆ ಸಬ್ಸಿಡಿಯನ್ನು ಇಳಿಸಿಯೇ ತೀರಬೇಕು ಅಂತ ಘೋಷಿಸಿಯಾಗಿತ್ತು; ಈಗ ಚಿದಂಬರಂ ಇನ್ನೂ ಕೆಳಕ್ಕೆ ಇಳಿಸಿಯೇ ತೀರ್ತಾರೆ; ಆ ಹಣವನ್ನು ದೊಡ್ಡ ದೊಡ್ಡ ಬಂಡವಾಳಶಾಹಿ ಕಂಪನಿಗಳಿಗೆ ನೀಡ್ತಾರೆ; ಆಟೋ ದರ ಹೆಚ್ಚಾಗಲಿಕ್ಕೂ ಇಂತಹುದೇ ಕಾರಣಗಳಿವೆ; ಬಸ್‌ಚಾರ್ಜು, ಕರೆಂಟ್ ಚಾರ್ಜು ಹೆಚ್ಚಾಗಲು ಸರ್ಕಾರದ ಈ ನೀತಿಯೇ ಕಾರಣ; ಊರಲ್ಲಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸದ ಹಾಗೆ ಆಗಿರುವುದಕ್ಕೆ, ಮಗನಿಗೆ ಟ್ರೈಫಾಯ್ಡ್ ಆದಾಗ 1.500 ರೂ. ಖರ್ಚಾಗಿದ್ದಕ್ಕೆ, ಸರ್ಕಾರದ ಖಾಸಗೀಕರಣ ನೀತಿಯೇ ಕಾರಣ; ಖಾಸಗಿ ಕಂಪನಿಗಳಿಗೆ ಲಕ್ಷ ಲಕ್ಷ ಕೋಟಿ ಸಾಕಾಗ್ತಿಲ್ಲ; ಏಕೆಂದರೆ ಬಂಡವಾಳಶಾಹಿಗಳು ಇನ್ನೂ ಇನ್ನೂ ಎಲ್ಲಿ ಹಣ ಹೂಡಬೇಕು, ಎಲ್ಲಿ ಲಾಭ ಮಾಡಿಕೊಳ್ಳಲೇಬೇಕು ಅನ್ನೋ ಬಿಕ್ಕಟ್ಟಿನಲ್ಲಿದ್ದಾರೆ. ಇದನ್ನು ಕಾರ್ಲ್‌ಮಾರ್ಕ್ಸ್ 150 ವರ್ಷಗಳ ಹಿಂದೆಯೇ ಬಂಡವಾಳಶಾಹಿ ಬಿಕ್ಕಟ್ಟು ಜನಸಾಮಾನ್ಯರ ಬಿಕ್ಕಟ್ಟಾಗುತ್ತದೆ ಅಂತ ಹೇಳಿದ್ದರು.ಆದರೆ ಶಿವಶಂಕರ ಮತ್ತು ಪದ್ಮರಿಗೆ ಅದನ್ನು ಹೇಗೆ ಹೇಳೋದು? ಯಾರು ಹೇಳೋದು? ಜಾಗತಿಕ ಆರ್ಥಿಕ ಬಿಕ್ಕಟ್ಟು ಈ ಎಲ್ಲಾ ರೂಪಗಳಲ್ಲಿ ಅವರ ಮನೆಯನ್ನು ಪ್ರವೇಶಿಸಿದೆ. ಅಂಬಾನಿಯ ಆಸ್ತಿ ಲಕ್ಷ ಲಕ್ಷ ಕೋಟಿಗಳಲ್ಲಿ ಹೆಚ್ಚಾಗುತ್ತಿರುವುದಕ್ಕೂ, ವಾಲ್‌ಮಾರ್ಟ್ ಭಾರತಕ್ಕೆ ಬರುತ್ತಿರುವುದಕ್ಕೂ ಸಂಬಂಧವಿದೆ ಅಂತ ಅವರಿಗೆ ಅರ್ಥಪಡಿಸುವುದು ಹೇಗೆ? ಒಂದು ವೇಳೆ ಸೆಕೆಂಡ್ ಹ್ಯಾಂಡ್ ಸಮುರಾಯ್ ತೆಗೆದುಕೊಳ್ಳದಿದ್ದರೆ ಅಥವಾ ಚಿನ್ನದ ಚೀಟಿ ಕಟ್ಟದಿದ್ದರೂ ಇದು ಆವರಿಸಿಕೊಂಡೇ ಇರುತ್ತಿತ್ತು ಅಂತ ಅವರಿಗೆ ಮನವರಿಕೆ ಮಾಡಿಸದೇ ಇದ್ದರೆ, ತಮ್ಮ ಮನೆಯ ನೆಮ್ಮದಿ ಹಾಳಾಗಲು ತಾವೇ ಕಾರಣ ಎಂದು ಜಗಳ ಮತ್ತಷ್ಟು ಹೆಚ್ಚು ಮಾಡಿಕೊಳ್ತಾರೆ.

ಬಂಡವಾಳಶಾಹಿ ಬಿಕ್ಕಟ್ಟು ಜನಸಾಮಾನ್ಯರನ್ನು ಇನ್ನೊಂದು ಸಂಕಷ್ಟಕ್ಕೆ ದೂಡುತ್ತಿರುವಾಗ ಅವರು ತಮ್ಮಷ್ಟಕ್ಕೆ ತಾವೇ ಸಿಡಿದೇಳುತ್ತಾರಾ ಅಥವಾ ಇದನ್ನು ಬರೆದವನು ಮತ್ತು ಓದಿದವರು ಏನಾದರೂ ಮಾಡಬೇಕಾ? ■

...ನ್ನಡದ ಮನಸ್ಸು ಎಂಬ ಶತಮಾನದ ಸುಳ್ಳು

...ಟೆಲುಗಳಿಗೆ ಕಾಮತ್ಸ್ ಮತ್ತು ಅಡಿಗಾಸ್‌ನ ...ಶೋರಿಂಗಳಿಗೆ ಅಯ್ಯಂಗಾರ್ಸ್‌ನ ಹಾಗೆ ಸಾಹಿತ್ಯ ...ಭೆಗಳಿಗೂ ಒಂದು ವಿಶ್ವಾಸಾರ್ಹ ಬ್ರಾಂಡ್‌ನೇಮ್ ...ಇದ್ದರೆ, ಅದು ಮೂಡಬಿದಿರೆಯ ಆಳ್ವಾಸ್ ... ನುಡಿಸಿರಿಯು ಕಾರ್ಯಕ್ರಮಗಳ ಶಿಸ್ತು, ...ಾದ ಒಪ್ಪಓರಣ ಹಾಗೂ ಶುಚಿರುಚಿಯಾದ ...ಪಚಾರ ಜನಜನಿತವಾಗಿವೆ. ಕನ್ನಡ ಸಾಹಿತ್ಯ ...ದ 'ಸಾಹಿತ್ಯ ಸಮ್ಮೇಳನ' ಎಂಬ ಸಂತೆ ಗದ್ದಲಕ್ಕೆ ...ದರೆ ಆಳ್ವಾಸ್ ನುಡಿಸಿರಿಯ ಅಚ್ಚುಕಟ್ಟು ಮತ್ತು ... ಅನುಕರಣೀಯ ಎಂಬುದರಲ್ಲಿ ಸಂದೇಹವಿಲ್ಲ. ...ದ ಸಮ್ಮೇಳನಗಳ ಹಾಗೆ ಅಪಾತ್ರರಿಗೆ ಮಣೆ ...ಪರಿಪಾಠ ನುಡಿಸಿರಿಯಲ್ಲಿ ಇಲ್ಲವೇ ಇಲ್ಲ. ...ದ ಕಾರ್ಯಕಲಾಪಗಳು ಹೇರಳ ಸರಕಾರಿ ...ನದಿಂದ ನಡೆಯುವುದಾದರೆ ನುಡಿಸಿರಿಯ ಎಲ್ಲ ...ರಿಯೂ ಮೋಹನ್ ಆಳ್ವರದ್ದೇ ಎಂಬುದನ್ನು ... ನಾವು ಮರೆಯಕೂಡದು. ಆದರೆ ಈ ಎಲ್ಲ ...ಳನ್ನು ಗಮನದಲ್ಲಿರಿಸಿಕೊಂಡೂ, ಈ ವರ್ಷದ ...ಯ ಬಗ್ಗೆ ನಾವು ಕೇಳಲೇಬೇಕಾದ ಒಂದೆರಡು ...ವೆ.


...ಡಿಸಿರಿಯ ಮೂರು ದಿನದ ವಾರ್ಷಿಕ ಸಮ್ಮೇಳನ ...ವೆಂಬರ್ 16 ರಿಂದ 18ರ ವರೆಗೆ ನಡೆಯಲಿದ್ದು ...ಕೇಂದ್ರ ವಿಷಯ 'ಕನ್ನಡದ ಮನಸ್ಸು - ಜನಪರ ...ಗಳು'. ಈ ವಿಷಯದಲ್ಲಿ ಎರಡು ವಿಭಿನ್ನ ...ಗಳನ್ನು ಥಳಕು ಹಾಕಲಾಗಿದ್ದು ಒಂದು ...ದನ್ನು ರೂಪಿಸುತ್ತಿದೆ ಎಂದು ಭಾಸವಾಗುತ್ತದೆ. ...ವಾಸ್ತವ ಇಷ್ಟು ಸರಳವಾಗಿಲ್ಲ. ಕರ್ನಾಟಕದ - ...ಲ್ಲೂ ವಿಶೇಷವಾಗಿ ಕರಾವಳಿಯ - ಕಳೆದ ಎರಡು ... ವಿದ್ಯಮಾನಗಳ ಹಿನ್ನೆಲೆಯಲ್ಲಿ ಕನ್ನಡದ ಮನಸ್ಸು ... ಪರಿಕಲ್ಪನೆಯನ್ನು ಪ್ರಶ್ನಿಸಬೇಕಾಗಿದೆ. ಜೊತೆಗೆ ...ನ್ನಡದ ಮನಸ್ಸು' ಮತ್ತು ಜನಪರ ಚಳವಳಿಗೆ ... ಸಂಬಂಧ ಯಾವ ಬಗೆಯದ್ದು ಎಂದು ...ಶಿಸುವ ಅಗತ್ಯವೂ ಇದೆ. 'ಕನ್ನಡದ ಮನಸ್ಸು' ...ಮ ಇದೆಯೇ? ಇದು ದೇವರಿದ್ದಾನೆಯೆ ಎಂಬ ... ಹಾಗೆ ಕೇಳಿಸಬಹುದು. ಆಸ್ತಿಕರಿಗೆ ಹಾಗೆ ...ವುದೇ ಉದ್ಧಟತನವೆನ್ನಿಸಿದರೆ, ನಾಸ್ತಿಕರ ಮಟ್ಟಿಗೆ ...ಶ್ನೆಯೇ ತಲೆದೋರುವುದಿಲ್ಲ. ದೇವರಿದ್ದಾನೋ ...ಲ್ಲ, ದೇವರು ಎಂಬ ಪರಿಕಲ್ಪನೆಯಂತೂ ಇದೆ; ...ಒಂದು ಚರಿತ್ರೆಯೂ ಇದೆ. ಹಾಗೆಯೇ 'ಕನ್ನಡದ ...ಸ್ಸು' ಇದೆಯೋ ಇಲ್ಲವೋ ಆ ನುಡಿಗಟ್ಟಂತೂ ...ಬಳಕೆಯಲ್ಲಿದೆ ಮತ್ತು ಅದಕ್ಕೂ ಒಂದು ಚರಿತ್ರೆ ... "ಕನ್ನಡದೊಳ್ ಭಾವಿಸಿದ ಜನಪದಂ" ಮತ್ತು ... ಸಂಸ್ಕೃತವಲ್ಲಿ 'ವಸುಧಾವಲಯ ವಿಲೀನ ವಿಶದ ... ವಿಶೇಷಂ" ಎಂದು ನೃಪತುಂಗ ಹೇಳಿದ್ದು ...ದ ಮನಸ್ಸಿನ ಕುರಿತೇ ಎಂದು ವಾದಿಸುವುದಕ್ಕೆ ...ಶವಿದೆ. ಕನ್ನಡದ ಮನಸ್ಸು ಎಂಬ ನುಡಿಗಟ್ಟಿನ ... ಹೇಗೇ ಇರಲಿ, ಈಗ ಅದನ್ನು ನಾವು ...ತ್ತಿರುವ ಅರ್ಥದಲ್ಲಿ ಅದು ಚಾಲ್ತಿಗೆ ಬಂದದ್ದು ...ಶತಮಾನದಲ್ಲಿ. "ಕನ್ನಡದ ಮನಸ್ಸು"ಎಂಬ ಸೊಲ್ಲು ...ಂದ ಮೇಲೆ ಕೇಳಿಬರುವುದು ಸಾಹಿತ್ಯದ ...ಪ್ಪಿಗಳಲ್ಲಿ ಮಾತ್ರ ಎಂಬುದನ್ನೂ ನಾವು ...ಸಬೇಕು. ಸಾಹಿತ್ಯಿಕ ವಲಯದ ಆಚೆಗೆ ಇರುವ ...ಗೂ ಮನಸ್ಸು ಎಂಬುದು ಇಲ್ಲವೋ? ಕನ್ನಡದ ...ಸ್ಸು ಎಂಬುದು ಇರುವುದು ಹೌದಾದರೆ ಬೇರೆ ...ಭಾಷೆಗಳಿಗೂ ತಮ್ಮತಮ್ಮದೇ ಆದ ಮನಸ್ಸುಗಳು ಇರಬೇಕಲ್ಲವೇ? ಇವು ಶಬ್ದಗಳ ವಾಚ್ಯಾರ್ಥವನ್ನಷ್ಟೇ ಇಟ್ಟುಕೊಂಡು ಕೇಳುವ "ಕೂದಲು ಸೀಳುವ" ಪ್ರಶ್ನೆಗಳಲ್ಲ. ಕನ್ನಡದ ಮನಸ್ಸು ಎಂಬ ಪರಿಕಲ್ಪನೆ ಸಾಹಿತ್ಯದ ಮಟ್ಟಿಗೆ ಅದರಲ್ಲೂ ಶ್ರೇಷ್ಠ ಸಾಹಿತ್ಯದ ಮಟ್ಟಿಗೆ ಮಾತ್ರ ಅನ್ವಯವಾಗುತ್ತಿದೆ. ಆದ್ದರಿಂದ ಸಂದರ್ಭಕ್ಕೆ ತಕ್ಕಂತೆ ಪಂಪ, ವಚನಕಾರರು, ಕುಮಾರವ್ಯಾಸ, ಬೇಂದ್ರೆ, ಪುಟ್ಟಪ್ಪ ಕಾರಂತ, ಮಾಸ್ತಿ- ಹೀಗೆ ಆಯಾಕಾಲದ ಶ್ರೇಷ್ಠರು "ಕನ್ನಡದ ಮನಸ್ಸನ್ನು" ಪ್ರತಿನಿಧಿಸುವವರಾಗುತ್ತಾರೆ. ಕರ್ನಾಟಕದ ಕಾರ್ಮಿಕರು, ಕುಶಲಕರ್ಮಿಗಳು, ತಂತ್ರಜ್ಞರು, ಸಾಹಿತ್ಯೇತರ ಜ್ಞಾನಶಿಸ್ತುಗಳಲ್ಲಿ ತೊಡಗಿಕೊಂಡವರು - ಯಾರಾದರೂ ಈ ಚರ್ಚೆಯಲ್ಲಿ ಕನ್ನಡದ ಮನಸ್ಸಿನ ಅಭಿವ್ಯಕ್ತಿಯಲ್ಲ. ಈ ವೃತ್ತಿಗಳವರ ಪ್ರಸ್ತಾಪ ಕೂಡಾ ಅಲ್ಲಿ ಆಗುವುದಿಲ್ಲ. ಜೊತೆಗೆ ಈ ಚರ್ಚೆಯ ಇನ್ನೊಂದು ಲಕ್ಷಣವೆಂದರೆ ಅದು ದಯೆ, ಸಹಿಷ್ಣುತೆ, ಔದಾರ್ಯ, ಸಮಭಾವ, ಸತ್ಯಪರತೆ, ನ್ಯಾಯಪರತೆ ಮುಂತಾದ ಎಲ್ಲಾ ಶ್ರೇಷ್ಠ ಗುಣಗಳನ್ನೂ ಕನ್ನಡ ಮನಸ್ಸಿನ ಜೊತೆ ಸಮೀಕರಿಸುತ್ತದೆ. ಹೇಗಿದ್ದರೂ ಕನ್ನಡದ ಶ್ರೇಷ್ಠ ಸಾಹಿತ್ಯದಿಂದ ಈ ಎಲ್ಲ ಗುಣಗಳಿಗೂ ಹೇರಳವಾಗಿ ಉದಾಹರಿಸಬಹುದು. ಎಗ್ಗಿಲ್ಲದ ಆತ್ಮ ಪ್ರಶಂಸೆ, ಭಾಷಾ ದುರಭಿಮಾನ ಎಲ್ಲ ಶುರುವಾಗುವುದು ಇಲ್ಲಿಂದಲೇ.

"ಕನ್ನಡದ ಮನಸ್ಸು- ಜನಪರ ಚಳವಳಿಗಳು" ಎಂಬ 2012ರ ನುಡಿಸಿರಿಯ ವಿಷಯದ ಎರಡನೇ ಭಾಗದ ಬಗ್ಗೆಯೂ ನಾವು ಕೇಳಲೇಬೇಕಾದ ಪ್ರಶ್ನೆಗಳಿವೆ. 'ಕನ್ನಡದ ಮನಸ್ಸು' ಎಂಬುದರ ಹಾಗೆ 'ಜನಪರ ಚಳವಳಿ' ಎಂಬ ಪರಿಕಲ್ಪನೆಗೂ ಪ್ರಶ್ನಾರ್ಹವಾದ ಅರ್ಥ ಮತ್ತು ನಿರೂಪಣೆಗಳು ಆರೋಪಿಸಲ್ಪಟ್ಟಿವೆ. ಚಳವಳಿಗಳ ಪೈಕಿ ಯಾವುದು ಜನಪರ? ಯಾವುದು ಅಲ್ಲ? ಅದನ್ನು ನಿರ್ಧರಿಸುವವರು ಯಾರು? ಗಡಿವಿವಾದ, ನದಿನೀರಿನ ಹಂಚಿಕೆ, ಅನ್ಯಭಾಷಿಕರ ಸಮಸ್ಯೆ ಇತ್ಯಾದಿಗಳ ಸುತ್ತ ನಡೆಯುವ ಚಳವಳಿಗಳು ಜನಪರವೋ? ಜನವಿರೋಧಿಯೋ? ಬೆಳಗಾವಿ ಬಗ್ಗೆ ಶಿವಸೇನೆ ನಡೆಸುವ ಚಳವಳಿ ಯಾವ ಬಗೆಯದ್ದು? ಕಾವೇರಿ ನದಿನೀರಿನ ಬಗ್ಗೆ ಮಂಡ್ಯದ ರೈತರು ನಡೆಸುವ ಚಳವಳಿ ಕನ್ನಡಿಗರ ಮಟ್ಟಿಗೆ ಜನಪರ. ತಮಿಳರಿಗೆ ಹೇಗೆ? ಜನಪರ ಚಳವಳಿಯೆಂದರೆ ಸ್ಥೂಲವಾಗಿ ಎಡಪಂಥೀಯ ಬೇಡಿಕೆ ಮತ್ತು ಕಾಳಜಿಗಳ ಸುತ್ತ ನಡೆಯುವ ಚಳವಳಿ; ಅದರ ತುಡಿತ, ಸದಾ ಸ್ವಾತಂತ್ರ್ಯ ಮತ್ತು ಸಮಾನತೆಗಳತ್ತ ಎಂಬ ನಿರೂಪಣೆಯೊಂದು ಆ ಪರಿಕಲ್ಪನೆಗೆ ಗಟ್ಟಿಯಾಗಿ ಅಂಟಿಕೊಂಡಿದೆ. ಅಂತಹ ಚಳವಳಿಗಳು ಜನಪರವೇ ಹೌದು. ಆದರೆ ಕರ್ನಾಟಕದಲ್ಲಿ ಕಳೆದ 20 ವರ್ಷಗಳಲ್ಲಿ ಅತಿಹೆಚ್ಚು ಸಂಖ್ಯೆಯಲ್ಲಿ ಜನ ಪಾಲುಗೊಂಡಿರುವ ಚಳವಳಿ ಈ ಅರ್ಥದಲ್ಲಿ ಜನಪರ ಚಳವಳಿಯಲ್ಲ. ಹಿಂದೂತ್ವದ ಸಿದ್ಧಾಂತದಿಂದ ಪ್ರೇರಿತವಾಗಿರುವ ಈ ಚಳವಳಿ ಸ್ವಾತಂತ್ರ್ಯ ಮತ್ತು ಸಮಾನತೆಯ ಮೌಲ್ಯಗಳನ್ನು ಹತ್ತಿರ ಕೂಡಾ ಸೇರಿಸಿಕೊಳ್ಳುವುದಿಲ್ಲ. ಇದರ ಮುಂಚೂಣಿಯಲ್ಲಿರುವುದು ಆರ್‌ಎಸ್‌ಎಸ್, ವಿಹಿಂಪ, ಎಬಿವಿಪಿ, ಭಜರಂಗದಳ ಮುಂತಾದ ಸಂಘಪರಿವಾರದ ಸಂಘಟನೆಗಳು. ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅತಿಹೆಚ್ಚು ಸಂಖ್ಯೆಯ ಜನ ಮಾತ್ರವಲ್ಲ ಎಲ್ಲ ಜಾತಿ ಮತ್ತು ವರ್ಗಗಳವರೂ ಸಕ್ರಿಯವಾಗಿ ಭಾಗವಹಿಸುತ್ತಿರುವ ಚಳವಳಿ ಇದು. ಹಿಂದೂತ್ವವನ್ನು ಒಪ್ಪಿಕೊಳ್ಳದವರು ಕೂಡಾ ಕರಾವಳಿಯಲ್ಲಿ ಆ ಸಿದ್ಧಾಂತದ ಜನಪ್ರಿಯತೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಈ ಜನಪ್ರಿಯತೆಯನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಸಂಘಪರಿವಾರ ಕರಾವಳಿಯಲ್ಲಿ ಹಲವು ಪ್ರಯೋಗಗಳನ್ನು ನಡೆಸಿದೆ. ಅಲ್ಲಲ್ಲಿ ಹಿಂದೂ ಸಮಾಜೋತ್ಸವಗಳನ್ನು ನಡೆಸಿ ಮುಸ್ಲಿಮರು, ಕ್ರೈಸ್ತರು ಮತ್ತು ಕಮ್ಯೂನಿಸ್ಟರ ವಿರುದ್ಧ ದ್ವೇಷ ಹೆಚ್ಚಿಸುವುದು ಅಂತಹ ಒಂದು ಪ್ರಯೋಗ. ಈ ಸಮಾಜೋತ್ಸವಗಳಲ್ಲಿ ದೊಡ್ಡ ಸಂಖ್ಯೆಯ ಸಾಮಾನ್ಯ ಜನರ ಜೊತೆ ಸಮಾಜದ ಗಣ್ಯರನ್ನೂ ಭಾಗಿಗಳನ್ನಾಗಿ ಮಾಡಲಾಗುತ್ತದೆ. ಉದಾಹರಣೆಗೆ 2007ರಲ್ಲಿ ಮಂಗಳೂರಿನಲ್ಲಿ ನಡೆದ ಹಿಂದೂ ಸಮಾಜೋತ್ಸವದ ಸಭೆ ಆ ನಗರದ ಇತಿಹಾಸದಲ್ಲೇ ಅತಿದೊಡ್ಡ ಸಾರ್ವಜನಿಕ ಸಭೆಗಳಲ್ಲಿ ಒಂದಾಗಿತ್ತು, ಅದರ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದವರು ನುಡಿಸಿರಿಯ ಸಂಚಾಲಕ ಮೋಹನ್ ಆಳ್ವ. ಆ ಸಮಾಜೋತ್ಸವಕ್ಕೆ ಆಗ ರಾಜ್ಯದ ಉಪಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಹಾಗೂ ಆರ್‌ಎಸ್‌ಎಸ್ ಸಹಕಾರ್ಯವಾಹರಾಗಿದ್ದ ಮೋಹನ್ ಭಾಗವತ್ ಮುಖ್ಯ ಅತಿಥಿಗಳಾಗಿದ್ದರು. ಮಂಗಳೂರಿನ ಹಿಂದೂ ಸಮಾಜೋತ್ಸವದ ವೇಳೆಗೆ ಬಾಬರಿ ಮಸೀದಿ ಧ್ವಂಸವಾಗಿ 15 ವರ್ಷ ಕಳೆದಿತ್ತು, ಉಡುಪಿ ಮತ್ತು ದ.ಕ. ಜಿಲ್ಲೆಗಳ ಜನ ಲಾಗಾಯ್ತಿನಿಂದಲೂ ನಿಕಟ ಸಂಬಂಧವಿರಿಸಿಕೊಂಡಿರುವ ಮುಂಬೈ ಶಹರದಲ್ಲಿ ಆಗ ನಡೆದ ಹಿಂಸಾಚಾರದಲ್ಲಿ 900 ಜನ-ಅದರಲ್ಲಿ ಹೆಚ್ಚಿನವರು ಮುಸ್ಲಿಮರು- ಕೊಲೆಯಾಗಿದ್ದರು; ಗುಜರಾತ್ ನರಮೇಧ ನಡೆದು ಐದು ವರ್ಷಗಳಾಗಿದ್ದವು. ಕರ್ನಾಟಕದಲ್ಲೂ ಮುಸ್ಲಿಮರ ಮೇಲೆ ಹಲವೆಡೆ ಭೀಕರ ಹಿಂಸಾಚಾರ ನಡೆದಿತ್ತು; ಇನ್ನಷ್ಟು ಹಿಂಸಾಚಾರ ನಡೆಯುವುದಿತ್ತು, ಕರಾವಳಿಯ ಊರುಗಳಲ್ಲಿ ಹಿಂಸೆ ಗಾಳಿಯಲ್ಲೇ ಬೆರೆತಂತಿತ್ತು, ಸಾಲದ್ದಕ್ಕೆ ಇಲ್ಲಿನ ಎರಡು ಪ್ರಮುಖ ದಿನಪತ್ರಿಕೆಗಳು (ಉದಯವಾಣಿ ಮತ್ತು ಆಗಿನ ವಿಜಯ ಕರ್ನಾಟಕ) ಪ್ರತಿದಿನ ಜನರಿಗೆ ಹಿಂದೂತ್ವದ ವಿಷವುಣ್ಣಿಸುತ್ತಿದ್ದವು. ಈ ವಿಷಪೂರಿತ ಸಿದ್ಧಾಂತವನ್ನು ಇನ್ನಷ್ಟು ಜನಪ್ರಿಯಗೊಳಿಸುವುದೇ ಮಂಗಳೂರಿನ ಹಿಂದೂ ಸಮಾಜೋತ್ಸವದ ಉದ್ದೇಶವಾಗಿತ್ತು. ಅದರಲ್ಲಿ ಭಾಗವಹಿಸಿದವರು ಕನ್ನಡಿಗರೇ. ಹಿಂದೂತ್ವದ ಹಿಂಸೆಗೆ ತುತ್ತಾದ ಈ ನಾಡಿನ ಮುಸ್ಲಿಮರು ಮತ್ತು ಕ್ರೈಸ್ತರು ಕೂಡಾ ನಿಸ್ಸಂದೇಹವಾಗಿ ಕನ್ನಡಿಗರೇ. ಕನ್ನಡ ವಿಮರ್ಶಕರು ಮನದುಂಬಿ ಹೇಳುವ "ಕನ್ನಡದ ಮನಸ್ಸು" ಈ ಕನ್ನಡಿಗರನ್ನೂ ಒಳಗೊಳ್ಳುತ್ತದೋ? ಕನ್ನಡದ ಮನಸ್ಸು ಎಂಬುದೊಂದಿದ್ದರೆ ಅದಕ್ಕೂ ಕರ್ನಾಟಕದಲ್ಲಿ ಅಡ್ವಾನಿಯವರ ರಥಯಾತ್ರೆಯೊಡನೆ ಉದ್ಘಾಟನೆಗೊಂಡ ಹಿಂಸೆಯ ಅಭಿಯಾನಕ್ಕೂ ಇರುವ ಸಂಬಂಧ ಯಾವ ಬಗೆಯದ್ದು? ಈ ಪ್ರಶ್ನೆಗಳನ್ನು ಕೇಳದೆ ಮುಗುಮ್ಮಾಗಿರುವುದು ಸೌಜನ್ಯ ಎಂದು ನಾವು ಭಾವಿಸಕೂಡದು.

ಮೂಡಬಿದರೆಯಲ್ಲಿ ಈ ವರ್ಷದ ನುಡಿಸಿರಿ ಪ್ರಾರಂಭವಾಗುತ್ತಿದ್ದ ಹಾಗೆ ದ.ಕ. ಜಿಲ್ಲೆಯ ಇನ್ನೊಂದು ತುದಿಯಲ್ಲಿರುವ ಸುಬ್ರಹ್ಮಣ್ಯದ ಸಮೀಪ ವರ್ಷಾವಧಿ ನಡೆಯುವ ಕುಲ್ಕುಂದ ಜಾನುವಾರು ಜಾತ್ರೆಯನ್ನು ಅಲ್ಲಿನ ಗ್ರಾಮಪಂಚಾಯತ್ ಒಲ್ಲದ ಮನಸ್ಸಿನಿಂದ ರದ್ದುಗೊಳಿಸಿದೆ. ನೂರಾರು ವರ್ಷಗಳಿಂದ ಕುಲ್ಕುಂದದಲ್ಲಿ ನಡೆಯುತ್ತಿದ್ದ ಈ ಜಾನುವಾರು ಜಾತ್ರೆಯನ್ನು ಗೋರಕ್ಷಣೆಯ ಹೆಸರಿನಲ್ಲಿ ನಿಲ್ಲಿಸುವಂತೆ ಭಜರಂಗ ದಳ ಹೇರಿದ ಒತ್ತಡ ಮತ್ತು ಸೃಷ್ಟಿಸಿದ ಅಶಾಂತಿಯೇ ಅದಕ್ಕೆ ಕಾರಣ. ರೈತರಿಗೆ ತಾವು ಸಾಕಿದ ಜಾನುವಾರುಗಳನ್ನು ಮಾರುವ ಸ್ವಾತಂತ್ರ್ಯ ಮತ್ತು ಕೆಲವು ಜನರ ಆಹಾರ ಸ್ವಾತಂತ್ರ್ಯವನ್ನು ದಮನಿಸಿ ಪ್ರಾಣಿದಯೆ, ಧರ್ಮ, ಸಂಸ್ಕೃತಿ ಮುಂತಾದ ವಿಷಯಗಳಲ್ಲಿ ತಮ್ಮ ಯಜಮಾನಿಕೆಯನ್ನು ಹೇರುವ ಸಂಘಪರಿವಾರ ಸಾಹಿತಿಗಳ ಮಟ್ಟಿಗೆ ಮಾತ್ರ ಉದಾರವಾಗಿರುತ್ತದೆ ಎಂಬ ಭ್ರಮೆ ಬೇಡ. ಸಾಹಿತಿಗಳ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಸಂಘ ಪರಿವಾರ ನಡೆಸಿದ ಫ್ಯಾಸಿಸ್ಟ್ ಹಲ್ಲೆಯ ಹಲವು ನಿದರ್ಶನಗಳು ನಮ್ಮ ಮುಂದಿವೆ. ಆಳ್ವಾಸ್ ನುಡಿಸಿರಿ ಸಮ್ಮೇಳನ ಈ ವಾಸ್ತವವನ್ನು ಗಮನಿಸುತ್ತದೆ ಎಂದು ಆಶಿಸೋಣ.

■ ಜಿ. ರಾಜಶೇಖರ



ಆಳ್ವಾಸ್ ನುಡಿಸಿರಿ 2012

ಸಾವಿರ ಒಣ ಕನಸುಗಳಿಗಿಂತ ಒಂದು ನಿಜ ಪ್ರಯತ್ನ ಲೇಸು


...ಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಜೈರಾಮ್ ರಮೇಶ್ "ಭಾರತದಲ್ಲಿ ದೇವಾಲಯಕ್ಕಿಂತ ಶೌಚಾಲಯಗಳ ಹೆಚ್ಚಿದೆ" ಎಂಬ ಹೇಳಿಕೆ ನೀಡಿದರೆಂದು ಕೆಲವು ಧಾರ್ಮಿಕ ಸಂಘಟನೆಗಳು ಬೀದಿಗಿಳಿದು ಪ್ರತಿಭಟಿಸಿದವು. ...ವಿಚಾರವಾದಿಯಾಗಿದ್ದ ಸ್ವಾಮಿ ವಿವೇಕಾನಂದರು ಇದೇ ಅರ್ಥ ಬರುವ ಹಲವಾರು ಉವಾಚಗಳನ್ನು 115 ...ಗಳ ಹಿಂದೆಯೇ ಹೇಳಿದ್ದರು. ಅವುಗಳನ್ನು ಸ್ವಾಮಿ ವಿವೇಕಾನಂದರ ವಿವಿಧ ಲೇಖನಗಳಿಂದ ಆಯ್ದುಕೊಂಡು ...ಸಬದ್ಧವಾಗಿ ಜೋಡಿಸುವ ಪ್ರಯತ್ನ ಮಾಡಿದ್ದೇನೆ.

* ಮುಕ್ಕೋಟಿ ದೇವರಿಗಿಂತ ಒಬ್ಬ ಮಾನವತಾವಾದಿ ಸಂತ ಮೇಲು.
* ಸಾವಿರ ಹೋಮ ಹವನಗಳಿಗಿಂತ ಒಂದು ಬೇವಿನ ಗಿಡ ನೆಡುವುದು ಮೇಲು.
* ಸಾವಿರ ತುಳಸಿದಳ ದೇವರಿಗರ್ಪಿಸುವುದಕ್ಕಿಂತ ಒಂದು ತುಳಸಿದಳ ತಾವೇ ತಿನ್ನುವುದು ಮೇಲು.
* ಸಾವಿರ ದೇವರ ಮೂರ್ತಿ ಕೆತ್ತುವುದಕ್ಕಿಂತ ಒಬ್ಬ ನಿರಕ್ಷರಿಗೆ ಅಕ್ಷರ ಕಲಿಸುವುದು ಮೇಲು.
* ಸಾವಿರ ಯಜ್ಞ ಕುಂಡಗಳಿಗಿಂತ ಒಂದು ಕಮ್ಮಾರನ ಕುಲುಮೆ ಮೇಲು.
* ಸಾವಿರ ಧನಲಕ್ಷ್ಮಿ ಪೂಜೆಗಿಂತ ಒಂದು ಕಾಸು ದಾನ ಹೆಚ್ಚು ಪುಣ್ಯಕಾರಕ.
* ಸಾವಿರ ದೇಗುಲ ಕಟ್ಟಿಸುವುದಕ್ಕಿಂತ ಒಂದು ಶಾಲೆ ಕಟ್ಟಿಸುವುದು ಮೇಲು.
* ಸಾವಿರ ಅರ್ಚಕರಿಗಿಂತ ಒಬ್ಬ ಶಿಕ್ಷಕ ಮೇಲು.
* ಸಾವಿರ ದೇವರ ಸ್ತೋತ್ರಕ್ಕಿಂತ ಒಂದು ಗಣಿತದ ಸೂತ್ರ ಮೇಲು.
* ಸಾವಿರ ತತ್ವಜ್ಞಾನಿಗಳಿಗಿಂತ ಒಬ್ಬ ವಿಜ್ಞಾನಿ ಮೇಲು.
* ಸಾವಿರ ವೇದ ಪಂಡಿತರಿಗಿಂತ ಒಬ್ಬ ಆಯುರ್ವೇದ ಪಂಡಿತ ಮೇಲು.
* ಸಾವಿರ ವೇದೋಪನಿಷತ್ತುಗಳಿಗಿಂತ ಒಂದು ವೈದ್ಯ ಶಾಸ್ತ್ರ ಮೇಲು.
* ಸಾವಿರ ನೈವೇದ್ಯ ದೇವರಿಗಿಡುವುದಕ್ಕಿಂತ ಒಂದು ಊಟ ಬಡವನಿಗುಣಿಸುವುದು ಮೇಲು.
* ಸಾವಿರ ಮಂತ್ರಘೋಷಗಳಿಗಿಂತ ಒಂದುಕ್ಷಣ ಮೌನಭಕ್ತಿ ಮೇಲು.
* ಸಾವಿರ ಭಟ್ಟರಿಗಿಂತ ಒಬ್ಬ ಕ್ಷೌರಿಕ ಮೇಲು.
* ಸಾವಿರ ದೇವರನಾಮ ಪಠಣಕ್ಕಿಂತ ಒಂದು ಒಳ್ಳೆ ಕರ್ಮ ಮೇಲು.
* ಸಾವಿರ ವ್ರತ-ಉಪವಾಸಕ್ಕಿಂತ ಒಂದುಕ್ಷಣ ಧ್ಯಾನ ಮೇಲು.
* ಸಾವಿರ ಹರಕೆಗಳಿಗಿಂತ ಒಂದು ಶುಭ-ಹಾರೈಕೆ ಮೇಲು.
* ಸಾವಿರ ಹೊಗಳಿಕೆಗಿಂತ ಒಂದು ಹಿತೋಪದೇಶ ಮೇಲು.
* ಸಾವಿರ ಪೂಜಾರಿಗಳಿಗಿಂತ ಒಬ್ಬ ಆಚಾರಿ ಮೇಲು.
* ಸಾವಿರ ತಾಂತ್ರಿಕ-ದೈವಜ್ಞರಿಗಿಂತ ಒಬ್ಬ ತಂತ್ರಜ್ಞ-ಯಂತ್ರಜ್ಞಾನಿ ಮೇಲು.
* ಸಾವಿರ ಮೂರ್ಖ ಮಿತ್ರರಿಗಿಂತ ಒಬ್ಬ ವಿವೇಕಿ ಶತ್ರು ವಿಹಿತ.
* ಪ್ರಣಯ-ರಸಿಕತೆ ಕೇಂದ್ರಿತ ಪುರಾಣ ಶ್ರವಣಕ್ಕಿಂತ ದೈಹಿಕ ಕಸರತ್ತು ಲೇಸು.
* ಸಾವಿರ ರಾಜಕಾರಣಿಗಳಿಗಿಂತ ಒಬ್ಬ ರೈತ ಮೇಲು (ಒಬ್ಬ ರಾಜಕಾರಣಿಗಿಂತ ಸಾವಿರ ಕಳ್ಳರು ವಾಸಿ)
* ಸಾವಿರ ಒಣ ಕನಸುಗಳಿಗಿಂತ ಒಂದು ನಿಜ ಪ್ರಯತ್ನ ಲೇಸು.

● ಪ್ರವೀಣ್ ಎಸ್. ಶೆಟ್ಟಿ

ಒಂದು ಪತ್ರ

ಕೃತಿ: ಮಧ್ಯ ಯುಗೀನ ಭಾರತ: ಅಂತ್ಯಜರ ತತ್ವ ಚಿಂತನೆ
ಇಂಗ್ಲಿಷ್ ಮೂಲ: ಹರಿಜನ ಕಾಂಟ್ರಿಬ್ಯೂಶನ್ ಟು ಮೀಡಿವಲ್ ಇಂಡಿಯನ್ ಥೊಟ್: ಶಂಕರ್ ಮೊಕಾಶಿ ಪುಣೇಕರ್
ಅನುವಾದ: ಡಾ. ಬಂಜಗೆರೆ ಜಯಪ್ರಕಾಶ
ಪ್ರಕಾಶನ: ಚಾರು ಪ್ರಕಾಶನ, ನಂ 9, ಇ.ಎ.ಟಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
ಪುಟ : 150 ಬೆಲೆ 100/–



ನೈಜ ಹಿಂದೂಗಳು V/s ಢೋಂಗಿ ಹಿಂದೂವಾದಿಗಳ

ಈ ಗ್ರಂಥವು ಹಿಂದೂ ಧರ್ಮದ ಕುರಿತಾಗಿ ಇದುವರೆಗೆ ಸಂಬಿಕೊಂಡು ಬಂದಿರುವ, ಆಳವಾಗಿ ಬೇರೂರಿರುವ ಹಲವಾರು ಸುಳ್ಳುಗಳನ್ನು ಅನಾವರಣ ಮಾಡಿದೆ. ಅಂತ್ಯಜರ ಮನಃಪಟಲದಲ್ಲಿ ತುಂಬಿರುವ ಅಸ್ಪೃಶ್ಯ ಭಾವನೆಯ ಹಿಂದಿರುವ ಹುನ್ನಾರವನ್ನು ಹೊರಗೆಳೆದು ಸವರ್ಣೀಯರು ತತ್ವಚಿಂತನೆಯ ಅಖಾಡಕ್ಕೆ ಬರುವಂತೆ ಪಂಥಾಹ್ವಾನ ನೀಡಿದೆ.

ಈಗ ಹಿಂದೂ ಎಂದು ಕರೆದುಕೊಳ್ಳುವ ಯಾವನಿಗೂ ಹಾಗೆ ಕರೆದುಕೊಳ್ಳಲು ಯಾವ ಅಧಿಕಾರವಾಗಲಿ, ತಕಸದಿ ಯಾಗಲಿ ಇಲ್ಲ ಎಂದು ಬಹಿರಂಗವಾಗಿ ಹಿಂದೂವಾದಿಗಳಿಗೆ ಸವಾಲು ಎಸೆಯುತ್ತದೆ. ಹಿಂದೂ ಎಂದು ಕರೆದುಕೊಳ್ಳುವವರ ಪವಿತ್ರ ಗ್ರಂಥಗಳಾದ ಮಹಾಭಾರತವಾಗಲಿ, ರಾಮಾಯಣ ವಾಗಲಿ, ವೇದಪುರಾಣಗಳಾಗಲಿ, ಸ್ಮೃತಿಗಳಾಗಲಿ ಬರೆಯಲ್ಪಟ್ಟದ್ದು ಅಂತ್ಯಜರಿಂದ ಎಂಬ ಸತ್ಯವನ್ನು ಹೊರಗೆಡಹುತ್ತದೆ. ಆದರೂ ಈ ವಿಷಯವನ್ನು ಇದುವರೆಗೆ ಕತ್ತಲಲ್ಲಿಡಲು ಸವರ್ಣೀಯರು ಮಾಡಿರಬಹುದಾದ ಹುನ್ನಾರಗಳಾವವು? ಕುತಂತ್ರ, ಕುಯುಕ್ತಿಗಳಾವವು? ಎಷ್ಟೆಲ್ಲ ಅಂತ್ಯಜರ ಆಧ್ಯಾತ್ಮಿಕ ತತ್ವಚಿಂತನೆಗಳನ್ನು ಮೇಲ್ಜಾತಿಯವರು ತಮ್ಮದನ್ನಾಗಿಸಿ ಕೊಂಡರು? ಅಂತ್ಯಜರ ಹಲವಾರು ಪೂಜಾಕ್ರಮಗಳನ್ನು ಹೇಗೆ ಕಬಳಿಸಿದರು? ಹೇಗೆ ಅಂತ್ಯಜರ ಧಾರ್ಮಿಕ ವಿಚಾರಗಳಿಗೆ ಹಿಂದೂಧರ್ಮ ಎಂದು ಹೆಸರಿಟ್ಟು ತಾವೇ ವಿಜೃಂಭಿಸಿದರು ಎಂಬ ವಿಚಾರಗಳನ್ನು ದಲಿತರು ಈ ಗ್ರಂಥದಿಂದ ಅರಿತಾಗ ಅವರ ಮೈ ಮನ ಆಕ್ರೋಶದಿಂದ ಕುದಿಯುತ್ತದೆ.

ಎಲ್ಲ ಹಿಂದೂ ಧರ್ಮದ ಧಾರ್ಮಿಕ ವಿಚಾರಗಳು ಅಂತ್ಯಜರವೇ ಆಗಿವೆ. ಹಿಂದೂಧರ್ಮದ ಎಲ್ಲ ಸಾಂಸ್ಕೃತಿಕ ಆಯಾಮಗಳ ಬೇರು ಅಂತ್ಯಜರ ಆಧ್ಯಾತ್ಮಿಕ ವೈಚಾರಿಕ ಯಲ್ಲಿದೆ ಎಂಬುದನ್ನು ಮೊಕಾಶಿಯವರು ಸೋದಾಹರಣ ವಾಗಿ ಬಿಡಿಸಿ ಇಟ್ಟಿದ್ದಾರೆ. ವೇದವನ್ನು ಓದಲು, ಅರ್ಥ ಮಾಡಿಕೊಳ್ಳಲು ಶೂದ್ರರು, ಪಂಚಮರು ಅರ್ಹರಲ್ಲ ಎಂಬ ಹೇಳಿಕೆಯಲ್ಲಿನ ಧೂರ್ತತೆಯನ್ನು ಅನಾವರಣಗೊಳಿಸಿದ್ದಾರೆ. ಇದು ಪುಣೇಕರರ ಪ್ರಮುಖವಾದ ಚಿಂತನಾ ಕೃತಿ. ಇದರ ಓದಿನಿಂದ ಭಾರತೀಯ ಸಂಸ್ಕೃತಿ ನಿರ್ಮಾಣದಲ್ಲಿ ಮರೆಮಾಚಲ್ಪಟ್ಟಿರುವ ಬಹಳ ಮುಖ್ಯ ಘಟಕವನ್ನು ನಾವು ಅರಿಯಲು ಸಾಧ್ಯವಿದೆ.

ಈ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿ ಡಾ. ಬಂಜಗೆರೆ ಜಯಪ್ರಕಾಶ ಅವರು ಕನ್ನಡ ಬೌದ್ಧಿಕ ಲೋಕಕ್ಕೆ ಹೊಸ ಕೊಡುಗೆಯನ್ನು ನೀಡಿದ್ದಾರೆ ಎಂದರೆ ಅತಿಶಯೋಕ್ತಿಯಾ ಗಲಾರದು. "ಸಾಮಾಜಿಕ ಪದ್ಧತಿಗಳ, ಅದರಲ್ಲಿ ಪರ್ಯಟ್ಟ ಪಲ್ಲಟಗಳು, ಅದರ ಅಂಗವಾಗಿ ಮೂಡಿಬಂದ ದಾರ್ಶನಿಕ ಚಿಂತನೆಗಳು, ಇವುಗಳ ಬಗ್ಗೆ ವೇದ, ಪುರಾಣ, ಭಾಷಾಶಾಸ್ತ್ರ ಸಮಾಜ ಶಾಸ್ತ್ರ ಮುಂತಾದ ಹಲವು ಅಂಶಗಳ ಆಧಾರದಿಂದ ಶಂಕರ್ ಮೊಕಾಶಿ ಪುಣೇಕರ್ ಈ ಕೃತಿಯನ್ನು ರೂಪಿಸಿದ್ದಾರೆ.. ಭಾರತೀಯ ತತ್ವಚಿಂತನೆಗೆ ಕೆಳಜಾತಿಗಳು ನೀಡಿದ ಮಹತ್ತರವಾದ ಕೊಡುಗೆ ಹಾಗೂ ಆ ಚಿಂತನೆಗಳ ಸತ್ವವನ್ನು ತಿಳಿಯಲು ಅನುಕೂಲವಾಗುತ್ತದೆ ಎಂಬ ಕಾರಣಕ್ಕೆ ಈ ಕೃತಿಯ ಅನುವಾದವನ್ನು ಕೈಗೆತ್ತಿಕೊಂಡೆ" ಎಂದು ಮುನ್ನುಡಿಯಲ್ಲಿ ಬಂಜಗೆರೆಯವರು ಬರೆಯುತ್ತಾರೆ.

ಕೆಳಜಾತಿಗಳವರು ಬೌದ್ಧಿಕ ಕ್ಷೇತ್ರದಲ್ಲಿ ಸಾಕಷ್ಟು ಪ್ರಮಾಣದ ಕೊಡುಗೆ ನೀಡಿದ್ದಾರೆ ಎಂಬುದನ್ನು ಹಲವಾರು ಸಾಕ್ಷ್ಯಾಧಾರಗಳ ಮೂಲಕ ಪುಣೇಕರರು ಸಾಬೀತುಪಡಿಸುತ್ತಾರೆ. ಹಿಂದೂ ಧರ್ಮದ ಆಡಿಪಾಯಗಳಾದ ಮೂರ್ತಿಪೂಜೆ, ದೇವಸ್ಥಾನ, ಗುರುಪರಂಪರೆ, ಮಠ, ಪೂಜೆಗೆ ಸಂಬಂಧಪಟ್ಟ ಪಂಚಾರತಿ, ಪಂಚಗಜ್ಜಾಯ, ಭಕ್ತಿ ಪಂಥ, ಭಜನೆ ಇವೆಲ್ಲವೂ ಅಂತ್ಯಜರಿಂದಲೇ ಹುಟ್ಟಿಬಂದ ಆಚರಣೆಗಳಾಗಿರುವಾಗ; ಮಹಾಭಾರತ, ರಾಮಾಯಣ, ಪಂಚರಾತ್ರಸಂಹಿತೆಗಳು, ಪಾಶುಪತ, ವಚನಗಳು, ಭಗವದ್ಗೀತೆ ಮೂಡಿಬಂದದ್ದು ಅಂತ್ಯಜರಿಂದಲೇ ಎನ್ನುವಾಗ, ಅಸ್ಪೃಶ್ಯತೆ ಎಂಬ ಅನಿಷ್ಟ ಎಲ್ಲಿಂದ ಅಕ್ರಮವಾಗಿ ನುಸುಳಿ ಬಂದು ಅಂತ್ಯಜರ ಬದುಕನ್ನೇ ಮೂರಾಬಟ್ಟೆ ಮಾಡಿತು ಎಂಬೆಲ್ಲ ಸತ್ಯಗಳು ಈ ಗ್ರಂಥದಲ್ಲಿ ಅನಾವರಣಗೊಂಡಿವೆ.

ಹೇಗೆ ಸವರ್ಣೀಯರು ತಮ್ಮ ಸ್ವಾರ್ಥಕ್ಕಾಗಿ, ತಮ್ಮ ಜೀವನೋಪಾಯಕ್ಕಾಗಿ ಅಂತ್ಯಜರ ತತ್ವಜ್ಞಾನವನ್ನು ಸೂರೆಗೈದರು ಅಂತ್ಯಜರನ್ನು ಆ ಜ್ಞಾನದಿಂದ ದೂರವಿಟ್ಟರು, ಷಡ್ಯಂತ್ರ ರಚಿಸಿ ಅಂತ್ಯಜರಿಗೆ ವಿದ್ಯೆಯನ್ನು ನಿಷೇಧಿಸಿದರು ಎಂಬುದನ್ನು ಈ ಗ್ರಂಥ ತಿಳಿಸುತ್ತದಲ್ಲದೆ ಅಂತ್ಯಜರ ತತ್ವಜ್ಞಾನದ ಘನತೆಯನ್ನು ಎತ್ತಿ ಹಿಡಿಯುತ್ತದೆ. ಈ ಗ್ರಂಥವು ಹಿಂದೂ ಜಾತಿ ಪದ್ಧತಿಯಲ್ಲಿ ನೆಲೆಗೊಂಡಿರುವ ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸಿ, ಅಂತ್ಯಜರ ಆಧ್ಯಾತ್ಮಿಕ ಉನ್ನತೀಕರಣದ ಐತಿಹಾಸಿಕ ದಾಖಲೆಗಳನ್ನು ಕೊಡುತ್ತದೆ.

ಪಾಶುಪತ, ಪಂಚರಾತ್ರ ಸಂಹಿತೆಗಳು, ನಾಥ ಪಂಥ, ದತ್ತ ಪಂಥ, ಕಾಶ್ಮೀರ, ತಮಿಳುನಾಡಿನ ಶೈವ ಪರಂಪರೆ, ಭಕ್ತಿ ಪಂಥ, ವಚನಕಾರರು, ಸಾತ್ವಿಕರು, ಅಹಿರ್ ಬುಧ್ನ ಸಂಹಿತೆ-ಹೀಗೆ ಸಾಲುಸಾಲಾಗಿ ತಳಾದಿ ಜನರ, ಅಂತ್ಯಜರ ತತ್ವ ಚಿಂತನೆಯ ಔನ್ನತ್ಯವನ್ನು ಸಾರಿ, ಸಾರಿ ಹೇಳುತ್ತಿವೆ. ಆರ್ಯರಿಗೆ ಮೂರ್ತಿಪೂಜೆ ಪರಿಚಯವಿರಲಿಲ್ಲ. ಆ ಪದ್ಧತಿಯನ್ನು ವೇದಕಾಲದ ಆರ್ಯರು ಆರ್ಯಪೂರ್ವ ಬುಡಕಟ್ಟು ಜನರಿಂದ ಕಲಿತಿರಬಹುದು. ವೇದ, ಉಪನಿಷತ್ ಕಾಲದ ಹಲವಾರು ಋಷಿಗಳು ಕೆಳಜಾತಿಯಿಂದ ಬಂದವರಾಗಿದ್ದರು. ಬಸವಣ್ಣನವರು ತಮ್ಮದೊಂದು ವಚನದಲ್ಲಿ ಹಲವಾರು ಋಷಿಗಳ ಹುಟ್ಟಿನ ಕುರಿತಾಗಿ ಹೀಗೆ ಬರೆಯುತ್ತಾರೆ:

"ವ್ಯಾಸ ಬೋಯಿತಿಯ ಮಗ. ಮಾರ್ಕಂಡೇಯ ಮಾತಂಗಿಯ ಮಗ. ಮಂಡೋದರಿ ಕಪ್ಪೆಯ ಮಗಳು; ಕುಲವನರಸದಿರಿಂ ಭೋ? ಕುಲದಿಂ ಮುನ್ನೇನಾದಿರಿಂ ಭೋ? ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿನ್ಯನೆಂಬ ಋಷಿ ಮೂರು ಭುವನವರಿದ ನಾವಿದ ಕಾಣಿಂ ಭೋ! ನಮ್ಮ ಕೂಡಲ ಸಂಗನ ವಚನವಿಂತೆಂದುದು; ಶ್ವಪಚಿಯಾದರೇನು? ಶಿವಭಕ್ತನೇ ಕುಲಜನು."

ವ್ಯಾಸ ಮಹರ್ಷಿ ವೀನುಗಾರ್ತಿಯ ಮಗ; ಮಾರ್ಕಂಡೇಯನು ಚಾಂಡಾಲ ಸ್ತ್ರೀಯ ಮಗ; ಸಾಕ್ಷಾತ್ ಅಗಸ್ತ್ಯ ಮಹರ್ಷಿ ಬೇಡರವನು; ಕೌಂಡಿನ್ಯ ಕ್ಷೌರಿಕ; ದೂರ್ವಾಸಮುನಿ ಚಮ್ಮಾರ ವಂಶದವನು; ಸಮಾಜದ ದೃಷ್ಟಿಯಲ್ಲಿ ಕೀಳುಜಾತಿಯಲ್ಲಿ ಜನಿಸಿದ ಮಾತ್ರಕ್ಕೆ ಏನಾದಂತಾಯಿತು? ಅವನೂ ಸಹ ನಿಜವಾದ ಶಿವಭಕ್ತನಾದರೆ ಕುಲೀನನೇ ಎಂದು ಕೂಡಲ ಸಂಗಯ್ಯನ ವಚನ ವೇದ ಸಾರಿ ಹೇಳುತ್ತಿದೆ.

ಈಗಿನ ಕಾಲದ ದ್ವಿಜರು ತಾವು ವಶಿಷ್ಠ, ಪರಾಶರ ಗೋತ್ರದವರೆಂದು ಹೇಳಿಕೊಳ್ಳುತ್ತಾರೆ. ಸೂತ ಮುನಿಯು ಪುರಾಣ ಕತೆಗಳನ್ನು ಹೇಳುವುದರಲ್ಲಿ ಸುಪ್ರಸಿದ್ಧನಷ್ಟೆ? ಇವನ ತಂದೆಯು ಕ್ಷತ್ರಿಯನಾಗಿಯೂ ತಾಯಿ ಬ್ರಾಹ್ಮಣಗಳಾಗಿಯೂ ಇದ್ದಳು. ಹೀಗೆ ಇವನು ಮಿಶ್ರವರ್ಣದಲ್ಲಿ ಹುಟ್ಟಿದವನಾಗಿರುತ್ತಾನೆ. ಇವನಿಗೆ ಹಿಂದೂ ವಾಙ್ಮಯದಲ್ಲಿ ಅಗ್ರೇಸರತ್ವವಿದೆ. ಕಲ್ಯಾಣಪ್ರದವಾದ ವೇದವಾಣಿಯನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರಾದಿಗಳಿಗೆ ಕಲಿಸಬೇಕು ಅಥವಾ ಹೇಳಬೇಕು. ಹೀಗೆ 'ಯಜುರ್ವೇದ ವಾಕ್ಯದ ವಿಧಿಯೂ ಇರುತ್ತದೆ. (ವಾಜಸನೀಯ ಸಂಹಿತಾ- ಅಧ್ಯಾಯ 26) ಬಸವಣ್ಣನೂ ಕೂಡ ಕೆಳಜಾತಿಗಳಿಂದ ಬಂದ ಹಲವು ಜ್ಞಾನಿಗಳನ್ನು ಉಲ್ಲೇಖಿಸಿ ಅವರ ಬದುಕಿನ ರೀತಿ, ಜ್ಞಾನ ಮುಂತಾದವುಗಳ ಬಗ್ಗೆ ಅತ್ಯುನ್ನತ ಗೌರವವನ್ನು ವ್ಯಕ್ತಪಡಿಸುತ್ತಾನೆ.

ಅಂತ್ಯಜರ ಭಕ್ತಿ ಚಳವಳಿಗಳು ಬಂಡುಕೋರ ಧರ್ಮಗಳಾಗಿದ್ದು, ಸಮಾನತೆಯನ್ನು, ಎಲ್ಲರ ಭಾವನಾತ್ಮಕ ಐಕ್ಯತೆಯನ್ನು ಬೋಧಿಸುತ್ತದೆ. ಬ್ರಾಹ್ಮಣೇತರ ಅಥವಾ ಪಂಡಿತೇತರ ಜಾತಿಗಳಿಗಿದ್ದ ಧಾರ್ಮಿಕ ವಿಚಾರಣೆ ಗಳಲ್ಲಿನ ಕೆಳದರ್ಜೆಯ ಸ್ಥಾನ, ಮಾನದ ವಿರುದ್ಧ ನಡೆದ ಪ್ರತಿಭಟನೆಗಳು ಅವು.

ಮೊಕಾಶಿಯವರು ಅಂತ್ಯಜರನ್ನು 'ಪಂಚಮರು' ಎಂಬ ಶಬ್ದದಿಂದ ವರ್ಣಿಸಲಾಗಿದೆ ಎಂದು ಹೇಳುತ್ತಾ ಮಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟ 'ಪಾಂಚಾಲರು' ಕುರಿತಾಗಿ ಹೇಳುತ್ತಾರೆ. ಕರ್ನಾಟಕದಲ್ಲಿ 'ಪಾಂಚಾಳ'ರೆಂಬ ಹೆಸರಿನ ಉಪಜಾತಿ ಉಲ್ಲೇಖ ಮಾಡುತ್ತ 'ಪಂಚಮಸಾಲಿಗಳೆಂಬವರು ಲಿಂಗಾಯತ ಉಪಜಾತಿಗಳಲ್ಲಿ ಒಂದಾಗಿದ್ದು, ಅವರ ಧಾರ್ಮಿಕ ಸ್ಥಾನ, ಮಾನ ಇತರೆಯವರಿಗಿಂತ ಕಡಿಮೆಯಾಗಿದೆ' ಎನ ಇವರೆಲ್ಲಾ 'ಪಂಚ' ಎಂದು ಉಚ್ಚರಿಸಲ್ಪಡುತ್ತಿದ್ದ ಹೆಸರಿನಿಂದ ಕರೆಯಲ್ಪಡ ಒಂದು ಏಕರೂಪದ ಗುಂಪು ಅಥವಾ ಬುಡಕಟ್ಟು ಎಂದು ಹೇಳು

ಪಂಪನ ಪಂಚರಾತ್ರವು ವಾಸುದೇವ-ಕೃಷ್ಣ ಪಂಥವನ್ನು ಪ್ರಾರಂ ಬಹುಶಃ ಆತನೊಬ್ಬ ನೇಕಾರನಿದ್ದು ಆತನ ತತ್ವ ದರ್ಶ ಪೂಜಾಕೇಂದ್ರಿತವಾಗಿದ್ದಿತು. ಅವನು ದ್ವಾರಕೆಯ ಕೃಷ್ಣನನ್ನು ಒಬ್ಬ ದೇವರ ಅತ್ಯಂತ ರಮಣೀಯ ಮತ್ತು ವೈವಿಧ್ಯಮಯ ಕೃಭಾವಳಿಗಳನ್ನು ಬೆಳೆಸಿ ಕೆಳ ಜಾತಿಗಳ ಜನ ವಿಶೇಷವಾಗಿ ಅಹಿರರು ಈ ಹೊಸ ಪಂಥ ಸ್ವೀಕರಿಸಿಕೊಂಡು ವಿಷ್ಣುವಿನೊಂದಿಗೆ ಗುರುತಿಸಿಕೊಂಡರು. ಸ್ವತಃ ಕೃಷ್ಣ ಹಾಗೂ ಮನುವಿನ ವರ್ಣನೆಯ ಪ್ರಕಾರ ನೋಡಿದರೆ ಇತರೇ ಋ ಕೂಡಾ ಒಂದು ಬಗೆಯ ಅಂತ್ಯಜ ಜಾತಿಗಳ ಮೂಲಕ್ಕೆ ಸಲ್ಲುವ ಕಾಣುತ್ತದೆ. ಇದೀ 'ಪಂಚರಾತ್ರ ಸಂಹಿತೆ' ಸಾಹಿತ್ಯವು ಈ ಪಾವಿತ್ರ ಸೂಕ್ಷ್ಮ ವಿಸ್ತಾರವಾಗಿದ್ದು ಅವುಗಳಲ್ಲೆಲ್ಲ ಅತ್ಯಂತ ಸೂಕ್ಷ್ಮವಾದುದೂ, ಅತ್ಯುನ್ನ ಸಾಂಕೇತಿಕವೂ ಆಗಿರುವುದು 'ಅಹಿರ್ ಬುಧ್ನ' ಸಂಹಿತೆ. ಇದೀ ಚಳವಳಿಯು ಭಾರತದೆಲ್ಲೆಡೆಯಲ್ಲಿಯೂ ಕೆಳಜಾತಿಗಳಿಂದ ಲಕ್ಷಾಂತರ ಹಾಗೂ ಸಾಮಾನ್ಯ ಸಣ್ಣ ದೊಡ್ಡ ಸಂತರನ್ನು ನಿರ್ಮಾಣ ಮಾಡಿತು.

ಪಂಚರಾತ್ರ ಪಂಥ ಮತ್ತು ಪಾಶುಪತ ಪಂಥ ಅಂತ್ಯಜರಿಂ ಪ್ರಾರಂಭಗೊಂಡಿತು. ಕೆಲವರನ್ನು ಹೊರತುಪಡಿಸಿದರೆ ಸ್ವತಃ ಬ್ರಾಹ್ಮಣ ವೇದಮಂತ್ರಗಳ ಅರ್ಥ ಗೊತ್ತಿರಲಿಲ್ಲ. ಮಂತ್ರಗಳ ರೂಪದಲ್ಲಿ ಸೂ ಪಠಣಕ್ಕೆ ಮಾತ್ರ ಸರ್ವ ಪ್ರಾಮುಖ್ಯತೆ ಸಿಕ್ಕಿತು. ಆದ್ದರಿಂದಲೇ ಜನ ಸಂಸ್ಕೃತದಲ್ಲಿ ಪಾಶುಪತ ಮತ್ತು ಪಂಚರಾತ್ರ ಆಗಮಗಳನ್ನು ಹಾಗೂ ಪುರಾಣ ಬರೆಯಲಾಯಿತು. ಅವುಗಳನ್ನು ಬರೆದವರು ಸ್ವತಃ ಅಂತ್ಯಜರು. ಪು ಸಾಹಿತ್ಯವನ್ನು 'ಪಂಚಮವೇದ' ಎಂದು ಕರೆಯಲಾಗಿದೆ.

ಅಂತ್ಯಜರಿಗೆ ಸಂಸ್ಕೃತ ಗೊತ್ತಿರಲಿಲ್ಲವೆಂಬುದು ವಿಲಕ್ಷಣವಾದ ಅ ಮೂಢನಂಬಿಕೆಯಾಗಿದ್ದು, ನಾವು ನಾಥ ಪಂಥೀಯ ಪಠ್ಯಗಳನ್ನು ಕ ಪರಿಶೀಲಿಸುವಾಗ ಇದು ಸ್ಪಷ್ಟಗೊಳ್ಳುತ್ತದೆ. ಅಂತ್ಯಜರ ಪೂಜಾ ಅಧ್ಯಯ ವಿಲ್ಲದ ಮಾತ್ರ ದೇವತೆಯ ಒಂದೇಒಂದು ದೇವಾಲಯವೂ ಕೂಡಾ ಗ್ರಾ ಭಾರತದಲ್ಲಿಲ್ಲ.

ಉಪವೇದಗಳು ಐದು

ಇತಿಹಾಸ ಪುರಾಣ, ವಾಸ್ತುವೇದ, ಧನುರ್ವೇದ, ಗಂಧರ್ವವೇದ ಆಯುರ್ವೇದ- ಇವೆಲ್ಲವೂ ಸೂತರು, ಕಟ್ಟಡದ ಕೆಲಸದವ ಬುಡಕಟ್ಟುಗಳವರು, ನಟರು, ವೈದ್ಯರು ಇಂತಹ ಕೆಳಜಾತಿಗಳವ ಆಚರಣೆಯಲ್ಲಿದ್ದವು. ಋಗ್ವೇದ ಮತ್ತು ಯಜುರ್ವೇದಗಳೆರಡರಲ್ಲಿಯೂ ಬ ಭಾಗವಾಗಿರುವ ರುದ್ರಾಧ್ಯಾಯವು ಬುಡಕಟ್ಟು ಪೂಜಾರಾಧ ಸ್ತೋತ್ರಗಳಾಗಿದ್ದು ನಂತರ ವ್ಯಾಸರಿಂದ ವೇದಗಳೊಳಗೆ ಸೇರಿಸಲ್ಪಟ್ಟಿತು. ಪಾತ ಸಾಧುಗಳು ಗೊರವ, ಗುರುವರೆಂದು ಪ್ರಸಿದ್ಧರಾಗಿದ್ದರು. 'ಗುರು' ಪದವು ಶುದ್ಧಾಂಗವಾಗಿ ಒಂದು ಅಂತ್ಯಜ ಸಮುದಾಯವಾದ 'ಕೊ ಎಂಬುದರ ಒಂದು ರೂಪವಾಗಿರುವದನ್ನು ಸೂಚಿಸಿದಾಗ ಇದು ಬ ಸಮುದಾಯಕ್ಕೆ ಸೇರಿದ ಹೆಸರಾಗಿದೆ ಎಂಬುದು ಸಮರ್ಥವಾಗುತ್ತದೆ ಎ ಮೊಕಾಶಿ ಬರೆಯುತ್ತಾರೆ.

ಬೌದ್ಧ ಧರ್ಮದಿಂದ ನಿರ್ಮಾಣವಾದ ಸಾಮಾಜಿಕ ಅಸಮತೋ ಪ್ರತಿಭಟನೆಯಾಗಿ ಅಂತ್ಯಜರು ವಿಷ್ಣು, ಶಿವ ದೇವರುಗಳನ್ನು ಸೃಷ್ಟಿಸಿ ಹಾಗೂ ಸಾಂಪ್ರದಾಯಿಕ ಜ್ಞಾನ ಮತ್ತು ಕ್ರಿಯಾವಿಧಿಗಳ – ದೀಕ್ಷೆ, ಗ ಪೂಜೆ, ದೇಗುಲ, ಮಠ ಮತ್ತು ಭಕ್ತಿ ತತ್ವ ದರ್ಶನದ – ಚೌಕ ಒದಗಿಸಿದರು. ಆ ರೀತಿಯಲ್ಲಿ ಹಿಂದೂ ಧರ್ಮವು ಅದರ ನೈಜಅರ್ಥ ಅಂತ್ಯಜರಿಂದ ಪುನರುಜ್ಜೀವನಗೊಂಡಿತು. ಇಷ್ಟಲ್ಲದೇ ಬೇರೆ ಬೇರೆ ಜಾ ಗುರುಗಳು ಸಂಸ್ಕೃತ ಕಲಿತು ಹಲವಾರು ಬ್ರಾಹ್ಮಣ ಉಪಜಾತಿಗಳಾದರ

ಅಂತ್ಯಜರ ಬೌದ್ಧಿಕ ಜ್ಞಾನದ ಶೋಷಣೆಯ ಉದಾಹರಣೆ ಯಾಗಿ ಪಂಥದ ಹಲವು ಶ್ರೇಷ್ಠ ಗ್ರಂಥಗಳನ್ನು ಕೊಡಬಹುದು. ಬೃಹತ್ ಸ್ತೋ ರತ್ನಾಕರ ಎಂಬ ಹೆಸರಿನ ಜನಪ್ರಿಯ ಗ್ರಂಥವು ಅದರ ಲೇಖಕ ಚರ್ಪಟನಾ ಹೆಸರನ್ನು ಅದರ ಶೀರ್ಷಿಕೆಯಲ್ಲೇ ಉಳಿಸಿಕೊಂಡಿರುವಾಗ ಚಪ ಪಂಚಾರಿಕೆಯು ಶಂಕರಾಚಾರ್ಯರಿಂದ ರಚನೆ ಗೊಂಡಿತೆ ಸಂತೋಷಪೂರ್ವಕವಾಗಿ ವರ್ಣಿಸುತ್ತದೆ. ಈ ರೀತಿಯಲ್ಲಿ ಕೆಳಜಾತಿಯ ಭಾರತೀಯ ತತ್ವಚಿಂತನೆಗೆ ನೀಡಿದ ಕೊಡುಗೆಯನ್ನು ಮೇಲ್ಜಾತಿಯವರದೆ ಗುರುತಿಸುವದು ಪ್ರಾರಂಭವಾಯಿತು. ಇದನ್ನೇ ಬಂಜಗೆರೆ ಯವರು ಅಂತ ತತ್ವಚಿಂತನೆಗಳನ್ನು ಮೇಲ್ವರ್ಗದ ಹಿಂದೂವಾದಿಗಳು ಹೈಜಾಕ್ ಮಾಡಿ ಕಬಳಿಸಿದ್ದಾರೆ ಎಂದು ಕರೆಯುವುದು.

ನಿಜವಾದ ಹಿಂದೂಗಳು ಅಂತ್ಯಜರೆ ಹೊರತು ಹಿಂದೂತ್ವ ವಕ್ತಾರ ದತ್ತ ಪಂಥದ ಲಾಂಛನವಾದ 'ಓಂ' ಅನ್ನು ಎತ್ತಿ ಹಿಡಿದು ಮೆರೆಯ ಈಗಿನ ಛದ್ಮವೇಶಿ ಹಿಂದೂ ಢೋಂಗಿವಾದಿಗಳಲ್ಲ ಎಂದು ಬಂಜಗೆರೆಯ ಬಗೆಯುತ್ತಾರೆ. ಇನ್ನು ಬಂಜಗೆರೆಯವರು ತಮ್ಮ ಅಭಿಪ್ರಾಯಗಳ ಪ್ರಸ್ತಾವನೆಯಲ್ಲಿ ಬರೆದಿದ್ದಾರೆ. ಅವುಗಳಲ್ಲಿ ಅವರು ಕಾಶಿಯ ಕುರಿತಾಗಿ ಬರೆದಿ ವಿಷಯಗಳು ಹೀಗಿವೆ: "ಕಾಶಿ ಮೊದಲು ಬಹಳ ದೊಡ್ಡ ನೇಕಾರಿಕ ಹಾಗೂ ಚಮ್ಮಾರಿಕೆಯ ಕೇಂದ್ರವಾಗಿತ್ತು. ಅದು ಅಂತ್ಯಜ ಮೂಲದ ಹ ತತ್ವ ದಾರ್ಶನಿಕ ವಿದ್ವಾಂಸರ ನೆಲೆಯಾಗಿತ್ತು. ಕಾಶಿಯ ದೇವರು ವಿಶ್ವನಾಥ-ನಾ ದೇವರಲ್ಲವೇ? ನಾಥರು ವೈದಿಕ ವಿಚಾರಗಳಿಗೆ ಮೊದಲಿನಿಂದ ವಿರೋಧಿಗಳಾಗಿ ನಡೆದವರಲ್ಲವೇ? ನೇಕಾರನಾದ ಕಬೀರ ಪ್ರತಿಪಾದಿಸಿದ ಪಂಥದ ಮೇಲೆ ನಾಥ ಪಂಥದ ಸಿದ್ಧಾಂತಗಳ ಪ್ರಭಾವ ಗಾಢವಾಗಿದೆ ಎಂಬ ಕೂಡಾ ಅದು ವೈದಿಕರು ಹೇಳುವ ಹಾಗೆ ಇಂದಿನ ಛದ್ಮವೇಷಧಾರಿ 'ಹಿಂ ಶ್ರದ್ಧೆಯ ಕೇಂದ್ರವಲ್ಲ ಎಂಬುದನ್ನು ವಿವರಿಸುತ್ತದೆ."

ಈ ಗ್ರಂಥವು ನಮ್ಮನ್ನು ಹೊಸಬಗೆಯದೊಂದು ನಿರ್ಲಕ್ಷಿತ ನೆಲೆ ಸಾಂಸ್ಕೃತಿಕ ಅಧ್ಯಯನಕ್ಕೆ ತೊಡಗಿಸು ವಂತಾಗಬೇಕು ಎಂಬ ಬಂಜಗೆರೆಯ ಆಶಯ ಸರಿಯಾಗಿಯೇ ಇದೆ. ಅರಿವಿನ ದೀಪವನ್ನು ಮೊಕಾಶಿಯವರು ಗ್ರಂಥದಲ್ಲಿ ಹಚ್ಚಿಟ್ಟಿದ್ದಾರೆ ಎಂದು ಬಂಜಗೆರೆಯವರು ಮುಕ್ತಕಂಠದಿ ಪ್ರಶಂಸಿಸಿರುವುದು ಅತಿಶಯೋಕ್ತಿಯಲ್ಲ.

● ಉದಯಕುಮಾರ್ ಹಬ

...ೇ ಪುಸ್ತಕದಿಂದ ನಾನು ತುಂಬಾ ಕಲಿತೆ

...ವಿಠಲ್ ಹೆಗ್ಗಡೆಯವರ ಮಲೆನಾಡನ್ನು ಕುರಿತ ...ಈಚಿನ ದಿನಗಳಲ್ಲಿ ಪ್ರಕಟವಾಗುತ್ತಿರುವ ಪುಸ್ತಕಗಳ ...ಮುಖ್ಯ ಪುಸ್ತಕ ಎಂದು ನಾನು ತಿಳಿದಿದ್ದೇನೆ. ...ನಾನೇ ಈ ಪುಸ್ತಕದಿಂದ ತುಂಬ ಕಲಿತಿದ್ದೇನೆ. ...ಪುಸ್ತಕದ ನಡುವೆ ಒಂದು ಮಾತು ಬರುತ್ತದೆ. ...ರಿಗೂ ಶೂದ್ರರಿಗೂ ನಡುವೆ ಇರುವ ವ್ಯತ್ಯಾಸದ ...ಮು ಹೀಗಿದೆ:


...ಪ್ಪಲ್ಲಿ ಸಾಬ್ರುಗಳು ನಮ್ಗೆ ವಿರುದ್ಧ ಅಂತಾರೆ. ...ಕ್ಕ ಹಾಕಿದರೆ ವೈದಿಕರಿಗೂ ಶೂದ್ರರಿಗೂ ...ರುದ್ಧವಿದೆ ಗೊತ್ತ 'ವೈದಿಕರಿಗೆ ಅಗ್ನಿ ಶ್ರೇಷ್ಠ ...ಶೂದ್ರರಿಗೆ ಗಂಗೆ (ನೀರು) ಶ್ರೇಷ್ಠ, ಅವರಿಗೆ ...ಶೆ ಇವರಿಗೆ ರಾತ್ರಿ, ಅವರಿಗೆ ಕೆಂಪಾದರೆ ...ಕಪ್ಪು ಶ್ರೇಷ್ಠ ಅವರಿಗೆ ಗೋತ್ರ ಆದ್ರೆ ಇವರಿಗೆ ...ಮರ ಕುಲದ ಮೂಲ ಅಪ್ಪಂದಾದ್ರೆ, ಇವ್ರ ... ಮೂಲ ಅಮ್ಮಂದು, ಅವರು ದಾನ ...ವವರು, ಇವರು ದಾನ ಕೊಡುವವರು, ... ಪಶು ಶ್ರೇಷ್ಠವಾದರೆ ಇವರದ್ದು ಕೃಷಿ'....."

... ಬಗ್ಗೆಯೇ ಹೇಳಿಕೊಳ್ಳುವುದಾದರೆ ನಾನು ...ದಿನಲ್ಲಿ ನನ್ನ ಬಾಲ್ಯವನ್ನು ಬ್ರಾಹ್ಮಣನಾಗಿ ... ವಿಠಲ್ ಹೆಗ್ಗಡೆಯವರು ಸೃಷ್ಟಿಸುವ ಲೋಕದ ...ಆಗುಹೋಗುಗಳು ನನಗೆ ಗೊತ್ತು ಆದರೆ ವಿವರಗಳು ...ಗೊತ್ತಿರಲಿಲ್ಲ. ಅಂದರೆ ಇದೊಂದು ಬೇರೆ ...ೇ.

...ು ಶೂದ್ರರ ಲೋಕ ಎಂದರೆ ಅಶಿಕ್ಷಿತ ದಡ್ಡರ ... ಎಂದು ನಾವು ಸುಲಭವಾಗಿ ತೀರ್ಮಾನಿಸಿ ...ದೆ. ಯಾಕೆಂದರೆ ಜ್ಞಾನ ನಮ್ಮ ಪಾಲಿಗೆ ಆಧುನಿಕ ... ವ್ಯವಹಾರಕ್ಕೆ ಸೀಮಿತವಾದದ್ದು. ಕಲ್ಕುಳಿಯವರ ...ಲ್ಲೂ ಬಹಳ ಜಾಣರಿದ್ದಾರೆ. ನಮಗಿಲ್ಲದ ಕಾಡಿನ ...ವರಿಗಿದೆ. ಕಾಡು ಎಂದರೆ ಇಲ್ಲಿ ಇಡೀ ನಿಸರ್ಗ ...ಪಕ್ಷಿ, ಹುಳ, ಹುಪ್ಪಟೆ, ಹಾವು, ಮನುಷ್ಯ ಈ ... ಪರಸ್ಪರ ಸಂಬಂಧವಿರುವ ಲೋಕ.

...ಲ್ಕುಳಿಯವರ ಲೋಕದಲ್ಲಿ ಒಬ್ಬ ಸಿದ್ದ ಎನ್ನುವವನು ...ನೆ. ಅವನದೇ ಆದ ಲೋಕದ ದೃಷ್ಟಿಯಲ್ಲಿ ಈತ ... ಆದರೆ ಅರಣ್ಯ ಲೋಕದಲ್ಲಿ ತನಗೆ ಬೇಕಾದ್ದನ್ನು ...ಬಲ್ಲ ನಿಸ್ಸೀಮ ಈತ. ಅಂದರೆ ನಾವು ಸುಶಿಕ್ಷಿತ ... ಸಿದ್ದನ ಜ್ಞಾನದ ಎದುರು ಪೆದ್ದರಾಗಿಬಿಡುತ್ತೇವೆ. ...ಹೊಕ್ಕ ಅರಣ್ಯವನ್ನು ನಾವು ಬರಿಗೈಯಲ್ಲಿ ಹೊಕ್ಕು ...ಬರುವುದು ಸಾಧ್ಯವಿಲ್ಲ. ಕಲ್ಕುಳಿಯವರ ಈ ಕಥನವನ್ನು ...ದ್ದಂತೆ ನನಗೆ ತೇಜಸ್ವಿಯವರ ಕರ್ವಾಲೋ ...ಮಿತು. ಅದರಲ್ಲಿ ವಿಜ್ಞಾನಿಗಳಲ್ಲಿ ಅಪಾರ ಕುತೂಹಲ ...ಸುವ ಹಾರುವ ಓತ ಮಂದಣ್ಣನಿಗಾದರೋ ...ವಲ್ಲ; ಅದು ಅವನ ಸಹಜೀವಿ. ಇಲ್ಲಿಯೂ ಸಿದ್ದ ...ಲೋಕವನ್ನು ವಿಜ್ಞಾನಿಗಳಂತೆ ಬರೀ ಮಿದುಳಿನಿಂದಲ್ಲ ...ತನ್ನ ಇಡೀ ಇಂದ್ರಿಯಗಳ ಮೂಲಕ ಅರಿತಿರುತ್ತಾನೆ. ...ಯುವರ ಕಾದಂಬರಿಯಲ್ಲದೆ ಕುವೆಂಪುರವರ ...ಂಥಿಯ ನಾಯಿಗುತ್ತಿಯೂ ಈ ಕಥನ ಓದುತ್ತ ಇದ್ದಂತೆ ನೆನಪಾದ. ಆದರೆ ಕುವೆಂಪು ಮತ್ತು ತೇಜಸ್ವಿಯವರಲ್ಲಿ ಕಥೆಯ ಹಿನ್ನೆಲೆಯಾಗಿ ಮಲೆನಾಡ ನಿಸರ್ಗವೂ ಪಾತ್ರ ವಹಿಸುತ್ತದೆ. ಇಲ್ಲಿ ಕಾಡು ಮುನ್ನಲೆಯಾಗಿ ಮನುಷ್ಯ ಪಾತ್ರಗಳು ಪ್ರಾಣಿಪ್ರಪಂಚ ಕಾಡಿನ ಅಂಶಗಳಾಗಿ ಬರುತ್ತವೆ.

ವಿಠಲ್ ಹೆಗ್ಗಡೆಯವರ ಪುಸ್ತಕ ಹಲವು ವಿವರಗಳಿಂದ ಹಳೆಯ ಕಾಲ ಮತ್ತು ಹೊಸ ಕಾಲಗಳ ಜೋಡಣೆಯಿಂದ



ಆಳವಾದ ಒಳನೋಟಗಳನ್ನು ಪಡೆದಿದೆ. ಇಲ್ಲೊಬ್ಬ ವೀರಭದ್ರಪ್ಪ ಮಾಸ್ತ್ರು ಎಂಬ ಆಧುನಿಕ ಕಾಲದ ಶಾಲಾ ಉಪಾಧ್ಯಾಯರೊಬ್ಬರು ಬರುತ್ತಾರೆ. ಅವರು ಗೋಧಿ ನಾಗರಹಾವೊಂದನ್ನು ಕೊಂದು ಊರಿನವರ ಶಿಕ್ಷೆಗೆ ಗುರಿಯಾಗುತ್ತಾರೆ. ಈ ಪುಸ್ತಕದಲ್ಲಿ ಹಾವಿನ ಒಂದು ಪುರಾಣವೇ ಇದೆ. ಇಂಥ ಕಥೆಗಳನ್ನು ಹೇಳುತ್ತಿದ್ದಂತೆಯೇ ಲೇಖಕರು ಸಾಹುಕಾರಶಾಹಿ ಕಥೆಗಳನ್ನು ಹೇಳಲು ಮರೆಯುವುದಿಲ್ಲ. ವಿಕ್ಟೋರಿಯ ರಾಣಿಯ ಕಾಲದಲ್ಲಿ ಕಾಡುಗಳೆಲ್ಲ ಸರ್ಕಾರದ ವಶವಾಗಿ ರೈಲ್ವೆ ಸ್ಲಿಪರ್‌ಗಳಿಗೆ ಮರಗಳನ್ನು ಕಡಿದು ಕ್ರಮೇಣ ಹಸಿರುಕ್ರಾಂತಿ ಶುರುವಾಗಿ ಹುಲಿಗಳ ಸಂತತಿ ನಾಶವಾದ್ದನ್ನು ಹೇಳಲು ತಮ್ಮ ಕಥಾನಕದ ಮೋಡಿಯಲ್ಲಿ ಲೇಖಕರು ಮರೆಯುವುದಿಲ್ಲ. ಮಂಗನ ಶಿಕಾರಿಯ ಬಗ್ಗೆಯೂ ಇವರ ಕಥನ ಮೋಹಕವಾಗಿದೆ. ಇಲ್ಲಿ ಬರುವ ಸಿದ್ದನ ಕಲಾಕೌಶಲ್ಯವನ್ನು ಗಮನಿಸಿ. ಅವನು ದನಕಾಯುವ ಕೆಲಸಕ್ಕೆ ಸೇರಿದೊಡನೆ ಏನುಮಾಡುತ್ತಾನೆ ನೋಡಿ.

"ಸಿದ್ದ ಎಲ್ಲ ದನಗಳಿಗೂ ಮುರುಗುಣಿ ಕಟ್ಟಿದ. ಮುರುಗುಣಿ ಅಂದರೆ ಬಿದಿರಿನ ಒಂದು ತಲೆಯನ್ನು ಗಣ್ಣಿಗೆ ಸರಿಯಾಗಿ ಕತ್ತರಿಸಿ, 5–6 ಇಂಚು ಉದ್ದಕ್ಕೆ ತುಂಡು ಮಾಡಿ (ಸೇರಿನಂತೆ), ಆಮೇಲೆ ಅದರ ಮಧ್ಯದಲ್ಲಿ ಸೀಳಿ ಎರಡು ನಾಲಿಗೆಗಳಂತೆ ಕೊರೆಯಬೇಕು. ಹೀಗೆ ಮಾಡಿ ಅದನ್ನು ಬಾರಿಸಿದರೆ ಒಳ್ಳೆಯ ಶಬ್ದ ಬರ್ತದೆ. ಸಿದ್ದ ಮುರುಗುಣಿ ಮಾಡುವುದರಲ್ಲಿ ಮಹಾ ನಿಪುಣ. ಒಂದೊಂದು ಮುರುಗುಣಿಗೂ ಒಂದೊಂದು ಸ್ವರ ಬರುವಂತೆ ಮಾಡುತ್ತಿದ್ದ. ಆ ಮುರುಗುಣಿಗಳಿಗೆ ಹುಳ್ ಚಪ್ಪು ಅಂತ ಕರೆಯುವ ಭಾರ ಮತ್ತು ಗಟ್ಟಿ ಮರದ ಜಾತಿಯ ಎರಡು ಸಣ್ಣ ತುಂಡುಗಳನ್ನು ಕಡ್ತಾಳಿ ದಾರದಿಂದ ಕಾಟಿರುತ್ತಿದ್ದ. ತಲೆ ಅಲ್ಲಾಡಿಸಿದಾಗ ಅದರ ಕೊಣಿಕೆ ಬಿದಿರಿಗೆ ತಾಗಿದರೆ ಸಾಕು ನಾದ ಹೊರಹೊಮ್ಮುತ್ತಿತ್ತು. ದನಕ್ಕೆ ಕಟ್ಟಿದಾಗ ಅವು ಮೇಯುವಾಗ ತಲೆಯನ್ನು ಆಚೆಈಚೆ ಅಲ್ಲಾಡಿಸಿದಂತೆಲ್ಲಾ ಒಂದು ರೀತಿಯ ನಿನಾದ ಕೇಳಿಬರುತ್ತಿತ್ತು."

ಯಾವ ತುಡುಗು ದನ ಎಲ್ಲಿ ಇದೆ ಎಂದು ತಿಳಿಯಲು ಸಿದ್ದ ಮಾಡಿಕೊಂಡ ಉಪಾಯ ಇದು. ನನಗೂ ತುಂಬ ಸ್ವಾರಸ್ಯಕರವೆನಿಸಿದ ಇನ್ನೊಂದು ವರ್ಣನೆ ಹೆಂಡವನ್ನು ಇಳಿಸುವ ಕಲೆಯ ಬಗ್ಗೆ ಇರುವ ಬರವಣಿಗೆ. ಹಾಗೆಯೇ ಮಿಡಿಮಾವನ್ನು ಕೊಯ್ಯುವುದರ ವರ್ಣನೆ. ನನಗೆ ಗೊತ್ತೇ ಇಲ್ಲದಿದ್ದ ಅತಿಶ್ರೇಷ್ಠ ಎಂದುಕೊಂಡಿದ್ದ ಒಂದು ಹಾವಿನ ಬಗ್ಗೆ ಈ ಲೇಖಕರು ಬರೆದಿದ್ದನ್ನು ನೋಡಿ ಅಚ್ಚರಿಪಟ್ಟೆ. ಅದು ಯಾರ ತಂಟೆಗೂ ತಾನಾಗಿ ಹೋಗದ ಕಾಳಿಂಗಸರ್ಪದ ಬಗ್ಗೆ.

ಕಾಡನ್ನೇ ದೇವರೆಂದು ಪೂಜಿಸುವ ಈ ಜನ ಅವರ ನಡುವಿನ ಎಲ್ಲ ವೈವಿಧ್ಯಗಳ ಜೊತೆಗೆ ಒಂದು ಸಮುದಾಯದ ಕಲ್ಪನೆಯನ್ನು ಇಟ್ಟುಕೊಂಡಿರುತ್ತಾರೆ. ಉದಾಹರಣೆಗೆ ಶಿಕಾರಿಯಾದ ನಂತರ ಅವರು ಮಾಂಸವನ್ನು ಹಂಚಿಕೊಳ್ಳುವ ಕ್ರಮ ನೋಡಿ:

"ಯಾವುದೇ ಶಿಕಾರಿ ಮಾಡಿದ ಪ್ರಾಣಿಯ ಮಾಂಸವನ್ನು ಮೂರು ರಾಶಿ ಮಾಡ್ತಾರೆ. ಆ ರಾಶಿ ಸಮವಾಗಿದೆಯೇ ಇಲ್ವೇ ಅಂತ ಬಾಳೆಎಲೆ ನಾರಿನಿಂದ ಅಳೆದು ಸಮವಾಗಿದೆ ಅಂತ ಆದಮೇಲೆ ಅದರಲ್ಲಿ ಒಂದು ಪಾಲು ಹೊಡೆದವನಿಗೆ. ಉಳಿದೆರಡು ರಾಶಿ ಒಟ್ಟುಮಾಡಿ ಶಿಕಾರಿಗೆ ಬಂದ ಎಲ್ಲರಿಗೂ ಹಂಚ್ತಾರೆ. ಅದರಲ್ಲಿ ಕೋವಿ ಪಾಲು, ನಾಯಿ ಪಾಲು, ಹಳುವಿನವರ ಪಾಲು, ಸೊಂಟ ಮುರ್ಕ್ ಪಾಲು, ತೋರ್ಡಡಿ ಪಾಲು, ನೆಲದ್ ಪಾಲು ಅಂತ ತೆಗೆದಿಡ್ತಾರೆ. ಸೊಂಟ ಮುರ್ಕ್ ಪಾಲು ಅಂದ್ರೆ ಅಷ್ಟೂ ಮಾಂಸವನ್ನ ಎಲ್ಲರಿಗೂ ಪಾಲು ಹಂಚಿ ಸೊಂಟ ನೋಯಿಸಿಕೊಂಡವನಿಗೆ ಕೊಡುವುದು. ತೋರ್ಡಡಿ ಪಾಲು ಅಂದ್ರೆ ಅವಮಾನದ ಪಾಲು. ಶಿಕಾರಿಗೆ ಬಾರದ ಮನೆಯವರಿಗೂ ಪಾಲು ಹಂಚಲಾಗುತ್ತದೆ. ಅದು ಶಿಕಾರಿಗೆ ಬಂದವರಿಗೆ ಕೊಡುವ ಪಾಲಿನ ಅರ್ಧದಷ್ಟಾಗಿರುತ್ತದೆ. ಎಷ್ಟು ಕರೆದರೂ ಶಿಕಾರಿಗೆ ಬಾರದವರಿಗೆ, ಈಡಿನ ಶಬ್ದ ಕೇಳಿ ಆಮೇಲೆ ಬಂದವರಿಗೆ ಈ ಪಾಲು ಸೇರುತ್ತದೆ. ಇನ್ನು ಯಾರದ್ದಾದರೂ ಸ್ವಂತ ಜಾಗದಲ್ಲಿ ಬಿದ್ದಿದ್ದರೆ ಅವರಿಗೊಂದು ಪಾಲು ಕೊಡುತ್ತಾರೆ. ಇದನ್ನು ನೆಲದ್ ಪಾಲು ಅಂತಾರೆ."

ಯಾವ ಪಠ್ಯಪುಸ್ತಕದಲ್ಲೂ ಸಿಗದಂತ ಒಂದು ಶ್ರೀಮಂತ ಸಮುದಾಯ ಸಂಸ್ಕೃತಿಯನ್ನು ಪಡೆದ ಕಾಡಿನಲ್ಲಿ ಬದುಕುವ ಶೂದ್ರರ ಕಥೆ ಇದು.

ಹಲವು ಗಾದೆ ಮಾತುಗಳು ಪುಸ್ತಕದುದ್ದಕ್ಕೂ ಇವೆ. ಉದಾಹರಣೆಗೆ ಈ ವಾಕ್ಯಗಳನ್ನು ನೋಡಿ:

"ಈ ಹತ್ತು ಮೀನಿಗೆ ಸಂಬಂಧಿಸಿದಂತೆ ಗಾದೆ ಮಾತೊಂದುಂಟು. 'ಹತ್ತು ಮೀನಿಗೆ ನೆತ್ತಿ ಕಂಡಿ, ಇಳಿ ಮೀನಿಗೆ ಬುಡದ ಕಂಡಿ' ಅಂತ. ಹತ್ತು ಮೀನುಗಳಲ್ಲಿ ಒಂದು ಹೆಣ್ಣು ಮೀನು ಮೇಲೆ ಹೋದರೆ ಹತ್ತಿಪ್ಪತ್ತು ಗಂಡು ಮೀನು ಜೀವದ ಹಂಗು ತೊರೆದು ಅದರ ಹಿಂದೆ ಜಡೆಗಟ್ಟಿ ಹೋಗ್ತವೆ. ಹತ್ತು ಮೀನು, ಬಾಳೆ ಮೀನು, ಮರಮೀನು, ಹಾಲು ಮೀನು, ಕೊಚ್ಚಲಿ ಮೀನು, ಹಂದಿಗೊಚ್ಚಲಿ, ಗೊಯ ಬೀಜ, ನೀಲಿಗೇರೆ ಸೋಸಲು, ಸೋಸಲು, ಬಣ್ಣಗರ್ಸೆ, ಸೂಜಿ ಮೀನು, ತೊಳ್ಳೆ ಮೀನು, ಮರುಗುಂಡ, ಚಾಪ್ಪು, ಕೊಳ್ಸು, ಕರ್ಸೆ, ಮಂಡಗರ್ಸೆ, ಸುರ್ಗಿ, ಕಡ್ಲೆ ಹೆಡೆ, ಸುಪ್ಪುಗರ್ಸೆ, ಕನ್ನರ್ಗಿ, ಹೊಳ್ಳು, ತುಲ್ಲುನ್ ಮೀನು, ಮರಳು ಮೀನು, ಹಿಮಗಲ ಮೀನು, ಅರಗಲ ಬತ್ತಿ ತೊಗಲಿ ಮೀನು, ಪಾಂಟಕರ–ವಾಡ್ಮೆ, ಗೊಜಲೆ, ಗಿರ್ಲು, ಕಲ್ ಗಿರಿ, ಕಣ್ ಮೀನು, ಬೆಳ್ಳಿ ಎಮ್ಮೆ ಚಾಪಲು ಹೀಗೆ ಮಲೆನಾಡಿನಲ್ಲಿ ಹತ್ತಾರು ಜಾತಿಯ ಮೀನುಗಳಿವೆ. ಈ ಮೀನುಗಳಲ್ಲಿ ಹಿಂಗಳೆ ಮೀನು ಚಂದದ ಮೀನು. ಸಂಘಜೀವಿಗಳು ಒಟ್ಟಿಗೆ ಗುಂಪಲ್ಲಿ ಇರ್ತಾವೆ."

ಬರೆಯುತ್ತಾ ಹೋದರೆ ಮುಗಿಯದ ಕಥೆ ಈ ಪುಸ್ತಕ. ಕನ್ನಡ ಭಾಷೆಗೆ ಹೊಸದಾಗಿ ಹಲವು ಶಬ್ದಗಳನ್ನು ಕಲ್ಕುಳಿಯವರು ತಮ್ಮ ವರ್ಣನೆಯಲ್ಲಿ ತರುತ್ತಾರೆ.

ಒಬ್ಬ ಸಮಾಜವಾದಿಯಾಗಿ ಬೆಳೆದ ನನಗೆ ರೈತರ ಸಮಸ್ಯೆಗಳು ಗೊತ್ತಿತ್ತು. ಆದರೆ ನನಗೆ ಟ್ರೈಬಲ್‌ಗಳ ಬಗ್ಗೆ-ಬುಡಕಟ್ಟು ಜನಾಂಗದ ಬಗ್ಗೆ ತಿಳಿವಳಿಕೆ ಮಾತ್ರ ಇತ್ತು. ಆದರೆ ನನ್ನಲ್ಲಿ ಅವರ ನಾಶದ ಬಗ್ಗೆ ಗಾಢವಾದ ಚಿಂತನೆ ಇರಲಿಲ್ಲ. ಕುದುರೆಮುಖದಲ್ಲಿ ಅದಿರನ್ನು ತೆಗೆದು ಅದನ್ನು ಇರಾನಿಗೆ ರಫ್ತು ಮಾಡುವ ಮೂಲಕ, ಕಾಡನ್ನೂ ಅದರಲ್ಲಿ ವಾಸಿಸುವವರನ್ನೂ ನಾಶಮಾಡುವ ಸರ್ಕಾರದ ನೀತಿಯ ವಿರುದ್ಧ ನನ್ನನ್ನು ಹೋರಾಟಕ್ಕೆ ಹಚ್ಚಿದವರಲ್ಲಿ ಕಲ್ಕುಳಿ ಮುಖ್ಯರು. ಇವರ ಸಂಪರ್ಕಕ್ಕೆ ನಾನು ಬರದಿದ್ದಲ್ಲಿ ನಮ್ಮ ಒಟ್ಟು ನಾಗರಿಕತೆಗೂ, ಡೆವಲಪ್‌ಮೆಂಟ್ ರಾಜಕೀಯಕ್ಕೂ, ಜನರ ಕಷ್ಟಸುಖಗಳಿಗೂ ಇರುವ ಸಂಬಂಧಗಳನ್ನು ನಾನು ಆತ್ಮೀಯವಾಗಿ ತಿಳಿಯಲಾರದೆ ಹೋಗುತ್ತಿದ್ದೆ. ಈವರೆಗೂ ನಾನು ಕಲ್ಕುಳಿ ಒಬ್ಬ ಅಸಾಧಾರಣ ರಾಜಕೀಯ ಚಿಂತನೆಯನ್ನು ಮಾಡಬಲ್ಲ ವಿಶಿಷ್ಟ ವ್ಯಕ್ತಿಯೆಂದು ಮಾತ್ರ ತಿಳಿದಿದ್ದೆ. ಈ ಪುಸ್ತಕವನ್ನು ಓದಿದಾಗ ಕಲ್ಕುಳಿ ಕುವೆಂಪು ಮತ್ತು ತೇಜಸ್ವಿ ಸೃಷ್ಟಿಸುವ ಲೋಕವನ್ನು ರಾಜಕೀಯ ಪ್ರಜ್ಞೆಯಲ್ಲಿಯೂ ಬಲ್ಲವರು ಎಂಬುದನ್ನು ಮನಗಂಡೆ.

● ಯು.ಆರ್.ಅನಂತಮೂರ್ತಿ

...ಹೊಟ್ಟೆಯಲ್ಲೊಂದು ...ಸುಡುವ ಸ್ಮಶಾನ



...ೀಕು ಅನಿಸಿದ್ದನ್ನು ದ್ವೇಷಿಸಲು
...ಿಸುವವರೇ ಬಹಳ
...ಸುವಿನಿಂದ ಎತ್ತಿದಷ್ಟು ಹೂತುಕೊಳ್ಳುವ ಕಾಲು
...ಾತ್ರಿ ಕಟ್ಟು ಬಿಚ್ಚುವ ವಿಭುವನು
...ಹೊಟ್ಟೆಯಲ್ಲೊಂದು ಸ್ಮಶಾನ ಸೃಷ್ಟಿಸಿದ್ದಾನೆ

...ರೆ ಬಿಸಾಕಿ ಸೆಜ್ಜೆ ಡ್ರೆಸ್ಸಿನೊಳಗೆ...
...ಸದರೂ, ಸೀತೆ-ದ್ರೌಪದಿ, ಅಹಲ್ಯೆ, ತಾರಾ-ಸಾವಿತ್ರಿ
...ಅಸೂಯರ ಕರಗದ ಕನಸುಗಳ ಕಟ್ಟು
...ರಿದ ಗವಾಕ್ಷ-ಕಿಟಕಿಗಳ ಸುಳಿಗಾಳಿಯಲಿ
...ಸುಳಿದಾಡುವ ಗಿಳಿರಾಮನಿಗೆ ಪೌರುಷದ ಮುಸುಕು
...ಅಪ್ರತ್ಯಕ್ಷ ಭಯದಲಿ ಅಲೆವ ಆತ್ಮ!
...ಳಕ ಮುಖದೊಳಗೆ ಅತ್ಯಾಚಾರಿಗಳ ದಂಡು


...ಲೋಕ ಸಂತಾನವಿದು ಬಗೆದೇ. ಬದುಕುವುದು
...ೊದಲ ರಾತ್ರಿಯ ವಿಕಟ ಅಟ್ಟಹಾಸಕೆ
...ಸಂತಾನಗಳ ಸಿಡಿಮದ್ದು ದುಮುಗುಡುವ

ಓಣಿಓಣಿಗಳ ತೊಡೆ ಕುಣಿತ
ತೆವಳುವ ಹುಳು ಶಂಖದೊಳು ಸೇರಿದ ಸಂಕಟ
ಸವಾಲಿನೊಳಗೊಂದು ಹೊಸ ಸವಾಲು
ಹರಾಜಾಗಿದೆ ಕನ್ಯತ್ವ ಹೈಟೆಕ್ ವಿಮಾನದೊಳಗೆ?
ಅಧೋ! ಅಧೋ!! ಬೆತ್ತಲಾಗುವ ಪರಿ
ಯಾರಿಗಿದೆ ಬಣ್ಣ ಎನಿಸುವ ತಾಕತ್ತು?
ಇಲ್ಲಿ ಇಲ್ಲಿ ಕಾಲಲ್ಲಿ......
ಗುಬ್ಬಗೂಡಿನ ಮೇಲೆ ಬುಸುಗುಟ್ಟೊ ಹಾವು
ಮೂಸಿ ಮೂಸಿ ನುಂಗುತ್ತಿದೆ
ಮರಕ್ಕೆ ಬಿದ್ದ ಚಿಂಕಿ ಮೋಡಗಳನು ಸುಟ್ಟಿದೆ
ಮಳೆಯಿಲ್ಲದೆ ಹಸುರಾಗದ ಭೂಮಿ
ಮಣ್ಣಿಲ್ಲದೆ ಉಸಿತರಾಗದ ಬೀಜ
ಎದ್ದು ಕೂತಿದೆ ಅಸ್ತಿತ್ವದ ಪ್ರಶ್ನೆ
ಬೀಜ-ವೃಕ್ಷದ ನ್ಯಾಯ?
ನಿರಂತರ ಜಿಜ್ಞಾಸೆ ಮನುಷ್ಯತ್ವದ ಅಣಕ

ಆಯುಷ್ಯದ ಪರದೆ ಆಚೆ
ಮರುಭೂಮಿಯ ರಮ್ಯ ನೋಟ!
ಹೊಟ್ಟೆಯಲೊಂದು ಸುಡುಸುಡುವ ಸ್ಮಶಾನ
ಕವಿತೆ ಕಣ್ಣಿನ ಶಾಪಿಯಲ್ಲೂ ಕೆಂಪು ರಕ್ತ...
(ತನ್ನ ಕನ್ಯತ್ವವನ್ನು ಲಿಲಾವಿಗೆ ಇಟ್ಟ ಬ್ರೆಜಿಲ್ ಯುವತಿ ಕ್ಯಾತರಿನ್ ಓದಿ)

● ಅನಸೂಯ ಕಾಂಬಳೆ

ಕರಾವಳಿಯಲ್ಲಿ ಹಿಂಸೆಗಿಂಸೆ ಮುಂತಾಗಿ



ಅರಸಿಕೇರಿಯಲ್ಲಿ ಕಳ್ಳತನ ಜಾಸ್ತಿ 'ಅಂತೆ'. ಅದಕ್ಕೆ ಅದನ್ನ 'ಕಳ್ಳ ಅರಸಿಕೇರಿ' ಅಂತ ಜನ ಆಡ್ಕೋಳೋದನ್ನ ನೀವು ಕೇಳಿರ್ಬೋದು. ಹಂಗೆ, ಬೈಲಹೊಂಗಲ ಸೀಮೆಲ್ಲಿ ಜನ ರೊಚ್ಚಿಗೆದ್ರೆ ವಿವೇಚನೆ ಇಲ್ದೆ ಮಚ್ಚಿಂದ ಕಡಿದು ಹಾಕ್ತಾರೆ ಅನ್ನೋ ಮಾತನ್ನು ಕಣ್ಣಿಗೆ ಕಾಣೋ ಸತ್ಯ ಅನ್ನೋ ಹಾಗೆ ನಾವು ಮಾತಾಡ್ಕೋತಿವಿ. ಹಾಡಹಗಲೇ ಮನೆಗೆ ನುಗ್ಗಿ ಕಳುವು ಮಾಡೋದು 'ಕಳ್ಳತನ' ಸರಿ; ಹಂಗೆ ಮಚ್ಚಿಂದ ಕೊಚ್ಚೋದೂ ಹಿಂಸೆನೇ ಸರಿ. ಆದ್ರೆ, 'ಕಳ್ಳತನ', 'ಹಿಂಸೆ' ಅಂದ್ರೆ ಇಷ್ಟೇನಾ–ಈ ರೀತಿ ಕಳ್ಳತನ, ಹಿಂಸೆ ನಡೆಯದ ಊರುಕೇರಿಗಳು ಭಾರಿ ಸಭ್ಯವಾ? ಈ ಮಾತಿಗೆ ನಂಗೆ ನಮ್ಮ ದೇವನೂರರ 'ಮೂಡಲಸೀಮೆಯಲ್ಲಿ ಕೊಲೆಗಿಲೆ ಮುಂತಾಗಿ' ಎಂಬ ಕತೆ ನೆನಪಾಗ್ತದೆ. ಈ ಕತೇನೂ ಕೊಚ್ಚೋ ಕೊಲ್ಲೋ ಹಿಂಸೆಯ ಮಾತಿಂದ ಶುರುವಾಗ್ತದೆ. ಅಲ್ಲಿಂದ ಜೀತಗಾರ ರಂಗಪ್ಪನ ಗುಡಿಸಲಿನ ಒಳಗೆ ಅವನ ಹೆಂಡತಿ ಹಸಿದಿರುವ ಮಗುನ ಸ್ಥಿತಿಯನ್ನೂ, ಬೇಯಿಸಲೂ ಮನೆಯಲ್ಲಿ ಹಿಡಿ ಕಾಳೂ ಇಲ್ಲದ ಸ್ಥಿತಿಯನ್ನೂ ವಿವರಿಸುವಲ್ಲಿಗೆ ಕರೆದುಕೊಂಡು ಹೋಗುತ್ತದೆ. ಖುದ್ದು ಖಾಲಿ ಹೊಟ್ಟೆಯಲ್ಲಿ ನಿತ್ರಾಣನಾಗಿರೋ ರಂಗಪ್ಪ ಗೌಡರ ಮನೆಯಿಂದ ಒಪ್ಪೊತ್ತಿಗೆ ಏನಾದರೂ ಬೇಡಿ ತರಲು ಊರಕಡೆ ಹೊರಡುತ್ತಾನೆ. ದಾರಿಯಲ್ಲಿ ಊರಿನ ದೈನಂದಿನ ಸಹಜ ವಿದ್ಯಮಾನಗಳು ಅವನನ್ನು ಸುತ್ತಿಕೊಂಡು, ಅವನಿಂದ ಬಿಟ್ಟಿ ಕೆಲಸ ಮಾಡಿಸುವುದು, ಅವನ ಕಾರ್ಯಕುಶಲತೆಯ ಬಗ್ಗೆ ಒಣಮೆಚ್ಚುಗೆ ಸೂಚಿಸುವುದರ ಹೊರತಾಗಿ ಅವನ ಹಸಿದ ಹೊಟ್ಟೆ ಬಗ್ಗೆ 'ಕ್ಯಾರೇ' ಅನ್ನೋದಿಲ್ಲ. ಕೊನೆಗೆ ಗೌಡರ ಮನೆ ಮುಂದೆ ನಿಂತು ಬೇಡಿದರೆ, ಹಿಡಿಕಾಳಿನ ಬದಲು ಮೈಮುರಿಯುವ ಕೆಲಸ ಹೇರಿಕೊಳ್ಳುತ್ತದೆ. ಮೊದಲೇ ಹಸಿದು ನಿತ್ರಾಣಿಯಾಗಿರುವ ರಂಗಪ್ಪ ಮೈಮುರಿಯೋ ಕೆಲಸ ಮಾಡುತ್ತ ಕುಸಿದು ಬೀಳುವಾಗ ಇಡೀ ಊರು ಏನೂ ಆಗಿಲ್ಲವೆಂಬಂತೆ ತನ್ನದೇ ದೈನಂದಿನ ಉಸಾಬರಿಯಲ್ಲಿ ತೊಡಗಿಕೊಂಡಿರುವ ವಿವರಣೆಯೊಂದಿಗೆ ಕತೆ ಮುಗಿಯುತ್ತದೆ. ಮೊನ್ನೆ 'ದಿ ಹಿಂದೂ' ಪತ್ರಿಕೆಯ ಮಂಗಳೂರು ವರದಿಗಾರರಾಗಿರುವ ಮೋಹಿತ್ ರಾವ್ ಬರೆದಿರುವ ಎರಡು ವರದಿಗಳು ಮತ್ತು ಮಂಗಳೂರು ಬ್ಯುರೊ ಮುಖ್ಯಸ್ಥರಾಗಿರುವ ಗೋವಿಂದ ಬೆಳ್ಗಾಂವ್ಕರ್ ಅವರು ಬರೆದ ಒಂದು ವರಧಿಯನ್ನು ಓದಿದಾಗ ಇದೆಲ್ಲಾ ತಟ್ಟನೇ ತಲೆಗೆ ಬಂತು. ಅಷ್ಟೇ ಅಲ್ಲ, ಕರಾವಳಿಯಲ್ಲಿ ಬೇರು ಬಿಟ್ಟಿರೋ 'ಹಿಂದೂತ್ವ ಫ್ಯಾಸಿಸಂ'ನ ಫೋಟೋ, ಪೊಲೀಸ್ ಸ್ಟೇಷನ್ನಲ್ಲಿ ರೌಡಿಶೀಟರುಗಳ ಫೋಟೊ ತಗಲು ಹಾಕಿದ ಹಾಗೆ, ತಲೆಯಲ್ಲಿ ತಗಲ್ಹಾಕೋಳ್ತು ಕಣ್ರಿ. ಆ ವರದಿಗಳನ್ನು ನಿಮ್ಮ ಜೊತೆ ಹಂಚ್ಕೋತೀನಿ.


ದಿನಾಂಕ 9.10.2012ರ 'ದಿ ಹಿಂದೂ' ಪತ್ರಿಕೆಯಲ್ಲಿ (ಪುಟ 7) ಪ್ರಕಟವಾದ ಮೋಹಿತ್ ರಾವ್ ವರದಿಯ ಸಾರಾಂಶ:

ಸೆಪ್ಟಂಬರ್ 27, 2012ರ ರಾತ್ರಿ 9.30. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನಲ್ಲಿರುವ ಅಬ್ಬಡ ಎಂಬ ಹಳ್ಳಿಯಲ್ಲಿರುವ ಅಬ್ದುಲ್ ಖಾದರ್ ಸಾಬರ ಮನೆಯ ಕಿಟಕಿ, ಬಾಗಿಲುಗಳನ್ನು ಇಬ್ಬರು ಯುವಕರು ಒಡೆಯುತ್ತಿದ್ದಾರೆ. ಪಕ್ಕದ ಮನೆಯಲ್ಲಿರುವ ರೈತ ರವೀಂದ್ರನಾಥ ರೈಯವರು ಗಲಾಟೆ ಕೇಳಿ, ಹೊರಗೆ ಬಂದು ಇಬ್ಬರು ಹುಡುಗರನ್ನು ಗದರಿಸಿದ್ದಾರೆ. ಆ ಹುಡುಗರು ಪೇರಿ ಕಿತ್ತಿದ್ದಾರೆ. ರೈ ಅವರನ್ನು ಹಳ್ಳಿಯ ಅಂಚಿನವರೆಗೂ ಬೆನ್ನಟ್ಟಿಹೋಗಿದ್ದಾರೆ. ಅಲ್ಲಿ ಇನ್ನೂ ಎಂಟು ಹತ್ತು ಜನರ ಗುಂಪು ಬೈಕು, ಜೀಪು ಸಹಿತ ನಿಂತಿದೆ. ಆ ಗುಂಪಿನಲ್ಲಿ ರೈ ಭಜರಂಗದಳದ ಮುಖಂಡರಾಗಿರುವ ಧರ್ಮಪಾಲ ಮತ್ತು ಅರಳ್ ಕುಮಾರರನ್ನು ಕಂಡಿದ್ದಾರೆ. ತಮ್ಮ ಹಳ್ಳಿಗೆ ಬಂದು ಯಾಕೆ ಗಲಾಟೆ ಮಾಡುತ್ತಿದ್ದೀರಿ ಎಂದು ಕೇಳಿದ್ದಾರೆ. ಗುಂಪು ರೈಯವರನ್ನು ಸುತ್ತುವರೆದು ಹಲ್ಲೆಗೆ ಮುಂದಾಗಿದೆ. ಆ ಹೊತ್ತಿಗೆ ಮಸೀದಿಯಿಂದ ವಾಪಸ್ಸಾಗುತ್ತಿದ್ದ ಊರಿನ ಮುಸಲ್ಮಾನರು ರೈಯವರ ರಕ್ಷಣೆಗೆ ಬಂದಿದ್ದಾರೆ. ಅಷ್ಟು ಜನ ಬಂದದ್ದೇ ಗುಂಪು ಅವಸರದಲ್ಲಿ ಬೈಕು, ಜೀಪುಗಳನ್ನು ಹತ್ತಿ ಪರಾರಿಯಾಗಿದೆ. ಮರುದಿನ ರೈಯವರು, ದಾಳಿಕೋರರು ಬಿಟ್ಟುಹೋಗಿದ್ದ ಕತ್ತಿಯ ಸಮೇತ, ವ್ಯಾಪ್ತಿಯ ಕಡಬ ಪೊಲೀಸು ಠಾಣೆಗೆ ಹೋಗಿ ದೂರು ಕೊಟ್ಟಿದ್ದಾರೆ. ಪೊಲೀಸರು ಗುಂಪು ಹಲ್ಲೆಯ ಕೇಸು ದಾಖಲಿಸಿಕೊಂಡಿದ್ದಾರೆ. ಅದೇದಿನ ಧರ್ಮಪಾಲ 'ರೈ ಅವರ 19 ವರ್ಷದ ಮಗ ಮತ್ತು ಊರ ಮುಸಲ್ಮಾನರು ಪಿಸ್ತೂಲು ಸಹಿತ ಒಟ್ಟಾಗಿ, ತಮ್ಮ ಮೇಲೆರಗಿ ತಮ್ಮನ್ನು ದೋಚಿದ್ದಾರೆ' ಎಂದು ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ಕಡಬ ಪೊಲೀಸರು ರೈ ಮತ್ತು ಅವರ ಮಗನ ಮೇಲೆ ಡಕಾಯತಿ ಕೇಸು ದಾಖಲಿಸಿಕೊಂಡಿದ್ದಾರೆ. ಸಾಲದೆಂಬಂತೆ, ಮತ್ತೇ ಅಕ್ಟೋಬರ್ 4ರಂದು ಧರ್ಮಪಾಲನ ಗ್ಯಾಂಗ್ 'ರೈ ಮತ್ತು ಅವರ ಮಗನ ಗ್ಯಾಂಗ್ ರೈಫಲಿನಿಂದ ಹಲ್ಲೆ ನಡೆಸಿದ ಕಾರಣ ಒಬ್ಬ ಮಹಿಳೆ ಸಿಕ್ಕಾಪಟ್ಟೆ ಗಾಯಗೊಂಡಿದ್ದಾಳೆ' ಎಂದು ಮತ್ತೊಂದು ದೂರು ಕೊಟ್ಟು, ಮತ್ತಷ್ಟೂ ಕಠಿಣ ಕಲಮ್ಮುಗಳನ್ನು ಅವರ ಮೇಲೆ ಜಡಿಯಬೇಕು ಎಂದು ಒತ್ತಾಯಿಸಿದೆ. "ನಾವು ದೂರು ದಾಖಲಿಸಿಕೊಂಡು ಎರಡೂ ಪಾರ್ಟಿಗಳಿಗೂ ನೋಟಿಸು ಕೊಟ್ಟಿದ್ದೇವೆ. ತನಿಖೆ ಇನ್ನೂ ನಡೆಸಬೇಕಾಗಿದೆ. ಯಾರನ್ನೂ ಬಂಧಿಸಿಲ್ಲ (ಧರ್ಮಪಾಲನ) ಗುಂಪು, 2ನೇ ದೂರನ್ನು ಕೊಡಲು ಯಾಕೆ ತಡಮಾಡಿದೆ ಎನ್ನೋದನ್ನ ಇನ್ನೂ ತನಿಖೆ ಮಾಡಬೇಕಿದೆ. ಈ ಗುಂಪು ಭಜರಂಗ ದಳಕ್ಕೆ ಸೇರಿದ್ದೋ ಅಲ್ಲವ್ವೋ ಎನ್ನೋದು ಖಾತ್ರಿ ಇಲ್ಲ– ಆದರೆ, ಭಜರಂಗ ದಳದ ನಾಯಕರು (ಧರ್ಮಪಾಲನ) ಗುಂಪಿನ ಪರವಾಗಿ ಬಂದಿದ್ದರು" ಎಂದು ಪುತ್ತೂರು ಪೊಲೀಸು ವಲಯದ ಹಿರಿಯ ಅಧಿಕಾರಿ ತಿಳಿಸಿದ್ದಾರೆ. ರವೀಂದ್ರನಾಥ ರೈಯವರು "ಒಂದು ಸಾರಿ ಹಲ್ಲೆ ಮಾಡಿದವರು ಮತ್ತೆ ಬಂದು ಹಲ್ಲೆ ಮಾಡೋದಿಲ್ಲ ಅಂತ ಹ್ಯಾಗ್ ನಂಬೋದು? ನಾವು ಭಯದಿಂದ, ಕೆಲಸಕ್ಕೆ ಸಹ ಹೋಗಲಾಗದೆ, ಮನೆಯೊಳಗೆ ಅಡಗಿ ಕೂತಿದ್ದೇವೆ. ಘಟನೆ ನಡೆದ ದಿನ ಇಂಜಿನಿಯರಿಂಗ್ ಓದುತ್ತಿರೋ ನನ್ನ ಮಗ ಮನೆಬಿಟ್ಟು ಹೊರಬಂದಿಲ್ಲ, ಅವನ ಮೇಲೂ ಕೇಸು ಹಾಕಿದ್ದಾರೆ ನೋಡಿ – ಅವನು ಅಂಜಿ ಕಾಲೇಜಿಗೂ ಹೋಗುತ್ತಿಲ್ಲ, ದೈಹಿಕ ಹಲ್ಲೆಯ ಭಯದ ಜೊತೆ ಕೇಸಿನ ಮಾನಸಿಕ ಹಿಂಸೆಯೂ ಸೇರ್ಕೊಂಡಿದೆ. ಬ್ಯಾರಿಗಳ (ಕರಾವಳಿಯ ಒಂದು ಮುಸಲ್ಮಾನ ಸಮುದಾಯ) ಕಡೆ ಇದ್ದೀಯ ಅಂತ ಬೆದರಿಕೆ ಕರೆಗಳು ಬರ್ತಾ ಇವೆ. ಏನ್ಸಾರ್ ನೆರೆಹೊರೆಯವರಿಗೆ ಸಹಾಯಕ್ಕೆ ಹೋಗೋದೇ ತಪ್ಪಾ?" ಎಂದು ಒತ್ತರಿಸಿಕೊಂಡು ಬರುವ ದುಃಖದಿಂದ ಬಿಕ್ಕುತ್ತ ಹೇಳುತ್ತಾರೆ.

ಎರಡು ದಿನಗಳ ನಂತರ, ದಿನಾಂಕ 13.10.2012ರಂದು, ಮೋಹಿತ್ ರಾವ್ ಅಬ್ಬಡದಲ್ಲಿರುವ ವಾತಾವರಣದ ಕುರಿತಾಗಿ ಹೀಗೆ ವರದಿ ಮಾಡುತ್ತಾರೆ:

ಮಸೀದಿಯ ಬೋರ್ಡು, ಬ್ಯಾನರುಗಳನ್ನು ನಾಶ ಮಾಡುವುದು, ಮಸೀದಿಗೆ ಹೋಗುವವರನ್ನು ಚುಡಾಯಿಸಿ ಲೇವಡಿ ಮಾಡುವುದರೊಂದಿಗೆ ಸಣ್ಣಗೆ ಶುರುವಾದ ಕಿರುಕುಳ, ಸೆಪ್ಟಂಬರ್ 27ರ ಕತ್ತಿ ರಾಡುಗಳ ಸಹಿತ ಹಲ್ಲೆ ನಡೆಸಿದ ಘಟನೆಯಾಗಿ ಬೆಳೆಯಿತು. ಈಗ ಅಬ್ಬಡದಲ್ಲಿ ಕಾಲಿಟ್ಟ ಕೂಡಲೇ ಭಯದ ಹವ ನಿಮ್ಮನ್ನು ಮುತ್ತುತ್ತದೆ. ಹಿಂದೂತ್ವ ಗುಂಪುಗಳಿಗೆ ಸುದ್ದಿ ತಲುಪಿ ಮತ್ತೆಲ್ಲಿ ಇನ್ನೊಂದು ಅನಾಹುತವಾದೀತೋ ಎಂಬ ಭಯದಲ್ಲಿ ಜನ ಅಪರಿಚಿತರೊಂದಿಗೆ ಮಾತಾಡುವುದಿಲ್ಲ. 30 ಮನೆಗಳಿರುವ ಈ ಹಳ್ಳಿಯಲ್ಲಿ 10 ಮನೆಗಳು ಮಾತ್ರ ಮುಸಲ್ಮಾನರವು. ಒಂದು ತಿಂಗಳ ಹಿಂದೆ, ಅಬ್ದುಲ್ ಖಾದರ್ ಬಯಲಲ್ಲಿ ತಮ್ಮ ದನದ ಕರುವನ್ನು ಮೇಯಿಸುತ್ತಿದ್ದರು. ಹಿಂದೂತ್ವದ ಗುಂಪು ಅವರನ್ನು ಸುತ್ತುವರೆದು "ಏನು ಮಾಂಸಕ್ಕಾಗಿ ತಂದಿರೋದು?" ಎಂದು ಜಬರ್ದಸ್ತ್ ಮಾಡಿತು. ಖಾದರ್ "ಇಲ್ಲ ಇದು ನಾನು ಸಾಕುತ್ತಿರೋ ಕರು" ಎಂದರೂ ಬೈದು ಬಲವಂತದಿಂದ ಕರುವನ್ನು ಎಳೆದುಕೊಂಡು ಹೋಗಿದ್ದರು. ಈಗ ಊರಲ್ಲಿ ಜನ ಗುಂಪಾಗಿ ಹೋಗುವುದಕ್ಕೂ ಅಂಜುತ್ತಾರೆ; ಇಬ್ಬಿಬ್ಬರೇ ಅಂತರ ಇಟ್ಟುಕೊಂಡು ನಡೆದಾಡುತ್ತಾರೆ. "ಈ ಊರಲ್ಲಿ ನಮ್ಮ ಸಂಖ್ಯೆ ಕಮ್ಮಿ. ಆದರೆ ಯಾರೂ ತಾರತಮ್ಯ ಎಣಿಸಿದ್ದಿಲ್ಲ, ನಾವು ಹೆಚ್ಚಿನೋರು ಕೂಲಿ ಕೆಲಸಕ್ಕೆ ಹೋಗೋರು. ದಿನಪೂರ್ತಿ ಹೆಂಗಸರು, ಮಕ್ಕಳು ಮಾತ್ರ ಮನೇಲಿ ಇರ್ತಾರೆ. ಈಗ ನಮ್ಮ ಬೆನ್ನಿಗೆ ನಿಂತದ್ದಕ್ಕೆ ಹಿಂದೂವೊಬ್ಬರ ಮೇಲೆ ಹಲ್ಲೆ ಮಾಡಿದೋರು ನಮ್ಮನ್ನು ಬಿಟ್ಟಾರೆಯೇ ಸ್ವಾಮಿ. ಅವರ ಮೇಲೆ ದೂರು ಬೇರೆ ಕೊಟ್ಟಿದ್ದೇವೆ. ಹಲ್ಲೆಯ ಆತಂಕ ಇನ್ನೂ ಜಾಸ್ತಿಯಾಗಿದೆ. ಊರಶಾಂತಿಗಾಗಿ ನಾವು ನಮ್ಮ ಸ್ವಾತಂತ್ರ್ಯವನ್ನೂ ಕಳೆದುಕೊಳ್ಳೋಕೆ ತಯಾರಿದ್ದೇವೆ" ಅಂತ ಒಬ್ಬರು ಹೇಳಿದರು. ಅಬ್ಬಡ ಇದೀಗ ಭಯಭೀತವಾಗಿ ನಡುಗುತ್ತಿರುವ ಊರು.

ನವೆಂಬರ್ 2,2012ರ 'ದಿ ಹಿಂದೂ' ಪತ್ರಿಕೆಯ ಮುಖಪುಟದಲ್ಲಿ



ಗೋವಿಂದ್ ಬೆಳ್ಗಾಂವ್ಕರ್ ಮಾಡಿರುವ ವರದಿಯ ಸಾರಾಂಶ:

ಭಜರಂಗ ದಳದ ಒತ್ತಡಕ್ಕೆ ಬಗ್ಗಿ ದಕ್ಷಿಣ ಕನ್ನಡದ ಸುಬ್ರಹ್ಮಣ್ಯ ಗ್ರಾಮಪಂಚಾಯ್ತಿಯು ಕುಲ್ಕುಂದದಲ್ಲಿ ನಡೆಯಬೇಕಾಗಿದ್ದ ಚಾರಿತ್ರಿಕ ಜಾನುವಾರು ಜಾತ್ರೆಯನ್ನು ರದ್ದುಪಡಿಸಿದೆ. ನವೆಂಬರ್ 28ಕ್ಕೆ ಶುರುವಾಗಬೇಕಿದ್ದ ಜಾತ್ರೆಗೆ ಬದಲಾಗಿ ಅಂದು ಅಲ್ಲಿ 'ಗೋಪೂಜೆ' ಮಾತ್ರ ನಡೆಯಲಿದೆ. 2000–3000 ಜಾನುವಾರುಗಳನ್ನು ಉತ್ತರ ಕರ್ನಾಟಕ, ಹಾಸನ ಮತ್ತು ಕಾಸರಗೋಡುಗಳಿಂದ ಈ ಜಾತ್ರೆಗೆ ಮಾರಾಟಕ್ಕೆ ತರಲಾಗುತಿತ್ತು (ಒಂದು ಕಾಲಕ್ಕೆ ಇಲ್ಲಿ 50,000 ಜಾನುವಾರುಗಳನ್ನು ಮಾರಾಟಕ್ಕೆ ಕರೆತರಲಾಗುತಿತು). ಜಾತ್ರೆಗೆ ಬರುವ ದನಗಳನ್ನು ಕಾಸರಗೋಡಿನ ಕಸಾಯಿಖಾನೆಗೆ ಕೊಂಡು ಒಯ್ಯುತ್ತಾರೆ ಎಂದು ಭಜರಂಗದಳ ಆರೋಪಿಸುತ್ತದೆ; ಆ ಕಾರಣಕ್ಕಾಗಿಯೇ ಈ ಜಾತ್ರೆ ನಿಲ್ಲಬೇಕು ಎನ್ನುತ್ತದೆ. 'ಸ್ಥಾಪಿತ ಹಿತಾಸಕ್ತಿಗಳ ಒತ್ತಡ ತಡೆದುಕೊಳ್ಳಲಾಗದೆ ಪಂಚಾಯತಿ ಈ ನಿರ್ಧಾರ ತೆಗೆದುಕೊಂಡಿದೆ; ಇದು ಆಳುವ ಬಿಜೆಪಿ ಸರಕಾರದ ವೋಟುಬ್ಯಾಂಕ್ ರಾಜಕೀಯ' ಎಂದು ಪಂಚಾಯ್ತಿ ಸದಸ್ಯ ಶಿವರಾಮ ರೈ ಹೇಳುತ್ತಾರೆ. ಜಾತ್ರೆಯನ್ನು ನಡೆಸಲು ತಾವು ಮುಂದಾಗಿದ್ದ ಕಾರಣಕ್ಕಾಗಿಯೇ ಭಜರಂಗ ದಳದವರು ತನ್ನ ಮತ್ತು ಇತರ ಸದಸ್ಯರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ರೈ ಹೇಳುತ್ತಾರೆ. ಈ ಘಟನೆಗೆ ಸಂಬಂಧಿಸಿ ಭಜರಂಗ ದಳದ ಇಬ್ಬರ ಮೇಲೆ ಕೇಸು ಹಾಕಲಾಗಿದೆ. ಇದಕ್ಕೆ ಭಜರಂಗ ದಳದವರೂ ಪಂಚಾಯತಿಯ ಸದಸ್ಯರ ಮೇಲೆ ಉಲ್ಟಾ ದೂರು ದಾಖಲಿಸಿದ್ದಾರೆ. ಜಾನುವಾರು ಜಾತ್ರೆ ರದ್ದಾದ ಕಾರಣವಾಗಿ ತಾವೂ ಈ ಸಾರಿ ಸುಬ್ರಹ್ಮಣ್ಯ ದೇವಸ್ಥಾನದ ರಥೋತ್ಸವಕ್ಕೆ ರಥ ಕಟ್ಟುವುದಿಲ್ಲ ಎಂದು ಮಲೆಕುಡಿಯ ಆದಿವಾಸಿಗಳು ಪಟ್ಟು ಹಿಡಿದಿದ್ದಾರೆ. ಜಾನುವಾರು ಜಾತ್ರೆ ಶುರುವಾದ ನಂತರವಷ್ಟೇ ದೇವಸ್ಥಾನದ ವಾರ್ಷಿಕ ಉತ್ಸವ ನಡೆಯುವುದು ಲಾಗಾಯ್ತಿನ ರಿವಾಜು ಎಂದು ಅವರು ಹೇಳುತ್ತಾರೆ. ದೇವಸ್ಥಾನದವರೋ 'ತಾಂಬೂಲ ಪ್ರಶ್ನೆ'ಯಲ್ಲಿ ಸೂಚಿಸಲಾದ ಪರಿಹಾರದ ಪ್ರಕಾರ, ಕುಲ್ಕುಂದದಲ್ಲಿ 'ಗೋಪೂಜೆ' ನಡೆಸಿ, ದೇವಸ್ಥಾನ ಉತ್ಸವ ನಡೆಸುತ್ತೇವೆ ಎನ್ನುತ್ತಿದ್ದಾರೆ. "ರೈತರಿಗೆ ಉಪಯುಕ್ತವಾದ ಜಾನುವಾರು ಜಾತ್ರೆ ಇಲ್ಲದೆ ಗೋಪೂಜೆ ನಡೆಸಿ ಏನು ಮಾಡುತ್ತೀರಿ!" ಎಂದು ರೈಗಳು ಕೇಳುತ್ತಾರೆ. "ಈ ಜಾತ್ರೆಯಿಂದ ಯಾವ ಕಸಾಯಿಖಾನೆಗೂ ಜಾನುವಾರುಗಳನ್ನು ಕೊಂಡು ಹೋಗೋದಿಲ್ಲ, ಇದೆಲ್ಲ ಹಿಂದೂತ್ವ ಸಂಘಟನೆಗಳ ಆಟ" ಎನ್ನುತ್ತಾರೆ ಮಲೆಕುಡಿಯರ ನಾಯಕ ಎ.ವಿ. ನಾಗೇಶ್.

ಈ ಮೂರು ವರದಿಗಳ ಸತ್ಯನಿಷ್ಠೆ–ವಸ್ತುನಿಷ್ಠೆಗಳಿಗೆ ಮೊದಲಾಗಿ ಸಲಾಂ ಹೇಳೋಣ. ಇದ್ದದ್ದನ್ನು ವರದಿ ಮಾಡಿದ್ದಾರೆ, ಏನ್ಸಾ ವಿಶೇಷ ಅಂತೀರ ನಂಗೊತ್ತು, ಹೇಳ್ತೀನಿ ಕೇಳಿ. 1997ರಿಂದ ಹಿಂದೂತ್ವ ಸಂಘಟನೆಗಳು, ಹ... ಘಟನೆಗಳಲ್ಲಿ ಅಲ್ಪಸಂಖ್ಯಾತರನ್ನು ರಾಡುಗಳಿಂದ ಚಚ್ಚಿವೆ, ಮಚ್ಚುಗಳಿಂದ ಕೊ... ಏಕಪಕ್ಷೀಯವಾಗಿ ಮುಸಲ್ಮಾನರು ಹಿಂಸೆಗೆ ತುತ್ತಾದ ಎರಡು ಗಲಭೆ... (1997-98–ಸುರತ್ಕಲ್, 2006–ಮಂಗಳೂರು) ಸಂಘಪರಿವಾರ ಸೃಷ್ಟಿ... ನಡೆಸಿದೆ. ಮೂರು ವರದಿಗಳು ವಿವರಿಸಿದಂಥ ಸಾವಿರಾರು ಹಿಂಸಾ ಘಟ... ನಿತ್ಯದ ಮಾಮೂಲಿ ವ್ಯವಹಾರದ ಹಾಗೆ ಕಳೆದ 15 ವರ್ಷಗಳಿಂದ ಕರಾವ... ನಡೆಯುತ್ತಿವೆ. ಆದರೆ ಲೋಕದಲ್ಲಿ ನಡೆಯುವುದನ್ನೆಲ್ಲ ನಾವು ಕೂ... ತಂದು ಸುರಿಯುತ್ತವೆ ಎಂದು ನಾವು ನಂಬಿರುವ, ಕರ್ನಾಟಕದ ... ಊರುಗಳನ್ನು ತಲುಪುವ ಪ್ರಸಾರ ಸಾಮರ್ಥ್ಯ ಹೊಂದಿರುವಂಥ ... ಮಾಧ್ಯಮಗಳು ಈ ಫ್ಯಾಸಿಸ್ಟ್ ಹಿಂಸೆಯ ತಿಪ್ಪೆ ಸಾರಿಸುವ ಕೆಲಸ ಮಾ... ಅವು ಇಂಥ ಹಿಂಸೆಗಳನ್ನು (1) ಬಿಡಿ ಅಪರಾಧದ ಕೃತ್ಯಗಳು ಎಂ... ವರದಿ ಮಾಡುತ್ತವೆ. (2) ಆ ಮತ ಈ ಮತ ಅಂತ ಭೇದವಿ... ಹಿಂಸೆಯನ್ನು ಚಪ್ಪರಿಸುವ ಕಿಡಿಗೇಡಿಗಳ ಕೃತ್ಯ ಎಂಬಂತೆ ಬರೆಯುತ್ತವೆ. ಮಿಕ್ಕಂತೆ ಕರಾವಳಿಯ ಊರುಗಳು ಶಾಂತಿ–ಸುವ್ಯವಸ್ಥೆ–ಸಭ್ಯತೆ–ಸುಸಂಸ್ಕೃತಿಗ... ಮೆರೆಯುವ ಕರುನಾಡಿನ ವಿಶಿಷ್ಟ ಭೂಭಾಗವೆಂದು ಓದುಗರನ್ನು ಯಾಮಾರಿ... ಸತತ ಪ್ರಯತ್ನ ಮಾಡುತ್ತಿವೆ. 2007ರವರೆಗೆ 'ದಿ ಹಿಂದೂ' ಪತ್ರಿಕೆಯ ... ಕೂಡ ಇದಕ್ಕಿಂತ ಭಿನ್ನವಾಗಿರಲಿಲ್ಲ. ನಾವು ವಾಸ್ತವಿಕ ಸಂಗತಿಗ... ತಿಳಿದುಕೊಳ್ಳಲು 'ವಾರ್ತಾಭಾರತಿ'ಯಂಥ ಪುಟ್ಟ ಪತ್ರಿಕೆ ಅಥವ ಸ್ಥಳಿ... ಸಂಜೆ ಪತ್ರಿಕೆಗಳನ್ನೇ ಓದಬೇಕಾಗುತ್ತಿತ್ತು. ಉಡುಪಿ, ಮಂಗಳೂರನ್ನು ಬಿ... ಕರ್ನಾಟಕದ ಇತರೆಡೆಗಳಿಗೆ ಹಿಂಸೆಯ ವಾಸ್ತವಾಂಶಗಳು ಪ್ರಸಾರವಾಗು... ತ್ರಾಸವಿತ್ತು. 2007ರ ನಂತರ, ಗೋವಿಂದ್ ಬೆಳ್ಗಾಂವ್ಕರ್ 'ದಿ ಹಿಂ... ಮಂಗಳೂರು ಆವೃತ್ತಿಯ ಮುಖ್ಯಸ್ಥರಾಗಿ ಬಂದರು; ಸುದೀಪ್ತೋ ಮೋಂಡೊ... ಅನಿಶ ಎಸ್.ರಂಥ–ವೃತ್ತಿಪರತೆಯನ್ನು ಬಿಡದೆ, ವರದಿಗಾರರಿಗೆ ಇರುವ ಸೀ... ಅವಕಾಶದ ಚೌಕಟ್ಟನ್ನು ಮೀರದೆ– ನೇರ ನಿಷ್ಠೂರವಾಗಿ ವರದಿ ಮಾ... ತೊಡಗಿದ ನಂತರ 'ದಿ ಹಿಂದೂ' ಪತ್ರಿಕೆಯ ವರದಿಗಳ ಖದರ್ ಬದಲಾಯಿ... ದೊಡ್ಡ ಪತ್ರಿಕೆಯೊಂದರಲ್ಲಿ ಸಂಘಪರಿವಾರದ ಹಿಂಸೆಯ ಬಣ್ಣ... ಬಿಚ್ಚಿಕೊಳ್ಳತೊಡಗಿದವು. ಮೋಹಿತ್ ರಾವ್ ಇಂಥ ಕಾಯಕ... ಪ್ರಾಮಾಣಿಕವಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಹಿಂದೂತ್ವದ ಹಿಂಸೆಯನ್ನು ಕರಾವಳಿಯ ಸುಶಿಕ್ಷಿತ ಜನ ಸಾಕುಪ್ರಾ... ಅಂದದಲ್ಲಿ ಮುದ್ದಿಸಿ, ಪೋಷಿಸುವ ಪರಿಯನ್ನು ಕಂಡರೆ ಈ ಪುಟ್ಟ ಸಂತೋಷ... ಠುಸ್ ಪಟಾಕಿಯಾಗುತ್ತದೆ. ಮೇಲೆ ಕಾಣಿಸಿರುವ ವರದಿಗಳು ವಿವರಿಸಿ... ತಣ್ಣನೆಯ ಹಿಂಸೆ ನಡೆಯುತ್ತಿರುವ ಎರಡು ಜಿಲ್ಲೆಗಳಲ್ಲಿ ದಿನಕ್ಕೆ ಹತ್ತು ಸಾಹಿ... ಸಂಗೀತ, ನೃತ್ಯೋತ್ಸವಗಳು ನಡೆಯುತ್ತವೆ–ನಡೆಯಲಿ, ನಡೆಯಬೇಕು. ಆ... ಈ ತಣ್ಣನೆಯ ಹಿಂಸೆಯನ್ನು ತನು, ಮನ, ಧನಗಳಿಂದ ಬೆಂಬಲಿ... ಮಂದಿ ಈ ಉತ್ಸವಗಳ ಮುಂದಾಳುಗಳಾಗಿರುತ್ತಾರೆ. ಈ ಹಿಂಸೆಯ... ನಿಯಂತ್ರಿಸುವ ಸಂಘಪರಿವಾರದ ನಾಯಕ ಗಣಂಗಳ್ ಇಂಥ ಉತ್ಸವಗ... ಗಣ್ಯ ಅತಿಥಿಗಳಾಗಿರುತ್ತಾರೆ;. ಕೆಲವರಂತೂ 'ಭಯೋತ್ಪಾದನೆ, ನಕ್ಸಲ್ ಹಿ... ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆ ತುಂಬಿರುವ ನಮ್ಮ ಸಮಾಜಕ್ಕೆ ... ಔಷಧಪ್ರಾಯ' ಅನ್ನೋ ಡೈಲಾಗನ್ನ ಯಾವ ಎಗ್ಗಿಲ್ಲದೆ ಹೊಡೆದುಬಿ... ಕಣ್ರಿ! ಇಂಥಲ್ಲಿ ನಿಜಕ್ಕೂ ಪ್ರತಿಭಾವಂತರಾದ ಕಲಾವಿದರು ತಮ್ಮ ಕಲೆಯ... ಸಹೃದಯರಿಗೆ ಉಣಿಸುತ್ತಾರೆ!

ಕುಲ್ಕುಂದದ ಜಾನುವಾರು ಜಾತ್ರೆಯ ವಿಷಯವನ್ನು ಗೆಳೆಯ ರಂಗಕು... ಐ.ಕೆ.ಬೊಳುವಾರರ ಜೊತೆ ಮಾತನಾಡುತ್ತಿದ್ದಾಗ, ಅವರು ತ... "ಬಾಗೋಲೋಡಿ ದೇವರಾಯರ (ಇವರು ಆಧುನಿಕ ಕನ್ನಡ ಗದ್ಯ ಸಾಹಿ... ಪ್ರತಿಭಾನ್ವಿತ ಬರಹಗಾರ) ಕತೆಯೊಂದಿದೆ. ಅದರಲ್ಲಿ 18 ವಷ... ವಿಧವೆಯೊಬ್ಬಳು ತಾನು ಸಾಕಿದ ದನವನ್ನು ಕುಲ್ಕುಂದ ಜಾತ್ರೆಗೆ ಒಯ್ದಿತಾ... ದಿನಪೂರ್ತಿ ಇದ್ದು ಮಾರಾಟ ಮಾಡದೆ ವಾಪಾಸು ಮನೆಗೆ ಕರೆ ತರುವ... 'ಮಾರಾಟವಾಗಲಿಲ್ಲವಾ?' ಅಂತ ಕೇಳಿದೋರಿಗೆ ಅವಳು 'ನಾನು ಜಾ... ಒಯ್ದದ್ದು ಮಾರಲಿಕ್ಕಲ್ಲ, ಇತರ ಜಾನುವಾರುಗಳ ಸಂಗ ನನ್ನ ದನಕ್ಕೂ ಆ... ಅಂತ' ಅನ್ನುತ್ತಾಳೆ. ಇಂಥ ಊರಲ್ಲಿ ಇಂಥದೆಲ್ಲ ನಡೆಯುತ್ತದಲ್ಲ!" ಎಂ... ನೊಂದುಕೊಂಡು ನುಡಿದರು. ಹೀಗೆ ಸಾಹಿತ್ಯ ಓದಬಲ್ಲ ಸೂಕ್ಷ್ಮ ಜನರ... ನೀವು ಕರಾವಳಿಯಲ್ಲಿ ಟಾರ್ಚು ಹಾಕಿ ಹುಡುಕಿದರೂ ಹತ್ತು ಜನ ಸಿಗಲಾರ... ಆದರೆ, ಹಿಂಸೆಯನ್ನು ತಣ್ಣಗೆ ಸಮರ್ಥಿಸುವ ಮೋಹನ್ ಆಳ್ವ ತರದ ಮ... ನಡೆಸುವ 'ನುಡಿಸಿರಿ'ಯಲ್ಲಿ 'ಕನ್ನಡದ ಮನಸ್ಸು–ಜನಪರ ಚಳವಳಿಗಳು' ಎ... ರಸದೂಟ ಸವಿಯಲು ಏನ್ ಜನ ಏನು ಜನ ಸಾರ್! ಇಂಥ ಉತ್ಸವಗ... ಹಿಂದೂತ್ವದ ಹಿಂಸೆಯನ್ನು ನಿರ್ದಾಕ್ಷಿಣ್ಯದಿಂದ ಖಂಡಿಸುವವರೂ, ನಮ... ಪ್ರಿಯರಾದವರೂ ಆದ ಅನಂತಮೂರ್ತಿ, ವೈದೇಹಿ, ಗಿರೀ... ಕಾಸರವಳ್ಳಿಯಂಥವರು ಹೋಗುವಾಗ ನಮಗೆ ಸಿಟ್ಟು ಬರ್ತದೆ, ಸಂ... ಆಗ್ತದೆ. ನೀವು ಅಲ್ಲಿಗೆ ಹೋಗೋದು ನಮಗೆ ಚೂರೂ ಇಷ್ಟ ಇಲ್ಲ ... ಅಂತ – ಸರಿಯೋ ತಪ್ಪೋ – ನಿಷ್ಠೂರವಾಗಿ ಹೇಳಿಬಿಡಬೇಕು; ಹೇಳೋ... ಅಲ್ವಾ!

...ರಾಯಣ್ಣನ ಸಿನುಮಕೆ ಪುರಾಣ ಸೇರಸಬಾರದಿತ್ತು ಕಣೊ

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

...ಲಗೆಲಸ ಯಾವುದೂ ಬಾಕಿ ಇರಲಿಲ್ಲ, ಬಿತ್ತಿದ್ದು ...ಗಿತ್ತು, ಇನ್ನೇನಿದ್ದರೂ ಕುಯ್ಲಿಗೆ ತಯಾರಾಗಬೇಕು. ... ತಿಂಗಳು ಬಟ್ಟು, ನಾಡಿನ ರಾಜಕಾರಣವೂ ಹಾಗೇ ... ಕಾಳವಾವನ ಟೀವಿಂ ಅದೂಇದೂ ...ಡುವಾಗ ವಾಟಿಸ್ಸೆ ಬಂದ.

"...ನ್ನೆ ದಿನ ಎಲ್ಲಿಗೋಗಿದ್ದ?" ಎಂದಳು ಜುಮ್ಮಿ.

"...ಲ್ಲಿಗಾರ ಹೋಯ್ತಿನಿ ನಿನಿಗೇನಕ್ಕ, ನಾನೇನು ನಿನ್ನ ...ಲ್ಲಿದ್ದಿನೊ ಅಥವ ಪರಸೊನ್ನಲ್ ಸೆಕ್ರೆಟ್ರಿನೊ ಹೇಳು."

"...ಊರಲ್ಲಿರಲಿಲ್ಲವಲ್ಲ, ಅದ್ಕೆ ಕೇಳಿದೆ ಕಂಡ್ಯ."

"...ಂಗೊಳ್ಳಿ ರಾಯಣ್ಣ ಸಿನಿಮಾ ನೋಡಕ್ಕೆ ಹೋಗಿದ್ದೆ ..."

"...ಸಿನುಮ ನೋಡಕ್ಕೆ ಹೋಯ್ತಿರಲಿಲ್ಲವಲ್ಲಾ ...ಗೊದೆ?"

"...ಕುರುಬರ ಪುಡಸಾಮಿ ಕರಕಂಡೋಗಿದ್ದ ಜ್ವತೆ ಯಾರು ...ಟಾ ನೋಡಿಕೊಂಡು ಬರನ ಅಂತ."

"...ಕುಡಿಸಿಗಂಡು ಕರಕಂಡೋಗಿದ್ದನೊ."

"...ಕುಡುದು ಸಿನುಮ ನೋಡದಿಲ್ಲ ಕಣಕ್ಕ. ನೋಡಿ ... ಕುಡುದು ಡಿಸ್‌ಕಸ್ ಮಾಡಬೇಕು. ಆಗ ...ದಲ್ಲಿ ಏನೇನು ಮಿಸ್ಸಿಕವೆ ಅಂತ ಗೊತ್ತಾಯ್ತದೆ."

"...ಗೊತ್ತಾದ ಮ್ಯಾಲೆ ಏನು ಮಾಡಂಗಿದ್ದಿ ನೀನು."

"...ಏನೂ ಮಾಡಂಗಿಲ್ಲ ಕಣಕ್ಕ. ಅಂಗೆ ತಗಿಬೇಕಿತ್ತು ...ರಬೇಕಿತ್ತು ಡೈಲಾಗ್ ಇನ್ನೂ ಇರಬೇಕಿತ್ತು ಅಂತ ...ನೋರು ಬರೀತಾರಲ್ಲಾ ಅಂಗೆ ನಾವೂ ಮಾತಾಡಿ ...ನಾಯ್ತಿವಿ."

"...ಸಂಗೊಳ್ಳಿ ರಾಯಣ್ಣನ ಸಿನುಮ ಈಗ ಬತ್ತೆ?" ... ಕಾಳಮಾವ.

"...ರಾಯಣ್ಣ ನಿನಿಗೆ ಗೊತ್ತೆ ದೊಡಪ್ಪ?"

"ಅವುನ ಮ್ಯಾಲೆ ಲಾವಣಿನೆ ಅದೆಕಂಡ್ಯ. ಕಿತ್ತೂರ ...ಮ್ಮನ್ನ ಇಂಗ್ರೀಸ್‌ನೋರು ಹಿಡದು ಜೈಲಿಗಾಕಿದ್ರು, ...ಡದು ನ್ಯಾಣಾಕಿದ್ರು."

"...ನೋಡು, ನಮ್ಮ ದೊಡಪ್ಪ ಯರಡೇ ಮಾತಲ್ಲಿ ...ಹೇಳಿದ ಅತ್ತಗೆ. ಆದ್ರೆ ಒಂದೇನು ಅಂದ್ರೆ, ಚೆನ್ನಮ್ಮನ ...ಗಿ ಗುಂಡಿಗೆ ಸಗಣಿ ಹಾಕಿದೋರು ನಮ್ಮೊರೆಯಾ. ...ಣ್ಣನ್ನ ಹಿಡುದುಕೊಟ್ಟೋರು ನಮ್ಮೊರೆಯಾ ದೊಡಪ್ಪ"

"ಅದೇನೊ ನಿಜಬುಡು. ನಮಿಗೆ ಯಾವತ್ತಾರ ತೊಂದ್ರೆ ... ಅದು ನಮ್ಮೊರಿಂದ್ಲೆ ವರತೂ ಬ್ಯಾರೆಯೋರಿಂದ ...ದ ತೊಂದ್ರೆನೂ ಇಲ್ಲ ಕಂಡ್ಯ."

"ಎಜ್ಜಾಟ್ಟಿ ಕರಟ್ ದೊಡ್ಡಪ್ಪ, ಚೆನ್ನಮ್ಮನ ಫಿರಂಗಿಗೆ ... ಹಾಕಿದೋರು, ರಾಯಣ್ಣನ್ನ ಹಿಡುದು ಕೊಟ್ಟೋರ ಅವತ್ತೇ ಮುಗೀತು ಅಂತ ಇಲ್ಲ, ಇವತ್ತು ದೇಸದ ... ಅಂಥೊರೆ ಆಗ್ಯವುರೆ. ದೂರಕ್ಕೆ ಬ್ಯಾಡ, ನಮ್ಮೂರಲ್ಲೇ ...ದು, ಎಷ್ಟು ಜನವುರೆ. ನಮ್ಮ ಹೋರಾಟ ಬಡತನ ...ನ ಇನ್ನು ಯಾತ್ಯಾತರ ಮ್ಯಾಲೊ ನ್ಯಡಿಬೇಕಾಗಿತ್ತು, ... ನಾವು ಇವತ್ತಿನವರಿಗೂ ಹೋರಾಡ್ತಯಿರೋದು ...ರ ವಿರುದ್ಧನೆ ಅಂದ್ರೆ ಏನರ್ಥ."

"...ಕ್ಕಟ್ಟ ಜನ ಯಲ್ಲಾ ಕಾಲ್ದಲ್ಲೂ ಇದ್ರು ಕಂಡ್ಯ."

"ಇದ್ರು, ಸರಿ ದೊಡಪ್ಪ, ಪರಸಂಟೇಜು ನ್ಯೆಸ್ ...ಗ್ಯದಲ್ಲ ಹೇಳು."

"ಸಿನುಮ ಚೆನ್ನಾಗಿತ್ತೇನ್ಲ?" ಎಂದಳು ಜುಮ್ಮಿ.

"ಪರವಾಗಿಲ್ಲ ಅಂದ್ರೆ ಸುರದಿರೊ ದುಡ್ಡಿಗೆ ಮೋಸಯಿಲ್ಲ, ಆದ್ರು ಯಾಕೊ ಒಂಥರಾ ಸಿನುಮ ನನಿಗಿಡಸಲಿಲ್ಲ ಕಣಕ್ಕ."

"ದರ್ಶನ್ ಚೆನ್ನಾಗಿ ಮಾಡಿದ್ದನೆ?"

"ಶಕ್ತಿ ಮೀರಿ ಮಾಡ್ಯವುನೆ. ಆದ್ರೆ ಅವುನು ಯಂಗೆ ಮಾತಾಡಬೇಕಿತ್ತನ್ವ ಅಂದ್ರೆ, ಕಲಕಪ್ಪ ಮೇಷ್ಟ್ರ ಮಾತಾಡತಿದ್ರು ನೋಡು, ಥೇಟ್ ಅದೇ ತರ ಮಾತಾಡಬೇಕಿತ್ತು, ಆದ್ರೆ ದರ್ಶನ್‌ಗೆ ಧಾರವಾಡದ ಕಡೆ ಮಾತಾಡಕ್ಕೆ ಬಂದಿಲ್ಲ, ನಿಜವಾದ ಕಲಾವಿದ ನಮ್ಮ ರಾಜ್ಯದ ಯಾವುದೇ ಭಾಷೆನ ಮಾತಾಡ್ತನೆ. ಆದ್ರೆ ಇವುನಿಗೆ ಆ ಕೃಪಾಸಿಟಿ ಇಲ್ಲ, ಒಂದು ಸತಿ ಇತ್ತಗೆ ಮಾತಾಡ್ತನೆ. ಇನ್ನೊಂದು ಸತಿ ಅತ್ತಗೆ ಮಾತಾಡ್ತನೆ. ಅವುನ ದನಿ ಬೇರೆ ಅವುರಪ್ಪನ ದನಿ. ಅದ್ಕೆ ನನಿಗೆ ಇರಿಟೇಟಾಯ್ತು, ಆದ್ರು ಅವುನ್ನ ಗಲ್ಲಿಗಾಕುವಾಗ ನಮ್ಮ ಪುಡಸಾಮಿ ಅಳತಿದ್ದ. ನನಿಗೆ ಅಳು ಬರಲಿಲ್ಲ. ದುಃಖನೂ ಆಗಲಿಲ್ಲ."



"ಯಾಕೆ ಚೆನ್ನಾಗಿ ತಗದಿಲವೇನೊ?" ಎಂದ ಉಗ್ರಿ.

"ಏನು ಗೊತ್ತೇನೋ ಉಗ್ರಿ, ಗಲ್ಲಿಗೆ ಆಡ್ರಾದಾಗ ನೇರ ಅಲ್ಲಿಗೋಗಬೇಕು. ರಾಯಣ್ಣ ಧೀರೋದಾತ್ತವಾಗಿ ಗಲ್ಲುಗಂಬ ಏರುಬೇಕು. ಅದು ಬುಟ್ಟು ಪುನಃ ಸಿನುಮದ ಮದ್ಲಿಂದ ಕಡಿಗಂಟ ದೃಶ್ಯ ತೋರಿದ್ರೆ ಮನಸು ಡೈವರ್ಟಾಯ್ತದೆ. ಈ ಸಿನುಮಾ ತಗದೋನು ಶ್ರೀಕೃಷ್ಣದೇವರಾಯ ಸಿನುಮನ ಕನಿಷ್ಠ ಐದಾರು ಸತಿ ನೋಡಬೇಕಾಗಿತ್ತು ಕಣೊ. ಮಹಾಮಂತ್ರಿ ತಿಮ್ಮರಸನ ಕಣ್ಣು ಕೀಳೊ ದೃಶ್ಯ ಯಂಗೆ ಬಂದದೊ."

"ಅಲ್ಲಾ, ತೂಗುದೀಪನ ಮಗನ್ನ ಪಂತಲು, ರಾಜಕುಮಾರನ ಆಕ್ಟಿಂಗಿಗೆ ಓಲುಕೆ ಮಾಡ್ತಿಯಲ್ಲೊ, ಅವುರೆಲ್ಲಿ ಇವುನೆಲ್ಲಿ."

"ಹೋಲಿಕೆ ಮಾಡ್ತಯಿಲ್ಲ ಕಣೊ. ಯಾವಾಗ್ಲು ಐತಿಹಾಸಿಕ ಸಿನಿಮಾದಲ್ಲಿ ಪಾರ್ಟು ಮಾಡ ಬೇಕಾದ್ರೆ, ಡೈಲಾಗು, ಬಾಡಿ ಲಾಂಗ್ವೇಜು ಒಂದಾಗಬೇಕು. ಆಕ್ಟಿಂಗಲಿ ಕಿಡಿ ಇರಬೇಕು."

"ಸುದೀಪ್ ಮಾಡಿದ್ರೆ ಚನ್ನಾಗಿ ಮಾಡೋನೇನ್ಲ?" ಎಂದಳು ಜುಮ್ಮಿ.

"ಅವನ ಮುಖ ಸುಟ್ಟಾಯ್ತಿರಲಿಲ್ಲ ಕಣೆ" ಎಂದ ಉಗ್ರಿ.

"ಅವುನಿಗೆ ವಾಯ್ಸದೆ ಕಣೊ ಉಗ್ರಿ. ಒರಟತನನೂ ಕಾಣ್ತದೆ. ಆದ್ರು ಅವುನ ದನಿಯ ಸಿನಿಮಾದಲ್ಲಿ ಬಳಿಸಿಗಂಡವುರೆ. ಅಕಸ್ಮಾತ್ ಅವುನೇನಾರ ರಾಯಣ್ಣನ ಪಾರ್ಟು ಮಾಡಿದ್ರೆ ದರ್ಶನಗಿಂತ ಚನ್ನಾಗಿ ಮಾಡತಿದ್ದ."

"ಜಯಪ್ರದ ಯಂಗೆ ಮಾಡ್ಯವುಳ್ಳ?"

"ಅವುಳು ಸರೋಜಾದೇವಿಗಿಂತ ಜೋರಾಗಿ ಮಾಡ್ಯವುಳೆ. ಆದ್ರೆ ನಮ್ಮ ಸರೋಜಾ ದೇವಿ ಮುಂದಲ್ಲ ಕಣಕ್ಕ. ನಮ್ಮ ಸರೋಜಾ ದೇವಿ ಥೇಟ್ ಕಿತ್ತೂರು ಚನ್ನಮ್ಮನಂಗೆ ಕಾಣ್ತಳೆ. ಆದ್ರೆ ಜಯಪ್ರದ ಚೆನ್ನಮ್ಮನ ಪಾತ್ರ ಮಾಡಿದೋಳಂಗೆ ಕಾಣ್ತಳೆ. ಅಂದ್ರೆ ನಾಟಕದ ಆಕ್ಟ್ರಸ್ ತರ ಕಾಣ್ತಾಳೆ."

"ಯಾವುದ ಮೆಚ್ಚತ್ತಿಲ್ಲ ನೀನು."

"ಚನ್ನಾಗಿರದ್ನಲ್ಲ ಮೆಚ್ಚಗತಿನಿ ಕಣಕ್ಕ. ಯಾವುದೇ ಸಿನುಮಾ ನೋಡಿದ್ರೂ ನಾವು ಡೈರಕ್ಟರಿಗೆ ಹೆಚ್ಚಿಗೆ ಸಲಹೆ ಕೊಡೋತರ ಇರಬಾರ್ದು. ಅದೇತರ ಆಕ್ಟರ್‌ಗಳ ಟೀಕೆ ಮಾಡೋತರ ಇರಬಾರ್ದು. ಪರ್ಗೆಜಾಂಪಲ್ ರಾಜಣ್ಣ ಬಾಲಣ್ಣ ನರಸಿಂರಾಜು, ಅಶ್ವತ್ಥ ಉದಯ ಕುಮಾರನ ಸಿನುಮಾ ನೋಡಿ ಬಂದ್ರೆ, ಅವುರಂಗಲ್ಲ ಹಿಂಗೆ ಮಾಡಬೇಕಾಗಿತ್ತು ಅನ್ನಸ್ತಾಯಿತ್ತೆ? ಅಣ್ಣಾವುರು ಮೇಕಪ್ ಮಾಡಿಕಂಡು ನಿಂತಗಂಡ್ರೆ ಯಂಗೆ ನಿಂತಗಳರು. ಆದೇ ಈ ದರ್ಶನ್‌ಗೆ ಯದೆ ಶಟಸಿ ನಿಂತಗಳಕ್ಕೆ ಬರದಿಲ್ಲ, ಇನ್ನ ರಾಯಣ್ಣನ್ನ ಯಂಗೆ ತೊರುಸ್ತನೆ."

"ನನ್ನನ್ನು ಕರಕಂಡೋಗಿ ತೋರುಸ್ಲ"

"ಈ ಉಗ್ರಿ ಕರಕಂಡೋಗಕ್ಕ. ಯಲ್ಲಾರು ನೋಡಬೇಕಾದ ಸಿನುಮ ಅದು. ಯಾಕಂದ್ರೆ, ಯಾರೊ ಪುಣ್ಯಾತ್ಮ ಮುವ್ವತ್ತು ಕೋಟಿ ಸುರುದವುನಂತೆ. ಅದರಲ್ಲೂ ಪಂತಲೂ ನಂತರ ರಾಜಾಸ್ತಾನದಲ್ಲಿ ಯುದ್ಧ ಮಾಡಿಸಿರೊ ಭೂಪ. ಸಾವುರಾರು ಜನ ಕರಕಂಡೋಗಿ ಅಲ್ಲಿ ಸಿನುಮಾ ತಗಿಯದು ಮಾತಾಡೋವಷ್ಟು ಸುಲಬಲ್ಲ."

"ಅಂಗಾದ್ರೆ ನೋಡ್ತಿವಿ ಬುಡೊ" ಎಂದ ಉಗ್ರಿ.

"ದೊಡಪ್ಪ ನೀನು ಯಾಕೆ ನೋಡಬಾರ್ದು?"

"ನಾನ್ಯಂಗೆ ನೋಡನ್ಲ, ಸಂಗೊಳ್ಳಿ ರಾಯಣ್ಣನ ಕತೆ ಗೊತ್ತು ನನಿಗೆ. ಗೊತ್ತಿರದ್ನೆ ಹೋಗಿ ಸಿನುಮ ನೋಡಕ್ಕಾದತೇ."

"ಪರ್‌ಪೆಕ್ಟ್ ಅನ್ಸರು ದೊಡಪ್ಪ, ಇತಿಹಾಸವ ಪುರಾಣವಾಗಿ ನೋಡದು ತುಂಬಾ ಕಷ್ಟ. ಯಾಕಂದ್ರೆ ರಾಯಣ್ಣನಿಗೆ ಯಾರೊ ಆಚಾರಿ ವಳ್ಳೆ ಕತ್ತಿ ಮಾಡಿ ಕೊಟ್ಟಿರತನೆ. ಎಷ್ಟು ಜನನಾದ್ರು ಸವುರಬವುದು ಅಂಥಾ ಕತ್ತಿ. ಆದ್ರೆ ಈ ಸಿನುಮದಲ್ಲಿ ದೇವಿ ಪ್ರತ್ಯಕ್ಷವಾಗಿ ಕತ್ತಿ ಕೊಡ್ತಳೆ. ನನಿಗೆ ಬರಬಾರ್ದ ನಗು ಬಂದಿತ್ತು."

"ನಗೊ ಅಂತದ್ದೇನಿತ್ಲ ಅಲ್ಲಿ?"


"ದೇವಿ ಪಾರ್ಟು ಮಾಡಿದ್ದೋಳು ಯಾರು ಗೊತ್ತೆ? ನಮ್ಮ ನಿತ್ಯಾನಂದನ ಪ್ರೆಂಡ್ ಮಾಳವಿಕ ಪ್ರತ್ಯಕ್ಷ ಆಗಿ ಕತ್ತಿಗೊಟ್ಟೋಳು. ಅದ ರಾಯಣ್ಣನ್ನ ಹಿಡಕೊಟ್ಟೊನು ತಗಂಡೋಡತ ಇರುವಾಗ ಹೋಗಿ ಕಿತ್ತಗಂಡು ತಿರಗ ರಾಯಣ್ಣನಿಗೇ ಕೊಡಕ್ಕೇನಾಗಿತ್ತೂ ಅನ್ನೊ ಪ್ರಶ್ನೆ ಬತ್ತದೆ."

"ನೋಡೋ ವಾಟಿಸ್ಸೆ, ಇವತ್ತಿನ ದಿವಸ ನಿನ್ನಂಥೋರು, ನನ್ನಂಥೋರು ಭಾಳ ಕಡಮೆ ಜನ. ದೇವಿ ಕತ್ತಿ ಕೊಟ್ಟಿದ್ದ ಒಪ್ಪಿಗಂಡು ಭಕ್ತಿಯಿಂದ ನೋಡೊ ಜನಗಳೆ ಜಾಸ್ತಿ ಸಿನುಮ ತಗಿಯೋನು, ದುಡ್ಡು ಸರಿಯೋನು ಅಂಥ ಪ್ರೇಕ್ಷಕರ ನೋಡಬೇಕಾಯ್ತದೆ."

"ನಾನು ಇಲ್ಲ ಅನ್ನಲಿಲ್ಲ ಕಣೊ ಉಗ್ರಿ. ನಮ್ಮ ದೇಶದ ಇತಿಹಾಸದೊಳಿಕೆ ಪುರಾಣ ಮಿಕ್ಸಾಗಿರೋದ್ರಿಂದ ಪುರೋಹಿತಶಾಹಿಗಳು ವಿಜೃಂಭುಸ್ತ ಅವೆ. ಅವುರ ವಿರುದ್ಧ ಹೋರಾಡಿದ್ರೆ ನಮ್ಮೊರೆ ನಮಗೆ ಗೂಸಾ ಕೊಡ್ತರೆ. ನಮ್ಮ ಜನರೆ ರಾಯಣ್ಣನ್ನ ಇಂಗ್ಲೀಸ್‌ನೋರಿಗೆ ಹಿಡುದುಕೊಟ್ರಲ್ಲ ಅಂಗೆ."

"ನಿಜ ಕಣೊ." ■

ದಡ್ಡರ ಸಂತೆ



ಭಾರತದ ಟಿವಿ ಚಾನಲ್‌ಗಳು ಲಕ್ಷಾಂತರ ನಷ್ಟ ಅನುಭವಿಸುತ್ತಿವೆ.


ಇದು ನಿಮಗೆ ವಿಚಿತ್ರ ಸುದ್ದಿಯಾಗಿ ಕೇಳಿಸಬಹುದು. ಎಲ್ಲ ದೇಶಗಳಲ್ಲಿ ಟಿವಿಯಂಥ ...ಚಾರ ಮಾಧ್ಯಮಗಳು, ಅನೇಕ ಖಾಸಗಿ ಸಂಸ್ಥೆಗಳು ಹಣ ಗಳಿಸುತ್ತಿವೆ. ಭಾರತದಲ್ಲಿ ...ಮಾತ್ರ ನಷ್ಟ ಅನುಭವಿಸುತ್ತವೆ. ಯಾಕೆಂದು ನೀವು ಊಹಿಸಬಹುದು.

ನೀವು ಅಮೆರಿಕಾವನ್ನು ಕೋತಿಗಳಂತೆ ಅನುಕರಿಸಿದರೆ ಹೀಗಾಗುತ್ತದೆ. ಅಲ್ಲಿ ಒಬ್ಬೊಬ್ಬ ...ದಿಗಾರನಿಗೆ, ಮಾತುಗಾರನಿಗೆ, ತಂತ್ರಜ್ಞನಿಗೆ ಲಕ್ಷಾಂತರ ವೇತನ ಕೊಟ್ಟು ...ಮಿಸಿಕೊಳ್ಳುತ್ತಾರೆ. ಅಲ್ಲಿಯ ವ್ಯಾಪಾರ ಅಪಾರ ದುಡ್ಡು ಗಳಿಸುವುದರಿಂದ ಟಿವಿಯಲ್ಲಿ ...ಹೀರಾತಿಗೆ ಎಷ್ಟು ಕೇಳಿದರೂ ಕೊಡುತ್ತಾರೆ. ಇಲ್ಲಿ ಕೈಗಾರಿಕೆ, ಕೃಷಿ, ಉದ್ಯಮ ...ವುದೂ ಇಲ್ಲದಿದ್ದಾಗ ಜಾಹೀರಾತು ಕೊಡುವವರು ಯಾರು? ಇರುವ ಬಡ ...ದ್ಯಮಗಳು ಎಷ್ಟು ಹಣ ಕೊಡಲು ಸಾಧ್ಯ?

ಮೂರು ವರ್ಷದ ಹಿಂದೆ ಒಂದೊಂದು ಕಂಪ್ಯೂಟರ್ ಕಂಪನಿಯ ನೌಕರನಿಗೆ ...ದು ಕೋಟಿ ಸಂಬಳ, ಸೋಪ್ ಫ್ಯಾಕ್ಟರಿಯ ಮಾರ್ಕೆಟಿಂಗ್ ಮ್ಯಾನೇಜರ್‌ಗೆ ...ರ್ಧಕೋಟಿ.... ಎಂದು ಓದಿದಾಗ ನಾನು ಆಶ್ಚರ್ಯದಿಂದ 'ಅಷ್ಟು ಹಣವನ್ನು ಎಲ್ಲಿಂದ ತರುತ್ತಾರೆ?' ಅಂದಿದ್ದೆ. ಕೇಳಿದವರು ನನ್ನ ಅಜ್ಞಾನಕ್ಕೆ ನಕ್ಕಿದ್ದರು.

'ದುಡಿಯದೆ ಖರ್ಚು ಮಾಡುವವನು ದಿವಾಳಿ ಏಳುತ್ತಾನೆ' ಎಂದು ನಂಬಿರುವ ನನ್ನ ಮಾತು ನಿಜವಾಗಿದೆ. ಅನೇಕ ಟಿವಿಗಳು, ಖಾಸಗಿ ಉದ್ಯಮಗಳು ಮುಚ್ಚಿಕೊಳ್ಳಲಿವೆ.

ಅಲ್ಲದೆ, ನೋಡಿ.... ಇಲ್ಲಿಯ ಖಾಸಗಿ ಉದ್ಯಮಗಳು ಸರ್ಕಾರಿ ಉದ್ಯಮಗಳಿಗಿಂತ ಕೆಟ್ಟದಾಗಿರುತ್ತವೆ. ಉದಯ ಟಿವಿಯವರು ಮೊನ್ನೆ ನನ್ನನ್ನು ಸಂದರ್ಶಿಸಿದರು; ಅದರಲ್ಲಿ ಯಾರು ಮಾತಾಡಿದ್ದೂ ಕೇಳಿಸುತ್ತಿರಲಿಲ್ಲ, ಅದೇ ಟಿವಿಯವರು ಒಂದು ಸುದ್ದಿ ಕೊಟ್ಟಾಗ ನಿಟ್ಟೂರು ಶ್ರೀನಿವಾಸರಾವ್ ಎನ್ನುವುದನ್ನು ನಿಟ್ಟೂರು ಶ್ರೀನಿವಾಸಮೂರ್ತಿ ಎಂದು ಹೇಳಿ ಎಂ.ಎಚ್. ಕೃಷ್ಣಯ್ಯನವರ ಮುಖ ತೋರಿಸಿದರು! ಈ ಅದ್ವಾನಕ್ಕೆ ಕಾರಣ–ಇಲ್ಲಿಯ ಖಾಸಗಿ ಟಿವಿಯನ್ನು ಅಜ್ಞತೆ, ಕಾಮನ್‌ಸೆನ್ಸ್ ಎರಡೂ ಇಲ್ಲದ ಪೆದ್ದರು ನಡೆಸುತ್ತಿರುವುದು.



• ಫೆಬ್ರುವರಿ 18, 1998

ಸಾವಿನ ಮನೆಯಲ್ಲಿ ವೈಚಾರಿಕತೆಗೆ ತಾವಿಲ್ಲ

ಹುಟ್ಟು ಆಕಸ್ಮಿಕ. ಸಾವು ನಿಶ್ಚಯ.

ವ್ಯಕ್ತಿ ಉಸಿರಾಡುತ್ತಿರುವವರೆವಿಗೂ ಅವನಿಗೊಂದು ಹೆಸರು ಇರುತ್ತೆ. ಅವನ ಭೌತಿಕ ಶರೀರಕ್ಕೆ ಒಂದು ಬೆಲೆ ಇರುತ್ತೆ. ಸಾವು ವ್ಯಕ್ತಿಯನ್ನು 'ಬಾಡಿ' ಮಾಡಿಬಿಡುತ್ತದೆ!

'ಬಾಡಿ ಬಂತಾ.'

'ಬಾಡಿ ಎಲ್ಲಿದೆಯಂತೆ.'

'ಬಾಡಿ ಯಾವಾಗ ತರುತ್ತಾರೆ.'

ಇಂತಹ ಮಾತುಗಳೇ ಕೇಳಿಬರುವುದು.

ಅರಸನಾಗಾದರೂ ಅಷ್ಟೆ. ಆಳಿಗಾದರೂ ಅಷ್ಟೆ.

ಸಾವು ತರುವ ಈ ಬದಲಾವಣೆಯೇ ವಿಸ್ಮಯ.

ವ್ಯಕ್ತಿಗೆ ಸಾವುಂಟು. ಆತನ ಚಿಂತನೆಗಳಿಗೆ ಸಾವಿಲ್ಲ ಎನ್ನುತ್ತಾರೆ. ಅಂದರೆ ವ್ಯಕ್ತಿತ್ವ ಅಂದರೆ ಅವನ ಭೌತಿಕ ಶರೀರ ಅಲ್ಲ; ಅವನ ಚಿಂತನೆಗಳು, ಸಿದ್ಧಾಂತಗಳು ಅಂದಾಯಿತು.

ಇದು ಎಷ್ಟು ನಿಜ?

ಸುನಿಲ್ ಗಂಗೋಪಾಧ್ಯಾಯ ಬಂಗಾಳಿ ಭಾಷೆಯ ಪ್ರಸಿದ್ಧ ಲೇಖಕರು. ಎಡಪಂಥೀಯ ಚಿಂತಕರು. ಹುಟ್ಟಾ ನಾಸ್ತಿಕರು. ತಾವು ನಂಬಿದ ಜೀವನ ಮೌಲ್ಯಗಳಿಗಾಗಿ, ಸಿದ್ಧಾಂತಗಳಿಗಾಗಿ ಇಡೀ ಜೀವಮಾನ ದುಡಿದವರು. ತಮ್ಮ ಕೃತಿಗಳಲ್ಲಿ ಅವನ್ನ ಪ್ರತಿಪಾದಿಸಿದವರು. ಸಾವು ಸಮಸ್ಯೆಯಾಗಬಾರದು ಎಂದು ನಂಬಿದವರು. ಸತ್ತ ನೋವಿಗಿಂತಲೂ ಶವಸಂಸ್ಕಾರವೇ ದೊಡ್ಡ ವಿವಾದವಾಗಿ ನ್ಯಾಯಾಲಯದ ಮೆಟ್ಟಿಲೂ ಹತ್ತಿದ್ದನ್ನು ಅವರು ಕಂಡಿರಬಹುದು. ಹೆಣದ ವಿಲೇವಾರಿಗೂ ನ್ಯಾಯಾಲಯದ ಮಧ್ಯಸ್ಥಿಕೆ ಅವರಿಗೆ ಜಿಗುಪ್ಸೆ ಮೂಡಿಸಿರಲೂಬಹುದು. ತನ್ನ ಶವಕ್ಕೂ ಇಂತಹ ದುರವಸ್ಥೆ ಬಾರದಿರಲಿ ಎಂದೋ-ಏನೋ ತಾನು ಸತ್ತನಂತರ ದೇಹವನ್ನು ಹೇಗೆ ವಿಲೇವಾರಿ ಮಾಡಬೇಕು ಎಂಬುದರ ಬಗ್ಗೆ ವಿಲ್ ಮಾಡಿದರು. ಮರಣಾನಂತರ ದೇಹ ವ್ಯರ್ಥ ಆಗಬಾರದು, ಸಮುದಾಯದ ಒಳಿತಿಗೆ ಅದನ್ನು ಬಳಸಿಕೊಳ್ಳಬೇಕು ಎಂಬ ಉದಾತ್ತ ಆದರ್ಶ ಅದರಲ್ಲಿ ಬಿಂಬಿತ ಆಗಿತ್ತು.

ಇತ್ತೀಚೆಗೆ ಗಂಗೋಪಾಧ್ಯಾಯರು ಮರಣ ಹೊಂದಿದರು.

ಅವರ ಮಗ ವಿದೇಶದಲ್ಲಿ ಉದ್ಯೋಗದಲ್ಲಿದ್ದ ತಂದೆಯ ಸಾವಿನ ಸುದ್ದಿ ತಿಳಿದು ಧಾವಿಸಿ ಬಂದ.

ಶವದ ವಿಲೇವಾರಿ ಹೇಗೆ?

ಹೇಳಲು ಅಪ್ಪ ಇಲ್ಲ. ವಿಲ್ ಇತ್ತು. ಅದನ್ನು ತೋರಿಸಿದರು.

ಅಪ್ಪ ನಾಸ್ತಿಕರು. ಸಮುದಾಯದ ಒಳಿತೇ ತನಗೆ ಮುಖ್ಯ ಎಂದು ನಂಬಿದ್ದರು. ಯಾವುದಾದರೂ ಆಸ್ಪತ್ರೆಗೆ ಅದನ್ನ ದಾನ ಮಾಡಲು ಸೂಚಿಸಿದ್ದರು.

ಆದರೆ ಮಗ?

ಸಂಪ್ರದಾಯವಾದಿ. ವಿಲ್ ರೀತಿ ನಡೆದುಕೊಂಡರೆ ಅಪ್ಪನಿಗೆ ದೊರಕದು ಮುಕ್ತಿ. ರೌರವ ನರಕ ಪ್ರಾಪ್ತಿ ಅದಕ್ಕೆ ಅವಕಾಶ ನೀಡಬೇಕೆ?

ಇದು ಅವನ ಚಿಂತನೆ.

ಸಂಪ್ರದಾಯಕ್ಕೆ ಶರಣಾದ ಮಗ. ಸಂಪ್ರದಾಯ ರೀತಿ ಶವಸಂಸ್ಕಾರ ಮಾಡಿ ಮುಗಿಸಿದ.

ದೀಪದ ಕೆಳಗೇ ಕತ್ತಲೆ?



ಹಾಗೆ ಹೇಳಲು ಸ್ವಲ್ಪ ಹಿಂಜರಿಕೆ.


ಆಸ್ಪತ್ರೆಗಳಿಗೆ ಶವಗಳು ದಾನವಾಗಿ ಬರುತ್ತವೆ. ಅವರಿಗೆ ಅವು ಶವ ಅಷ್ಟೆ. ನಿಕೃಷ್ಟವಾಗಿ ಅವನ್ನ ಕಾಣುತ್ತಾರೆ. ಯಾವುದೋ ಮೂಲೆಯಲ್ಲೋ ಕೊಂಪೆಯಲ್ಲೋ ಬಿಸಾಡಿರುತ್ತಾರೆ. ಸಮೀಪದ ಬಂಧುಗಳಿಗೆ ಹಾಗಲ್ಲ, ಅಪ್ಪ ಅಮ್ಮ, ಅಣ್ಣ, ತಂಗಿ, ಮಗಳು ಇಂತಹದ್ದು ಏನೋ ಆಗಿರುತ್ತಾರೆ. ಅವರಿಗೆ ಆಸ್ಪತ್ರೆಯವರು ತಮ್ಮ ಬಂಧುಗಳ ದೇಹವನ್ನು ಕಾಣುವ ರೀತಿಯೇ ಭಯಾನಕವಾಗಿರುತ್ತದೆ; ಕರುಳು ಕಿತ್ತು ಬರುವಂತಹ ಸಂಕಟವಾಗುತ್ತದೆ. ಇಂತಹವುಗಳಿಗೆ ಸುನಿಲ್ ಗಂಗೋಪಾಧ್ಯಾಯರ ಮಗ ಪ್ರತ್ಯಕ್ಷದರ್ಶಿಯಾಗಿದ್ದರೂ ಇರಬಹುದು. ಅದಕ್ಕಾಗಿ ತಂದೆಯ ದೇಹವನ್ನು ಆಸ್ಪತ್ರೆಗೆ ನೀಡಲು ನಿರಾಕರಿಸಿರಬಹುದು. ಇದು ಹೇಗಾದರೂ ಇರಲಿ. ಶವ ವಿಲೇವಾರಿ ಅವರ ಖಾಸಗಿ ವಿಷಯ. ಹೀಗೇ ಮಾಡಬೇಕು ಎಂದು ನಿರ್ಬಂಧಿಸುವುದು ಯಾರಿಗೂ ಸಲ್ಲದು. ಆದರೆ ತಮ್ಮ ಜೀವಮಾನವಿಡೀ ಯಾವ ಮೌಲ್ಯಗಳಿಗಾಗಿ ಅವರು ಬದುಕಿದ್ದರೋ ಅವು ಏನಾದವು? ಅವರ ಜೊತೆಯಲ್ಲೇ ಸುಟ್ಟು ಬೂದಿ ಆದವೆ?

******

ದಸಂಸ ನಾರಾಯಣ ಎಂದೇ ಅವರು ಪರಿಚಿತರು. ಮಂಡ್ಯ ಜಿಲ್ಲೆಯಲ್ಲಿನ ದಸಂಸ ಚರಿತ್ರೆ ಎಂದರೆ ಅವರ ಜೀವನಚಿತ್ರವೇ ಆಗಿದೆ ಎಂದರೆ ಅತಿಶಯ ಅಲ್ಲ. ಅಸ್ಪೃಶ್ಯತೆಯ ನೋವು ಉಂಡೂ ಸಂತನಂತೆ ಬದುಕಿದವರು. ಶೋಷಕ, ಶೋಷಿತರಿಬ್ಬರಿಗೂ ತಿಳಿವಳಿಕೆ ನೀಡಿದವರು. ಅನ್ಯಾಯದ ವಿರುದ್ಧ ದನಿ ಎತ್ತುವಂತೆ ಯುವಜನತೆಯನ್ನು ಪ್ರೇರೇಪಿಸಿದವರು. ಅವರು ದಾರಿ ತಪ್ಪಿದಾಗ ಬುದ್ಧಿ ಹೇಳಿದವರು. ತಿದ್ದುಕೊಳ್ಳದಾಗ ಸಂಕಟ ಅನುಭವಿಸಿದವರು. ಸಂಪ್ರದಾಯದ ಹೆಸರಿನಲ್ಲಿ ಮುಗ್ಧ ಜನರನ್ನು ಮೌಢ್ಯದ ಕಾರ್ಗತ್ತಲಿಗೆ ತಳ್ಳುತ್ತಿದ್ದುದನ್ನು ಕಂಡು ಕೊರಗಿದವರು. ಇಂತಹ ಮೌಢ್ಯವನ್ನು ಧಿಕ್ಕರಿಸಿ ಹೊರಬರುವತನಕ ಮುಕ್ತಿ ಇಲ್ಲ ಎಂದು ಸಾರಿದವರು. ಇದನ್ನೆಲ್ಲ ಸಾಧಿಸಲು ಜನಮುಖಿಯಾಗಬೇಕಾಗಿದ್ದ ನಾಯಕರು ವಿಧಾನಸೌಧ ಮುಖಿಯಾದದ್ದನ್ನು ಕಂಡು ನೊಂದವರು. ಹೀಗೆ ದಸಂಸದ ತಿರುಳೇ ಆಗಿದ್ದ ನಾರಾಯಣ ಇತ್ತೀಚೆಗೆ ಮರಣ ಹೊಂದಿದರು.

ಮಂಡ್ಯ ಜಿಲ್ಲೆಯ ಶೂದ್ರರಲ್ಲಿ ಒಂದು ಅನಿಷ್ಟ ಪದ್ಧತಿ ಇದೆ. ಅದು ಸಾವಿನ ಮನೆಯಲ್ಲಿ ಹೊಸ ಬಟ್ಟೆ ತೊಡಿಸುವುದು. ಹೊಸ ಬಟ್ಟೆ ತೊಡುವುದು ಸಡಗರದ,

ಅಣಕ



• ಎಚ್.ಎಲ್.ಕೇಶವಮೂರ್ತಿ


ಸಂಭ್ರಮದ ಸಂಗತಿ ಎಂಬುದು ನಿಜ. ಮನೆ, ಮ... ತುಂಬ ನೋವೇ ಮಡುಗಟ್ಟಿರುವಾಗ ಇಂತಹ ಒ... ಕ್ರಿಯೆ ವಿಷಾದ ಮೂಡಿಸುತ್ತದೆ. ಆದರೂ ಜಿಲ್ಲೆಯ... ಈ ಕ್ರೂರ ಪದ್ಧತಿ ಇನ್ನೂ ಜೀವಂತ ಆಗಿದೆ. ಯಾರಾದ... ಮರಣ ಹೊಂದಿದಾಗ ಅವರ ಸಮೀಪ ಬಂಧುಗ... ಹೊಸ ಬಟ್ಟೆ ತರಲೇಬೇಕು. ಯಜಮಾನ ತೀರಿಕೊಂಡ... ಆತನ ಹೆಂಡತಿಯ ತವರುಮನೆಯವರಿಗೆ ಹೊಸ ಬ... ತರುವ ಸರದಿ. ಗಂಡನ ಸಾವಿನಿಂದ ಅತೀವ ನೋವಿನಿ... ನರಳುತ್ತಿರುವ ಹೆಂಡತಿ ಶವದ ಮುಂದೆ ಕುಳಿ... ದುಃಖಿಸುತ್ತಿರುತ್ತಾಳೆ. ತೌವರುಮನೆಯವರು ಆಕೆಯ... ಬಲವಂತವಾಗಿಯಾದರೂ ಒಳಕ್ಕೆ ಕರೆದುಕೊಂಡು ಹೋ... ಹೊಸ ಸೀರೆಯಿಂದ ಅಲಂಕಾರ ಮಾಡುತ್ತಾರೆ. ಹೊ... ಸೀರೆ ಉಟ್ಟ ಸಂಭ್ರಮಕ್ಕಿಂತಲೂ ಆಕೆಗೆ ಸಂಕ... ಉಲ್ಬಣಗೊಳ್ಳುವಂತೆ ಮಾಡುವ ಸಂಭ್ರಮವೇ ಹೆಚ್ಚು. ಆದ... ಈ ಸಂಪ್ರದಾಯ ಮಾತ್ರ ಇನ್ನೂ ಜೀವಂತ ಆಗಿ... ಹೀಗೆ ಮಾಡದೇಹೋದಲ್ಲಿ ಸರೀಕರ ಕಣ್ಣಲ್ಲಿ ಹೀನಾ... ಆಗಿ ಹೊಸ ಬಟ್ಟೆ ತೊಡಿಸಲಿಲ್ಲ ಎಂಬ 'ಪಾಪಪ್ರ... ಸದಾ ಕಾಡುತ್ತಲೇ ಇರುತ್ತದೆ!

ನಾರಾಯಣ್ ಅವರ ಶವದ ಬಳಿ ಕುಳಿತಿದ್ದೆ. ಅವ... ಪತ್ನಿಯ ಬಳಿಗೆ ಸಂಬಂಧಿಕರೊಬ್ಬರು ಪ್ಲಾಸ್ಟಿಕ್ ಚೀ... ಹಿಡಿದುಕೊಂಡು ಬಂದರು. ನನಗೆ ಮುಂದೆ ಆಗು... ಆಘಾತ ಅರಿವು ಆಯಿತು. ಏನೋ ಒಂದು ರೀತಿ... ಸಂಕಟ ಆಯಿತು. ಪಕ್ಕದಲ್ಲೇ ನಾರಾಯಣ್ ಅವ... ಆತ್ಮೀಯರು ಕುಳಿತಿದ್ದರು. ಅವರಿಗೆ ಮಾತ್ರ ಕೇಳಿಸುವ... 'ನಾರಾಯಣ್ ಅವರು ತಮ್ಮ ಜೀವನಪರ್ಯಂತ ಇಂತ... ಮೌಢ್ಯಗಳ ವಿರುದ್ಧ ಹೋರಾಡಿದವರು. ಹೊಸ ಸೀ... ಉಡಿಸುವುದನ್ನ ಹೇಗಾದರೂ ನಿಲ್ಲಿಸಿ' ಎಂದೆ. ಅವ... 'ಹ್ಯಾಗೆ ನಿಲ್ಲಿಸೋದು ಸಾರ್. ಈಗ ಏನು ಹೇಳಿದರ... ಕೇಳುವ ಸ್ಥಿತಿಯಲ್ಲಿರಲ್ಲ' ಅಂದರು.

ಅವರ ಮಾತು ನಿಜ ಅನ್ನಿಸಿತು. ವಿವೇಕ ಹೇಳ... ಹೋದರೆ ಪ್ರತಿಭಟನೆ ಎದುರಿಸಬೇಕಾಗುತ್ತಿತ್ತು. ಶು... ಸಂದರ್ಭಗಳಲ್ಲಿ ಅಂಧನಂಬಿಕೆಗಳನ್ನು ವಿರೋಧಿಸಬಹುದ... ಅಲ್ಲಿಯೂ ವಿರೋಧ ಬರಬಹುದು. ಧೈರ್ಯವಾಗಿ ಅದ... ಎದುರಿಸಬಹುದು. ಆದರೆ ಸಾವಿನ ಮನೆಯಲ್ಲಿ ಅ... ದೊಡ್ಡ ರಾದ್ಧಾಂತ ಆಗುತ್ತದೆ. 'ಸಾವಿನ ಮನೆಯ... ವೈಚಾರಿಕತೆಗೆ ತಾವಿಲ್ಲ' ಎನ್ನುವುದು ದೃಢವಾಯಿತು.

ಎಲ್ಲಿ ಹೋದವು ಇವರೆಲ್ಲರ ಚಿಂತನೆಗಳು?

ಯೇಸುದಾಸರೂ ಆಪರೇಷನ್‌ಗೆ ಒಳಗಾಗಿದ್ದರು




ಮೊನ್ನೆ ಛಲವಾದಿಗಳ ಸಭೆಯಲ್ಲಿ ಆಪರೇಶನ್ ಕಮಲದ ಒಂದು ಉತ್ಪಾದನೆಯೊದ ಜವಳಿ ಸಚಿವ ವರ್ತೂರು ಪ್ರಕಾಶರು ತಾನು ಆಧುನಿಕ ಸಂಗೊಳ್ಳಿ ರಾಯಣ್ಣನ ಅವತಾರ ಎಂಬ ಭ್ರಮೆಗೆ ಬಿದ್ದು ಬಾಯಿಗೆ ಬಂದಂತೆ ಮಾತನಾಡಿದ್ದಾರೆ. ತಾನು ಅಹಿಂದ ವರ್ಗದ ನೇತಾರ ಎಂದೆನಿಸಿಕೊಳ್ಳಬೇಕೆಂಬ ಉಮೇದಿನಲ್ಲಿ 'ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರೆಲ್ಲ ಉಗ್ರಗಾಮಿಗಳಾಗಬೇಕು. ಅಷ್ಟೇ ಅಲ್ಲ, ಆತ್ಮಹತ್ಯೆಗೂ ಸಿದ್ಧರಿರಬೇಕು' ಎಂದು ವೀರಾವೇಶದ ಮಾತಾಡಿದ್ದಾರೆ. ತನಗೆ ಸಿಕ್ಕ ಜವಳಿ ಖಾತೆ ಕೆಲಸಕ್ಕೆ ಬಾರದ ಖಾತೆ, ತನ್ನನ್ನು ಯಾಮಾರಿಸಿ ಮೂಗಿಗೆ ತುಪ್ಪ ಸವರಿದ್ದಾರೆ ಎಂದು ಹಲುಬುವ ಈತ ತನ್ನ ಸ್ವಾರ್ಥಸಾಧನೆಗಾಗಿ ಅಹಿಂದ ವರ್ಗವನ್ನು ಎತ್ತಿ ಕಟ್ಟಲು ಅವತ್ತು ಹೊರಟಿದ್ದು ಹಾಸ್ಯಾಸ್ಪದವಾಗಿತ್ತು. ದುಡ್ಡು ಮತ್ತು ಅಧಿಕಾರ ಸಿಗುತ್ತದೆಂದು ಜೊಲ್ಲು ಸುರಿಸುತ್ತಾ ಚೆಡ್ಡಿಗಳ ಪಾದ ನೆಕ್ಕಲು ಹೊರಟಾಗ ನೆನಪಾಗದ ಅಹಿಂದ ವರ್ಗ ಈಗ ಈತನಿಗೆ ನೆನಪಾಗುತ್ತಿದೆಯಂತೆ. ಅಹಿಂದ ವರ್ಗದವರು ಮೊದಲು ಇಂತಹ ಮನೆಹಾಳ ಸಮಯಸಾಧಕರ ವಿರುದ್ಧವೇ ನಿಂತು ಬಡಿದಾಡಬೇಕಿದೆ.

'ಲಂಕೇಶ್' ವಾರಪತ್ರಿಕೆಯಲ್ಲಿ ಡಾ.ವಾಸು ಅವರು ತಮ್ಮ 'ಅಂಚಿನಿಂದ' ಕಾಲಮ್‌ನಲ್ಲಿ ಕೇವಲ ರಾಜಕಾರಣಿಗಳಷ್ಟೇ ಅಲ್ಲ, ಪತ್ರಕರ್ತರು, ಮಠಾಧಿಪತಿಗಳಂತಹ ಸಮಾಜದ ಗಟ್ಟಿಕೊಂಡಿಗಳೇ ಆಪರೇಷನ್ ಕಮಲದ ಬಲೆಗೆ ಬಿದ್ದದ್ದನ್ನು ಸವಿಸ್ತಾರವಾಗಿ ಬರೆದಿದ್ದಾರೆ. ಸಂಘಪರಿವಾರದ ಮಾಸ್ಟರ್ ಬ್ರೈನ್‌ಗಳು ಎಂಥಾ ಚಾಣಾಕ್ಷರೆಂದರೆ (ಚಾಣಕ್ಯನ ವಂಶಜರು ತಾನೆ?) ಇಂತಹ ಆಪರೇಷನನ್ನು ಬೆಣ್ಣೆಯಲ್ಲಿ ಕೂದಲನ್ನು ತೆಗೆಯುವಷ್ಟು ಸಲೀಸಾಗಿ ಮಾಡಿ ಮುಗಿಸುತ್ತಾರೆ. ಖೇದದ ವಿಷಯ ಯಾವುದೆಂದರೆ ಸಂಗೀತಪ್ರಿಯ ಭಾರತೀಯರ ಕಣ್ಮಣಿಯಾದ ಕೆ.ಜೆ.ಯೇಸುದಾಸರೂ ಇಂತವರಿಂದ ಆಪರೇಷನ್‌ಗೆ ಒಳಗಾದವರು ಎಂಬುದು. ಇದೇ ವರ್ಷದ ಜನವರಿ 11ರಂದು (ಪ್ರಪಂಚದ ಎಲ್ಲೇ ಮೂಲೆಯಲ್ಲಿದ್ದರೂ ಜನವರಿ ತಿಂಗಳಲ್ಲಿ ಕರಾವಳಿ ಜಿಲ್ಲೆಯಲ್ಲಿ ಯೇಸುದಾಸ್ ಕಾಣಿಸಿಕೊಳ್ಳುತ್ತಾರೆ. ಜನವರಿ ಎರಡನೇ ವಾರ ತಮ್ಮ ಹುಟ್ಟುಹಬ್ಬದಂದು ಕೊಲ್ಲೂರಿಗೆ ಬರುವುದು ಅವರ ವಾಡಿಕೆ) ಪುತ್ತೂರಿನ ಈಶ್ವರಮಂಗಲ ಎನ್ನುವಲ್ಲಿ ರಾಘವೇಶ್ವರ ಸ್ವಾಮಿ ಸ್ಥಾಪಿಸಿದ ಪ್ರತಿಷ್ಠಾನವೊಂದರಿಂದ ಕೊಡಮಾಡುವ ಪ್ರಶಸ್ತಿಯನ್ನು ಸ್ವೀಕರಿಸಿದ್ದು ಇದೇ ಯೇಸುದಾಸ್.

ಯೇಸುದಾಸ್ ಎಲ್ಲರಿಗೂ ಸೇರಿದವರು. ರಾಘವೇಶ್ವರ ಕೊಡಲಿ, ಉಸ್ಮಾನ್ ಸಾಹೇಬರೇ ಕೊಡಲಿ ಇದರಲ್ಲಿ ತಪ್ಪು ಹುಡುಕಬಾರದೆಂಬುದೇನೋ ಸರಿ. ಆದರೆ ಈ ಧರ್ಮಶ್ರೀ ಪ್ರಶಸ್ತಿಗೆ ಈತನಕ ಭಾಜನರಾದವರು ಯಾರೆಲ್ಲ ಎಂಬುದನ್ನು ಮಾತ್ರ ಇಲ್ಲಿ ಹೇಳುತ್ತೇನೆ: ಅಶೋಕ್ ಸಿಂಘಾಲ್, ಎಸ್.ಎಲ್.ಭೈರಪ್ಪ ಮತ್ತು ರಾಮಾ ಜೋಯಿಸ್. ಮುಂದಿನ ವರ್ಷ ಈ ಪ್ರಶಸ್ತಿಯನ್ನು ಮುರಳಿ ಮನೋಹರ ಜೋಷಿಗೆ ಕೊಡುವುದಾಗಿ ಘೋಷಿಸಲಾಗಿದೆ.

ಕ್ರಿಶ್ಚಿಯನ್ನರಾಗಿ ಹಿಂದೂಗಳ ದೇವತೆಯನ್ನು ಹಾಡಿಹೊಗಳಿದ್ದಕ್ಕಾಗಿ ಪ್ರಶಸ್ತಿ-ಬಹುಮಾನಗಳ ಮಟ್ಟವನ್ನೂ ಮೀರಿ ಬೆಳೆದಿರುವ ಯೇಸುದಾಸರನ್ನು ಪುತ್ತೂರಿನ ಹಳ್ಳಿಯೊಂದಕ್ಕೆ ಕರೆದು ಗೌರವಿಸಲಾಯಿತ... ಇವರನ್ನು ಅಂದು ಬಹುಮಾನಿಸಿ ಗೌರವಿಸಿ... ಪುರೋಹಿತಶಾಹಿಗಳೇ ಹಿಂದೊಮ್ಮೆ ಭಕ್ತರಾಗಿ ಬಂ... ಯೇಸುದಾಸರನ್ನು ದೇಗುಲದೊಳಗೆ ಬಿಡದೇ (ಇಂದಿಗ... ಅನುಮತಿ ದೊರಕಿಲ್ಲ) ಅವಮಾನಿಸಿದ್ದರಲ್ಲವೇ? ಆದ... ಯೇಸುದಾಸರನ್ನು ಹೊಗಳಿದ ಯಾರ ಭಾಷಣದಲ್ಲ... ತಪ್ಪಿಯೂ ಆ ಘಟನೆಯ ಕುರಿತು ವಿಷಾದದ ಮಾತುಗ... ಬರಲೇ ಇಲ್ಲ. ಅಂತೂ ಸಂಘಿಗಳು, ಸಿಂಘಾಲ್, ಭೈರ... ರಾಮಾಜೋಯಿಸರ ಸಾಲಿಗೆ ಬುದ್ಧಿವಂತಿಕೆಯಿಂದಲ... ಯೇಸುದಾಸರನ್ನೂ ಸೇರಿಸಿ ಒಂದೇ ಕಲ್ಲಿಗೆ ಹಲ... ಹಕ್ಕಿಗಳನ್ನು ಹೊಡೆದು ಅವತ್ತು ಬೀಗಿದ್ದರು.

-ಶಶಿ ಪುತ್ತೂರು, ದ.



ಇದು ವೈಚಾರಿಕತೆಯ ಅಧಃಪತನದ ಸುವರ್ಣಕಾಲ

ಕರ್ನಾಟಕದ ಪಾಲಿಗೆ ಹನ್ನೆರಡನೇ ಶತಮಾ... ವೈಚಾರಿಕ ಕ್ರಾಂತಿಯ ಸುವರ್ಣಕಾಲ ಎಂದು ಬಣ್ಣಿ... ವುದಿದೆ. ಅದಕ್ಕೆ ತದ್ವಿರುದ್ಧವಾಗಿ 2010ನೇ ದಶಕವನ... ವೈಚಾರಿಕತೆಯ ಅಧಃಪತನದ ಸುವರ್ಣಕಾಲ ಎಂದ... ಕರೆದರೆ ತಪ್ಪಾಗಲಾರದು. ಇಲ್ಲಿಯತನಕ ಚೂರುಪಾರ... ಹಡೆಯದ ಸ್ವಚ್ಛ ಕೈಗಳೂ ಸಹ ಇವತ್ತು ಕೆಸರ... ಮೆತ್ತಿಸಿಕೊಂಡು ಯಾರ್‍ಯಾರಿಗೋ ಆಶೀರ್ವದಿಸುತ್ತಿರ... ವುದನ್ನು ನೋಡಿದರೆ ಹಣವೆಂಬ ಅಫೀಮು ಅವರನ... ಹಿಂಡಿರುವ ಪರಿ ಅರ್ಥವಾಗುತ್ತದೆ.

ರಾಜಕೀಯ, ಆರ್ಥಿಕತೆ ಹಾಗು ಸಾಂಸ್ಕೃತಿಕ ಕ್ಷೇತ್ರದ... ಮತ್ತೆ ಜಾತಿಗಳು ಪುಟದೇಳುತ್ತಿವೆ. ಜನಸಾಮಾನ್... ಬದುಕುವ ಹಕ್ಕನ್ನೇ ಕಿತ್ತುಕೊಳ್ಳುತ್ತಿರುವ ಶ್ರಮುಗಳ... ಆಟಾಟೋಪ ಮುಂದುವರೆಸಿರುವಾಗ ಯಾ... ವೈಚಾರಿಕತೆಯ ಅಂಶಗಳು ಇಲ್ಲಿ ಉಳಿದಿರುತ್ತವೆ?

ಹೊಸ ಅಧ್ಯಾಯ ಬರೆದ ರಾಯಣ್ಣ



'ಸಂಗೊಳ್ಳಿ ರಾಯಣ್ಣ' ರಾಜ್ಯಾದ್ಯಂತ ಭರ್ಜರಿಯಾಗಿ ...ಸ್‌ಫುಲ್ ಪ್ರದರ್ಶನಗಳನ್ನು ಕಾಣುತ್ತಿದೆ. ಆ ಮೂಲಕ ...ತ ಚಿತ್ರರಂಗದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ...ಯುವತ್ತ ಈ ಚಿತ್ರ ಸಾಗುತ್ತಿದೆ. ಸುಮಾರು 25 ...ಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಚಿತ್ರ ...ರ್ನಾಟಕದಲ್ಲಿ ಒಂದು ದೊಡ್ಡ ಮಾರುಕಟ್ಟೆಯಿದೆ ಎಂಬುದನ್ನು ...ತೋರಿಸಿಕೊಟ್ಟಿದೆ.

...ರಾಯಣ್ಣನಾಗಿ ದರ್ಶನ್ ಅಭಿನಯವನ್ನು ಆತನ ಅಭಿಮಾನಿಗಳು ...ಗಳುತ್ತಿದ್ದಾರೆ. ಈ ಪಾತ್ರಕ್ಕೆ ದರ್ಶನ್ ಬಿಟ್ಟರೆ ಬೇರೆ ಯಾರೂ ಸೂಕ್ತರಲ್ಲ ...ಬ ಅವರೆಲ್ಲ ಹೇಳುತ್ತಿದ್ದಾರೆ. ಆದರೆ ವಾಸ್ತವವಾಗಿ ಈ ಚಿತ್ರದ ರಾಯಣ್ಣನ ...ತ್ರಕ್ಕೆ ಮೊದಲು ನಿರ್ಮಾಪಕ ಆನಂದ್ ಅಪ್ಪುಗೋಳ್ ಭೇಟಿಯಾಗಿದ್ದು ...ರ್ಜುನ್ ಸರ್ಜಾ ಅವರನ್ನು. ಆದರೆ ಯಾವಾಗ ಅರ್ಜುನ್ ಸರ್ಜಾ ...ರ ಕಾಲ್‌ಶೀಟ್ ಸಿಗಲಿಲ್ಲವೋ ಆಗ ಅವರು ದರ್ಶನ್‌ನನ್ನು ಭೇಟಿಯಾಗಿ ...ಸ್ ಮಾಡಿದರು. ಈ ಬಗ್ಗೆ ದರ್ಶನ್ ಅವರನ್ನು ಕೇಳಿದರೆ ಅವರು ...ದು ನನ್ನ ಪಾಲಿನ ಭಾಗ್ಯ ಎಂದಷ್ಟೇ ನಾನು ಹೇಳುತ್ತೇನೆ" ಎನ್ನುತ್ತಾರೆ.

...ಕ್ರಿಕೆಟ್‌ನಲ್ಲಿ ಒಬ್ಬ ಆಟಗಾರನ ಬದಲಿಗೆ ಕೊನೆಕ್ಷಣದಲ್ಲಿ ಮತ್ತೊಬ್ಬ ...ಟಗಾರ ಆಯ್ಕೆಯಾಗಿ ಆತ ಸೆಂಚುರಿ ಬಾರಿಸಿ ಮ್ಯಾನ್ ಆಫ್ ದಿ ...ಮ್ಯಾಚ್ ಆಗುತ್ತಾನೋ ಅದೇರೀತಿ ದರ್ಶನ್ ಈಗ ಮ್ಯಾನ್ ಆಫ್ ದಿ ...ಮ್ಯಾಚ್ ಪ್ರಶಸ್ತಿಯನ್ನು ಸಂಗೊಳ್ಳಿ ರಾಯಣ್ಣ ಚಿತ್ರದ ಮೂಲಕ ಗೆದ್ದಿದ್ದಾರೆ ...ನ್ನಬಹುದು.

...ಸಂಗೊಳ್ಳಿ ರಾಯಣ್ಣ ದೆಹಲಿಗೆ

ಇದೇ ಮೊದಲ ಬಾರಿಗೆ ಕನ್ನಡ ಚಿತ್ರವೊಂದನ್ನು ...ದೆಹಲಿಯಲ್ಲಿರುವ ಪ್ರಧಾನಮಂತ್ರಿ ಮತ್ತವರ ಮಂತ್ರಿಮಂಡಳ ಹಾಗೂ ...ಲೋಕಸಭಾ ಸದಸ್ಯರು ವೀಕ್ಷಿಸುವ ಸಾಧ್ಯತೆ ಬಗ್ಗೆ ಮಾತು ಕೇಳಿಬರುತ್ತಿದೆ. ...ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಚಿತ್ರದಲ್ಲಿ ಕಿತ್ತೂರು ಚೆನ್ನಮ್ಮ ...ಪಾತ್ರದಲ್ಲಿ ಅದ್ಭುತ ನಟನೆ ನೀಡಿರುವ, ರಾಜ್ಯಸಭಾ ಸದಸ್ಯೆ ಕೂಡ ...ಆಗಿರುವ ಜಯಪ್ರದಾ ವಿಶೇಷ ಆಸಕ್ತಿಯನ್ನು ವಹಿಸಿ ...ಪ್ರಧಾನಮಂತ್ರಿಯಾದಿಯಾಗಿ ಎಲ್ಲರಿಗೂ ಈ ಚಿತ್ರವನ್ನು ತೋರಿಸುವ ...ನಿರೀಕ್ಷೆಯನ್ನು ಹೊಂದಿದ್ದಾರೆ.

ಕನ್ನಡ ಚಿತ್ರರಂಗದ 70 ವರ್ಷಗಳ ಇತಿಹಾಸದಲ್ಲಿ ಈತನಕ ...ಕನ್ನಡ ಚಿತ್ರವೊಂದನ್ನು ಪ್ರಧಾನಮಂತ್ರಿ ವೀಕ್ಷಿಸಿದ ಉದಾಹರಣೆ ...ಇಲ್ಲ. ಈ ಕಾರಣಕ್ಕಾಗಿ ಈ ಬಗ್ಗೆ ವಿಶೇಷ ಮುತುವರ್ಜಿ ವಹಿಸಿರುವ ...ಜಯಪ್ರದಾರವರಿಗೆ ಅಭಿನಂದನೆಗಳನ್ನು ಸಲ್ಲಿಸಲೇಬೇಕು.

ಈ ಚಿತ್ರ ವೀಕ್ಷಿಸಿದ ನಂತರ ಲೋಕಸಭಾ ಸದಸ್ಯರಿಗೆ ...ಜಯಪ್ರದಾಳ ಬಗ್ಗೆ ಹೆಚ್ಚಿನ ಗೌರವ ಬರಬಹುದು. ಆದರೆ ...ಯ ಜೊತೆಜೊತೆಗೆ ಕನ್ನಡ ಚಿತ್ರದ ಹೆಸರು ಕೂಡ ದೆಹಲಿ ...ನಾಯಕರಿಗೆ ತಲುಪುವುದು ವಿಶೇಷವೇ ಹೌದು. ■

ನೀನಾಸಂನ ಮೊದಲ ಹೀರೋ


ನೀನಾಸಂ ಸತೀಶ್ ಎಂದೇ ತನ್ನ ಹೆಸರನ್ನು ಚಿತ್ರರಂಗದಲ್ಲಿ ಬಳಸುತ್ತಿರುವ ಕಲಾವಿದ ಸತೀಶ್ ಈಗ ಹೀರೋ ಆಗಿ ಬಡ್ತಿ ಪಡೆದಿದ್ದಾನೆ. ಚಿತ್ರದ ಹೆಸರು 'ದ್ಯಾವ್ರೆ'. ಈ ಚಿತ್ರದಲ್ಲಿ ಎಲ್ಲ ಹೀರೋಗಳಿಗಿರುವಂತೆ ನೀನಾಸಂ ಸತೀಶ್‌ಗೂ ಹಾಡು-ಕುಣಿತ-ಫೈಟ್ ಇರುತ್ತಂತೆ.

ಹಾಗೆ ನೋಡಿದರೆ ಈ ಹಿಂದೆ ಸತೀಶ್ 'ಲೂಸಿಯಾ' ಎಂಬ ಚಿತ್ರದಲ್ಲಿ ನಾಯಕನಟನಾಗಿ ಕಾಣಿಸಿಕೊಂಡಿದ್ದರು. ಆದರೆ ಆ ಪಾತ್ರ ಕಮರ್ಷಿಯಲ್ ಆಗಿ ಮೂಡಿಬಂದಿರಲಿಲ್ಲ. ಯೋಗರಾಜ್ ಭಟ್ ನಿರ್ದೇಶನದ 'ಡ್ರಾಮಾ' ಚಿತ್ರದಲ್ಲಿ ನೀನಾಸಂ ಸತೀಶ್ ಮೈಸೂರಿನ ಹುಡುಗ ಯಶ್ ಜೊತೆ ನಾಯಕ ನಟನಾಗಿ ಕಾಣಿಸಿಕೊಂಡಿದ್ದಾನೆ. ಬಹುಶಃ ಕನ್ನಡ ಚಿತ್ರರಂಗದಲ್ಲಿ ಒಬ್ಬ ಪೋಷಕನಟ ಇಷ್ಟು ಬೇಗ ಫುಲ್‌ಟೈಂ ಹೀರೋ ಆಗಿ ಕಾಣಿಸಿಕೊಳ್ಳುತ್ತಿರುವುದು ಇದೇ ಮೊದಲ ಬಾರಿ ಇರಬೇಕು.

ನೀನಾಸಂ ನಾಟಕ ಶಾಲೆಯಿಂದ ಈತನಕ ಅನೇಕ ಕಲಾವಿದರು ಕನ್ನಡ ಚಿತ್ರರಂಗಕ್ಕೆ ಬಂದಿದ್ದಾರೆ. ಅವರುಗಳಲ್ಲಿ ಅರುಣ್ ಸಾಗರ್, ರಂಗಾಯಣ ರಘು ಮತ್ತು ಮಂಡ್ಯ ರಮೇಶ್ ಪ್ರಮುಖರು. ಆದರೆ, ನಾಯಕನಟನಾಗಿ ನೀನಾಸಂಗೆ ಹೆಸರು ತಂದುಕೊಟ್ಟ ಕೀರ್ತಿ ಈಗ ಸತೀಶ್‌ಗೆ ಸಲ್ಲುತ್ತದೆ. ಅಂದಹಾಗೆ ಇದೇ ಸಂದರ್ಭದಲ್ಲಿ ನೀನಾಸಂನ ಅರುಣ್‌ಸಾಗರ್ ಕೂಡ ನಿರ್ದೇಶಕನಾಗಿ ಬಡ್ತಿ ಪಡೆಯುತ್ತಿರುವುದು ವಿಶೇಷವಾಗಿದೆ. ■

ಡಬ್ಬಲ್ ಡೆಕ್ಕರ್ ರಾಗಿಣಿ


ರಮ್ಯಾಳಿಗೆ ಸಮಾನವಾಗಿ ಬೆಳೆಯುತ್ತಿದ್ದಾಳೆ ಎಂದೇ ಖ್ಯಾತಿ ಪಡೆದಿರುವ ರಾಗಿಣಿ ಕಳೆದ ಎರಡು ವಾರಗಳಲ್ಲಿ ಏಳು ಕೆ.ಜಿ ಮೈತೂಕವನ್ನು ಇಳಿಸಿದ್ದಾರಂತೆ. ಆದರೂ ಆಕೆ ಇನ್ನೂ ಡಬ್ಬಲ್ ಡೆಕ್ಕರ್ ತರಹ ಕಾಣಿಸುತ್ತಾರೆ.



ಹಾಗೆ ನೋಡಿದರೆ ಕಳೆದ 10 ವರ್ಷಗಳಿಂದ ಎಂದೂ ಊದದೆ, ಸೊರಗದೆ ತನ್ನ ಮೈಮಾಟವನ್ನು ಉಳಿಸಿಕೊಂಡಿರುವ ರಮ್ಯಾ ಈ ವಿಷಯದಲ್ಲಿ ನಿಜಕ್ಕೂ ಉಳಿದ ನಾಯಕಿಯರಿಗೆ ಮಾದರಿಯಾಗಿದ್ದಾರೆಂದೇ ಹೇಳಬೇಕು. ಆರಂಭದಲ್ಲಿ ತೆಳ್ಳನೆ, ಉದ್ದಕ್ಕೆ ಬಳುಕುತ್ತ ಹಿಂದಿಯ ನಾಯಕಿಯರನ್ನು ಹೋಲುವ ಮೈಮಾಟವನ್ನು ಹೊಂದಿದ್ದ ರಾಗಿಣಿ ಇತ್ತೀಚೆಗೆ 'ರಾಗಿಣಿ ಐಪಿಎಸ್' ಚಿತ್ರದಲ್ಲಿ ನಟಿಸುವ ಹೊತ್ತಿಗೆ ಸಖತ್ ಆಗಿ ಊದಿಕೊಂಡಿದ್ದಳು. ಆ ಚಿತ್ರದಲ್ಲಿ ಆಕೆ ಪೊಲೀಸ್ ಉಡುಪಿನಲ್ಲಿರುವ ಫೋಟೋಗಳನ್ನು ನೋಡಿ "ಇದು ನಿಜವಾಗಿಯೂ ರಾಗಿಣಿಯೋ, ಮಾಲಾಶ್ರೀಯೋ?" ಎಂದು ತಮಾಷೆ ಮಾಡಿದ್ದವರೂ ಉಂಟು.

ಬಹುಶಃ ಇಂತಹ ತಮಾಷೆ ಮತ್ತು ವ್ಯಂಗ್ಯ ರಾಗಿಣಿಯ ಕಿವಿಗೆ ಬಿದ್ದಿರಬೇಕು. ಆ ಕಾರಣಕ್ಕೇ ಆಕೆ ತನ್ನ ಮೈಭಾರವನ್ನು ಇಳಿಸುವ ಬಗ್ಗೆ ಮುತುವರ್ಜಿ ನೀಡುತ್ತಿದ್ದಾಳೆ. ಸದ್ಯಕ್ಕೆ 'ಬಂಗಾರಿ' ಚಿತ್ರದಲ್ಲಿ ಲೂಸ್ ಮಾದ ಯೋಗಿ ಜೊತೆ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿರುವ ರಾಗಿಣಿ ಇನ್ನೂ ಸ್ಲಿಮ್ ಆಗುವ ಬಗ್ಗೆ ಭರವಸೆ ನೀಡಿದ್ದಾರೆ.

● ಶೆಣೈ



...ಕರ್ನಾಟಕದಲ್ಲಿ ವಿಚಿತ್ರವೆನ್ನುವಂತೆ ಆಮಿಷದ ...ರೇಷನ್‌ವೊಂದು ಎಲ್ಲ ವಲಯಗಳನ್ನೂ ನುಸುಳಿದೆ. ...ಆಮಿಷಕ್ಕೆ ಬಲಿಯಾದವರು ಅಂತಿಂಥವರಲ್ಲ. ಉನ್ನತ ...ಮಟ್ಟದ ಪದವಿಯಲ್ಲಿದ್ದವರೂ ಏನೇನೋ ಪಡೆದುಕೊಂಡು ...ಜನವಿರೋಧಿ ಕೆಲಸಗಳಿಗೆ ಸಾಥ್ ನೀಡುತ್ತಿರುವುದು ದುರಂತವೇ ಸರಿ.

ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದದ್ದೆ ರಾಜ್ಯದಲ್ಲಿನ ಜನರ ನೆಮ್ಮದಿಯನ್ನು ಮಾರಿಕೊಂಡು. ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಿದ್ದ ಹಲವರನ್ನೂ ಭ್ರಷ್ಟರನ್ನಾಗಿಸಿ ಅವರ ಪ್ರಶ್ನಿಸುವ ಹಕ್ಕನ್ನೇ ಕಿತ್ತುಕೊಂಡಿತು. ಹುಸಿ ಹೋರಾಟಗಾರರನ್ನು ಹೋಲ್‌ಸೇಲಾಗಿ ಕೊಂಡ ಸರ್ಕಾರ, ಕೆಲ ಮಾಧ್ಯಮ ಮಿತ್ರರಿಗೆ ಒಗ್ಗರಣೆ, ಮಿರ್ಚಿ ತಿನಿಸಿ ಬೆನ್ನು ಚಪ್ಪರಿಸಿ ರಾಜ್ಯವನ್ನು ಲೂಟಿ ಮಾಡಿತು. ಇನ್ನು ಢೋಂಗಿ ವಿರೋಧ ಪಕ್ಷಗಳಂತೂ ಕುಂಟುತ್ತಾ ಓಡುತ್ತಿವೆ. ಎಲ್ಲವನ್ನೂ ಕಂಡೂಕಾಣದಂತಿರುವ ಈ ಪಕ್ಷಗಳ ವರ್ತನೆ ನೋಡಿದರೆ ಆಡಳಿತ ಪಕ್ಷಕ್ಕಿಂತ ಇವೇ ಅಪಾಯಕಾರಿ ಅನಿಸುತ್ತದೆ.


ಯಾರ್‍ಯಾರಿಗೆ ಯಾವ ರೀತಿ ಆಪರೇಷನ್ ಮಾಡಿದರೆ ಸರಿಹೋಗುತ್ತಾರೆನ್ನುವುದನ್ನು ತಿಳಿದುಕೊಂಡಿರುವ ಬಿಜೆಪಿಗರು ಅಂತದ್ದೇ ಆಪರೇಷನ್‌ಗಳನ್ನು ಕಳೆದ ನಾಲ್ಕು ವರ್ಷಗಳಿಂದ ಮಾಡಿಕೊಂಡು ಬಂದಿದ್ದಾರೆ. ಇಂತಹ ಆಪರೇಷನ್‌ಗಳ ಮೂಲಕ ಗಿನ್ನಿಸ್ ದಾಖಲೆ ಸೃಷ್ಟಿಸಿರುವ ಬಿಜೆಪಿಗೆ ಜನರು ದೊಡ್ಡ ಆಪರೇಷನ್ ಮಾಡಲಿರುವುದಂತೂ ಸತ್ಯ. ಡಾ.ವಾಸು ಎಚ್.ವಿ., ನೀವು ತುಂಬಾ ಚೆನ್ನಾಗಿ ಬರೀತಿದ್ದೀರಿ ಮುಂದುವರೆಸಿ...

-ಬಸವರಾಜ ಹಳ್ಳಿ ಹಸಮಕಲ್



ದೇಶ ಭಕ್ಷ ಬಿಜೆಪಿಗಳ ನೈಜಮುಖ

ಅಂಬಾನಿಗಳ ರಿಲಯನ್ಸ್ ಉದ್ಯಮ ಬಿಜೆಪಿ ಇದ್ದ ಹಾಗೆ. ಬಿಜೆಪಿ ರಾಜಕೀಯ ಕ್ಷೇತ್ರದ ಅಂಬಾನಿ ಇದ್ದ ಹಾಗೆ. ರಾಜಕೀಯ ಅಂದರೆ ಬರೀ ಅಧಿಕಾರ ಅಂತ ಭಾವಿಸಿರುವ ಕಾಂಗ್ರೆಸ್ ತಪ್ಪು ಹೆಜ್ಜೆಗಳಿಂದ ಈ ಖೂಳರನ್ನು ಬೆಳೆಸುತ್ತಿದೆ. ಎಲ್ಲರ ನಡುವಿನ ಜಗಳದಲ್ಲಿ ತನಗೆ ದಕ್ಕುವ ಪಾಲಿಗೆ ಹೊಂಚು ಹಾಕಿರುವ ಕತ್ತೆ ಕಿರುಬ ಆರೆಸ್ಸೆಸ್. ಒಟ್ಟು ಭಾರತೀಯರಿಗೆ ಇವರೆಲ್ಲರಿಂದ ಬಿಡುಗಡೆ ಯಾವಾಗ?



ಇಲ್ಲೊಂದು ಚುಟುಕು:
ಗಡ್ಕರಿ ಗಡದ್ದಾಗಿ ಕೊಬ್ಬಿದ ನರಿ,
ಕಪ್ಪು ಹಣದ ಮಾದರಿ,
ಈತ ಬ್ರಾಹ್ಮಣನಾದ ಕಾರಣ ಎಲ್ಲಾ ಸರಿ,
ಇದೇ ದೇಶ ಭಕ್ಷ ಬಿಜೆಪಿಗಳ ನೈಜ ಮುಖಾರೀ...

-ರವಿಕುಮಾರ್, ಹಾಸನ

ಮುಖೇಶ್ ಅಂಬಾನಿಗೂ ಶಿಕ್ಷೆ ಆಗಲಿ

2012ರ ನವೆಂಬರ್ 14ರ ಕಂಡಹಾಗೆ ಅಂಕಣ ಸೂಪರ್ ಆಗಿ ಮೂಡಿಬಂದಿದೆ.

ಉದ್ಯಮ ಜಗತ್ತಿನ ಖೂಳರಾದ ಅಂಬಾನಿ-ಬಜಾಜ್- ಗೇಟ್ಸ್‌ನಂತಹ ತೆರಿಗೆ ಕಳ್ಳರು ಲೆಜ್ಜೆಗೆಟ್ಟು ರಜತ್ ಗುಪ್ತಾನ ಪರ ವಹಿಸುತ್ತಾರೆಂದರೆ ಅದಕ್ಕಿರುವ ಕಾರಣ "ನಮ್ಮಂತಹ ಬಲಿಯಾಧೀಶರಿಂದ ಹಣ ಕದಿಯದೆ ಬ್ಯಾಂಕುಗಳಲ್ಲಿ ಮತ್ತು ಶೇರು ಮಾರುಕಟ್ಟೆಯಲ್ಲಿ ಹಣ ಹೂಡಿದ್ದ ಅಮಾಯಕರಿಂದ ಕದ್ದಿದ್ದು" ಎಂದು ಜರಿದಿರುವುದು ಸರಿಯಾಗಿಯೇ ಇದೆ. ರಜತ್ ಗುಪ್ತಾ ಮತ್ತು ಮುಖೇಶ್ ಅಂಬಾನಿ ಇಬ್ಬರ ಫೋಟೋ ಅಕ್ಕಪಕ್ಕಕ್ಕಿಟ್ಟು ಇಬ್ಬರ ನಡುವೆ ಅಂಥಾ ವ್ಯತ್ಯಾಸವೇನಿಲ್ಲ, ಗುಪ್ತಾನಿಗೆ ಆದಂತೆ ಅಂಬಾನಿಗೆ ಜೈಲು ಶಿಕ್ಷೆ ಯಾವಾಗ ಎಂದು ಕೇಳಿದ್ದಿರಿ. ಆದರೆ ವಂಚಕರಿಗೆ ಶಿಕ್ಷೆ ಎಂಬುದು ಭಾರತದ ಪ್ರಜಾಪ್ರಭುತ್ವದಲ್ಲಿಲ್ಲ! ಆದರೂ ನಾನು ಆಶಾವಾದಿಯಾಗಿದ್ದು ಮುಂದೊಂದು ದಿನ ಇಂಥವರಿಗೆ ಶಿಕ್ಷೆ ಆಗುತ್ತದೆ ಎಂದು ನಂಬಿದ್ದೇನೆ.

- ಜಗನ್ನಾಥ ಎಸ್. ಚೇಂಗಟಾ, ಗುಲ್ಬರ್ಗಾ

ನಮ್ಮ ಹೆಮ್ಮೆಯ ಗೌರಿ ಲಂಕೇಶ್ ಪತ್ರಿಕೆಯಲ್ಲಿ ಕಳೆದ ಸಂಚಿಕೆಯಲ್ಲಿ ಹೊನ್ನಾವರ ಪಂಚಾಯತ್ ಅಧ್ಯಕ್ಷನ ಇಸ್ಪೀಟ್ ಅಡ್ಡೆ ಕುರಿತ ವರದಿ ವಸ್ತುನಿಷ್ಠವಾಗಿತ್ತು. ಧನ್ಯವಾದಗಳು.

ಆ ವರದಿಯು ನಮ್ಮ ಪಟ್ಟಣದ ಅಕ್ರಮ ದೊರೆಗಳ ನಿಜಬಣ್ಣವನ್ನು ಅನಾವರಣಗೊಳಿಸಿದೆ. ವರದಿಗಾರರ ಧೈರ್ಯ ಮೆಚ್ಚುವಂತಹದ್ದೇ. ದುಃಖದ ಸಂಗತಿಯೆಂದರೆ ನಿಮ್ಮ ಪತ್ರಿಕೆಯ ಸಾಕಷ್ಟು ಪ್ರತಿಗಳು ಇಲ್ಲಿನ ಜನರಿಗೆ ಸಿಗದೇ ಇದ್ದದ್ದು. ಆದರೂ ಪತ್ರಿಕೆಯ ಜೆರಾಕ್ಸ್ ಪ್ರತಿಗಳು ಕಡಲೆಪುರಿಯಂತೆ ಊರು ತುಂಬಾ ಹರಿದಾಡಿದವು!

- ಗಣಪತಿ ಕಾಮತ್, ಹೊನ್ನಾವರ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 21-11-2012 RNI No. KARKAN2005/14

ತಾರಾಳ ಹುಚ್ಚು ಯಾತ್ರೆ



ಚಲನಚಿತ್ರ ಅಕಾಡೆಮಿ ಅಧ್ಯಕ್ಷೆ ತಾರಾ 'ಬೆಳ್ಳಿಹೆಜ್ಜೆ' ಕಾರ್ಯಕ್ರಮವನ್ನು ಬೆಂಗಳೂರಿನಿಂದ ದೆಹಲಿಗೆ ವರ್ಗಾಯಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮುಂದಿನ ವಾರ ದೆಹಲಿಯಲ್ಲಿ ನಾಯಕ ನಟ ರಮೇಶ್ ಅರವಿಂದ್ ಅವರನ್ನು ಪರಿಚಯಿಸುವ 'ಬೆಳ್ಳಿಹೆಜ್ಜೆ' ಕಾರ್ಯಕ್ರಮ ನಡೆಯಲಿದೆ.

ವಾಸ್ತವವಾಗಿ ಅಮೆರಿಕದಲ್ಲಿ 'ಅಕ್ಕ' ಸಮ್ಮೇಳನ ನಡೆಯುವ ಸಂದರ್ಭದಲ್ಲಿ ಕ್ರೇಜಿಸ್ಟಾರ್ ರವಿಚಂದ್ರನ್ ಅವರ 'ಬೆಳ್ಳಿಹೆಜ್ಜೆ' ಕಾರ್ಯಕ್ರಮವನ್ನು ನಡೆಸಬೇಕೆಂದು ತಾರಾ ಪ್ಲಾನ್ ಮಾಡಿದ್ದರು. ಅಷ್ಟೇ ಅಲ್ಲ, ಸರ್ಕಾರಕ್ಕೆ ಈ ಬಗ್ಗೆ ಒಂದು ಉದ್ದನೆ ಮನವಿಪತ್ರವನ್ನೂ ಬರೆದಿದ್ದರು. ಆದರೆ ರಾಜ್ಯದಲ್ಲಿ ಬರ ಇದ್ದಿದ್ದರಿಂದ ತಾರಾರ ಈ ಅಮೆರಿಕ ಕನಸಿನ ಮೇಲೆ ಸರ್ಕಾರ ತಣ್ಣೀರೆರಚಿತ್ತು.

ಅಮೆರಿಕಕ್ಕೆ ಹೋಗದಿದ್ದರೇನಂತೆ, ದೆಹಲಿಗೆ ಹೋಗುತ್ತೇನೆ ಎಂದು ತಾರಾ ಪ್ಲಾನ್ ಮಾಡಿದರು. ಅದರಂತೆ ಇದೀಗ ರಮೇಶ್ ಅರವಿಂದ್ ಅವರ 'ಬೆಳ್ಳಿಹೆಜ್ಜೆ' ಕಾರ್ಯಕ್ರಮ ನವದೆಹಲಿಯಲ್ಲಿ ನಡೆಯಲಿದೆ.

ಈ ಕಾರ್ಯಕ್ರಮವನ್ನು ಪರ ರಾಜ್ಯದಲ್ಲಿ ನಡೆಸುವುದನ್ನು ಉದ್ಯಮದ ಒಂದು ವರ್ಗ ತೀವ್ರವಾಗಿ ವಿರೋಧಿಸುತ್ತಿದೆ. ಇದು ಸರ್ಕಾರದ ಖಜಾನೆಗೆ ತೂತು ಕೊರೆಯುವ ಹುನ್ನಾರವೇ ಹೊರತು ಇದರಲ್ಲಿ ಕ್ರಿಯಾಶೀಲತೆ ಎಂಬುದು ಏನೂ ಇಲ್ಲ ಎಂದು ಅವರು ಆರೋಪಿಸುತ್ತಿದ್ದಾರೆ. ಅಷ್ಟೇ ಅಲ್ಲ, ಇಂತಹ ಕಾರ್ಯಕ್ರಮಗಳನ್ನು ಜನರ ನಡುವೆ ಮುಖ್ಯವಾಗಿ ಅಭಿಮಾನಿಗಳ ನಡುವೆ ಮಾಡಿದರೆ ಅದಕ್ಕೆ ಹೆಚ್ಚು ಅರ್ಥವಿರುತ್ತದೆ ಎನ್ನುತ್ತಿದ್ದಾರೆ.

ಅದರ ಬದಲಾಗಿ ಕನ್ನಡ ಸಿನಿಮಾಗಳು ಪ್ರದರ್ಶಿಸದ ಊರುಗಳಲ್ಲಿ ಮತ್ತು ಕನ್ನಡ ಸಿನಿಮಾಗಳನ್ನು ನೋಡದ ಜನರ ಸಮ್ಮುಖದಲ್ಲಿ ಇಂತಹ ಕಾರ್ಯಕ್ರಮವನ್ನು ಮಾಡುವುದು ಯಾವ ಪುರುಷಾರ್ಥಕ್ಕೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಆದರೆ ತಾರಾ ಇಂತಹ ಯಾವುದೇ ಟೀಕೆಗಳನ್ನು ಲೆಕ್ಕಿಸದೆ ದೆಹಲಿಯಲ್ಲಿ 'ಬೆಳ್ಳಿಹೆಜ್ಜೆ' ಕಾರ್ಯಕ್ರಮವನ್ನು ನಡೆಸುವ ತಯಾರಿಯಲ್ಲಿ ಮುಳುಗಿದ್ದಾರೆ. ■

ಹಬ್ಬ ಬಂದರೂ ಸಿನಿಮಾಗಳಿಗೆ ಹಬ್ಬದೂಟ ಇ



ಸಾಮಾನ್ಯವಾಗಿ ಹಬ್ಬದ ಸಂದರ್ಭದಲ್ಲಿ ದೊಡ್ಡ ದೊಡ್ಡ ಸಿನಿಮಾಗಳನ್ನು ಬಿಡುಗಡೆ ಮಾಡುವ ಪದ್ಧತಿ ಇತರೆ ಭಾಷೆಗಳ ಸಿನಿಮಾ ಪ್ರಪಂಚಗಳಲ್ಲಿದೆ. ಇದಕ್ಕೆ ಮೊದಲನೆ ಕಾರಣ ಆ ಸಂದರ್ಭದಲ್ಲಿ ಜನರ ಬಳಿ – ಮುಖ್ಯವಾಗಿ ರೈತರ ಬಳಿ ಕಟಾವು ಆದನಂತರ – ಕೈತುಂಬ ಹಣ ಇರುವುದು. ಎರಡನೆ ಕಾರಣ ಶಾಲೆ ಮತ್ತು ಕಾಲೇಜುಗಳಿಗೆ ರಜೆ ಇರುವುದು. ಹೀಗಾಗಿ ಅಂತಹ ಸಂದರ್ಭದಲ್ಲಿ ದೊಡ್ಡ ಚಿತ್ರಗಳು ಬಿಡುಗಡೆಯಾದರೆ ಜನರು ತಮ್ಮ ಇಡೀ ಕುಟುಂಬದ ಜೊತೆ ಸಿನಿಮಾ ನೋಡುವ ಸಾಧ್ಯತೆ ಹೆಚ್ಚು.

ಆದರೆ ಕನ್ನಡ ಚಿತ್ರರಂಗದಲ್ಲಿ ಈ ರೀತಿ ಹಬ್ಬದ ಸಂದರ್ಭದಲ್ಲಿ ಚಿತ್ರ ರಿಲೀಸ್ ಮಾಡಬೇಕೆಂದು ಯಾರೂ ಪ್ಲಾನ್ ಮಾಡುವುದೇ ಇಲ್ಲ. ಉದಾಹರಣೆಗೆ ಬರುವ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮೂರು ಚಿತ್ರಗಳು ಬಿಡುಗಡೆಯಾಗುತ್ತಿದ್ದರೂ ಯಾವ ಚಿತ್ರದ ಮೇಲೂ ಅಂತಹ ದೊಡ್ಡ ನಿರೀಕ್ಷೆಯಿಲ್ಲ. ಪ್ರಜ್ವಲ್ ದೇವರಾಜ್ ನಟಿಸಿರುವ 'ಸೂಪರ್ ಶಾಸ್ತ್ರಿ', ಹೊಸಬರೇ ತುಂಬಿ ತುಳುಕಿರುವ ... ಮತ್ತು ಅನೇಕ ವರ್ಷಗಳ ನಂತರ ನಿರ್ದೇಶನ ಮಾಡಿರುವ ನಾಗಾ... ಅವರ 'ಕಂಸಾಳೆ ಕೈಸಾಳೆ' ಬಿಡುಗಡೆಯಾಗುತ್ತಿರುವ ಚಿತ್ರಗಳು. ಈ ಮೂರರಲ್ಲಿ ಒಂದೂ ತಾರಾಮೌಲ್ಯವಿರುವ ಚಿತ್ರವಿಲ್ಲ. ಅವುಗಳ ಮೇಕಿಂ... ಸಂದರ್ಭಡಲ್ಲಿ ಇದ್ಯಾವುದೂ ನಿರೀಕ್ಷೆಯನ್ನೂ ಹುಟ್ಟಿಸಿರಲಿಲ್ಲ.


ಇಂದು ಕನ್ನಡ ಚಿತ್ರರಂಗದ ನಿರ್ಮಾಪಕರು ತಮ್ಮ ಸಿನಿಮಾಗಳ ಬಿಡುಗ... ಪ್ಲಾನಿಂಗ್‌ನಲ್ಲಿ ಹೇಗೆ ಎಡವುತ್ತಾರೆ ಎಂಬುದಕ್ಕೆ ಒಂದು ಸಣ್ಣ ಉದಾಹರಣೆ.



ಪರುಲ್ ಯಾದವ್ 'ಬಚ್ಚನ್'

ಧೂಮಪಾನಕ್ಕೆ ಸುದೀಪ್ ಟಾಟಾ

ಇದು ನಿಜವೋ ಅಥವಾ ನಗಣ್ಯವಾದ ಸಂಗತಿಯೋ ಗೊತ್ತಿಲ್ಲ ಆದರೆ ಸಿನಿಮಾ ತಾರೆಯರು ಏನೇ ಮಾಡಿದರೂ ಈಗಿನ ದಿನಗಳಲ್ಲಿ ಅದು ಸುದ್ದಿ ಆಗುವುದರಿಂದ ಸುದೀಪ್ ಕುರಿತ ಈ ವಿಷಯವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.



ವಿಷಯ ಏನಂತಂದ್ರೆ ಇತ್ತೀಚೆಗೆ ಸುದೀಪ್ ಸಿಗರೇಟ್ ಸೇದುವುದನ್ನು ಬಿಟ್ಟಿದ್ದಾರೆ. ಖಂಡಿತವಾಗಿಯೂ ಈ ಸುದ್ದಿ ಓದಿ ಆತನ ಅಭಿಮಾನಿಗಳು ಕೂಡ ಸಿಗರೇಟ್ ಸೇದುವುದನ್ನು ನಿಲ್ಲಿಸಿದರೆ ಒಳ್ಳೆಯದು.

ಆರಂಭದಲ್ಲಿ ಸುದೀಪ್‌ರ ಸಿಗರೇಟ್ ಚಟ ಇತಿಮಿತಿಯಲ್ಲಿರುತ್ತಿತ್ತು, ಆದರೆ ಯಾವಾಗ ಅವರು ನಿರ್ದೇಶನಕ್ಕೆ ಕೈಹಾಕಿದರೋ ಆಗ ಅವರು ನಿರಂತರವಾಗಿ ಸಿಗರೇಟ್ ಸೇದಲಾರಂಭಿಸಿದರು. ಈ ಬಗ್ಗೆ ಸುದೀಪ್‌ರವರನ್ನು ಕೇಳಿದಾಗ ಅವರು "ದಯವಿಟ್ಟು ನಾನು ಸಿಗರೇಟ್ ಸೇದುವ ಬಗ್ಗೆ ಏನನ್ನೂ ಬರೆಯಬೇಡಿ. ಏಕೆಂದರೆ ನಾನು ಸಿಗರೇಟ್ ಸೇದುವುದು ನನ್ನ ತಂದೆಯವರಿಗೆ ಗೊತ್ತಿಲ್ಲ" ಎಂದು ಚಿಕ್ಕ ಮಕ್ಕಳಂತೆ ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದರು.

ಇತ್ತೀಚೆಗೆ ಸುದೀಪ್ ತನ್ನ ಅನೇಕ ಸ್ನೇಹಿತರ ಪಾಲಿಗೆ ದೊಡ್ಡಣ್ಣನಂತಾಗಿದ್ದಾರೆ. ಆತನ ಮಾತನ್ನು ಯುವನಾಯಕನಟರು ತಳ್ಳಿಹಾಕುವುದಿಲ್ಲ, ಉದಾಹರಣೆಗೆ ಚಿರಂಜೀವಿ ಸರ್ಜಾ ಪಾರ್ಟಿಗಳಲ್ಲಿ ಹೆಚ್ಚು ಹೊತ್ತು ಕಾಲ ಕಳೆಯದಂತೆ ಸುದೀಪ್ ಎಚ್ಚರ ವಹಿಸುತ್ತಾರೆ. ಹಾಗೆಯೇ ತನ್ನ ಗೆಳೆಯರ ಜೊತೆಗೆ ಮೋಟಾರ್ ಬೈಕಿನಲ್ಲಿ ಊರೂರು ಸುತ್ತುವಾಗ ಯಾರೂ ಸ್ಪೀಡಾಗಿ ಓಡಿಸದಂತೆ ನೋಡಿಕೊಳ್ಳುತ್ತಾರೆ. ಹೀಗೆ ತನ್ನ ಪಟಾಲಂ ಬಗ್ಗೆ ವಿಪರೀತ ಎಚ್ಚರಿಕೆ ತೆಗೆದುಕೊಳ್ಳುವ ಸುದೀಪ್‌ಗೆ ಸಿಗರೇಟ್ ಬಿಡಲು ಯಾರು ಸ್ಫೂರ್ತಿ ಎಂಬುದು ಮಾತ್ರ ಇನ್ನೂ ಗೊತ್ತಾಗಿಲ್ಲ. ■

ಓಡುತ್ತಿರುವ ಸ್ನೇಹಿತನ 'ಸ್ನೇಹಿತರು'

ಬಾಲನಟ ಸ್ನೇಹಿತ್ ಖ್ಯಾತ ನಿರ್ಮಾಪಕ ಸೌಂದರ್ಯ ಜಗದೀಶ್ ಅವರ ಸುಪುತ್ರ. ಸೌಂ... ಜಗದೀಶ್ ಆರಂಭದಲ್ಲಿ ಎರಡು ಅದ್ದೂರಿ ಚಿತ್ರಗಳನ್ನು ಮಾಡಿ ಉದ್ಯಮದಲ್ಲಿ ಒಳ್ಳೆಯ ನಿಮ... ಎಂದೆನಿಸಿಕೊಳ್ಳುವಷ್ಟರಲ್ಲೇ ಅವರಿಗೆ ಲೈಟ್ ಆಗಿ ಪುತ್ರ ವ್ಯಾಮೋಹ ಶುರುವಾಯಿತು. ಅದಾದನಂತರ ಅವ... ಮುದ್ದುಮಗ ಸ್ನೇಹಿತ್‌ನನ್ನು ಹಾಕಿಕೊಂಡು ಸಿನಿಮಾ ಮಾಡಿದರೇ ವಿನಃ ಬೇರೆ ನಟರ ಚಿತ್ರಗಳನ್ನು ಮಾಡ...

ಇದೀಗ ಸ್ನೇಹಿತ್ ನಾಯಕನಾಗಿ ನಟಿಸಿರುವ, ದರ್ಶನ್ ಅತಿಥಿ ನಟನಾಗಿ ಕಾಣಿಸಿಕೊಂಡಿರುವ 'ಸ್ನೇಹಿತರು... 50 ದಿನಗಳತ್ತ ದಾಪುಗಾಲಿಡುತ್ತಿದೆ. ಈ ಚಿತ್ರ ಪ್ರೇಕ್ಷಕರನ್ನು ನಕ್ಕು ನಲಿಸುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ... ಕೀರ್ತಿ ಚೊಚ್ಚಲ ನಿರ್ದೇಶನದ ರಾಮ್ ನಾರಾಯಣ್‌ರವರಿಗೆ ಸಲ್ಲುತ್ತಿದೆ.

ಈ ಹಿಂದೆ ಸ್ನೇಹಿತ್ ನಟಿಸಿದ್ದ 'ಮಸ್ತ್ ಮಜಾ ಮಾಡಿ' ಮತ್ತು 'ಅಪ್ಪು ಪಪ್ಪು' ಎಂಬ ಎರಡು ಚಿತ್... 'ಭರ್ಜರಿ' ಪ್ರದರ್ಶನ ಕಂಡು ಸೆಂಚುರಿ ಬಾರಿಸಿದ್ದವು. ಆದರೆ ಕೆಲವರು ಹೇಳುವ ಪ್ರಕಾರ ಆ ಚಿತ್ರ... ಬಲವಂತವಾಗಿ ನೂರು ದಿನಗಳ ಕಾಲ ಓಡಿಸಲಾಗಿತ್ತು, ಅದೇನೇ ಇರಲಿ, ಈಗ ಸ್ನೇಹಿತನ ಮೂರನೇ ಚಿ... 'ಸ್ನೇಹಿತರು' ನಿಜಕ್ಕೂ ಅದರ ಸ್ವಂತ ಬಲದಲ್ಲೇ ಓಡುತ್ತಿದೆ.

● ಶೇಣ...



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com